UNIVERSAL
LIBRARY
OU_198735
UNIVERSAL
LIBRARY

THE KINGDOM OF RIGHTEOUSNESS

OR

THE IDEALS OF JAPAN

by

Bidare Aswatthanarayana

with an Introduction by

arpur Shrinivasa Rao, B.Sc., L.C.E.
Chief Engineer, Mysore State.

This Cover is Printed at the Wesleyan Mission Press, Mysore.

ಧರ್ಮಸಾಮ್ರಾಜ್ಯಮ್

ಅಥವಾ

ಜಪಾನರುನ್ನತಿಗೆ ಮೂಲಾಧಾರ

ಈ ಪುಸ್ತಕವು ಲೋಕಹಿತಾರ್ಥವಾಗಿ

ಧರ್ಮಪದ, ಬೌದ್ಧಾವತಾರ, ರಾಮಾಯಣದಿಂದುಂಟಾಗುವ ನೀತಿಗಳು

ಮುಂತಾದ ಗ್ರಂಥಗಳನ್ನು ರಚಿಸಿದ

ಬೆಪಪೆ ಆಶ್ವತ್ಥ ನಾರಾಯಣರವರಿಂದ

ವಿರಚಿಸಲ್ಪಟ್ಟಿತು

ಮೈಸೂರು ಸಂಸ್ಥಾನದ ಜಿಲ್ಲಾಧಿಕಾರಿಗಳಾದ

ಕಪ್ಪೂರ ಶ್ರೀನಿವಾಸರಾವ್ ಬಿ. ಎ., ಎಲ್ ಸಿ ಇ.,

ಇವರಿಂದ ಸೂಚಿಸಲ್ಪಟ್ಟಿದೆ.

ಪ್ರಥಮಮುದ್ರಣ ೧೦೦೦ ಪ್ರತಿಗಳು

ಈ ಪುಸ್ತಕದ ಹಕ್ಕು ಬಾಧ್ಯತೆಗಳೆಲ್ಲ ಗ್ರಂಥಕರ್ತೃರದೇ ಆಗಿರುತ್ತವೆ.

(All Rights Registered)

1913

Words of Loyalty

ಭಕ್ತಿವಾಚನವು

ಶ್ಲೋ॥ ಏತೇನ ಬುದ್ಧ್ಯಾ ದಯಯೇವ ಮಾತಾ
ಪ್ರೀತ್ಯಾ ಸಖೀವಾಸ್ತ ಇವಾಪಿ ಪೀತ್ಯಾ
ಧರ್ಮೇಣ ಚಾಚಾರ್ಯ ಇವ ಪ್ರಜಾಃ ಸ್ವಾಃ
ಸ್ಮಿಂಹಯುಕ್ತೋ ನೃಪತಿ ಕೃಷ್ಣರಾಜಃ ॥

[ತಾತ್ಪರ್ಯ :—"ಶ್ರೀಮನ್ಮಹಾರಾಜ ಶ್ರೀಕೃಷ್ಣರಾಜೇಂದ್ರ ಒಡೆಯರ್ ಬಹದ್ದೂರ್, ಜಿ. ಸಿ. ಎಸ್. ಐ. ರವರು, ಶ್ರೀಮದ್ಯುವರಾಜ ಶ್ರೀಕಂಠೀರವ ನರಸಿಂಹರಾಜೇಂದ್ರ ಒಡೆಯರ್ ಬಹದ್ದೂರ್, ಕೆ. ಸಿ. ಐ. ಇ.

ರವರಿಂದೊಡಗೂಡಿ, ತಮ್ಮ ಪ್ರಜೆಗಳನ್ನು—ತಂದೆಯಂತೆ ಎಚ್ಚರಿಕೆಯಿಂದಲೂ, ತಾಯಿಯಂತೆ ದಯೆಯಿಂದಲೂ, ಸ್ನೇಹಿತನಂತೆ ಪ್ರೀತಿಯಿಂದಲೂ, ಆಪ್ತನಂತೆ ಸ್ನೇಹದಿಂದಲೂ, ಆಚಾರ್ಯನಂತೆ ಧರ್ಮದಿಂದಲೂ—ಕಾಪಾಡುವರು.]

[His Highness the Maharaja Sri Krishnarajendra Wodeyar Bahadur, G.C.S.I.,

His Highness the Yuvaraja Sri Kanthirava Narasimharajendra Wodeyar Bahadur, K.C.I.E.,

Introduction.

ಸಂಚನ

he great **Buddha** was one of the most effective epoch makers of the world. Buddhism is now practically extinct from India as a living religion, but the great influence which **Buddha** exercised on religious life in India, is still very markedly observed here, as indeed it is so observed all over the world, ancient and modern. It is true that in India, Vedantism or popular Hinduism based on the Vedas has entirly superseded Buddhism. But even the conquered Buddhism has in a way triumphed over the conquering Vedantism.

2. The great **Sankaracharya** who revived the ancient Vedic religion had to fight hard against the Buddhists. But in doing so, he adopted most of the excellent and all-pervading principles taught and firmly established by **Buddha.** The principle of ॥ अहिंसा परमो धर्मः ॥ is too well known and this has entirely superseded the almost universal system of animal sacrifice

which prevailed previous to **Buddha's** time. **Sankaracharya** had to accept this principle although, in his attempt to restore the ancient Vedic religion, he qualified it by stating that animal sacrifice performed according to the Vedic rites cannot be held as sinful. Notwithstanding this qualification, the great principle of **Buddha** is now more or less universally accepted; and the Vedic animal sacrifices have almost disappeared in India. Similarly the "क्षणिकवाद" of **Buddha** establishing *the fleeting nature* of everything in this world, including even the internal consciousness of man, the latter corresponding to the human soul, has been with a single modification adopted by **Sankaracharya**, who taught that while everything else is fleeting from moment to moment and thus unreal and impossible to grasp properly, God alone, the basis of all creation, must be considered as real and never changing. Thus there is very great similarity between the teachings of **Buddha** and **Sankaracharya.**

3. The later Vedantins have, with a few exceptions, regarding the nature of the human soul, adopted the teachings of **Sankaracharya** and are thus very materially influenced by Buddhistic ideas. In fact, the idea of the fleeting nature of the world and the rule of abstaining from *killing* human or any life, so well

established by **Buddha,** have now become the basic principle of all Indian religions. In this light, the influence of **Buddha** is still eminently living in India so much so, that we still adore the great **Buddha** as one of the ten important and epoch making *avataras* of " **Vishnu** " *the all pervading deity of the universe.*

4. In **China** and **Japan** and in all the intermediate regions between India and Japan as well as in **Ceylon,** the religion of **Buddha** is directly or indirectly followed ; and it does not require any elaborate proofs to establish this well known and well accepted fact. In the **Western Countries**, the name of **Buddha** is in modern days acting quite as a charm and most of the books on religious or kindred subjects recently published in **Europe** and **America** show direct or indirect signs of advocating the teachings of this **Universal Teacher** of mankind, in awakening the internal consciousness of man rather than in advocating mere external formalities of worship. The designation, **Buddha,** in fact, means **The Awakened** in Sanskrit. The awakening of the world will not be complete unless the fleeting transient nature of everything in this world and the principle of true **Ahimsa** or altruism as such, are fully realised and made the practical basis of all activities conducing to human progress.

5. While the influence exercised by the great **Buddha,** *the awaked and the awakener,* is so universal, it is only natural that there should be a considerable curiosity all over the world to know more and more about his personality. The present story is a precursor of the life of **Buddha.** Tradition shows that the hero of the present story **Devasena** was a previous incarnation of **Buddha** and so the teaching to be gathered from such a story should be more or less identical with that of **Buddha** himself.

6. The principle of true altruism or living for the good of mankind, forms the key note of this story. This is carried to the utmost extreme as the story develops. The life of the individual is readily sacrificed for the good of the State, and as the King, a benign King, is represented as a true father of the State, the sacrifice of the individual life in the interests of the King follows as a natural consequence. Such a sacrifice forms the central idea of the story. As the story practically ends in incidents more or less similar to the morally tragic end of "**General Nogi**" and of his "**Faithful Wife**" the two ideal personages of Japan, at the death of their great King, the universally lamented "**Mikado**" the late "**Emperor of Japan,**" the author has with much justification styled his

book " **The Ideals of Japan.**" Indeed, Japan has become quite an ideal country to the world and to India ; and if the principle of devotion to one's country so remarkably displayed by Japan is brought home to every reader of this remarkable story, the author too may have the complacency of having done his duty to his country and to his fellow subjects.

7. The story itself is simple and need not be detailed in this preface. The tragic stage of the story is brought about by a single false step. namely, resorting to white falsehood even in a good cause and with the best of intentions. This brings home to us the eternal principle that **सत्यमेव जयते नानृतम्** truth alone triumphs and truth alone can bring universal happiness. Any deviation from it cannot produce good to all alike, good ultimately if not immediately. Two good men, the priest and the adviser of king Devasena, resorted to a falsehood, though with the best of intentions and without any personal motives. They misrepresented to their king that the maiden **Unmadayanti** though perfect in every way as a woman, was not suitable to be the wife of their king. This misrepresentation was based on a wrong interpretation of nature, that an extremely beautiful wife would necessarily prove an object of entire devotion for her husband, and to the entire neglect of all else on

the part of the latter. This led to the natural fear that the state aud its subjects too would be neglected by the King after such a marriage; and so it was prevented by the *too clever* **Purohita**, the family priest and the equally clever " **Streelakshanagna**, the technical adviser. Whatever the motive, the untruth is there and to it can be traced all the tragic development of the story; this would fully illustrate that it is not safe to resort to falsehood under any circumstances; and if this single principle is brought home to the reader, the author should consider his trouble in writing this book amply rewarded.

8. **Devasena** the good, was an ideal King. He was still young and had to be married. A priest and an adviser go to test the proposed maiden's suitability to be their king's wife. They find her a perfect ideal of a woman in every way; but with motives indicated above, they prevent his marriage with this excellent maiden. She in her turn had heard much of King **Devasena** and had set her heart on him and him alone. The maiden refuses to marry any one else but the King; the king on the other hand has been put off from this marriage by being told by the priest and the adviser that although she was sufficiently fair was unfit to be his wife, as she bears on her person some inauspicious marks, the foretoken of ruin of the King and his Sub-

jucts. The maiden, then, is forced by her father to marry the King's Commander-in-chief **Abhiparaga** ; this marriage is actually performed *(only the ceremony of tying the "Tali" or the sacred emblem to the neck)* when the lady was in unconscious state due to her protest and persistence to marry the king and none else. The consummation of this marriage could never be obtained. The lady flatly refused in her conscious state to give her hand to any one but the King. The Commander-in-chief learns about this and begins to treat the lady as *the queen of his master*. The King observes the maiden and her pining condition in a great national festival, when all the ladies of the City were eagerly looking at the procession. He saw beauty and contentment in every face and this single exception naturally struck him. He makes further enquiries, pursues the matter and finds the truth ; but he flatly refuses to accept the lady as his wife, although the Commander-in-Chief, *the nominal husband*, freely offers her to the King. The lady, after knowing all this, immediately goes to the pleasure park where the king was rambling alone and entreats him in manifold ways to accept her as his wife, but, after all, commits suicide at not being able to marry the King. The King too had often promised that he was ready to give even his life to the languishing lady, but would

not marry her because she had already become the wife, though nominally of another man. The King finds that the time has arrived when he could be put to the test of his word; whether the promise of giving his life to the lady was real and earnest and whether it consisted of mere words, as most of such promises really are. He proves true to his word and gives up his life; and seeing this, the Commander-in-Chief, the nominal husband of the deceased lady, also puts his word to the real practical test. He has often stated that he would be willing to give his life to his King and when the time arrives he was true to his word and gave up his life for his King. The Priest and the Adviser observing all this, and thinking their actions to be the original cause of so much misery and feeling unbearable the loss of their beloved King, put an end to their lives. Thus ends the tragic story, although by some supernatural influence they all are restored to life. But they are all duly judged and rewarded in heaven as *their motives were good* and *as they had sacrificed their lives in a good and virtuous cause.* Thus "**Virtue**" triumphs in the end.

9. If the priest and the adviser too had been quite as firm as the King and the Commander-in-Chief, ready to bear the consequences of truth, even in its bitterest ends,

though in this case the fear of the King losing interest in the State after the marriage was more imaginary than real, surely all this tragic state of the story would have been avoided. But perhaps we would have missed the story itself and with it the moral lesson that we can derive from such an excellent and stirring story. In fact, the story also shows how, even the best of men, the cultured priest and the technical adviser in their disproportionately great and feverish anxiety to secure the best benefit to their State and to their fellow subjects, forgot that life itself would be impossible, if marriage with a virtuous though beautiful lady is apprehended to produce any evil effect by itself. Surely the economy of the great "**God**" would demand a conformity to his laws of life and any attempt to belittle his laws must prove disastrous in many unseen ways, as fully amplified in the present story. Our attempt must be to justify the ways of "**God**" to man and not to misinterpret the natural phenomena of the world. Such a mistake must have its own reward and we will have no reason to complain of the natural consequences, if such a mistake proves disastrous. We must be and work in this world surrounded by the complexities of life in all its bearings and fight out the battle of life. Mere asceticism as such or forced renunciation will never prove

good to the individual or to the state. This is another great lesson that we, the modern day lethargic Indians have to learn from this good story.

10. This, on the whole, serves as an "**Excellent moral class book**" and I can strongly recommend its being adopted as a "**Text Book**" in all our Kannada Schools. The story is also written in a manner that it can be easily brought on the stage. If this is done surely the tone and the sentiment of our "**Popular Dramas**" will be considerably improved and the public greatly beanifitted. The author deserves to be congratulated on the excellent book he has written and I only hope he will succeed in digging out many more such popular, national and healthy stories from the great mine of ancient Buddhistic literature. I also strongly recommend this little book to the general public who are sure to find amusement combined with instruction in it and I hope the ready and extensive sale it may command would prove a further incentive to the author in bringing out many more books of this nature.

Camp Mysore,
2nd September 1913.

Karpur Shrinivasa Rao.

SOME OPINIONS.

Dewan Bahadur, K. P. Puttanna Chetty.
(Retired) FIRST COUNCILLOR, MYSORE STATE.

Mr. Aswatha Narayan Shastri is not a new author. His works on Buddhism have become the recognized text books in Kanarese on the life and teachings of Gautama Buddha. He has also written books treating of Hinduism. He has now brought forth a book in Canarese (Dharma Sambrajya) or "The Ideals of Japan" in the form of a dialogue treating of the whole duty of man (and woman) in the several relations of life. The book has a purpose in view, to inculcate the lofty principles of religion and morality, loyalty to king, and social and civic duties. The author has a persuasive pen and the value of the teachings is enhanced by ample quotations in Sanskrit from ancient works, the authority of which is recognized by all classes irrespective of sect or creed. The book is eminently suited for introduction as a **text book** into our schools. The general reader will find in it much interesting matter which will repay perusal.

2. Mr. R. Shamasastry, B.A., M.R.A.S., Principal.
SRI CHAMARAJENDRA SANSKRIT COLLEGE, BANGALORE.

"The Ideals of Japan" by Mr. B. Asvathanarayana Sastriar is an excellent little book with a charming tragic story taken out from the Buddhistic Jâtakas and narrated in an elegant modern style. Political morality as contrasted with political expediency is its aim. The book speaks for itself and no praise bestowed upon it can be too high.

The author deserves to be congratulated upon it.

3. Mr. T. Lakshminarasimha Rao, B.A., B.L.
ASST. SECY. TO MYSORE GOVERNMENT.

I have had the prose drama "The Ideals of Japan" by Mr. Bidare Aswathanarayana Sastry, read to me. I must congratulate the author on the excellent work he has placed before the public. It is a book which has to be placed in the hands of every body of both the sexes as it contains "*Excellent moral lessons*" and illustrates the doctrine "*Duty for duty's sake*" in a forcible way. A representation of it on the stage will not only elivate our Hindu stage to the position that it ought to occupy but would be an object lessen to the audience. I wish more books of the sort could be brought into existance so that our young boys and girls would have suitable **text books** to read and the general public good ideals placed before them. I wish the "*Kingdom of God*" will really come to stay.

4. **Mr. N. Subba Rao, B.A.,**

ASSISTANT COMMISSIONER, NANJANGUD.

The "Ideals of Japan" which Vidwan Bidra Aswathanarayana Shastri has brought forth is one for which no amount of commendation is too much. Unlike other story books the book under notice contains stories taken from religious literature and of a type peculiarly interesting to the public and particulrly to the student class. The story is fraught with lessons of morality and is written in an elegant style. A book of this kind is sure to serve a useful purpose if it is made a **text book** for boys. The author has placed the Kanarese reading public under great obligations by this charming little book and he deserves every congratulation on this.

5. **Sri Balasaraswati, Sanskrit Poet and Scholar.**

I have great pleasure in welcoming the book "Dharma Samrajyam," "The Ideals of Japan" written in Kanada by Sriman Bidare Aswathanarayana Sastry. The central theme of this interesting and instructive work is the tragic story of a Hindu maiden named Unmadayanti, taken from one of the Jatakas of the Buddhistic lore. The story relates to the Buddhistic period and as such throws much light on the civilization of ancient India few centuries before the Christian era. As a picture of Hindu Society, during the times of which little is known, the book is invaluable. The different phases of ideal Dharma with which the book abounds, are drawn with boldness and vigour. Some aspects of the ideal Hindu home are vividly represented. The novel receives a special virtue by affording a clear insight into the spirit of the highest type of morality. In the treatment of the subject matter, the author's sole aim has been the elucidation of cardinal situation and character and he has realised it with great success. The book is written in the author's best style, neither too simple nor too technical. This indeed is a patriotic service, which, I daresay, every true son of India will greatly appreciate. The work appears to be one which has been very well written, and which contains matter that may be read with advantage by men and women of all classes and creeds.

Author's Preface.

ಉಪೋದ್ಘಾತವು.

ವಾಚಕಸಹೋದರರೇ !

ಈ ಗ್ರಂಥವನ್ನು ಸಂಪೂರ್ಣವಾಗಿ ಓದಿ ಅನಂತರ ತಮ್ಮ ಅಭಿಪ್ರಾಯಗಳನ್ನು ಸೂಚಿಸಬೇಕೆಂದು ಮೊದಲು ಬೇಡುವೆನು

ಏಕೆಂದರೆ, ಈ ಗ್ರಂಥದ ೪ ನೆಯ ಶ್ಲೋಕದಲ್ಲಿ ಹೇಳಿರುವಂತೆ, ಒಂದು ವಸ್ತುವಿನ ನಿಜಸ್ಥಿತಿಯು ಮನಸ್ಸಿಗೆ ಬರಬೇಕಾದರೆ, ಆ ವಸ್ತುವನ್ನು ಸಂಪೂರ್ಣವಾಗಿ ಪರೀಕ್ಷಿಸಬೇಕು. ಹಾಗೆ ಮಾಡದೇಹೋದರೆ, ಕೆಲವು ವೇಳೆ ದುರಭಿಪ್ರಾಯಗಳಿಗೆ ಅವಕಾಶವುಂಟಾಗಿ ಮಹಾ ಅನರ್ಥಗಳು ಪ್ರಾಪ್ತವಾಗುವುವು. ಈರೀತಿಯಾದ ಸಂಪೂರ್ಣಪರಿಚಯಾಭಾವದೋಷದಿಂದ ಹಿಂದೆ ಸಾಮಾನ್ಯಜನರು ದುರಭಿಪ್ರಾಯಗಳುಳ್ಳವರಾಗಿ, ಚೀನದೇಶದ ಆಚಾರ್ಯನಾದ "ಕನ್ಫ್ಯೂಷಿಯಸ್" ಎಂಬುವನನ್ನೂ, ಪಾರ್ಸೀದೇಶದ "ಸಾದಿ" ಯನ್ನೂ, ಅರಬ್ಬೀದೇಶದ "ಮಹಮ್ಮದ್" ನನ್ನೂ, ದೇಶಭ್ರಷ್ಟರನ್ನಾಗಿ ಮಾಡಿದರು; ಗೌತಮ "ಬುದ್ಧನು" ವಿಷಪ್ರಯೋಗಕ್ಕೂ, ಅವಿವೇಕಿಗಳ ನಿಂದೆಗೂ ಗುರಿಯಾದನು; ಗ್ರೀಕ್ ದೇಶದ "ಸೋಕ್ರೆಟೀಸ್" ಎಂಬ ತತ್ತ್ವಜ್ಞಾನಿಯು, ವಿಷಪ್ರಯೋಗದಿಂದ ಕೊಲ್ಲಲ್ಪಟ್ಟನು. ನಜರತ್‌ನಗರದ "ಏಸೂಕ್ರಿಸ್ತ" ನು ಘೋರವಾದ ಹಿಂಸೆಯನ್ನನುಭವಿಸಿ, ಕೊನೆಗೆ ಬಹುಸಂಕಟದಿಂದ ಪ್ರಾಣಗಳನ್ನು ತ್ಯಜಿಸಿದನು. ಹೀಗೆಯೇ ಅನೇಕ ಮಹಾತ್ಮರು ಇತರರ ದುರಭಿಪ್ರಾಯದೋಷದಿಂದ ಮೃತಿಯನ್ನೈದಿರುವರು. ಆದರೆ ಇವರುಗಳು ಮೃತರಾದನಂತರ, ಇವರುಗಳು ಲೋಕೋದ್ಧಾರಕರಾಗಿದ್ದರೆಂಬುದು ಸಾಮಾನ್ಯಜನರಿಗೂ, ಆಮಹಾಪುರುಷರುಗಳಿಗೆ ಹಾನಿಯನ್ನೆಸಗಿದವರಿಗೂ ಕೂಡ ತಿಳಿದುಬಂದು, ತಮ್ಮ ಅವಜ್ಞಾತಾದೋಷಗಳಿಗೆ ತಾವೇ ಶೋಕಿಸಿ, ಪಶ್ಚಾತ್ತಾಪಾಗ್ನಿಯಿಂದ ಬೆಂದು, ತದ್ವೈಪರೀತ್ಯಹಾರಾರ್ಥವಾಗಿ ಆ ಮೃತರ ನಾಮಮಾತ್ರಗಳನ್ನು ಅವಲಂಬಿಸಿ, ಈಗಲೂ ಸ್ತುತಿಸುತ್ತ ವೃಥಾ ಶ್ರಮಪಡುತ್ತಿಹರು. ಆದರೆ, ಆ ಮಹಾತ್ಮರ ಜೀವಿತಕಾಲಗಳಲ್ಲಿಯೇ ಅವರನ್ನೂ ಅವರ ಉದ್ದೇಶಗಳನ್ನೂ, ಅವರ ಗುಣಗಣಗಳನ್ನೂ, ಸಂಪೂರ್ಣವಾಗಿ ತಿಳಿದಿದ್ದರೆ, ಅವರುಗಳಿಗೆ ದುಃಖವೂ ಸುಮ್ಮಾರಣಗಳೂ ಉಂಟಾಗುತ್ತಿರಲಿಲ್ಲ; ಮತ್ತೀ

ಜನರಿಗೆ ತಮ್ಮ ಪಾಪಕಾರ್ಯಗಳಿಗಾಗಿ ಪಶ್ಚಾತ್ತಾಪವೂ ತಲೆದೋರುತ್ತಿರಲಿಲ್ಲ. ಆದ ಕಾರಣ ಮನುಷ್ಯನಾದವನು, ಆವವಸ್ತುವನ್ನೇ ಆಗಲಿ, ಸಂಪೂರ್ಣವಾಗಿ ಪರೀಕ್ಷಿಸದೆ ಅದರ ವಿಷಯಗಳವಾಗಿ ದುಡುಕಿನಿಂದ ಅಭಿಪ್ರಾಯಗಳನ್ನು ಸೂಚಿಸುವುದು ವೈಚಕ್ಷಣ್ಯವೆನಿಸಲಾರದು. ಹಾಗೆ ವಸ್ತುವನ್ನು ಸಂಪೂರ್ಣವಾಗಿ ವಿಮರ್ಶಿಸಬೇಕಾದರೆ, ಮೊದಲು ಸಹನೆಯು ಅತ್ಯವಶ್ಯಕವು. ಏಕೆಂದರೆ—ಹಾಗೆ ಮಾಡಿದರೆ ವಸ್ತುವಿನ ಗುಣ ದೋಷಗಳೆರಡೂ ವ್ಯಕ್ತವಾಗುವುವು. ಅನಂತರ ಹಿತಕರವಾದ ಗುಣದ ಸಂಗ್ರಹವನ್ನೂ, ಅಹಿತಕರವಾದ ದೋಷದ ತ್ಯಾಗವನ್ನೂ, ಮಾಡಲು ಅನುಕೂಲಿಸುವುದು. ಏಕೆ ಗುಣವನ್ನೇ ಸ್ವೀಕರಿಸಿ ದೋಷವನ್ನು ತ್ಯಜಿಸಬೇಕೆಂದು ಕೇಳಿದರೆ,—ಮನುಷ್ಯನು ಗುಣವನ್ನೇ ಅನ್ವೇಷಿಸುತ್ತ ಬಂದರೆ, ಇವನಲ್ಲಿ ಗುಣಾಂಶವೇ ನೆಲೆಗೊಂಡು, ಇವನೂ ಗುಣಿಯಾಗುವುದಲ್ಲದೆ—ಈ ಗುಣಾಧಿಕ್ಯದಿಂದ ಸಾಧುತ್ವವು ಪ್ರಾಪ್ತವಾಗಿ, ಚಿತ್ತಶಾಂತಿಯೂ, ಸರ್ವರ ಮೈತ್ರಿಗೌರವಗಳೂ ಲಭಿಸಿ, ತನ್ನ ಜೀವಿತಕಾಲವನ್ನು ಸುಖಸಂತೋಷಗಳಿಂದ ಕಳೆದು, ಅಂತ್ಯದಲ್ಲಿ ನಿತ್ಯಸುಖವನ್ನೂ ಪಡೆಯಬಹುದು. ಆದಕಾರಣ ಗುಣಗ್ರಹಣ ಕಾರ್ಯವೇ ಮನುಷ್ಯನ ಸಾಧುತ್ವಕ್ಕೆ ಕಾರಣವು. ಇದಕ್ಕನುಗುಣವಾಗಿ ಪ್ರಾಜ್ಞರೂ ಈರೀತಿ ಹೇಳುವರು:—

ಶ್ಲೋ॥ ಗುಣಾಭ್ಯಾಸೇನ ಸಾಧೂನಾಂ ಗುಣಸ್ತಿಷ್ಠತಿ ಚೇತಸಿ
ಧೃತ್ಯಶ್ಯತ್ಯವಗುಣಸ್ತಸ್ಮಾಜ್ಜಲಂ ಪದ್ಮದಲಾದಿವ ॥೧॥

[೧. ತಾತ್ಪರ್ಯ—"ಗುಣವನ್ನೇ ಅನ್ವೇಷಿಸುವ ಅಭ್ಯಾಸಬಲದಿಂದ ಸಾಧುಪುರುಷರ ಮನಸ್ಸಿನಲ್ಲಿ, ಇತರರ ಗುಣಭಾಗವು ಮಾತ್ರವೇ ನಿಂತು, ಅವಗುಣಭಾಗವು, ಕಮಲ ಪತ್ರದಿಂದ ಜಾರಿಹೋಗುವ ಜಲಬಿಂದುವಿನಂತೆ ಕಳೆದುಹೋಗುವುದು ,,]

ಹೀಗೆ ಹೇಳಿದುದರಿಂದ ದೋಷಜ್ಞರಾದ ವಿದ್ವಾಂಸರನ್ನು ನಿಂದಿಸಬೇಕೆಂದಾಗಲೀ ಅಥವಾ ಈ ಗ್ರಂಥದಲ್ಲಿ ದೋಷವೇ ಇಲ್ಲವೆಂದಾಗಲೀ, ಎನ್ನ ಅಭಿಪ್ರಾಯವಲ್ಲ. ಇದರಲ್ಲಿ ಅನೇಕದೋಷಗಳಿರಲೂ ಬಹುದು. ಅದಲ್ಲದೆ ಅವರವರ ದೋಷಗಳು ಅವರವರಿಗೆ ಗುಣರೂಪವಾಗಿಯೇ ತೋರುವುದೂ ಉಂಟು. ಇಂತಹ ಸಂಭವಗಳಲ್ಲಿ ಆಂಥವರ ಗುಣಗಳನ್ನು ಸ್ವೀಕರಿಸಿ ಪ್ರಮೋದಗೊಳ್ಳುವುದೂ, ದೋಷಗಳನ್ನು ತಿದ್ದಿ ಅವನ್ನೂ ಗುಣಗಳನ್ನಾಗಿ ಮಾಡುವುದೂ ಸಹ, ವಿದ್ವಾಂಸರ ಕರ್ತವ್ಯವು. ಆದರೆ ಹೀಗೆ ಮಾಡದೆ, ಅಸೂಯೆಯಿಂದಲೋ ಅಥವಾ ಪಕ್ಷಪಾತವ್ಯಸನದಿಂದಲೋ ಇತರರ ಗುಣವು ವ್ಯಕ್ತವಾಗಿ ತೋರುತಿರ್ದರೂ ಅದನ್ನು ಲಕ್ಷಿಸದೆ, ದೋಷಗಳನ್ನೇ ಅನ್ವೇಷಿಸುವವರ

ವಿಷಯದಲ್ಲಿ ನಾನು ಏನೂ ಹೇಳಲಾರೆನು. ಆದರೆ ಅಂಥವರ ವಿಷಯದಲ್ಲಿ ಒಬ್ಬ ಮಹಾಕವಿಯು ಹೇಳಿರುವುದೇನಂದರೆ:—

ಶ್ಲೋಕ॥ ಲೋಕೇ ದುರ್ಜನಕೌತುಕಾಃ ಕತಿ ನ ವಾ ದೋಷೋದಯೇ ತೋಷಿತಾ—
ಸ್ತತ್ತೇಷಾಮಿಹ ವಾರ್ತಿಕಾಪಿ ಜಗತಿ ಶ್ಲಾಘಾಸ್ಪದಂ ನಾರ್ಹತಿ ॥
ದೋಷಾ ಏವ ಗುಣಾ ಯದಾಸ್ಯಕುಹರೇಷ್ವಾರ್ಯಾಸ್ಯದಾ ಸಾದರಂ ।
ಮಾನ್ಯಾ ಲವಣಸೈಂಧವಾ ಇವ ಪಯೋವಾಹೇಷು ಸಾರ್ಣವಂದವಃ ॥೨॥

[೨. ತಾ॥ "ಕತ್ತಲೆಯ ಸಂಭವದಿಂದ ಸಂತೋಷವನ್ನು ಹೊಂದುವ ಗೂಬೆಗಳಂತೆ, ಇತರರ ದೋಷಗಳನ್ನು ಕಂಡುಹಿಡಿದು ಆನಂದಪಡುವ ದುರ್ಜನರು ಈಲೋಕದಲ್ಲಿ ಎಷ್ಟಿಲ್ಲ ! ಅಂಥವರ ನಾಮಸ್ಮರಣೆಯೂ ಕೂಡ ಈ ಜಗತ್ತಿನಲ್ಲಿ ಶ್ಲಾಘಿಸಲು ಎಂದಿಗೂ ಅರ್ಹವಾಗಲಾರದು ; ಆದರೆ, ಲವಣಸಮುದ್ರದ ಜಲಬಿಂದುಗಳು ಆವ ಮೇಘಮುಂಡಲವನ್ನು ಸೇರಲಾಗಿ, (ತಮ್ಮ ಕ್ಷಾರಗುಣವನ್ನು ಕಳೆದುಕೊಂಡು) ಮಾಧುರ್ಯವನ್ನೆಂತು ಹೊಂದುವುವೊ ಅದರಂತೆ—ಇತರರ ದೋಷಗಳು ಆರ ವಕ್ತ್ರಾಂತರಾಳವನ್ನು ಸೇರಲಾಗಿ ಗುಣವಾಗಿಯೇ ಪರಿಣಮಿಸುವುವೊ ಅಂತಹ ಮಹನೀಯರೇ ನಿರಂತರವೂ ವಂದನೆಗೆ ಅರ್ಹರು. ,,]

ಇಷ್ಟಾದರೂ ಇದರಲ್ಲಿಯೂ ದೋಷಜ್ಞರ ನಿಂದೆಯು ಸ್ವಲ್ಪಮಟ್ಟಿಗೆ ಇರುವುದರಿಂದ ಮತ್ತೊಬ್ಬ ಕವಿಯು ತನ್ನ ಸಾಧುತ್ವವನ್ನು ಈ ರೀತಿ ವ್ಯಕ್ತಪಡಿಸಿರುವನು:—

ಶ್ಲೋ॥ ಮನ್ನಿಂದಯಾ ಯದಿ ಜನಃ ಪರಿತೋಷಮೇತಿ ।
ನನ್ವಪ್ರಯತ್ನಸುಲಭೋಯಮನುಗ್ರಹೋ ಮೇ ॥೩॥

[೩ ತಾ—"ಎನ್ನನ್ನು ನಿಂದಿಸುವುದರಿಂದಲಾದರೂ ಜನರಿಗೆ ಸಂತೋಷವು ಉಂಟಾದುದೇ ಆದರೆ, ಅದು, ಎನ್ನ ಪ್ರಯತ್ನವನ್ನು ಅಪೇಕ್ಷಿಸದೆ ಅವರಾಗಿಯೇ ಎನಗೆ ಕರುಣಿಸಿದ ಅನುಗ್ರಹವಲ್ಲವೆ ? "]

ಈ ಅಭಿಸ್ಸಾಯವನ್ನೇ ಈಗ ನಾನೂ ಆವಲಂಬಿಸಬೇಕಾಗಿರುವುದು. ಏಕೆಂದರೆ, ಇತರರನ್ನು ಸಂತೋಷಗೊಳಿಸುವುದೇ ಮನುಷ್ಯನಾದವನಿಗೆ ಮುಖ್ಯಕರ್ತವ್ಯವು. ಆದ ಕಾರಣ ವಾಚಕರು ಈ ಗ್ರಂಥವನ್ನು ಭಂಡಿಸಿದರೂ ಅಥವಾ ದೂಷಿಸಿದರೂ ನಾನು ಮಟ್ಟಿಗೆ ಸಂತೋಷವನ್ನೇ ಹೊಂದುವೆನು ಇನ್ನೀಗ ಈ ಗ್ರಂಥದ ಐತಿಹ್ಯದ ವಿಷಯವಾಗಿ ಸ್ವಲ್ಪ ಪ್ರಸ್ತಾಪಿಸುವೆನು—

ಗೌತಮಬುದ್ಧನು ತಾನು ಸನ್ಯಾಸಿಯಾದಬಳಿಕ ಕಪಿಲವಸ್ತುವಿಗೆ ಹಿಂದಿರುಗಿ ಬಂದಾಗ, ತನ್ನ ಸಹಧರ್ಮಿಣಿಯಾದ ಯಶೋಧರೆಯ ದುಃಖವನ್ನು ಶಮನಮಾಡುವುದಕ್ಕಾಗಿ ತನ್ನ ಮತ್ತು ಅವಳ ಪೂರ್ವಜನ್ಮವೃತ್ತಾಂತವನ್ನು ಒಳಗೊಂಡಿರುವ ಈ ಅತ್ಯಾಶ್ಚರ್ಯಕರವಾದ ಕಥೆಯನ್ನು ಹೇಳಿದನೆಂದು ಬೌದ್ಧಾಗಮಗಳಿಂದ ತಿಳಿದುಬರುವುದು ಈ ಇತಿಹಾಸವು — ಸೂರ್ಯಾಸ್ತಮಯದ ತತ್ಪವನ್ನೊಳಗೊಂಡಿರುವ, ದಾಕ್ಷಾಯಣಿಯ ಅಥವಾ ಗೌರಿಯ ಪಾತಿವ್ರತ್ಯಸೂಚಕವಾದ ವೇದದ ಐತಿಹ್ಯದಿಂದ ಸಂಗ್ರಹಿಸಲ್ಪಟ್ಟುಬಳಿಕ ಪಾಳಿಭಾಷೆಯ "ವಿಶ್ವಶಾಸನಶಾಲಿನೀ", ಅಥವಾ "ಜಾತಕ" ಎಂಬ ಗ್ರಂಥದ ೫೨೯ ನೆಯ ಜಾತಕದಲ್ಲಿಯೂ, ಅನಂತರ ಆದೇ ಭಾಷೆಯ "ಚರ್ಯಾಪಿಟಕ" ಎಂಬ ಗ್ರಂಥದಲ್ಲಿಯೂ, ಸ್ವಲ್ಪ ವ್ಯತ್ಯಾಸವಾಗಿ ಹೇಳಲ್ಪಟ್ಟಿದೆ. ಅನಂತರ ಇದೇ ಕಥೆಯನ್ನು ಮಹಾಯಾನಬೌದ್ಧರಲ್ಲಿ ಅಗ್ರಗಣ್ಯನೂ, "ಪುರುಷಪುರ" (ಪೆಷಾವರ್)ದ ಅರಸನಾಗಿದ್ದ "ಗನಿಯ ಕನಿಷ್ಕ"ನ ಗುರುವೂ, ಆಗಿದ್ದ "ಶ್ರೀಮದಾರ್ಯಶೂರ" ನೆಂಬ ಮಹಾಕವಿಯು ಕೆಲವು ವಿಷಯಗಳಲ್ಲಿ ಸ್ವಲ್ಪ ವ್ಯತ್ಯಾಸವನ್ನು ಮಾಡಿ, ತನ್ನಿಂದ ಸಂಸ್ಕೃತಕ್ಕೆ ಪರಿವರ್ತಿಸಲ್ಪಟ್ಟ, "ಜೋಧಿಸತ್ವಾವದಾನಮಾಲಾ" ಎಂಬ ಗ್ರಂಥದ ೧೩ ನೆಯ ಜನ್ಮಚರಿತ್ರೆಯಲ್ಲಿ ಸೇರಿಸಿರುವನು. ಇದನ್ನೇ ಅನುಸರಿಸಿ ಈಚೆಗೆ ಪ್ರತಿಷ್ಠಾನಪುರಾಧೀಶ್ವರನಾಗಿದ್ದ "ಸಾತವಾಹನ" ಅಥವಾ "ಶಾಲೀವಾಹನ", ನ ಸಭೆಯಲ್ಲಿ ಪಂಡಿತನಾಗಿದ್ದ "ಗುಣಾಢ್ಯ" ನೆಂಬ ಮಹಾಕವಿಯು, ಪಾಳಿಭಾಷೆಯ ಜಾತಕದ ಕಥೆಗಳ ಆಧಾರದಮೇಲೆ ಭೂತಭಾಷೆಗೆ ತನ್ನಿಂದ ಪರಿವರ್ತಿಸಲ್ಪಟ್ಟ "ವೃಹತ್ಕಥಾ" ಎಂಬ ಗ್ರಂಥದಲ್ಲಿ, ಸ್ವಧರ್ಮವನ್ನು ಕಾಪಾಡಿಕೊಳ್ಳುವುದಕ್ಕಾಗಿ ರಾಜನೂ ಉನ್ಮಾದಯನ್ತಿಯೂ ಮತ್ತು ಸೇನಾಪತಿಯೇ ಮುಂತಾದವರೂ ಪ್ರಾಣಗಳನ್ನು ತ್ಯಾಗಮಾಡಿಕೊಂಡರೆಂಬ ವಿಶೇಷಾಂಶಗಳನ್ನು ಸೇರಿಸಿದನೆಂದು ತಿಳಿದುಬರುವುದು. ಬಳಿಕ ೧೧ ನೆಯ ಶತಮಾನದಲ್ಲಿ ಕಾಶ್ಮೀರದೇಶಕ್ಕೆ ಅರಸನಾಗಿದ್ದ "ಅನಂತದೇವ" ನ ಆಸ್ಥಾನಪಂಡಿತನಾದ ೨ ನೆಯ "ಕ್ಷೇಮೇಂದ್ರ" ನೆಂಬ ಬ್ರಾಹ್ಮಣಕವಿಯು, ಗುಣಾಢ್ಯನ ವೃಹತ್ಕಥೆಯ ಆಧಾರದಮೇಲೆ ತನ್ನಿಂದ ಸಂಸ್ಕೃತದಲ್ಲಿ ರಚಿಸಲ್ಪಟ್ಟ "ಬೃಹತ್ಕಥಾಮಂಜರೀ", ಎಂಬ ಗ್ರಂಥದಲ್ಲಿಯೂ ಇವೇ ಕಥೆಯನ್ನು ಹೇಳಿರುವನು ಬಳಿಕ ಈ ಬೃಹತ್ಕಥಾಮಂಜರಿಯ ಆಧಾರದಮೇಲೆ ಅದೇ ಕಾಶ್ಮೀರಾಧಿಪನಾದ ಅನಂತರಾಜನ ಕಾಲಾನಂತರ ಅವನ ಧರ್ಮಪತ್ನಿಯಾದ "ಸೂರ್ಯವತೀ", ಎಂಬುವಳ ಪ್ರೋತ್ಸಾಹದಮೇಲೆ ಅದೇ ಆಸ್ಥಾನಪಂಡಿತನಾಗಿದ್ದ ರಾಮಭಟ್ಟನ ಮಗನಾದ

"ಸೋಮದೇವಭಟ್ಟ ,, ನು ತನ್ನಿಂದ ಸಂಸ್ಕೃತಭಾಷೆಯಲ್ಲಿ ವಿರಚಿತವಾದ "ಕಥಾಸ
ರಿತ್ಸಾಗರ ,, ವೆಂಬ ಗ್ರಂಥದಲ್ಲಿ ಇದೇ ಕಥೆಯನ್ನು ೩ ಸಾರಿ ಒಂದೊಂಡು ಕಡೆ ಒಂ
ದೊಂದು ವಿಧವಾಗಿ ಹೇಳಿರುವನು ಇಷ್ಟೇಅಲ್ಲದೆ, ಭೂತಭಾಷೆಯ ವೃಹತ್ಕಥಾಧಾ
ರದಮೇಲೆ ಸಂಸ್ಕೃತಭಾಷೆಯಲ್ಲಿ ವಿರಚಿತನಾಗಿರುವ "ಬೇತಾಲಪಂಚವಿಂಶತಿ ,, ಎಂಬ
ಗ್ರಂಥದ ೧೭ ನೆಯ ಕಥೆಯಲ್ಲಿಯೂ ಹೇಳಲ್ಪಟ್ಟಿದೆ. ಮತ್ತು ಕಾಶ್ಮೀರವಾಸಿಯಾಗಿಯೂ
ಮಹಾಯಾನ ಬೌದ್ಧರಲ್ಲಿ ಅಗ್ರಗಣ್ಯನಾಗಿಯೂ ,, ನ್ಯಕ್ಕ ,, ನೆಂಬ ಮಂತ್ರಿಯ ಕುಲದಲ್ಲಿ
ಉತ್ಪವಿಸಿದವನಾಗಿಯೂ, ಪ್ರಾಯೇಣ ಕ್ರಿಸ್ತಪೂರ್ವ ೧ನೆಯ ಶತಮಾನದಲ್ಲಿ ಕಾಶ್ಮೀ
ರನಗರವಾಸಿಯಾಗಿಯೂ ಇರ್ದ ಪ್ರಕಾಶೇಂದ್ರಪುತ್ರನಾದ ೧ನೆಯ "ಕ್ಷೇಮೇಂದ್ರ ,,
ನೆಂಬ ಕವೀಂದ್ರನು, ತಾನು ಸಂಸ್ಕೃತಭಾಷೆಯಲ್ಲಿ ರಚಿಸಿರುವ ,,ಬೋಧಿಸತ್ವಾವದಾನ
ಕಲ್ಪಲತಾ,, ಎಂಬ ದಿವ್ಯಪ್ರಬಂಧದ ೬೯ನೆಯ ಪಲ್ಲವದಲ್ಲಿ ಸಂಕ್ಷೇಪವಾಗಿ ಇದೇ ಕಥಾಂ
ಶವನ್ನು ಹೇಳಿರುವನು.

ಆದರೆ ಬೌದ್ಧಕವಿಗಳೆಲ್ಲರೂ ಈ ಕಥೆಯು ಮೊದಲು ಬುದ್ಧನಿಂದ ಯಶೋಧ
ರೆಗೆ ಉಪದೇಶಮಾಡಲ್ಪಟ್ಟುದೆಂದೂ, ಬ್ರಾಹ್ಮಣಕವಿಗಳು ಈಶ್ವರನಿಂದ ಪಾರ್ವತಿಗೆ ಬೋ
ಧಿಸಲ್ಪಟ್ಟುದೆಂದೂ ಅಭಿಪ್ರಾಯಪಟ್ಟಿರುವರು. ಈ ಕಥೆಯನ್ನು ಪ್ರತಿಪಾದಿಸುವ ಗ್ರಂಥಗ
ಳನ್ನೆಲ್ಲ ಚೆನ್ನಾಗಿ ವಿಮರ್ಶಮಾಡಿ ನೋಡಿದ್ದರಲ್ಲಿ, ಇದು ಆದಿಯಲ್ಲಿ ವೇದದ ಐತಿಹ್ಯದ
ಆಧಾರದಮೇಲೆ ಬೌದ್ಧರಿಂದ ಜನ್ಮವದಾನದ ಕಥಾರೂಪವಾಗಿ ಮೊದಲು ರಚಿಸಲ್ಪಟ್ಟು,
ಅನಂತರ ಬ್ರಾಹ್ಮಣಕವಿಗಳಿಂದ ಸಂಗ್ರಹಿಸಲ್ಪಟ್ಟುದೆಂದು ವ್ಯಕ್ತವಾಗುವುದು. ಹೇಗೆಂ
ದರೆ—ಈ ಕಥೆಯನ್ನು ಸಂಗ್ರಹಿಸಿ ಬರೆದಿರುವ ಬ್ರಾಹ್ಮಣಕವಿಗಳೆಲ್ಲರೂ ಕಾಲಕ್ರ
ಮವಲ್ಲಿ ಬೌದ್ಧಕವಿಗಳಿಗಿಂತಲೂ ಈಚಿನವರು. ಇದಕ್ಕನುಸಾರವಾಗಿ ಬ್ರಾಹ್ಮಣಕವಿಗ
ಳಾದ ೨ನೆಯ ಕ್ಷೇಮೇಂದ್ರನೂ ಸೋಮದೇವಭಟ್ಟನೂ ತಾವು ವಿರಚಿಸಿರುವ ಗ್ರಂಥಗಳ
ಲ್ಲಿರುವ ಕಥೆಗಳೆಲ್ಲವೂ ವಿಶ್ವತಾಸನಶಾಲಿನಿಯಲ್ಲಿಯೂ ಹೇಳಲ್ಪಟ್ಟಿವೆ ಎಂದು ತಾವೇ
ತಂತಮ್ಮ ಗ್ರಂಥಗಳಲ್ಲಿ ಬರೆದುಕೊಂಡಿರುವರು ಆಶ್ಲೋಕವನ್ನು ವಾಚಕರ ವಿಮರ್ಶೆ
ಗಾಗಿ ಇಲ್ಲಿ ತಿಳುಹುವೆನು:—

ಶ್ಲೋ॥ ಏವಂ ಕಿಲ ಪುರಾಣೇಷು ಸರ್ವಾಗಮವಿಧಾಯಿಷು ।
ವಿಶ್ವತಾಸನಶಾಲಿನ್ಯಾಂ ಶ್ರುತೌ ಚ ಶ್ರೂಯತೇ ಕಥಾ ॥೪॥

[೪. ತಾ- ,,ಈಪ್ರಕಾರವಾಗಿ ಈಕಥೆಯು ಸಮಸ್ತಸಿದ್ಧಾಂತಾಗಮಗಳ ತತ್ತ್ವವನ್ನು

ಬೋಧಿಸುವ ಪುರಾಣಗಳಲ್ಲಿಯೂ "ವಿಶ್ವತಾಸನತಾಲಿನಃ" ಎಂಬ ಬೌದ್ಧರ ಜಾತಕೇತಿಹಾಸದಲ್ಲಿಯೂ ವೇದದಲ್ಲಿಯೂ ಹೇಳಲ್ಪಟ್ಟಿದೆ ಎಂದು ಪ್ರತೀತಿಯು"]

ಹೀಗೆ ಪೇಳಿದುದರಿಂದ, ಕಾಲಕ್ರಮಕ್ಕನುಸಾರವಾಗಿ, ಈ ಕಥೆಯನ್ನು ಬೌದ್ಧರು ವೇದದ ಐತಿಹ್ಯಗಳಿಂದಲೂ ಬಳಿಕ ಆಧುನಿಕರಾದ ಬ್ರಾಹ್ಮಣಕವಿಗಳು ಬೌದ್ಧರ ಇತಿಹಾಸಗಳಿಂದಲೂ, ಸಂಗ್ರಹಿಸಿದರೆಂದು ವ್ಯಕ್ತವಾಗುವದು.

ನಾನು ಈ ಆಧಾರಗಳನ್ನೆಲ್ಲಾ ಅವಲಂಬಿಸಿ ಈ ಗ್ರಂಥವನ್ನು ಎಮ್ಮ ಕನ್ನಡಿಗರ ಶ್ರೇಯೋಭಿವೃದ್ಧಿಗಾಗಿ ವಿರಚಿಸಿರುವೆನು. ಆದರೆ, ಒಂದೊಂದು ಗ್ರಂಥವಲ್ಲಿ ಒಂದೊಂದುವಿಧವಾದ ಹೆಸರೂ ಒಂದೊಂದುವಿಧವಾದ ಅಭಿಪ್ರಾಯವೂ ಸೂಚಿಸಿರ್ದುದರಿಂದ ಆ ಗ್ರಂಥಗಳನ್ನೆಲ್ಲ ಚೆನ್ನಾಗಿ ಪರಿಶೀಲಿಸಿ, ಪರಸ್ಪರ ಇರ್ದ ವಿರೋಧಾಂಶಗಳನ್ನೆಲ್ಲ ತೆಗೆದು ಹಾಕಿ, ಪೂರ್ವೇತಿಹಾಸಗಳ ಆಧಾರಗಳಮೇಲೆಯೇ ವಿಶೇಷ ಗಮನವನ್ನಿತ್ತು, ಈಗಿನಜನರಿಗೆ ಅನುಕೂಲಿಸುವಂತೆ ರಚಿಸಿರುವೆನು. ಇವರಲ್ಲಿರುವ ಅನೇಕ ಸಂಸ್ಕೃತಶ್ಲೋಕಗಳೂ ಕೆಲವು ಗದ್ಯಗಳೂ ಮೂಲಗ್ರಂಥದಿಂದ ಸಂಗ್ರಹಿಸಲ್ಪಟ್ಟವು. ಉಳಿದವುಗಳನ್ನೆಲ್ಲ ಕಥೆಯ ಸಂದರ್ಭಕ್ಕೆ ಅನುಕೂಲಿಸುವಂತೆ ನಾನೇ ರಚಿಸಿ ಸೇರಿಸಿರುವೆನು. ಮತ್ತು ಕೆಲವುಕಡೆಗಳಲ್ಲಿ, ಪಾಳಿಭಾಷೆಯಲ್ಲಿಯೂ ಮತ್ತು ಸಂಸ್ಕೃತದಲ್ಲಿಯೂ ಇರ್ದ ಕಥಾಸಂದರ್ಭದ ಗದ್ಯಭಾಗಗಳನ್ನು ಶ್ಲೋಕಕ್ಕೆ ಪರಿವರ್ತಿಸಿರುವೆನು. ಇನ್ನು ಕೆಲವುಕಡೆಗಳಲ್ಲಿ ಕಥಾಭಾಗವನ್ನು ವಿಸ್ತರಿಸಿಯೂ ಇರುವೆನು. ಮತ್ತು ಈ ಶ್ಲೋಕಗಳಿಗೆಲ್ಲ ಪದಶಃ ಅರ್ಥವನ್ನು ಬರೆದರೆ ವಾಚಕರಿಗೆ ಸುಲಭವಾಗಿ ಬೋಧೆಯಾಗದೆ ಕವಿಯ ಆಶಯವೂ ವ್ಯಕ್ತವಾಗದೆ ಹೋಗುವುದೆಂಬ ಶಂಕೆಯಿಂದ, ಪ್ರತಿಯೊಂದು ಶ್ಲೋಕಕ್ಕೂ ತಾತ್ಪರ್ಯಾರ್ಥವನ್ನು ಮಾತ್ರ ಬರೆದು, ಆ ತಾತ್ಪರ್ಯಭಾಗಗಳನ್ನು '[,,ಎಂಬ ಆವರಣಚಿಹ್ನೆಗಳೊಳಗೆ ಸೇರಿಸಿ, ಆ ಶ್ಲೋಕಸಂಖ್ಯೆಯನ್ನೂ ಅಲ್ಲೇ ಕೊಟ್ಟಿರುವೆನಲ್ಲವೆ, ಆ ಮೂಲ ಶ್ಲೋಕಗಳನ್ನೂ ಆಯಾ ಪುಟಗಳ ತಳಭಾಗದಲ್ಲಿಯೇ ಸಣ್ಣ ಅಕ್ಷರಗಳಲ್ಲಿ ಬರೆದು ಸೇರಿಸಿರುವೆನು.

ಆದರೆ ಈ ಕಥೆಯ ಮಹಿಮೆಯು ಎನ್ನನ್ನು ಬಹು ಪ್ರಯಾಸಕ್ಕೆ ಗುರಿಮಾಡಿತು. ಅದೇನೆಂದರೆ — ನಾನು ಈಗ್ಗೆ ೨—೩ ವರುಷಗಳ ಕೆಳಗೆ 'ಕಾಶ್ಮೀರ' ಮತ್ತು 'ಟಿಬೆಟ್', ದೇಶಗಳ ಗ್ರಂಥಗಳ ಉನ್ನತಿಯನ್ನು ಕುರಿತು, ,,ಸಿಸಿಲ್ ಬೆಂಡಾಲ್" ಎಂಬ ಪಾಶ್ಚಿಮಾತ್ಯಪಂಡಿತನೂ, ಮತ್ತು ಎಮ್ಮ ಕಲ್ಕತ್ತಾಪಟ್ಟಣದಲ್ಲಿರ್ದ ಪಂಡಿತೋತ್ತಮರಾದ

"ಶರಚ್ಚಂದ್ರದಾಸ್", ಮತ್ತು "ರಾಜೇಂದ್ರಲಾಲಮಿತ್ರ", ನೂ ಸಹ ಬರೆದಿದ್ದ ವಿಷಯಗಳನ್ನು ಓದುತ್ತಿರುವಲ್ಲಿ ಈ ಕಥೆಯ ಘನತೆಯು ವ್ಯಕ್ತವಾಯಿತು.

ಪ್ರಾಯಶಃ ಕ್ರಿಸ್ತಪೂರ್ವ ೨ನೆಯ ಶತಮಾನದಲ್ಲಿ, "ಮಂಗೋಲ್", ದೇಶದ ಕೂಷಣವಂಶೋತ್ಪನ್ನರಾದ ಕೆಲವು ಯೋದ್ಧರು, ಎಮ್ಮ ಭರತಖಂಡಕ್ಕೆ ಬಂದು "ಗಾಂಧಾರ, ಮತ್ತು "ಕಾಶ್ಮೀರ, ದೇಶಗಳನ್ನು ಆಕ್ರಮಿಸಿಕೊಂಡರು. ಆಗ ಅಲ್ಲಿ ವಾಸಿಸುತಿದ್ದ ಆರ್ಯಕೂಟದ ಜನರಿಗೆ ಈ ಅನ್ಯದೇಶೀಯರ ಆಳ್ವಿಕೆಯಿಂದಲೂ ಅವರ ದುಷ್ಕೃತ್ಯಗಳಿಂದಲೂ ಅನೇಕ ಉಪದ್ರವಗಳುಂಟಾಗಿ, ಪ್ರಜೆಗಳೆಲ್ಲರೂ ಅಪಮಾಧಾನ ಚಿತ್ತರಾದರು. ಇದರಿಂದ ದೇಶದ ಸುಖಯಾತ್ರೆಗೆ ಕುಂದುಂಟಾಯಿತು. ಹೀಗೆಯೇ ಅರ್ಧಶತಮಾನಕಾಲ ಕಳೆಯುವುದರೊಳಗಾಗಿ ರಾಜ್ಯದಲ್ಲಿ ಅವ್ಯವಸ್ಥೆಯು ಪ್ರಬಲಿಸಿತು. ಬಳಿಕ ಈ ಕೂಷಣಜನರ ಮುಖಂಡನಾದ ೧ನೆಯ "ಕನಿಷ್ಕ" ಅಥವಾ "ಕಾನಿಷ್ಕ", ನೆಂಬ ವಿವೇಕಿಯು, ಪ್ರಜಾನುರಾಗವನ್ನು ಸಂಪಾದಿಸಬೇಕೆಂಬ ಉದ್ದೇಶದಿಂದ ಅಲ್ಲಿದ್ದ ಪಂಡಿತರನ್ನೂ ವಿರಕ್ತರನ್ನೂ ಕರೆಯಿಸಿ, ರಾಜ್ಯದಲ್ಲಿ ಶಾಂತಿಯುಂಟಾಗಲು ಉಪಾಯಗಳೇನೆಂದು ಕೇಳಿದಾಗ, "ಶ್ರೀಮದಾರ್ಯಶೂರ", ನೆಂಬ ಬ್ರಾಹ್ಮಣಬೌದ್ಧನು, ಎಮ್ಮೀ ಕಥೆಯುಸೇರಿಸಿಕೊಂಡಿರುವ "ಬೋಧಿಸತ್ವಾವದಾನಮಾಲಾ", ಎಂಬ ಅಸಮಾನವಾದ ದಿವ್ಯಪ್ರಬಂಧವನ್ನು ಬುದ್ಧನ ಪೂರ್ವಜನ್ಮವೃತ್ತಾಂತಗಳನ್ನೊಳಗೊಂಡಿರುವ, ದಿವ್ಯ ನೀತಿಗಳನ್ನೇ ಬೋಧಿಸುವ "ಜಾತಕ", ಎಂಬ ಗ್ರಂಥದ ಆಧಾರದಮೇಲೆ ರಚಿಸಿ, ಅದರ ಬೋಧೆಯಂತೆ ರಾಜಪ್ರಜೆಗಳೆಲ್ಲರೂ ಆಚರಿಸುವಂತೆ ಆಜ್ಞೆಮಾಡಿದನು. ಈ ಆಜ್ಞೆಯು ಸರ್ವಜನರಿಂದಲೂ ಅಂಗೀಕರಿಸಲ್ಪಡಲು, ಆ ದೇಶದಲ್ಲಿ ದುಃಖಗಳೆಲ್ಲವೂ ಶಮನವಾಗಿ ರಾಜಪ್ರಜೆಗಳೀರ್ವರಿಗೂ ಪರಸ್ಪರಾನುರಾಗವೂ ಮೈತ್ರೀಗೌರವಗಳೂ ಉಂಟಾಗಿ, ಧರ್ಮರಾಜ್ಯವೆನಿಸಲ್ಪಟ್ಟುದೆಂದು ಐತಿಹ್ಯದಿಂದ ತಿಳಿದುಬರುವುದು. ಅದಲ್ಲದೆ ಈ ಗ್ರಂಥದ ಕಥೆಗಳನ್ನು ನಾಟಕವನ್ನಾಗಿ ರಚಿಸಿ, ರೂಪಕವಾಗಿ ಅಭಿನಯಿಸುವಂತೆ ಮಾಡಲಾಗಿ ರಾಜಪ್ರಜೆಗಳೆಲ್ಲರೂ ಪ್ರತಿಯೊಂದು ಶುಭದಿನಗಳಲ್ಲಿಯೂ ವಿಭವವಾಸರಗಳಲ್ಲಿಯೂ ತಪ್ಪದೆ ನೋಡುತ್ತ, ಅದರ ನೀತಿಗಳಂತೆ ಸಕಲಜನರೂ ಆಚರಿಸುತ್ತ ಬರಲಾಗಿ ರಾಜ್ಯವೆಲ್ಲ ಸದ್ಧರ್ಮಮಯವಾಯಿತು.

ಬಳಿಕ ಇದೇ ಉಪಾಯವನ್ನು "ಟಿಬೆಟ್", ದೇಶದವರೂ, ಅವರಿಂದ ಚೀನರೂ, ಚೀನರಿಂದ ಜಪಾನರೂ ಅವಲಂಬಿಸಿ, ರಾಜ್ಯದ ಸುಖಯಾತ್ರೆಗೆ ಧರ್ಮವನ್ನೂ ನೀತಿ

ಯನ್ನು ಪೋಷಿಸುವ ದಿವ್ಯಚಾರಿತ್ರ್ಯಗಳನ್ನು ನಾಟಕವನ್ನಾಗಿ ರಚಿಸಿ, ಅವುಗಳನ್ನು ರೂಪಕವಾಗಿ ಅಭಿನಯಿಸುವುದೇ ಒಂದು ಮುಖ್ಯಸಾಧನವೆಂಬುದನ್ನರಿತರು.

ಅತ್ತಲಾಗಿ ಇದರಂತೆಯೇ, ಎಮ್ಮ ಭರತಖಂಡದ ಇತಿಹಾಸಗಳ ರೂಪಕಗಳನ್ನು ಕಾತ್ಯೇರವರಿಂದ ,,ಪರ್ಷ್ಯ,, ದೇಶದವರೂ ಅವರಿಂದ ,,ಅರಬ್ಬರೂ,, ಅರಬ್ಬರಿಂದ ,,ಎಹೂದ್ಯ,,ರೂ, ಎಹೂದ್ಯರಿಂದ ಗ್ರೀಕ,,ರೂ ಗ್ರೀಕರಿಂದ,,ರೋಮ್ಯ,,ರೂ,ಅವರಿಂದ ,,ಆಂಗ್ಲೇಯ,,ರೂ ಈರೀತಿ ಪಾಶ್ಚಾತ್ಯದೇಶದವರೆಲ್ಲರೂ ಗ್ರಹಣಮಾಡಿ, ರೂಪಕವಾಗಿ ಅಭಿನಯಿಸಲು ಪ್ರಾರಂಭಿಸಿದರೆಂದು ಐತಿಹ್ಯದಿಂದ ತಿಳಿದುಬರುವುದು ಈವಿಷಯಗಳನ್ನೆಲ್ಲ ಇಲ್ಲಿ ಚರ್ಚಿಸಲು ಸ್ಥಳಸಂಕೋಚದಿಂದ ಅವಕಾಶವಿಲ್ಲವಾದುದರಿಂದ ಕುತೂಹಲ ಉಳ್ಳವರು, ,,ಪ್ರೊಫೆಸರ್ ಎಫ್ ಮ್ಯಾಕ್ಸ್‌ಮುಲ್ಲರ್,, ಎಂಬ ಜರ್ಮನ್ ಪಂಡಿತನಿಂದ ವಿರಚಿತವಾಗಿರುವ ,, ಕಲೆಕ್ಟೆಡ್ ವರ್ಕ್ಸ್ ,, ಎಂಬ ಆಂಗ್ಲಭಾಷೆಯ ಗ್ರಂಥಗುಚ್ಛದ ೪ನೆಯ ಭಾಗದ ೪೪೦-೪೭೦ ನೆಯ ಪುಟಗಳಲ್ಲಿರುವ ಪಟ್ಟಿಗಳನ್ನೂ ಮತ್ತು ,, ಪ್ರೊಫೆಸರ್ ಟಿ. ಡಬ್ಲ್ಯು. ರಿಸ್‌ಡೇವಿಡ್ಸ್ ,, ಎಂಬ ಪಂಡಿತೋತ್ತಮನಿಂದ ಅದೇಭಾಷೆಯಲ್ಲಿ ವಿರಚಿತವಾಗಿರುವ ,,ಟ್ರಾನ್ಸ್‌ಲೇಷನ್ ಆಫ್ ದಿ ಚಾತಕಾಸ್,, ಎಂಬ ಗ್ರಂಥದ ಉಪೋದ್ಘಾತವನ್ನೂ ಸಹ ಪರಾಮರ್ಶಿಸಬಹುದು.

ಇತ್ತ ಎಮ್ಮ ಭರತಖಂಡದಲ್ಲಿಯೂ ಗತ್ವಾಗತ್ವಾ ನಾಟಕಗಳು ಅಭಿವೃದ್ಧಿಯನ್ನೈದುತ್ತ ಬಂದುವು. ಆದರೆ ಆಧುನಿಕಕವಿಗಳು ಮತಮೌಢ್ಯಮುಂತಾದುವನ್ನು ಹೊಂದಿ, ಇತರ ಮತಾವಲಂಬಿಗಳನ್ನು ಹಾಸ್ಯಮಾಡುವುದಕ್ಕಾಗಿಯೂ, ಅವಮಾನಪಡಿಸುವುದಕ್ಕಾಗಿಯೂ, ತಮ್ಮ ಮತದ ಉನ್ನತಿಯನ್ನು ವ್ಯಕ್ತಪಡಿಸುವುದಕ್ಕಾಗಿಯೂ ಸಹ, ಕೃತಕವಾದ ಕಥೆಗಳನ್ನು ಮಾಡಿಕೊಂಡು, ಅವುಗಳನ್ನು ನಾಟಕಗಳನ್ನಾಗಿ ರಚಿಸಲುಪಕ್ರಮಿಸಿದರು ಬಳಿಕ ಅಷ್ಟಕ್ಕೇ ಕೃಪ್ತರಾಗದೆ, ರಾಜರನ್ನೂ ಅಜ್ಞಜನರನ್ನೂ ಮೋಹಗೊಳಿಸುವುದಕ್ಕಾಗಿ, ಸ್ತ್ರೀಪರವಾಗಿಯೂ, ಶೃಂಗಾರವೇ ಪ್ರಧಾನರಸವುಳ್ಳವಾಗಿಯೂ ಇರುವಂತೆ ಸ್ವೇಚ್ಛೆಯಾಗಿ ನಾಟಕಗಳನ್ನು ರಚಿಸಿದರೇ ಹೊರತು, ಅವುಗಳ ಬೋಧೆಯಿಂದ ಲೋಕಕ್ಕುಂಟಾಗುವ ಹಾನಿಯನ್ನು ಗಮನಿಸಲಿಲ್ಲವೆಂದು ತೋರುವುದು. ಹೀಗೆ ಇವರು ಮಾಡುತ್ತ ಬಂದುದರಿಂದ, ಇತಿಹಾಸಗಳನ್ನು ರೂಪಕವಾಗಿ ಅಭಿನಯಿಸುವ ವಿಷಯದಲ್ಲಿ ಪೂರ್ವಮಹಾತ್ಮರಿಗಿದ್ದ ದಿವ್ಯೋದ್ದೇಶಗಳೆಲ್ಲವೂ ಮರೆತುಹೋಗಿ, ಹೊಟ್ಟೆಪ್ಪನ್ನು ಹಾಸ್ಯವಿನೋದಗಳಿಂದ ಕಳೆಯಲು ಸಾಧನಗಳೆನಿಸಿದುವು. ಮತ್ತು ಈ ನಾಟಕಗಳಿಂದ ಲೋಕಹಿತಕರವಾದ ಧರ್ಮನೀತಿಗಳು ಜನರಿಗೆ ತಿಳಿದುಬರುವುದಕ್ಕೆ

ಪ್ರತಿಬಾಗಿ, ಭೋಗಾಭಿಲಾಷೆಯೂ, ದುಷ್ಕಾರ್ಯದಲ್ಲಿ ಪ್ರವೃತ್ತಿಯೂ, ಅನ್ಯಮತ ದ್ವೇಷವೂ ಉಂಟಾಗಿ, ಅನೇಕ ಸ್ತ್ರೀಪುರುಷರು ದುಷ್ಕಾರ್ಯಾಸಕ್ತರಾಗುತ್ತ ಬಂದರು. ಇವುಂದ ಮತದ್ವೇಷಗಳು ಪ್ರಬಲಿಸಿ, ಸ್ವಯ್ಯೂಡಕಲಹಗಳುಂಟಾಗಿ, ಭರತ ಖಂಡದ ಧರ್ಮಾರ್ಥಗಳ ಬಿಗಿಯೇ ತಪ್ಪಿಹೋಯಿತು. ಈಗಲೂ ನಾಟಕಪ್ರದರ್ಶನ ಗಳಿಂದ ಸ್ತ್ರೀಪುರುಷರಿಗೆ ಅವಿಧವಾದ ಹಾನಿಗಳು ಆಗಾಗ್ಗೆ ಸಂಭವಿಸುತ್ತಿರುವುವು. ಈ ದೋಷಕ್ಕೆ ಈಗಿನ ನಾಟಕಪ್ರದರ್ಶಕರು ಕಾರಣರಲ್ಲ. ಆದರೆ ಮತವೈರವನ್ನೂ ವಿಷಯ ಲಾಂಪಟ್ಯವನ್ನೂ ಹೊಂದಿದ್ದ ಕಾಮಿಗಳಾದ ಕವಿಗಳೂ, ಮತ್ತು ಅಂತಹ ಕವಿಗಳಿಗೆ ಆಶ್ರಯವನಿತ್ತು, ತಾವೂ ಭೋಗಾಂಧರಾಗಿ, ದುಷ್ಕಾರ್ಯಗಳಲ್ಲಿ ಪ್ರವರ್ತಿಸಿ, ತಮ್ಮ ದುಷ್ಕಾರ್ಯಗಳನ್ನು ತೃಪ್ತಿಪಡಿಸಿಕೊಳ್ಳುವದಕ್ಕಾಗಿ ತಾವು ಮಾಡಿದ ಸಾಹಸವನ್ನೂ ವಂಚನೆ ಗಳನ್ನೂ ಘೋರಕೃತ್ಯಗಳನ್ನೂ ಗರ್ಭೀಕರಿಸಿರುವ ಕಾವ್ಯಗಳನ್ನೂ ನಾಟಕಗಳನ್ನೂ ರಚಿ ಸುವಂತೆ ತಮ್ಮ ಆಸ್ಥಾನದ ಕವಿಗಳಿಗೆ ಆಜ್ಞೆಯನ್ನಿತ್ತ ಹಿಂದಿನ ಅವಿವೇಕಿರಾಜರೂ ಕಾರಣರೆಂದು ಹೇಳಬೇಕು ಆದರೆ, ಈ ಕವಿಗಳೂ ಮತ್ತಾ ರಾಜರುಗಳೂ ಪ್ರಾಥ ರಲ್ಲವೆಂದು ಅರ್ಥವಲ್ಲ. ಅವರು ಕವಿತ್ವದಲ್ಲಿಯೂ ಕಾಮಕೇಳಿಗಳಲ್ಲಿಯೂ ಪ್ರಾಥರಾ ಗಿದ್ದರೇ ಹೊರತು, ನೀತಿಯಲ್ಲಿಯೂ ಗುಣದಲ್ಲಿಯೂ ಧರ್ಮರಹಸ್ಯದಲ್ಲಿಯೂ ಸಾಕಾದ ಗಮನವನ್ನು ಕೊಡಲಿಲ್ಲವೆಂಬಂಶವು ಅವರುಗಳ ಕೃತಿಗಳಿಂದಲೇ ತಿಳಿದು ಬರುವುದು.

ಆದಕಾರಣ, ಈ ಇತಿಹಾಸದಲ್ಲಿ ಅಂತಹ ದೋಷಗಳಿಗೆ ಅವಕಾಶವಿಲ್ಲದೇ ಇರ್ಮದನ್ನೂ, ಮತ್ತಾ ರಾಜರನ್ನೂ ಪ್ರಜೆಗಳನ್ನೂ ಧರ್ಮಪಥಾನುಗಾಮಿಗಳನ್ನಾಗಿ ಮಾಡಲು ಅವಶ್ಯಕವಾದ ನೀತಿಗಳಿಂದಲೂ ಧರ್ಮರಹಸ್ಯಗಳಿಂದಲೂ ಗರ್ಭೀಕೃತ ವಾಗಿರುವುದನ್ನೂ, ಅರಿತು ಸಂತುಷ್ಟನಾಗಿ, ಈ ಇತಿಹಾಸಕ್ಕೆ "ಧರ್ಮಸಾಂರಾಜ್ಯ" ವೆಂದು ಹೆಸರನ್ನಿಟ್ಟೆನು

ಅದಲ್ಲದೆ ಈ ಗ್ರಂಥದ ಆಶಯದಂತೆ ರಾಜನು ಧರ್ಮಪರಾಯಣನಾಗಿಯೂ, ಸೇನಾಧಿಪನೇ ಮುಂತಾದ ಶಾಜಕರು ತಮ್ಮ ರಾಜನ ಅವಸರಕ್ಕಾಗಿ ತಮ್ಮ ತನು ಧನ ಪ್ರಾಣಗಳನ್ನಾದರೂ ಅರ್ಪಿಸುವರಾಗಿಯೂ, ಸ್ತ್ರೀಯರು ತಮ್ಮ ಪಾತಿವ್ರತ್ಯವನ್ನು ಕಾಪಾಡಿಕೊಳ್ಳುವದಕ್ಕಾಗಿ ಪ್ರಾಣವನ್ನಾದರೂ ಲಕ್ಷಿಸದವರಾಗಿಯೂ, ಮತ್ತು ಪ್ರಜೆಗಳು ಸ್ವಧರ್ಮ ಸ್ವವೃತ್ತಿ ಸ್ವದೇಶ ಸ್ವಗೌರವಗಳನ್ನು ಎಂತಹ ದುರ್ದಶೆಯಲ್ಲಿಯೂ ಬಿಡದೆ, ರಾಜಶಾಸನವೇ ತಮಗೆ ಭಗವಚ್ಛಾಸನವೆಂದು ಭಾವಿಸಿ, ಅದಕ್ಕೆ ಸರ್ವವಿಧದಿಂದಲೂ

ವಿಧೇಯರಾಗಿಯೂ, ಇರಬೇಕೆಂಬ ಸ್ತೋತ್ರಾರ್ಹವಾದ ಗುಣಪ್ರಭಾವಗಳು — ಕೀರ್ತಿಶೇಷರಿಂದ ಎಮ್ಮ ಜಪಾನ್ ದೇಶದ ಚಕ್ರಾಧಿಪತಿಗಳಾಗಿದ್ದ "ಶ್ರೀಮನ್ಮಿಕ್ಯಾಡೊ" ಪ್ರಭುಗಳಲ್ಲಿಯೂ, ಅವರ ಸೈನ್ಯಾಧಿಪತಿಗಳಾಗಿದ್ದು, ತಮ್ಮ ರಾಜರನ್ನು ಬಿಟ್ಟು ಒಂದು ಕ್ಷಣವೂ ಜೀವಿಸಲಾರೆನೆಂದು ಹೇಳಿ ತಮ್ಮ ರಾಜರ ಮೃತಶರೀರದೆಡೆಯಲ್ಲಿಯೇ ಪ್ರಾಣಗಳನ್ನು ತ್ಯಜಿಸುವುದರ ದ್ವಾರಾ—ಪ್ರತಿಯೋರ್ವ ಮಾನವನೂ ತನ್ನ ರಾಜನ ಕಾರ್ಯಕ್ಕಾಗಿ ಈ ರೀತಿ ಪ್ರಾಣಗಳನ್ನಾದರೂ ಅರ್ಪಿಸಬೇಕೆಂಬ ಮೇಲ್ಪಂಗ್ತಿಯನ್ನು ಲೋಕಕ್ಕೆ ತೋರ್ಪಡಿಸಿದ ದಿಗಂತವಿಶ್ರಾಂತಕೀರ್ತಿಯುತರಾದ "ಅಡ್ಮಿರಲ್ ನೋಗೀ" ಪ್ರಭುಗಳಲ್ಲಿಯೂ, ಮತ್ತು 'ಸ್ತ್ರೀಯು ಪತಿಯ ಸಹಧರ್ಮಿಣಿಯು' ಎಂಬ ಶಾಸ್ತ್ರವಚನದ ತತ್ವವನ್ನು ಪ್ರಾಣಾರ್ಪಣವಂ ಮಾಡಿದ ಪತಿಯ ಪಾದಪ್ರದೇಶದಲ್ಲಿ ನಿಂತು ತಾನೂ ಪತಿಹಿತಾರ್ಥವಾಗಿ ಪ್ರಾಣಗಳನ್ನರ್ಪಿಸುವುದರ ದ್ವಾರಾ—ಲೋಕದ ಸಮಸ್ತ ಸ್ತ್ರೀಯರಿಗೂ ಪ್ರದರ್ಶಿಸಿದ ಆ "ನೋಗೀ ಪ್ರಭುಗಳ ಸಹಧರ್ಮಿಣಿ"ಯಲ್ಲಿಯೂ, ಮತ್ತು ತಮ್ಮ ದೇಶವನ್ನೇ ಸ್ವರ್ಗವೆಂದೂ, ತಮ್ಮ ಮತವನ್ನೇ ಸಂಮತವೆಂದೂ, ತಮ್ಮ ದೇಶಾಚಾರಗಳನ್ನೇ ಸದಾಚಾರಗಳೆಂದೂ, ತಮ್ಮ ತಂದೆತಾಯ್ಗಳನ್ನೇ ತಮ್ಮ ದೇವದೇವಿಯರೆಂದೂ, ತಮ್ಮ ಧರ್ಮವನ್ನೇ ಸದ್ಧರ್ಮವೆಂದೂ, ತಮ್ಮ ರಾಜನನ್ನೇ ಭಗವಂತನೆಂದೂ, ಭಾವಿಸಿ ತಜ್ಜನ್ಯವಾದ ಚಿತ್ತ ಸ್ಥೈರ್ಯದಿಂ, ಇತರರ ದುರ್ಬೋಧನಗಳಿಗೆ ಈಷತ್ತಾದರೂ ಅಸ್ಪದಕೊಡದೆ, ಏಕಮತ್ಯದಿಂದ ಪರ್ತಿಸಿ, ಪ್ರಬಲಶತ್ರುಗಳನ್ನಾದರೂ ಧೈರ್ಯದಿಂದ ಧ್ವಂಸಮಾಡಿ, ತದ್ದ್ವಾರಾ ತಮ್ಮ ದೇಶಕ್ಕೂ ರಾಜನಿಗೂ ಧರ್ಮಕ್ಕೂ ಚಿರವಾದ ಕೀರ್ತಿಯನ್ನುಂಟುಮಾಡಿದುದರದ್ವಾರಾ ಸತ್ಪ್ರಜಾಸಂಪತ್ತಿಯ ಘನತೆಯನ್ನು ಲೋಕದ ಸಮಸ್ತ ಜನಾಂಗದವರಿಗೂ ತೋರ್ಪಡಿಸಿದ "ಜಪಾನ್ ದೇಶದ ಪ್ರಜೆ" ಗಳಲ್ಲಿಯೂ; ಯಥಾರ್ಥವಾಗಿ ವ್ಯಕ್ತಪಟ್ಟುದರಿಂದಲೂ, ಮತ್ತು ಈ ನೀತಿಯಾದ ಧರ್ಮರಹಸ್ಯಗಳು ಆದೇಶದ ಜನರಿಗೆ ಎಮ್ಮ ಭರತಖಂಡದ ಸನಾತನಧರ್ಮದ ಆಧಾರವಿಂದ ಹುಟ್ಟಿ, ಟಿಬೆಟ್ ಚೀನ ಮುಂತಾದ ದೇಶಗಳದ್ವಾರಾ ಅಲ್ಲಿಗೆ ವ್ಯಾಪಿಸಿದ ಬುದ್ಧಧರ್ಮದಿಂದ ತಿಳಿದುಬಂದುದರಿಂದಲೂ ಸಹ, ಈಗ್ರಂಥಕ್ಕೆ "ಜಪಾನರ ಉನ್ನತಿಗೆ ಮೂಲಾಧಾರ" ಎಂಬ ಮತ್ತೊಂದು ಹೆಸರನ್ನೂ ಇಟ್ಟಿರುವೆನು.

ಮತ್ತು ಹಿಂಪೆ ಹೇಳಿದಂತೆ ಕೇವಲ ಶೃಂಗಾರರಸವೇ ಪ್ರಧಾನವಾಗಿ ಉಳ್ಳ ನಾಟಕಗಳನ್ನು ಈಗಿನವರು ಪ್ರದರ್ಶಿಸುವುದರಿಂದ ಜನಸಂತತಿಗೂ ರಾಷ್ಟ್ರಕ್ಕೂ ಉಂಟಾಗುತ್ತಿರುವ ಹಾನಿಯನ್ನೂ, ಅವರಿಂದ ಈಗಿನ ನಾಟಕಪ್ರದರ್ಶಕ ಸಂಘಗಳಿಗೆ ಸಂಭವಿಸಿರುವ ಅಪಕೀರ್ತಿಯನ್ನೂ, ನಿವಾರಣಮಾಡಿ—ನಾಟಕಪ್ರದರ್ಶನಗಳಿಂದ

ಉಂಟಾಗಬೇಕಾದ ಪ್ರಯೋಜನವನ್ನೂ, ಅವುಗಳ ಮುಖ್ಯೋದ್ದೇಶಗಳನ್ನೂ; ಅದರಂತಾಚರಿಸುವುದರಿಂದ ರಾಜರಿಗೂ ರಾಷ್ಟ್ರಕ್ಕೂ ಪ್ರಜೆಗಳಿಗೂ ಲಭಿಸುವ ಸುಖಾದಾಯಗಳನ್ನೂ ವ್ಯಕ್ತಮಾಡಬೇಕೆಂಬ ಮುಖ್ಯೋದ್ದೇಶದಿಂದ ಈ ಇತಿಹಾಸವನ್ನು ಮೊದಲು ನಾಟಕರೂಪವಾಗಿ ರಚಿಸಿದೆನು.

ಅಷ್ಟರಲ್ಲಿಯೇ ಎಮ್ಮನ್ನಾಳುವ ಮಹಾಸ್ವಾಮಿಯವರಾದ " ಶ್ರೀಕೃಷ್ಣರಾಜ ಸಾರ್ವಭೌಮ" ರವರ ಧರ್ಮಸಂಸ್ಥಾನದ ವಿದ್ಯಾಶಾಖೆಯ ಅಧ್ಯಕ್ಷರಾಗಿಯೂ ವಿದ್ಯಾವಾರಿಧಿಯಾಗಿಯೂ, ಇರುವ "ಶ್ರೀಮಾನ್ ಎಂ. ಶ್ಯಾಮರಾವ್ ಎಂ. ಎ" ಯವರು ಮತ್ತು ಎಮ್ಮ ರಾಜಸಭಾಭೂಷಣ — ದಿವಾನ್ ಬಹದ್ದೂರ್ —ಶ್ರೀಮಾನ್ ಕೆ. ಪಿ. ಪುಟ್ಟಣ್ಣಶೆಟ್ಟಿ " ಯವರು, ಇವರೇ ಮುಂತಾದ ವಿದ್ಯಾಭಿಮಾನಿಗಳು ಈ ಇತಿಹಾಸದ ನೀತಿಗಳನ್ನೂ ತತ್ವಗಳನ್ನೂ ಕೇಳಿ ಸಂತುಷ್ಟರಾಗಿ, ಇದನ್ನು ವಿದ್ಯಾರ್ಥಿಗಳೂ ವಿದ್ಯಾರ್ಥಿನಿಯರೂ ಮತ್ತು ಇತರ ಜನರೂ ಸುಲಭವಾಗಿ ಗ್ರಹಣಮಾಡಲು ಅನುಕೂಲಿಸುವಂತೆ ಗದ್ಯರೂಪವಾಗಿಯೂ ಪ್ರಶ್ನೋತ್ತರವಿಶಿಷ್ಟವಾಗಿಯೂ ರಚಿಸಿದರೆ, ಬಹು ಉಪಯೋಗಕರವಾಗಿರುವುದೆಂದು ಸೂಚಿಸಿದುದರಿಂದ, ಅವರ ಅಭಿಪ್ರಾಯದಂತೆಯೇ ಗದ್ಯರೂಪವಾಗಿ ರಚಿಸಿದೆನು. ಆದರೆ ಈ ಇತಿಹಾಸವನ್ನು ರೂಪಕವಾಗಿ ಪ್ರದರ್ಶಿಸಿದುದರಿಂದ ಅನೇಕ ದೇಶಗಳಲ್ಲಿ ರಾಜಪ್ರಜೆಗಳಿಗೆ ಪರಸ್ಪರ ಮೈತ್ರೀವಿಶ್ವಾಸಗಳುಂಟಾಗಿ, ಶಾಂತಿರಸವು ನೆಲೆಗೊಂಡಿದ್ದೆದರಿಂದ, ಈಗಲೂ ಅದರಂತೆಯೇ ಎಮ್ಮ ದೇಶದಲ್ಲಿಯೂ ಸರ್ವರೂ ಸನ್ಮಾರ್ಗವಲಂಬಿಗಳಾಗಲೆಂದು, ನಾಟಕದ ಅಭಿನಯಕ್ಕೆ ಅನುಕೂಲಿಸುವಂತೆಯೂ ಅಂಗಸಂಧಿಗಳ ಕ್ರಮದಿಂದ ವಿಂಗಡಿಸಿರುವೆನು.

ಈ ಗ್ರಂಥದ ಗುಣದೋಷಗಳ ವಿಷಯದಲ್ಲಿ ನಾನೇ ಪ್ರಸ್ತಾವಿಸುವುದು ಯುಕ್ತವಲ್ಲವಾದುದರಿಂದ ಆ ಕಾರ್ಯವನ್ನು ಈ ಗ್ರಂಥಕ್ಕೆ ಪೂರ್ವೋತ್ತರವಾದ "ಅವತಾರಿಕೆ" ಯನ್ನು ಬರೆಯುವದರದ್ವಾರಾ ತಮ್ಮಲ್ಲಿ ಸಹಜವೆನಿಸಿದ ವಿದ್ಯಾಭಿಮಾನವನ್ನೂ ಸಮುದಾರ್ಶತ್ವವನ್ನೂ ಔದಾರ್ಯವನ್ನೂ ತೋರ್ಪಡಿಸಿದ ಎಮ್ಮ ಧರ್ಮಸಂಸ್ಥಾನದ "ಚೀಫ್ ಇಂಜನಿಯರಾದ ಶ್ರೀಮಾನ್ ಕರ್ಪೂರ್ ಶ್ರೀನಿವಾಸರಾವ್ ಬಿ. ಎಸ್. ಸಿ, ಎಲ್. ಸಿ.ಇ., ಯವರಿಗೂ ಮತ್ತು ಪಂಡಿತರಾದ ವಾಚಕರಿಗೂ ಬಿಟ್ಟಿರುವೆನು.

ಆದರೆ ಮುಂದೆ ಬರೆದಿರುವ ಅರ್ಪಣಶ್ಲೋಕದ ಅಭಿಪ್ರಾಯದಂತೆ—

(೧) ರಾಜರಾದವರು — ತಂತಮ್ಮ ಪ್ರಜೆಗಳನ್ನು ತಂತಮ್ಮ ಪುತ್ರವರ್ಗದಂತೆ ಪ್ರೀತಿಮಮತೆಗಳಿಂದ ಕಾಪಾಡುವವರಾಗಿಯೂ, ಸ್ವಜನ ಪರಜನರಲ್ಲಿ ಭೇದವನ್ನೆಣಿಸ

ದವರಾಗಿ ಎಂ, ಪ್ರಜೆಗಳಾಚರಿಸಬೇಕಾದ ನಿಯಮಶೀಲಗಳನ್ನೂ ದೈವಧರ್ಮವನ್ನೂ ಆಚಾರವಿಧಿಗಳನ್ನೂ ತಾವೇ ಮೊದಲು ಆಚರಿಸಿ ತೋರುವವರಾಗಿಯೂ, ಪ್ರಜೆಗಳೆಲ್ಲರೂ ಸುಖಸಂತೋಷಗಳಿಂದ ಅಭಿನಂದಿಸುವುದನ್ನೇ ತಮ್ಮ ಅಭಿನಂದನವೆಂಬಂಶವನ್ನು ಅರಿತವರಾಗಿಯೂ, ಆಗಬೇಕೆಂದೂ;

(೨) ಮತ್ತಾ ಪ್ರಜೆಗಳು-ತಮ್ಮನ್ನು ಕಾಪಾಡುವ ರಾಜರನ್ನು ತಮ್ಮ ಪಿತೃಸಮಾನರೆಂದೂ, ತಮ್ಮ ಪ್ರತ್ಯಕ್ಷದೇವತೆಗಳೆಂದೂ, ತಮ್ಮ ಸುಖಸಮೃದ್ಧಿಗಳಿಗೆ ಆದಿಕಾರಣರೆಂದೂ ಭಾವಿಸಿ, ನಿರಂತರವೂ ಕೃತಜ್ಞರಾಗಿರುವುದಲ್ಲದೆ, ರಾಜಶಾಸನಗಳನ್ನು ಭಗವದಾಜ್ಞೆಗಳಿಗೆ ಸಮಾನವೆಂದು ಶಿರದೊಳಾಂತು, ರಾಜಕಾರ್ಯಗಳಿಗೆ ತಂತಮಗೆ ವಿಹಿತವಾದ ವೃತ್ತಿವರ್ತನೆಗಳಮೂಲಕ ಸಹಾಯಕರಾಗಿ, ರಾಜ್ಯಕುಟುಂಬದ ತಂತ್ರವನ್ನು ಸುಖವಾಗಿ ನಡೆಸಿಕೊಂಡು, ತಾವುಗಳೂ ಸದಾಚಾರ ಸದ್ಗುಣಗಳೆಂಬ ಭೂಷಣಗಳಿಂದ ಭೂಷಿತರಾಗಿ ರಾಷ್ಟ್ರಕ್ಕೂ ರಾಜರಿಗೂ ಕೀರ್ತಿಪ್ರಮೋದಗಳನ್ನುಂಟುಮಾಡಬೇಕೆಂದೂ;

(೩) ಮತ್ತಾ ಸ್ತ್ರೀಯರು — ದುಷ್ಕರ ದುರ್ಬೋಧನೆಗಳಿಗಧೀನರಾಗಿ, ದುಷ್ಕಾಮದಲ್ಲಿ ಪ್ರವರ್ತಿಸಿ, ತಮ್ಮ ಪಾತಿವ್ರತ್ಯವನ್ನು ಹಾಳುಮಾಡಿಕೊಂಡು, ಅನಂತರ ತಾವೂ ಅಪಾರವಾದ ದುಃಖಕ್ಕೂ ಜನರ ಗರ್ಹಣೆಗೂ ಆಸ್ಪದರಾಗಿ, ತಮ್ಮ ಪತಿಗಳಿಗೂ ಮತ್ತು ಬಂಧುಜನರಿಗೂ ಅಪಕೀರ್ತಿಯನ್ನೂ ದುಃಖವನ್ನೂ ಉಂಟುಮಾಡುವಂತಹ ನೀಚ ಕಾರ್ಯಗಳಿಗೆ ಮನಮಾಡದೆ, ತಂತಮ್ಮ ಪತಿಗಳನ್ನೇ ಪರದೈವವೆಂದೂ, ಇಹಪರಸುಖಗಳಿಗೂ ಕೀರ್ತ್ಯಾನಂದಗಳಿಗೂ ಮೂಲಕಾರಣರೆಂದೂ ಭಾವಿಸಿ — ಪತಿಧರ್ಮಕ್ಕೆ ಸರ್ವಪ್ರಕಾರದಿಂದಲೂ ಸಾಚಿವ್ಯವನ್ನುಂಟುಮಾಡಿ, ತದ್ದ್ವಾರಾ ಇಹದಲ್ಲಿ ಕೀರ್ತಿಯನ್ನೂ ನಿರ್ದುಷ್ಟವಾದ ನಿಜಸುಖವನ್ನೂ ಪಡೆದು, ಅದರಿಂದ ತಮ್ಮಕುಲಕ್ಕೂ ದೇಶಕ್ಕೂ ಧರ್ಮಕ್ಕೂ ಸಹ ಚಿರವಾದ ಕೀರ್ತಿಯನ್ನುಂಟುಮಾಡುವುದಲ್ಲದೆ — ಮುಂದಣ ಲೋಕಗಳಲ್ಲಿಯೂ ಪತಿಪರಿಚರ್ಯೆಯಿಂದುಂಟಾಗುವ ನಿತ್ಯಸುಖವನ್ನೂ ಕೂಡ ಹೊಂದತಕ್ಕ ಸಾಧ್ವೀತ್ವವನ್ನಾಚರಿಸಬೇಕೆಂದೂ;

(೪) ಮತ್ತಾ ಮನ್ತ್ರಿಮುಂತಾದ ರಾಜಭೃತ್ಯರು — ಸ್ವಭೋಗಸ್ವಕ್ಷೇಮಗಳಲ್ಲಿಯೇ ಮಗ್ನರಾಗದೆ, ರಿಕ್ತಾನಾಥಪ್ರಜೆಗಳ ದುಃಖವನ್ನು ತೃಣೀಕರಿಸದೆ, ಸ್ವಲಾಭಗಳಿಗಾಗಿ ರಾಜರನ್ನು ದುರ್ಮಾರ್ಗಕ್ಕೆಳೆಯದೆ, ರಾಜರಿಗೂ ಪ್ರಜೆಗಳಿಗೂ ಕಷ್ಟವು ಸಂಭವಿಸಿದಂಗ ಆತ್ಮಸ್ನೇಹಮಗ್ನರಾಗಿ ಜಾರಿಹೋಗದೆ, ಇರುವವರಾಗಿಯೂ — ಮತ್ತಾ ರಾಷ್ಟ್ರದ ಪ್ರಜೆಗಳನ್ನು ತಮ್ಮ ಸಹೋದರರಂತೆ ಭಾವಿಸಿ, ಅವರಿಗೆ ದಾರಿದ್ರ್ಯ, ರೋಗ ಹಿಂಸೆಮುಂ

ತಾದ ವಿಪತ್ತುಗಳುಂಟಾದಾಗ, ರಾಷ್ಟ್ರಪಿತನಾದ ರಾಜನಿಗೆ ಅರಿಕೆಮಾಡಿ ಆ ದುಃಖ ಗಳನ್ನು ನಿವಾರಣೆಮಾಡಿಸುತ್ತಲೂ, ರಾಜಕಾರ್ಯಗಳಲ್ಲಿ ತಮ್ಮ ಕೌಶಲ್ಯವನ್ನೂ ದಕ್ಷತೆಯನ್ನೂ ತೋರಿಸಿ ಅವುಗಳನ್ನು ಸರ್ವಪ್ರಯತ್ನದಿಂದಲೂ ಸಾಫಲ್ಯಗೊಳಿಸು ತ್ತಲೂ, ರಾಜನಿಗೇ ಆಗಲಿ ರಾಷ್ಟ್ರಕ್ಕೇಆಗಲಿ ವಿಪತ್ತುಗಳುಂಟಾದಾಗ ತಂತಮ್ಮ ತನುಧನಪ್ರಾಣಗಳನ್ನಾದರೂ ಹಿಂತೆಗೆಯದೆ ಅರ್ಪಿಸಿ ಅಂತಹ ವಿಪತ್ತುಗಳನ್ನು ಶಮನ ಮಾಡಲು ಪರಮೋತ್ಸಾಹವುಳ್ಳವರಾಗುತ್ತಲೂ—ವರ್ತಿಸಬೇಕೆಂದೂ;

(೫) ಮತ್ತಾ ಬಾಲಬಾಲಿಕೆಯರು—ತಂತಮ್ಮ ತಂದೆತಾಯ್ಗಳಿಗೂ ಗುರುಹಿರಿ ಯರಿಗೂ ವಿಧೇಯರಾಗಿಯೂ, ವಿದ್ಯೆಯನ್ನಧಿಕರಿಸುವುದರಲ್ಲಿ ಆದರವುಳ್ಳವರಾಗಿಯೂ, ಸ್ವಧರ್ಮ ಸ್ವಮತ ಸ್ವಭಾಷೆಗಳಲ್ಲಿ ಸಂಪೂರ್ಣವಾದ ಆಸಕ್ತಿಯನ್ನು ಹೊಂದಿ ಅವುಗಳ ತತ್ವವನ್ನು ಮೊದಲು ತಿಳಿಸುಕೊಂಡು, ಬಳಿಕ ಇತರ ಭಾಷೆಗಳ ಮತಗಳ ಧರ್ಮಗಳ ತತ್ವಗಳನ್ನು ತಿಳಿಯುವರಾಗಿಯೂ, ಡಂಭ, ಅಹಂಕಾರ, ಬಾಹ್ಯಾಡಂಬರ, ಸ್ವಕೀಯ ದಲ್ಲಿ ಮುಂದಾದರ, ಪರಕೀಯದಲ್ಲಿ ಅತ್ಯಾದರ ಮುಂತಾದ ದುರ್ಗುಣಗಳನ್ನು ತ್ಯಜಿಸಿ ಸನಾತನಾರ್ಯಧರ್ಮಕ್ಕೆ ವಿಹಿತವಾದ ಸದಾಚಾರ ಸಚ್ಛೀಲಗಳುಳ್ಳವರಾಗಬೇಕೆಂದೂ ;

(೬) ಮತ್ತಾ ತಂದೆತಾಯ್ಗಳು—ತಮ್ಮ ಮಕ್ಕಳಿಗೆ ವಿವಾಹವನ್ನು ಮಾಡುವ ವಿಷಯದಲ್ಲಿ ತಮ್ಮ ಅಭಿಪ್ರಾಯಗಳನ್ನೇ ಮುಖ್ಯವೆಂದು ಭಾವಿಸದೆ, ವಧೂವರರ ಪರ ಸ್ಪರ ಸಮ್ಮತಿಯನ್ನೂ ಅನುರಾಗವನ್ನೂ ಚೆನ್ನಾಗಿ ತಿಳಿದು ದಾಂಪತ್ಯಾನುಕೂಲ್ಯವು ವ್ಯಕ್ತ ವಾದಲ್ಲಿ ಆಗ್ಗೆ ವಿವಾಹವನ್ನು ಮಾಡಬೇಕೇ ಹೊರತು - ಅನಿಚ್ಛಾವಿವಾಹಗಳನ್ನೂ ಬಾಲ್ಯವಿವಾಹಗಳನ್ನೂ ಅಜ್ಞವಿವಾಹಗಳನ್ನೂ ನೆರವೇರಿಸಿದರೆ—ಆ ದಂಪತಿಗಳಲ್ಲಿ ಪರ ಸ್ಪರಾನುರಾಗವು ನೆಲೆಗೊಳ್ಳದೆ, ಆ ಸಂಸಾರವು ಅಸಾರವಾಗಿಯೂ ದುಃಖಮಯವಾ ಗಿಯೂ ಪರಿಣಮಿಸಿ, ಕೊನೆಗೆ ಮಹಾಪ್ರಮಾದಗಳೂ ಅನರ್ಥಗಳೂ ಪ್ರಾಪ್ತವಾಗುವುವೆಂ ಬಂಶವನ್ನು ತಿಳಿದು, ಅಂತಹ ಅವಿವೇಕಕಾರ್ಯಗಳನ್ನು ನೆರವೇರಿಸಲಾಗದೆಂದೂ.

(೭) ಮತ್ತಾ ರಾಜರೇ ಮುಂತಾದ ಸಮಸ್ತ ಜನರೂ—ಆಸ್ತಿಕರಾಗಿಯೂ ಪಾಪಭೀರುಗಳಾಗಿಯೂ ಸ್ವಧರ್ಮ ಸ್ವಕರ್ಮನಿರತರಾಗಿಯೂ ಪರಲೋಕವೇತ್ತರಾ ಗಿಯೂ ಪರಸ್ಪರಾನುರಾಗಮೈತ್ರಿಗಳುಳ್ಳವರಾಗಿಯೂ ಸ್ವಪರಹಿತಕಾರ್ಯಗಳಲ್ಲಿ ದಕ್ಷ ರಾಗಿಯೂ, ಸದ್ಗುಣೈಶ್ವರ್ಯಸಂಪನ್ನರಾಗಿಯೂ ಆಗಬೇಕೆಂದೂ.

ಈ ಉಪೋದ್ಘಾತದ ದ್ವಾರಾ ಪ್ರಾರ್ಥಿಸುವೆನು.

ಎನ್ನೀ ವಿಜ್ಞಾಪನೆಯಂತೆ ಜನರೆಲ್ಲರೂ ಆಚರಿಸಿದರೆ, ಲೋಕದ ದುಃಖಗಳೆಲ್ಲವೂ

ನಿವಾರಣವಾಗಿ, ಎಲ್ಲೆಲ್ಲಿಯೂ ಪರಸ್ಪರ ಮೈತ್ರಿಯೂ ಸಾಹಾಯ್ಯವೂ ಶಾಂತಿಯೂ ನೆಲೆಗೊಂಡು, ಎಮ್ಮಾ ಭೂಲೋಕವೇ ಪ್ರತ್ಯಕ್ಷಸ್ವರ್ಗವೆನಿಸುವುದು. ಆಗ್ಗೆ ನಾನಿಲ್ಲಿ ಜನ್ಮವನ್ನು ಪರಿಗ್ರಹಿಸಿದುದೂ ಮತ್ತು ನಾನು ಪಟ್ಟ ಅನೇಕ ಶ್ರಮಗಳೂ ಸಾರ್ಥಕವಾಗುವುವು.

ಧರ್ಮಜ್ಞರೇ! ನಾನೀ ಗ್ರಂಥವಂ ವಿರಚಿಸುವ ಕಾರ್ಯದಲ್ಲಿ ಎನಗೆ ಸಾಚಿವ್ಯವನ್ನು ಮಾಡಿದ ಮಹನೀಯರೆಲ್ಲರಿಗೂ ವಂದನೆಗಳನ್ನರ್ಪಿಸುವುದು ಎನ್ನ ಮುಖ್ಯ ಕರ್ತವ್ಯವಾಗಿರುವುದರಿಂದ—ಈ ಗ್ರಂಥವನ್ನು ಪಾಠಶಾಲೆಗಳ ಬಾಲಕ ಬಾಲಿಕೆಯರಿಗೂ ಇತರರಿಗೂ ಸುಖೋದ್ಯೆಯಾಗುವ ರೀತಿಯಲ್ಲಿ ರಚಿಸುವಂತೆ ಉಪಯುಕ್ತವಾದ ಕ್ರಮಗಳನ್ನು ಸೂಚಿಸಿದ ವಿದ್ಯಾಭಿಮಾನಿಗಳಾದ, ಎಮ್ಮ ಧರ್ಮಸಂಸ್ಥಾನದ ವಿದ್ಯಾಶಾಖೆಯ "ಇನ್‌ಸ್ಪೆಕ್ಟರ್ ಜನರಲ್ ಶ್ರೀಮಾನ್ ಎಂ ಶಾಮರಾವ್, ಎಂ. ಎ," (Mr. M. Shama Rao, M. A., Inspector General of Education, Mysore Government) ಯವರಿಗೂ ಎಮ್ಮ ಸಂಸ್ಥಾನದ ವಿಶ್ರಾಂತಪ್ರಥಮಕೌನ್ಸಿಲರ್ ಆದ, "ರಾಜಸಭಾಭೂಷಣ—ದಿವಾನ್‌ಬಹದ್ದೂರ್ ಶ್ರೀಮಾನ್‌ಪುಟ್ಟಣ್ಣಶೆಟ್ಟಿ(Rajasabhabhushana Devan Bahadur K.P. Puttanna Chetty, Retired First Councillor, Mysore State)ರವರಿಗೂ, ಮತ್ತು ಈಗ್ರಂಥಕ್ಕೆ ಪ್ರೌಢತರವಾದ ಅವತಾರಿಕೆಯನ್ನು ಬರೆದ, ಎಮ್ಮ ಸಂಸ್ಥಾನದ ಚೀಫ್ ಇಂಜನಿಯರಾದ ಶ್ರೀಮಾನ್ ಕರ್ಪೂರ್ ಶ್ರೀನಿವಾಸರಾವ್ ಬಿ.ಎಸ್ ಸಿ., ಎಲ್. ಸಿ. ಇ. (Mr. Karpur Sreenivasa Rao, B.Sc., L.C.E., Chief Engineer, Mysore State) ರವರಿಗೂ, ಎನ್ನ ಮನಃಪೂರ್ವಕವಾದ ವಂದನಗಳನ್ನರ್ಪಿಸುವೆನೆಲ್ಲದೆ-ಈ ಗ್ರಂಥರಚನೆಯ ವಿಷಯದಲ್ಲಿ ಉಪಯುಕ್ತವಾದ ಅಭಿಪ್ರಾಯಗಳನ್ನು ಕೊಟ್ಟು ಇದು ಚಿರಸ್ಥಾಯಿಯಾಗಿ ನಿಲ್ಲಲು ಸಾಹಾಯ್ಯವಂ ಮಾಡಿದ ಎನ್ನ ನಿತ್ಯೋತ್ಸವರಾದ ವಿದ್ವಾನ್ ಬಾಲಸರಸ್ವತಿ (Sree Balasarasvati, Sanskrit Scholar and Poet) ಯವರಿಗೂ, ಮತ್ತೀ ಗ್ರಂಥದೊಳಗಣ ಲೇಖನಸ್ಖಲಿತ್ಯಗಳನ್ನು ತಿದ್ದಿದುದಲ್ಲದೆ, ಮುದ್ರಿತಪತ್ರಗಳ ದೋಷಗಳನ್ನು ಶೋಧಿಸುವುದಕ್ಕಾಗಿ ತಮ್ಮ ಅಮೂಲ್ಯವಾದ ಕಾಲವನ್ನು ವಿನಿಯೋಗಿಸಿದ ಎಮ್ಮ ಮೈಸೂರ್ ಶ್ರೀಮನ್ಮಹಾರಾಜರವರ ಕಾಲೇಜಿನ ಕರ್ಣಾಟಪ್ರಥಮಪಂಡಿತರಾದ ವೇ॥ ಪಿ. ಆರ್. ಕರಿಬಸವ

ಶಾಸ್ತ್ರಿ (Mr. P. R. Karibasava Sastry, Senior Kannada Pandit, Maharaja's College, Mysore) ಗಳಿಗೂ ಬಹು ಕೃತಜ್ಞನಾಗಿರುವೆನು. ಇಷ್ಟೇ ಅಲ್ಲದೆ, ಈ ಗ್ರಂಥಕ್ಕೆ ದಿವ್ಯವಾದ ಚಿತ್ರಗಳನ್ನು ಸೇರಿಸಿ ಗ್ರಂಥದ ರಮ್ಯತೆಯನ್ನೂ ಗುಣವನ್ನೂ ಮತ್ತಷ್ಟು ವೃದ್ಧಿಗೊಳಿಸಲು ಸಾಹಾಯ್ಯವಂ ಮಾಡಿದ ಶ್ರೀಮನ್ಮಹಾರಾಜರವರ "ಕರ್ನಾಟಕನಾಟಕಸಭೆ" ಯ ಅಧ್ಯಕ್ಷರಾದ ಸರ್ದಾರ್ ಎಂ. ಗೋಪಾಲರಾಜೇಅರಸಿನವರ (Sardar M. Gopala Raja Urs, Hony, President, Sree Chamarajendra—Karnataka-Nataka-Sabha, Mysore), ಅದೇ ನಾಟಕಸಭೆಯ ಮ್ಯಾನೇಜರಾದ ಮ॥ ಗಾನವಿಶಾರದ ಬಿ ಕೃಷ್ಣಪ್ಪ (Ganavisharada Mr. B. Krishnappa, Manager of the same Dramatic Company.) ನವರೇಮುಂತಾದವರ, ಮತ್ತು ಚಿತ್ರಗಳ ಅಚ್ಚನ್ನು ನಿರ್ಮಿಸಿಕೊಡುವುದರಲ್ಲಿ ಸೌಲಭ್ಯವನ್ನು ತೋರಿಸಿದ ಮೈಸೂರ್ ವೆಸ್ಲಿಯನ್ ಮಿಷನ್ ಪ್ರೆಸ್ ಸೂಪರಿಂಟೆಂಡೆಂಟರಾದ, ರೆವರೆಂಡ್ ಹೆಚ್. ಗಲ್ಲಿಫರ್ಡ್ ಸಾಹೇಬರ (Rev. H. Gulliford, Superintendent, Wesleyan Mission Press, Mysore.) ಮತ್ತೂ ಈ ಗ್ರಂಥವನ್ನು ಅಂದವಾಗಿ ಮುದ್ರಿಸಿಕೊಟ್ಟ ಮೈಸೂರ್ ಶ್ರೀನಿವಾಸ ಮುದ್ರಾಲಯದ ಅಧ್ಯಕ್ಷರಾದ ವೇ॥ ನಂಜುಂಡಶಾಸ್ತ್ರಿಗಳ (Mr. S. Nanjundashastri, Proprietor, Sreenivasa Press, Mysore.) ಉಪಕೃತಿಗಳು ಚಿರಸ್ಮರಣೀಯವಾಗುವುವು.

ಆದರೆ, ಈ ಗ್ರಂಥವು ಚಿಕ್ಕದಾದರೂ ಕೆಲವು ಅಕ್ಷರಸಾಲಿತ್ಯಗಳೂ ಮುದ್ರಣದೋಷಗಳೂ ಮುದ್ರಣಕಾಲದಲ್ಲಿ ಪ್ರಾಪ್ತವಾದುದಕ್ಕಾಗಿ ವ್ಯಸನಪಡಬೇಕಾಗಿಹುದು. ಆದಕಾರಣ ಆ ದೋಷಗಳನ್ನು ದ್ವಿತೀಯ ಮುದ್ರಣದಲ್ಲಿ ಸರಿಪಡಿಸಿಕೊಳ್ಳಬೇಕಾಗಿರುವುದರಿಂದ, ಆದೋಷಗಳನ್ನು ವಾಚಕಮಹಾಶಯರು ಕ್ಷಮಿಸುವರೆಂದು ನಂಬಿರುವೆನು.

ಶ್ಲೋ॥ ಭೂಪಾ ಧರ್ಮಪರಾಯಣಾಃ ಪ್ರಕೃತಯೋ ಭೂಪಾಲಭಕ್ತ್ಯುಜ್ಜ್ವಲಾಃ।
ಪಿತ್ರಾದೇಶಕೃತಃ ಸುತಾಃ ಕೃತಧಿಯೋ ಭರ್ತೃವ್ರತಾ ಯೋಷಿತಃ॥
ಚಾತುರ್ವರ್ಣ್ಯಗತಾಃ ಸ್ವಧರ್ಮನಿರತಾ ಯೇ ಸಂತಿ ಲೋಕೇ ಜನಾ-
ಸ್ತೇಷ್ವದ್ಯಾಪ್ಯಹಿತಮೇತದಾದರವಶಾತ್ಸಿದ್ಧಮ್ಮಸಾಮ್ರಾಜ್ಯಕಮ್ ॥೫॥

[ತಾ:—(೫) " ಈ ಲೋಕದಲ್ಲಿ ಅವರಾಜರು ಧರ್ಮಪರಾಯಣರಾಗುವರೋ, ಅವಪ್ರಜೆಗಳು ರಾಜಭಕ್ತಿಯಿಂದೊಡಗೂಡಿ ಶೋಭಿಸುವರೋ, ಅವ ಪುತ್ರರು (ತಂತಮ್ಮ) ತಂದೆತಾಯ್ಗಳಾಜ್ಞೆಯಂತೆ ನಡೆಯುಳ್ಳವರಾಗಿಯೂ ವಿದ್ಯಾವಂತರಾಗಿಯೂ ಇರುವರೋ, ಅವಸ್ತ್ರೀಯರು ಪತಿವ್ರತೆಯರಾಗಿರುವರೋ, ಅವಚಾತುರ್ವರ್ಣ್ಯದ ೭ ನರು ತಂತಮ್ಮ ಧರ್ಮಕರ್ಮಗಳಲ್ಲಿ ನಿರತರಾಗಿರುವರೋ, ಅಂಥವರುಗಳೆಲ್ಲರ ಸನ್ನಿಧಿಯಲ್ಲಿಯೂ " ಧರ್ಮಸಾಮ್ರಾಜ್ಯ " ವೆಂಬೀ ಗ್ರಂಥವು (ಗ್ರಂಥಕರ್ತನಿಂದ) ಆದರ ಪುರಸ್ಸರವಾಗಿ ಅರ್ಪಿಸಲಟ್ಟಿದೆ. "]

ಬೆಂಗಳೂರು,
೧೭ ನೆಯ ಸೆಪ್ಟಂಬರ್ ೧೯೧೩. } ಬಿದರೇ ಅಶ್ವತ್ಥನಾರಾಯಣಿ.

ಬಿದರೆ ಅಶ್ವತ್ಥನಾರಾಯಣ, ಗ್ರಂಥಕರ್ತ.



Bidare Aswatthanarayana,
The Author.

ಮೈಸೂರು ಮಹಾರಾಜಾಕಾಲೇಜ್ ಸೀನಿಯರ್ ಕರ್ಣಾಟಕ ಪಂಡಿತ ಪಿ ಆರ್. ಕರಿಬಸವಶಾಸ್ತ್ರಿಗಳ ಅಭಿಸಾಯ.

ಬ್ರಹ್ಮಶ್ರೀ ॥ ಪದವೆ ಅಶ್ವತ್ಥನಾರಾಯಣಶಾಸ್ತ್ರಿಗಳಿಂದ ರಚಿಸಲ್ಪಟ್ಟ " ಧರ್ಮಸಾಮ್ರಾಜ್ಯ " ಅಥವಾ " ಜಪಾನರುನ್ನತಿಗೆ ಮೂಲಾಧಾರ " ವೆಂಬ ಗ್ರಂಥವನ್ನು ನಾನು ಆಮೂಲಾಗ್ರವಾಗಿ ನೋಡಿದೆನು. ಇದು ಕರ್ಣಾಟಕ ಗದ್ಯಪ್ರಬಂಧವಾಗಿಯೂ, ಜಾತಕವೆಂಬ ಬೌದ್ಧ ಗ್ರಂಥದಿಂದ ಸಂಗ್ರಹಿಸಲ್ಪಟ್ಟ ಕಥೆಯೂಗಿಯೂ, ಲಲಿತಪದಪ್ರಯೋಗವುಳ್ಳುದಾಗಿಯೂ, ಅಪೂರ್ವಪ್ರೌಢರಸಂವಿಧಾನಗರ್ಭಿತವಾಗಿಯೂ, ಶೃಂಗಾರ-ಕರುಣ-ಅದ್ಭುತ ಶಾಂತರಸಭರಿತವಾಗಿಯೂ, ಇರುವುದರಿಂದ—ಪಾತಕರಿಗೆ ಕೇವಲ ಕೌತುಕಾವಹವಾಗಿರುವುದಲ್ಲದೆ, ಮುಖ್ಯವಾಗಿ ಪ್ರಜೆಗಳಿಗೆ ರಾಜಭಕ್ತಿ, ರಾಜನಿಗೆ ಪ್ರಜಾನುರಾಗ, ಸ್ತ್ರೀಯರಿಗೆ ಪಾತಿವ್ರತ್ಯ, ಮನುಷ್ಯಸಾಮಾನ್ಯಕ್ಕಿರಬೇಕಾದ ಪರಸ್ಪರಪ್ರೀತಿ ಜಿತೇಂದ್ರಿಯತ್ವ ಅಹಿಂಸೆ ಪರೋಪಕಾರ ಆಸ್ತಿಕ್ಯಬುದ್ಧಿ ಸೀತಿ ಮುಂತಾದ ಧರ್ಮಗಳನ್ನೂ, ದುಷ್ಪರಿಣಾಗುವದುರ್ಗತಿಯನ್ನೂ, ಬೋಧಿಸುವುದರಿಂದ-ಧರ್ಮಸಾಮ್ರಾಜ್ಯವೆಂಬ ಸಾರ್ಥಕನಾಮವುಳ್ಳುದಾಗಿದೆ. ಮುಖ್ಯವಾಗಿ ಮನುಷ್ಯರಿಗೆ ಅವಶ್ಯಕವಾಗಿರುವ ಧರ್ಮಗಳೆಲ್ಲವನ್ನೂ ಸದೃಷ್ಟಾಂತವಾಗಿ ಪ್ರತಿಪಾದಿಸುವ ಈ ಗ್ರಂಥವನ್ನು ಓದಿದವರಿಗೆ ಧರ್ಮಾಧರ್ಮಸ್ವರೂಪಜ್ಞಾನವು ಹೃದಯದಲ್ಲಿ ಅಚ್ಚೊತ್ತಿದಂತೆ ನೆಲೆಯಾಗಿನಿಂತು, ಧರ್ಮಮಾರ್ಗ ಪ್ರವೃತ್ತಿಯೂ ಅಧರ್ಮಮಾರ್ಗನಿವೃತ್ತಿಯೂ ಉಂಟಾಗವುದರಲ್ಲಿ ಯಾವ ಸಂದೇಹವೂ ಇಲ್ಲ. ಈ ಪುಸ್ತಕವನ್ನು ಸರ್ಕಾರದವರು ಕನ್ನಡಪ್ರೈಮರಿಸ್ಕೂಲಿನ ವಿದ್ಯಾರ್ಥಿಗಳಿಗೆ ಓದುವುದಕ್ಕಾಗಿ ನೇಮಿಸುತ್ತಾ ಬಂದರೆ, ಬಾಲಕರಿಗೆ ಬಾಲ್ಯಾದಾರಭ್ಯ ಧರ್ಮಾಧರ್ಮಸಂಸ್ಕಾರವು ವೃದ್ಧಿಹೊಂದಿ ರಾಜ್ಯಕ್ಕೆ ಸುಕ್ಷೇಮವುಂಟಾಗುವುದೆಂದು ನಂಬುತ್ತೇನೆ.

CONTENTS.

ವಿಷಯಾನುಕ್ರಮಣಿಕೆ

ಸಂಖ್ಯೆ.	ವಿಷಯ	ಪುಟಸಂಖ್ಯೆ.
I.	ಸೂಚನೆ. Introduction.	೧-೧೮.
II.	ಉಪೋದ್ಘಾತ. Authors, preface.	೮-೨೪.
III.	ಈ ಗ್ರಂಥದ ವಿಷಯದಲ್ಲಿ ಕೆಲವು ಪಂಡಿತರ ಪಭಿಪ್ರಾಯಗಳು. Some opinions of learned men on this book	
vI.	ಚಿತ್ರಗಳ ವಿವರ. Pictorial illustrations	

ಒಟ್ಟು ಪುಟಗಳು. ೩೮.

ಗ್ರಂಥವು. Body of the book.

ಒಂದನೆಯ ಅಂಗ.

ಸಂಧಿ		
1.	ಮಂಗಳಮ್. Adoration.	೧.
2.	ಧರ್ಮಪ್ರಭಾವ ಮತ್ತು ಅಧರ್ಮಾಂಕುರ. Wrong envying the right.	೨.
3.	ಗುಣದೋಷಾವತರಣವು. Good verus bad.	೫.
4.	ರಾಜರಾಜಕಸಂಪತ್ತಿಗಳು. The king and his happy council.	೭.
5.	ಗುಣದೋಷಸಂವಾದ. Virtue and vice.	೧೩.
6.	ಸತ್ಪ್ರಜಾಸಂಪತ್ತಿ. The loyal subject.	೧೪

ಎರಡನೆಯ ಅಂಗ.

1. ಮಾರಪ್ರವೇಶ. Peeping of Mara: The Cupid. ೨೨.
2. ಅವಿದ್ಯಾಮಹಿಮೆ. Beauty deludes knowledge. ೨೪.
3. ಪೌರೋಹಿತ್ಯ. Priesthood. .... ೨೭.
4. ದೈವಿಕತಂತ್ರ. The divine dispensation. ... ೩೬
5. ಉದ್ವೇಶಭಂಗ. Frustration of human hope. ೩೮.
6. ಸತೀತ್ವಾವಷ್ಟಂಭ. Woman's true love cannot be altered. ೪೧
7. ಅಸಬ್ಬಾವಿವಾಹ. Marriage by force, but devoced of Love. .... ೪೯.

ಮೂರನೆಯ ಅಂಗ.

1. ಸ್ವಾಧ್ವೀವಿಲಾಸ. Chaste love reflects even in dreams. .... ೫೧.
2. ವೀರಪಾತಿವ್ರತ್ಯ. No adversity can pollute the real chastity. .... ೫೪.
3. ರಾಜಶಾಸನೋದ್ಘೋಷಣೆ. Royal proclamation. ೫೬
4 ಮನ್ಮಥಪ್ರಭಾವ. Influence of Cupid .... ೫೭.
5. ಪಶ್ಚಾತ್ತಾಪ. Repentance. .... ೬೦.
6. ಅಧರ್ಮಪ್ರವೇಶ. The prevalence of unrighteousness. ೬೩
7. ಧರ್ಮಾಧರ್ಮಸಂಗ್ರಾಮ. Conflict between right and wrong. .. .... ೬೭.
8. ಅಭಿಪ್ರಾರಗತ್ಯ. Reaching the goal of judgment. .... ೮೪.

ನಾಲ್ಕನೆಯ ಅಂಗ.

1. ಭೃತ್ಯಗುಣಸಂಪತ್ತಿ ಮತ್ತು ಧರ್ಮಸೂಕ್ಷ್ಮ. The faithful servant and law-subtleties. .... ೯೯.
2. ಅನ್ನಾಭಾವದ ಆಪದಗಳು. Hunger: The mother of crimes. .... ೧೦೨.
3. ವಿವೇಕವಿಸ್ತಾರ. The display of discretion. .... ೧೧೦.
4. ದರ್ಪದಳನ. No lust can pierce a sound heart. .... ೧೧೩.
5. ಗುಣಾಧಿಕ್ಯ. Vice brings sadness while virtue brings glory. .... ೧೨೨.
6. ಸ್ವಧರ್ಮಪಾರಮಿತಾ. The pious value righteousness, more than their lives. .... ೧೨೪.

ಐದನೆಯ ಅಂಗ.

1. ಅಧರ್ಮಶೌರ್ಯಲ್ಯ. No wrong is ever bold .... ೧೩೩.
2. ಧರ್ಮೋದ್ಧರಣ. Right is destined to revive. ೧೩೬.
3. ಧರ್ಮವಿಜಯ Right alone will triumph .... ೧೩೭.
4 ಧರ್ಮಾಭಿಷೇಕಃ. The coronation of righteousness. .... ೧೫೩.
I. ಈ ಗ್ರಂಥಕರ್ತೃನೇತರ ಇತರ ಗ್ರಂಥಗಳ ವಿಷಯದಲ್ಲಿ ಕೆಲವು ಪಂಡಿತರ ಅಭಿಪ್ರಾಯಗಳು. Some opinions of learned men on other works of this author.
II. ಶುದ್ಧಾಶುದ್ಧ ಪತ್ರಿಕೆ. Earrata.

ಒಟ್ಟು ಪುಟಗಳು. ... ೨೧೦

List of Illustrations

ಚಿತ್ರಗಳ ವಿವರ

I. ಶ್ರೀ ಕೃಷ್ಣರಾಜ ಒಡೆಯರ್ ಬಹದ್ದೂರ್, ಜಿ.ಸಿ.ಎಸ್.ಐ. ರವರು.—
Sri Krishnaraja Wodeyar Bahadur, G.C.S.I. Maharaja of Mysore. ... ಪ್ರಥಮದಲ್ಲಿ

II. ಇಂದ್ರನೇ ಮೊದಲಾದವರು ಭೂಲೋಕದ ರಾಜರ ಶ್ರೇಯಸ್ಸಿನ ವಿಷಯದಲ್ಲಿ ಅಸೂಯೆ ಪಡುವಿಕೆ. Indra, the Lord of celestials and others envy the success and prosperity of earthly kings. ೨

III. ಚಿತ್ರಗುಪ್ತರು ಕುರುಬನ ರಾಜಭಕ್ತಿ ಮೊದಲಾದ ಗುಣವಿಶೇಷಗಳನ್ನು ಬ್ರಾಹ್ಮಣವೇಷದಿಂದ ಪರೀಕ್ಷಿಸುವಿಕೆ. The celestial spies Chitra and Gupta guising themselves as Brahmanas, test the loyalty and other virtues of the Shepherd. ೧೫

IV. ರಾಜಪುರೋಹಿತ ಸ್ತ್ರೀಲಕ್ಷಣಜ್ಞರು ಕನ್ಯೆಯಾದುನ್ಮಾದಯನ್ತಿಯ ರೂಪಾತಿಶಯವನ್ನು ನೋಡಿ ಬೆರಗಾಗುವಿಕೆ. The Royal Priest and the Palmister, were struck with wonderby the ravishing beauty ot Unmadaya-nti, the proposed wife of the king. ೨೬

V. ಮೂರ್ಛಿತೆಯಾಗಿದ್ದ ಉನ್ಮಾದಯಂತಿಯ ಅನಿಚ್ಛಾ ವಿವಾಹ Unmadayanti's marriage against her will and when in faint. ೫೦

VI. ದಾರಿದ್ರ್ಯದಶೆಗೊಳಗಾದ ಪ್ರಜೆಗಳ ಶೀಲಸ್ವಭಾವಗಳನ್ನು ಚಿತ್ರಗುಪ್ತರು ಉಪದೇಶಕರ ವೇಷದಿಂದ ಪರೀಕ್ಷಿಸುವಿಕೆ. Chitra and Gupta test under the guise of preachers, the faith and conduct of the subjects in their adversity. ೬೮

VII. ಜೂಜಕನೆಂಬ ಚೋರನು, ತಾನು ಮಾಡಿದ ಕಳ್ಳತನಕ್ಕೆ ಕಾರಣವನ್ನು ರಾಜನಲ್ಲಿ ವಿಜ್ಞಾಪಿಸುವಿಕೆ. Jujaka, the brahmin thief, explains the cause of his theft. ೧೦೩

VIII. ರಾಜನು ತನ್ನನ್ನು ವರಿಸೆಂದು ಪ್ರಾರ್ಥಿಸಿದ ಉನ್ಮಾದಯಂತ್ರಿಯನ್ನು ಧಿಕ್ಕರಿಸುವಿಕೆ. The king Devasena refuses Unmada yanti who requests him to take her as his wife. ೧೨೧

IX. ಉನ್ಮಾದಯಂತ್ರೀ ರಾಜ ಸೇನಾಪತಿಗಳು ಸ್ವಧರ್ಮರಕ್ಷೆಗಾಗಿ ಪ್ರಾಣತ್ಯಾಗಮಾಡುವಿಕೆ. Unmadayanti, the King and the Commander-in-Chief sacrifice their own beloved lives in order to be true to their words and duty. ೧೩೯

X. ಬ್ರಹ್ಮದೇವನು ದೇವಲೋಕದ ಸಭೆಯಲ್ಲಿ ನ್ಯಾಯಾಧೀಶತ್ವವನ್ನು ವಹಿಸಿ, ಉನ್ಮಾದಯಂತ್ರಿಯೇ ಮೊದಲಾದವರ ಪಾಪಪುಣ್ಯಗಳ ವಿಷಯದಲ್ಲಿ ಶುಕ್ರನೂ ಬೃಹಸ್ಪತಿಯೂ ಮಾಡಿದ ವಾದಪ್ರತಿವಾದಗಳ ವಿಷಯದಲ್ಲಿ ಸಿದ್ಧಾಂತವನ್ನು ಹೇಳುವಿಕೆ. The god Brahma, the special judge, trys in heavenly court, the King and others, who were charged by Sukra and defended by Brihaspati. ೧೪೧

XI. ರಾಜದ್ರೋಹ ದುಷ್ಕಾಮ ಚೌರ್ಯ ಪ್ರಜಾಹಿಂಸೆ ಮದ್ಯಪಾನ ಪ್ರಾಣಿವಧೆ ಮುಂತಾದ ದುಷ್ಕರ್ಮಗಳನ್ನೆಸಗಿದ ಮಾನವರನ್ನು ಯಮದೂತರು ನರಕದಲ್ಲಿ ಹಿಂಸಿಸುವಿಕೆ. The servants of the god of Death (Yama,) punish bad men for their offences of treason, unlawful lust, theft, suppression of subjects, drunkenness, animal slaughter and the like. ೧೫೩

XII, ದೇವಲೋಕದಲ್ಲಿ ದೇವಸೇನೋನ್ಮಾದಯಂತ್ರಿಯರಿಗೆ ವಿವಾಹವೂ ಪಟ್ಟಾಭಿಷೇಕವೂ ನಡೆಯುವಿಕೆ. The installation and marriage of the king Devasena with Unmadayanti in heaven. ೧೬೨

The Kingdom of Righteousness.

ಧರ್ಮಸಾಮ್ರಾಜ್ಯಮ್

ADORATION.

ಮಂಗಳಮ್

ಧರ್ಮೋ ವಿಷ್ಣುರಿರಂಚಿನೀಲಗಳಕೃದ್ಧರ್ಮಂ ವಿರಾಟ್ಸೇವತೇ |
ಧರ್ಮೇಣೈವ ಸುಶಾಸಿತಂ ಜಗದಿದಂ ಧರ್ಮಾಯ ದದ್ಯಾದ್ಭವುಃ ||
ಧರ್ಮಾನ್ನಾಸ್ತ್ಯಪರಂ ಪದಂ ಸುಖತರಂ ಧರ್ಮಸ್ಯ ಮೂಲಂ ದಯಾ |
ಧರ್ಮೇ ಚಿತ್ತಲಯೋ ಹಿ ಮುಕ್ತಿರನಘಾ ಹೇ ಧರ್ಮ ಪಾಯಾ ಜಗತ್ ||

[೧. ತಾತ್ಪರ್ಯ:-ಧರ್ಮವು (ತ್ರಿಮೂರ್ತಿಗಳಾದ) ಬ್ರಹ್ಮ-ವಿಷ್ಣು-ಮಹೇಶ್ವರರನ್ನು ಸೃಷ್ಟಿಸಿದುದು; ಆ ಧರ್ಮವನ್ನು ವಿರಾಟ್‌ಪುರುಷನೂ ಸೇವಿಸುವನು; ಆ ಧರ್ಮದಿಂದಲೇ ಈ ಜಗತ್ತು ಕ್ರಮಪಡಿಸಲ್ಪಟ್ಟಿರುವುದು; ಆ ಧರ್ಮಕ್ಕಾಗಿ (ಮನುಷ್ಯನಾದವನು ತನ್ನ) ಶರೀರವನ್ನಾದರೂ ಅರ್ಪಿಸಬೇಕು; ಆ ಧರ್ಮಕ್ಕಿಂತಲೂ ಸುಖತರವಾದ ಸ್ಥಾನವು ಮತ್ತೊಂದಿಲ್ಲವು; ಆಧರ್ಮದ ಬುಡವೇ ದಯೆಯು; ಆ ಧರ್ಮದಲ್ಲಿ (ಮನುಷ್ಯನ) ಚಿತ್ತವು ಲೀನವಾಗುವುದೇ ಪಾಪರಹಿತವಾದ (ಪುನರಾವೃತ್ತಿರಹಿತವಾದ) ಮುಕ್ತಿಯು; ಅಂತಹ ಎಲೈ ಧರ್ಮವೇ! (ಪರಬ್ರಹ್ಮನೆ ಅಥವಾ ಪರಮಾತ್ಮನೆ!) ಲೋಕವನ್ನು ರಕ್ಷಿಸು.]

ಜೇತಶ್ಚಿಂತಯ ಸಂತತಂ ಗುರುವರಂ ಜ್ಞಾನಾಕರಂ ಶಂಕರಂ |
ಸರ್ವೇಶಂ ನುತಧರ್ಮದೇಹರುಚಿರಂ ಸ್ವಾತ್ಮಪ್ರಭಾಭಾಸುರಮ್||
ಉತ್ಪತ್ತಿಸ್ಥಿತಿಮೃತ್ಯುಭಂಗಲಹರೀಸಂಸಾರಘೋರಾರ್ಣವಾ– |
ದ್ದಕ್ಷಂ ಪಾಲಯಿತುಂ ಜಗನ್ಯತಿತರಾಮಶ್ವತ್ಥನಾರಾಯಣಮ್ ||

[೨. ತಾ|| ಎಲೈ ಮನಸ್ಸೇ ! ಶ್ರೇಷ್ಠನಾದ ಗುರುವೂ ಜ್ಞಾನಕ್ಕೆ ಸ್ಥಾನನೂ, ಮಂಗಳಕರನೂ, ಪ್ರಪಂಚಕ್ಕೆ ಅಧಿಪತಿಯೂ, ಸ್ವಪ್ರಕಾಶದಿಂದ ಬೆಳಗುತ್ತಿರುವವನೂ ಸಂಸಾರಸಮುದ್ರದಲ್ಲಿ ಹುಟ್ಟುವುದು, ಬದುಕುವುದು, ಸಾಯುವುದು ಎಂಬ ಅಲೆಗಳ ಹೊಡೆದಾಟಕ್ಕೊಳಗಾಗಿರುವ ಪ್ರಾಣಿವರ್ಗವನ್ನು ಉದ್ಧರಿಸಿ ಕಾಪಾಡುವುದರಲ್ಲಿ ಅತ್ಯಂತ ಕೌಶಲ್ಯವುಳ್ಳವನೂ ಆದ ಆ ಅಶ್ವತ್ಥನಾರಾಯಣಭಗವಂತನನ್ನು ನಿರಂತರವೂ ಭಜಿಸು.]

ಮೊದಲನೆಯ ಅಂಗ
ಒಂದನೆಯ ಸಂಧಿ
WRONG ENVYING THE RIGHT.
ಧರ್ಮಪ್ರಭಾವ ಮತ್ತು ಅಧರ್ಮಾಂಕುರ.

ಒರಿದಾನೊಂದು ದಿನ ದೇವೇಂದ್ರನಾದ ಶಕ್ರನು ದಿಕ್ಪಾಲರುಗಳಿಂದಲೂ ಬೃಹಸ್ಪತಿ ಮೊದಲಾದ ಮಂತ್ರಿಗಳಿಂದಲೂ ಅಲಂಕೃತಗಳಾದ ದಿವ್ಯಾಸನಗಳ ಮಧ್ಯದೊಳ್ ಮೆರೆವ ಧರ್ಮಾಸನದಲ್ಲಿ ಶಾಂತಿಸ್ವರೂಪಿಣಿಯಾದ ಶಚೀದೇವಿಯೊಡನೆ ಮಂಡಿಸಿ ಬೃಹಸ್ಪತಿಯನ್ನು ಕುರಿತಿಂತೆಂದನು—"ಪೂಜ್ಯರೇ! ಕೆಲವುದಿನಗಳಿಂದಲೂ ಈ ಸಿಂಹಾಸನದ ಮೇಲೆ ಕುಳಿತೊಡನೆಯೇ ಅವುದೋ ಒಂದುವಿಧವಾದ ತಾಪವೂ ಭೀತಿಯೂ ಎನಗುಂಟಾಗುವುದು! ಇದಕ್ಕೆ ಕಾರಣವು ಏನಾಗಿರಬಹುದು?" ಇದನ್ನು ಕೇಳಿದ ಬೃಹಸ್ಪತಿಯು ದಿವ್ಯದೃಷ್ಟಿಯಿಂದ ಒಂದು ಕ್ಷಣಕಾಲ ಯೋಚಿಸಿದ ಬಳಿಕ ಸಂಕೋಚದಿಂದ ಇಂತೆಂದನು–"ಸಹಸ್ರಾಕ್ಷನೇ ಅದರ ಕಾರಣವನ್ನು ನಿನ್ನಲ್ಲಿ ಹೇಳುವುದಕ್ಕೆ ಎನ್ನ ಮನವು ಸ್ವಲ್ಪ ಹಿಂತೆಗೆಯುವುದು." ಇದನ್ನು ಕೇಳಿದ ದೇವೇಂದ್ರನು ಕಳವಳಗೊಂಡವನಾಗಿ ಇಂತೆಂದನು:—"ನಿಮ್ಮ ಮಾತಿನಿಂದ ಎನ್ನ ಭೀತಿಯು ಮತ್ತಷ್ಟು ವೃದ್ಧಿಯಾಗುವುದು! ಕಾರಣವನ್ನು ತಡಮಾಡದೆ ಹೇಳಿರಿ!" ಬಳಿಕ ಬೃಹಸ್ಪತಿಯು ಇಂತೆಂದನು:—"ಹಾಗಾದರೆ ಹೇಳುವೆನು ಕೇಳು—ಅವನೋ ಮಹಾತ್ಮನಾದ ಒಬ್ಬ ರಾಜರ್ಷಿಯು ಭೂಲೋಕದಲ್ಲಿ ಅವತಾರಮಾಡಿರುವಂತೆಯೂ, ಆತನ ಧರ್ಮಪ್ರಭಾವವು ನಿನ್ನ ಆಸನವನ್ನು ವ್ಯಾಪಿಸಿ ನಿನಗೀರೀತಿಯಾದ ತಾಪವನ್ನೂ ಭೀತಿಯನ್ನೂ ಉಂಟುಮಾಡಿರುವಂತೆಯೂ ತೋರುವುದು; ಮುಖ್ಯವಾಗಿ ನಿನ್ನ ಇಂದ್ರಪಟ್ಟದ ಅವಧಿ ಮುಗಿಯುವ ಕಾಲವು ಪ್ರಾಪ್ತವಾಗಿರುವುದರಿಂದ ಈ ನಿಮಿತ್ತಗಳುಂಟಾಗಿರುವುವು." ಇದನ್ನಾಕರ್ಣಿಸಿದೊಡನೆಯೇ ದೇವೇಂದ್ರನು ಖಿನ್ನಮುಖನಾಗಿ ತನ್ನಲ್ಲಿತಾನೇ ಈರೀತಿ ಮಾತನಾಡಿಕೊಂಡನು:—

ಇಂದ್ರನೇ ಮೊದಲಾದವರು ಭೂಲೋಕದ ರಾಜರ ಶ್ರೀಯಸ್ಸಿನ ವಿಷಯದಲ್ಲಿ ಅಸೂಯೆ ಪಡುವಿಕೆ.

ನೀತಿ :—ಸ್ವಾರ್ಥಪರತ್ವವು ದ್ರೋಹಾಸೂಯೆಗಳನ್ನುಂಟುಮಾಡುವುದು.

Indra and other celestial chiefs envy the success and prosperity of earthly kings.

MORAL :—Deceit and envy are the outcome of selfishness.

"ಅಯ್ಯೋ! ಈಗೇನನ್ನು ಮಾಡಲಿ! ಈ ಗುರುಗಳ ಮಾತು ಸುಳ್ಳಾಗದು! ಇದುವರೆಗೂ ದಿಕ್ಪಾಲರುಗಳಿಂದಲೂ ತ್ರಿಮೂರ್ತಿಗಳಿಂದಲೂ ಸೇವಿತವಾದ ಈ ದೇವರಾಜ್ಯಕ್ಕೆ ಒಡೆಯನೆಂಬ ಬಿರುದನ್ನು ಪಡೆದಿರ್ದೆನು! ಭೂಲೋಕದ ಪವಿರ್ಭಾಗಪೂರ್ವಕವಾದ ಮರ್ಯಾದೆಗಳೆಲ್ಲವೂ ಮೊದಲು ಎನಗೇ ಅರ್ಪಿಸಲ್ಪಡುತಿರ್ದುವು. ಇಂತಹ ವೈಭವವನ್ನು ಅನ್ಯನಿಗೆ ಎಂತು ಒಪ್ಪಿಸಿಬಿಡಲಿ?" ಈರೀತಿಯಾಗಿ ದೇವೇಂದ್ರನಾಡಿದ ಸಖೇದಭಾಷಣವನ್ನು ಕೇಳಿದ ಬೃಹಸ್ಪತಿಯು ಅವನನ್ನು ಕುರಿತು ವಿನಯದಿಂದ ಇಂತೆಂದನು:—"ಶಕ್ರನೆ! ನೀನೀರೀತಿಯಾಗಿ ಅನ್ಯರಲ್ಲಿ ಅಸೂಯೆಯನ್ನು ತಾಳಬಾರದು; ಅರ್ಹತೆಯನ್ನು ಪಡೆದವರಿಗೆ ತಕ್ಕಂತೆ ಗೌರವವಂ ಕೊಡುವುದು ನಿನ್ನಂತಹ ವಿಜಕ್ಷಣರಿಗೆ ಕರ್ತವ್ಯವು; ಅದಲ್ಲದೆ ಇದನ್ನು ಕೇಳು—

[೩. ತಾ|| ಅಗಲುವಿಕೆಯನ್ನುಂಟುಮಾಡದೇ ಇರುವ ಕೂಡುವಿಕೆಯೂ, ವಿಪತ್ಪರಂಪರೆಗೆ ಒಳಗಾಗದ ಸಂಪದವೂ ಈ ಜಗತ್ತಿನಲ್ಲಿ ಆವುದಿರುವುದು? ಈಪ್ರಕಾರ ಜಗತ್ತಿನ ಲಕ್ಷಣವು ಅತಿ ಚಂಚಲವಾಗಿರುವಲ್ಲಿ ನಿನ್ನೀ ದುಃಖವು ಶುದ್ಧ ಅವಿವೇಕವೇ ಆಗಿರುವುದಲ್ಲವೆ?]

ಆದಕಾರಣ ಈ ದುಃಖವನ್ನೂ ಅಸೂಯೆಯನ್ನೂ ತ್ಯಜಿಸಿ, ಪರರ ಶ್ರೇಯಸ್ಸಿನ ವಿಷಯದಲ್ಲಿ ಸಂತೋಷಿಸುವ ಗುಣವನ್ನು ಅವಲಂಬಿಸು."

ಇತ್ತಲಾ ಯಮನು ಬೃಹಸ್ಪತಿಯ ಮಾತನ್ನು ಕೇಳಿ, ತನ್ನಾಸನದಿಂದೆದ್ದು ಕೋಪದಿಂದ ಇಂತೆಂದನು:—"ಸಹಸ್ರಾಕ್ಷನೇ! ನೀನೀ ಗುರುಗಳ ಮಾತನ್ನು ನಿಜವೆಂದು ನಂಬಿ ಭಯಪಡಬೇಡ; ಒಂದುವೇಳೆ ಅದು ನಿಜವಾಗಿರುವ ಪಕ್ಷಕ್ಕೆ ಎನ್ನ ಕರಣಿಕರಾದ ಚಿತ್ರಗುಪ್ತರನ್ನು ಕಳುಹಿಸಿ ಭೂಲೋಕದಲ್ಲಿರುವ ಸಮಸ್ತ ರಾಜರಿಂದಲೂ ಆಚರಿಸಲ್ಪಡುವ ಪಾಪಪುಣ್ಯಗಳನ್ನು ಧರ್ಮಪುಸ್ತಕದಲ್ಲಿ ಬರೆದುಕೊಂಡುಬರುವಂತೆ ಆಜ್ಞಾ

ಕಸ್ಸಮ್ಪ್ರಯೋಗೋಸ್ತಿ ವಿಯೋಗಶೂನ್ಯಃ ಕಾಸ್ಸಮ್ಪದಸ್ಸನ್ತಿ ವಿಪದ್ವಿಹೀನಾಃ।
ಜಗತ್ಸ್ವಭಾವೇವೃತ್ತಾವತಿಚಂಚಲಾಯಾಮಪ್ರತ್ಯವೇಕ್ಷಂ ಖಲು ತೇ ಽತ್ರ ದುಃಖಮ್ ॥೩॥

ಪಿಸುವೆನು; ಈ ಗುರುಗಳು ಹೇಳಿದಂತಹ ಭೂಪಾಲನು ಮರ್ತ್ಯನಾಗಿರು ವುದರಿಂದ ಪಾಪಕಾರ್ಯವನ್ನು ಮಾಡಲೇ ಬೇಕಾಗುವುದು! ಅಗ್ಗೆ ಅವ ನನ್ನು ಇಲ್ಲಿಗೆ ಎಳೆತಂದು ನಿನ್ನೆದುರಿನಲ್ಲಿಯೇ ಅವನಿಗೆ ವಿಧವಾದ ಹಿಂಸೆ ಗಳನ್ನು ಕೊಡುವೆನು; ಈ ಕಾರ್ಯದಲ್ಲಿ ಎನಗೆ ಮನ್ಮಥನೂ ಸಹಾ ಯಕನಾಗುವನು.''

ಇದಕ್ಕನುಗುಣವಾಗಿ ಮನ್ಮಥನು ಉತ್ಸಾಹದಿಂದ ಎದ್ದುನಿಂತು ಪೌರುಷದಿಂದ ಇಂತೆಂದನು:—"ಶತಕ್ರತುವೇ! ಈ ಯಮನು ಹೇಳಿ ದಂತೆಯೇ ಮದ, ಮೋಹ, ಕ್ರೋಧ, ವಿಸ್ಮೃತಿ, ಅವಿವೇಕ ಮುಂತಾದ ಎನ್ನ ಪರಿವಾರವನ್ನು ಭೂಲೋಕಕ್ಕೆ ಕಳುಹಿ, ಪ್ರತಿಯೊಬ್ಬ ದೇಶಾಧಿಪ ನನ್ನೂ ಅವನವನ ಪ್ರಜೆಗಳನ್ನೂ ವ್ಯಾಪಿಸಿ ಪಾಪಕಾರ್ಯಗಳನ್ನು ಮಾಡುವಂತೆಸಗುವೆನು.''

ಇವನಂತೆಯೇ ಯಕ್ಷೇಶ್ವರನು ತನ್ನಾಸನದಿಂದೆದ್ದುನಿಂತು ಅಟ್ಟ ಹಾಸದಿಂದ ಇಂತೆಂದನು: "ಪಾಕಶಾಸನನೇ! ಇವರ ಸಹಾಯಾರ್ಥವಾಗಿ ಎನ್ನ ಪರಿವಾರದವರಾದ ರಾಜಯಕ್ಷ್ಮ, ಸಾಂಕ್ರಾಮಿಕ ಮುಂತಾದ ರೋಗಸಮೂಹವನ್ನು ಈಗಲೇ ಕಳುಹುವೆನು.''

ಬಳಿಕ ದೇವೇಂದ್ರನು ಇವರುಗಳಾಡಿದ ಅನುಕಂಪಾಕ್ಷರಗಳನ್ನು ಕೇಳಿ ಸಂತುಷ್ಟನಾಗಿ ಇಂತೆಂದನು:—"ಎನ್ನ ವಿಷಯದಲ್ಲಿ ನೀವು ತೋರಿದ ಕರುಣೆಗಾಗಿ ನಾನು ಸಂತುಷ್ಟನಾದೆನು; ನಿಮ್ಮಗಳ ಕಾರ್ಯ ಗಳಿಗೆ ಅನುಕೂಲವಾಗಿ ಪುಷ್ಕಲಾವರ್ತಾದಿ ಮೇಘಸಮೂಹವನ್ನು ಭೂಮಿಯಮೇಲೆ ಮಳೆಗರೆಯದಂತೆಸಗಿ, ಭೂಲೋಕದಲ್ಲೆಲ್ಲ ಅನಾವೃಷ್ಟಿ ಕ್ಷಾಮ, ದಾರಿದ್ರ್ಯ ಮುಂತಾದುವನ್ನು ಉಂಟುಮಾಡುವೆನು. ನೀವು ಗಳೀಗಲೇ, ನಿಂನಿಮ್ಮ ಕಾರ್ಯಗಳನ್ನು ಆಚರಿಸಲು ತೆರಳಿರಿ.''

ಈ ದುರಾಲೋಚನೆಯನ್ನು ಬೃಹಸ್ಪತಿಯು ತಿಳಿದು ಸಹಿಸಲಾರದೆ ವಿಷಾದದಿಂದ ಇಂತೆಂದನು:— "ಆಖಂಡಲನೇ! ಇದು ಧರ್ಮವಲ್ಲ; ನೀವುಗಳೆಲ್ಲರೂ ಸೇರಿ ೮ ರಾಜನಿಗೆ ಹಾನಿಯಂ ಮಾಡಬೇಕೆಂದು ಪ್ರಯ

ತ್ನಿಸಿದ್ದರೂ ಅವನು ತನ್ನ ಧರ್ಮಕ್ಕೆ ಅನುಸಾರವಾಗಿ ನಡೆದುಕೊಂಡುದೇ ಆದರೆ, ಅಗ್ಗೆ ೀವುಗಳೆಲ್ಲರೂ ಪರಾಜಿತರಾಗುವುದುಮಾತ್ರವಲ್ಲದೆ ಕೊನೆಗೆ ಅವನ ದಾಸರಾಗಬೇಕಾಗುವುದು. ''

ಇದನ್ನು ಕೇಳಿದ ಯಮನು ಕೋಪಾವಿಷ್ಟನಾಗಿ ಇಂತೆಂದನು:— '' ಪೂಜ್ಯರೇ! ಇಲ್ಲದ ಊಹೆಗಳನ್ನು ಕಲ್ಪಿಸಿ ಎಮ್ಮ ಉತ್ಸಾಹಗಳಿಗೆ ಭಂಗವನ್ನುಂಟುಮಾಡಬೇಡಿರಿ. '' ಎಂದು ಹೇಳಿದಬಳಿಕ ಇಂದ್ರನ ಕಡೆಗೆ ತಿರುಗಿ '' ಬಡಾಜನೇ ನಡೆ ! ಹೋಗಿ ಮುಂದಣ ಕಾರ್ಯಗಳನ್ನು ತ್ವರೆಗೊಳಿಸೋಣ. ''

ಈ ರೀತಿ ಪ್ರೋತ್ಸಾಹಿತನಾದ ಇಂದ್ರನು ಪರಮಾನಂದಭರಿತನಾಗಿ:—'' ಹಾಗೇ ಆಗಲಿ ನಡೆಯಿರಿ '' ಎಂದು ಹೇಳಿ ಎಲ್ಲರೊಡನೆ ಹೊರಟುಹೋದನು.

ಎರಡನೆಯ ಸಂಧಿ.

GOOD VERSUS BAD.

ಗುಣದೋಷಾವತರಣವು

ಇತ್ತಲಾ ಯಮನಿಂದ ಆಜ್ಞಾಪ್ತರಾಗಿ ಬಂದಿರ್ದ ಚಿತ್ರಗುಪ್ತರು ಭೂಲೋಕವನ್ನು ಪ್ರವೇಶಿಸಿ, ಅನೇಕ ದೇಶಗಳೊಳಗೆ ರಾಜಪ್ರಜೆಗಳು ಆಚರಿಸಿದ ಪಾಪಪುಣ್ಯಕಾರ್ಯಗಳನ್ನು ತಮ್ಮ ಧರ್ಮಪುಸ್ತಕದಲ್ಲಿ ಬರೆದುಕೊಂಡು ಹಾಗೆಯೇ ಮುಂದಣ ದೇಶಕ್ಕೆ ಹೋಗುವ ಉದ್ದೇಶದಿಂದ ಬರುತ್ತಾ ದಾರಿಯಲ್ಲಿ ಗುಪ್ತನು ಚಿತ್ರನನ್ನು ಕುರಿತು:—''ಚಿತ್ರನೆ! ನಾವುಗಳು ಬರುವುದಕ್ಕೆ ಮುಂಚೆಯೇ ದೇವೇಂದ್ರನೇ ಮೊದಲಾದವರು ತಂತಮ್ಮ ಪ್ರಭಾವಗಳನ್ನು ಈ ಭೂಲೋಕದಲ್ಲೆಲ್ಲಾ ಪ್ರಯೋಗಿಸಿರುವುದರಿಂದ ನಾವಿದುವರೆಗೆ ಸಂಚರಿಸಿಬಂದ ದೇಶಗಳೊಳಗೆ ಎಲ್ಲಿನೋಡಿದರೂ ರೋಗ, ಕ್ಷಾಮ, ದಾರಿದ್ರ್ಯ,ಘೋರಯುದ್ಧ, ಪ್ರಜೋಪದ್ರವ ಮುಂತಾದ ವಿಪತ್ತುಗಳುಂಟಾಗಿರುವುವು ; ಆ ದೇಶಗಳ ರಾಜರುಗಳೂ ಅವರ

ವರ ಪ್ರಜೆಗೆಳೂ ಸ್ವಧರ್ಮಸ್ವವೃತ್ತಿಗಳಿಂದ ಭ್ರಷ್ಟರಾಗಿರುವುದುಮಾತ್ರ ವಲ್ಲದೆ, ಎಲ್ಲೆಲ್ಲಿಯೂ ಹಾಹಾಕಾರವೇ ಪ್ರಾಪ್ತವಾಗಿಹುದು; ಇದೆಲ್ಲವನ್ನೂ ಧರ್ಮಪುಸ್ತಕದಲ್ಲಿ ಬರೆದುಕೊಂಡೇ ಇರುವೆವು; ಇನ್ನು ಮುಂದಣ ದೇಶಗಳಿಗೆ ಹೋಗೋಣನಡೆ. '' ಎಂದು ಹೇಳಿದುದನ್ನು ಕೇಳಿ ಚಿತ್ರಗುಪ್ತನು:— '' ಹಾಗೇ ಆಗಲಿ, ನಡೆ. '' ಎಂದು ಸ್ವಲ್ಪ ಮುಂದಕ್ಕೆ ಹೋಗಿ ಇದಿರುಗಡೆಯಲ್ಲಿ ಕಾಣ್ಬಂದ ಶಿಬಿದೇಶದ ರಾಜಧಾನಿಯನ್ನು ನೋಡಿ ಸರಮಾಶ್ಚರ್ಯದಿಂದ ಇಂತೆಂದನು:— " ಗುಪ್ತನೇ ಇತ್ತನೋಡು; ಆವುದೋ ಒಂದು ಮಹಾರಾಜಧಾನಿಯು ಕಾಣ್ಬರುವುದು. ನಕ್ಷತ್ರಗಳಿಂದ ಅಲಂಕೃತವಾದ ಅಂತರಿಕ್ಷದಂತೆ ಎಲ್ಲಿ ನೋಡಿದರೂ ಥಳಥಳಿಸುತ್ತಿರುವ ದೀಪಾಂಶುಜಾಲಗಳಿಂದೊಡಗೂಡಿ ಪರಮದರ್ಶನೀಯವಾಗಿಹುದು; ಮಧ್ಯರಾತ್ರಿಯಾಗಿರ್ದರೂ ಇಲ್ಲಿನ ಜನರು ಸೂರ್ಯಾಭಾವದಿಂದ ಆವ ಖೇದವನ್ನೂ ಹೊಂದದೆ ಸ್ವಕಾರ್ಯಗಳೊಳಾಸಕ್ತರಾಗಿ ಸಂಜರಿಸುತ್ತಿಹರು; ಮಹೋನ್ನತಗಳಾದ ನಾರಿಕೇಳಾಶ್ವತ್ಥಾದಿವೃಕ್ಷತತಿಯಿಂದ ಪರಿವೇಷ್ಟಿತವಾಗಿರ್ದರೂ ಈ ಪುರದ ರಾಜಮಂದಿರದ ಮತ್ತು ಇತರ ಅಧಿಕಾರಿಗಳ ಸೌಧಂಗಳ ಅಗ್ರಭಾಗದಲ್ಲಿ ಇಡಲ್ಪಟ್ಟಿರುವ ಸ್ವರ್ಣಮಯಕಲಶಗಳು ಇತರದೇಶೀಯರಿಗೆ ತಮ್ಮ ರಾಜನ ಮತ್ತೂ ಅವನಧಿಕಾರಿಗಳ ಔನ್ನತ್ಯವನ್ನು ತೋರ್ಪಡಿಸುತ್ತಿರುವುವೋ ಎಂಬಂತೆ ಪ್ರಕಾಶಿಸುವುವು; ಮುಖ್ಯವಾಗಿ ಈ ದೇಶಾಧಿಪನು ಧರ್ಮಪ್ರಿಯನಾಗಿರಬೇಕೆಂದು ತೋರುವುದು; ಇಲ್ಲವಾದರೆ ಈ ವಿಭವೈಶ್ವರ್ಯಗಳೆಲ್ಲಿಂದ ಲಭಿಸುವುವು?''

ಇದನ್ನು ಕೇಳಿದ ಗುಪ್ತನು ತಾನೂ ಆ ಪುರವನ್ನು ನೋಡಿದಬಳಿಕ ಸಂಶಯದಿಂದ ಈರೀತಿ ಹೇಳಿದನು:— " ಚಿತ್ರಗುಪ್ತನೇ! ಹೀಗೆ ಆತುರವಾಗಿ ನಿರ್ಧರಿಸದಿರು; ಏಕೆಂದರೆ—

[೪. ತಾ॥ (ನಿಜವಾಗಿಯೂ) ಸಾಧುವಾದ ವಸ್ತುವು ಒಂದು ವೇಳೆ (ಹೊರಗೆ) ಅಯೋಗ್ಯವಾಗಿಯೂ, ಮತ್ತೊಂದುವಸ್ತುವು (ಒಳಗೆ)

ಶ್ಲೋ॥ ಅಯುಕ್ತವತ್ಸಾಧ್ವಪಿ ಕಿಂಚಿದೀಕ್ಷ್ಯತೇ ಪ್ರಕಾಶತೇಽಸಾಧ್ವಪಿ ಕಿಂಚಿದನ್ಯಥಾ ॥
ನವಸ್ತುತತ್ತ್ವಂ ಸಹಸೈವ ಲಕ್ಷ್ಯತೇ ವಿಮರ್ಶಮಪ್ರಾಪ್ಯ ವಿಶೇಷ ಹೇತುಭಿಃ॥೪॥

ಅಸಾಧುವಾಗಿರ್ದರೂ (ಹೊರಗೆ) ಯೋಗ್ಯವಾಗಿಯೂ ಕಾಣ್ಬರುವು ದುಂಟು; ಹೀಗಿರುವಲ್ಲಿ ಒಂದು ವಸ್ತುವಿನ ತತ್ವವು ಅನೇಕವಿಧದಿಂದ ಪರೀಕ್ಷಿಸಲ್ಪಟ್ಟ ಹೊರತು, ಕ್ಷಿಪ್ರಪ್ರಯತ್ನದಿಂದೆಂದಿಗೂ ವ್ಯಕ್ತವಾಗ ಲಾರದು.]

ಆದಕಾರಣ ನಾವೀರಾಜಧಾನಿಯ ದೀಪಪ್ರಕಾಶವನ್ನೂ ಸ್ವರ್ಣ ಕಲಶಗಳನ್ನೂ ದೂರದಿಂ ನೋಡಿದಮಾತ್ರದಿಂದ, ಇದು ಸರ್ವವಿಧದ ಲ್ಲಿಯೂ ಸಮಾಚೀನವಾಗಿರುವುದೆಂದೂ, ಇದರ ರಾಜನನ್ನು ಧರ್ಮಾತ್ಮ ನೆಂದೂ, ಸತ್ಪ್ರಜಾಪಾಲಕನೆಂದೂ ನಿರ್ಧರಿಸಲವಕಾಶವಿಲ್ಲವು; ನಾವು ಈ ರಾಜಧಾನಿಯಂತೆಯೇ ಮಹೋನ್ನತವಾಗಿರ್ದ ಅನೇಕ ಪುರವರಗಳನ್ನು ಹಿಂದೆ ನೋಡಿದೆವಷ್ಟೆ; ಅಲ್ಲಿ ಪ್ರಜೋಪದ್ರವಗಳು ಸಂಭವಿಸಿರ್ದರೂ ಅಲ್ಲಿನ ರಾಜರು ಸ್ವಭೋಗನಿರತರಾಗಿ ಧರ್ಮವನ್ನು ತೃಣೀಕರಿಸಿರುವು ದಿಲ್ಲವೆ? ನಾವೀಗ ಅದೃಶ್ಯರೂಪವನ್ನು ಅಳವಡಿಸಿಕೊಂಡು ಹೋಗಿ ಈ ರಾಜನ ಮತ್ತಿವನೀರಾಷ್ಟ್ರದ ಪ್ರತಿಯೊಂದುವಿಷಯವನ್ನೂ ಪರೀಕ್ಷಿಸೋಣ ನಡೆ.'' ಎಂದು ಹೇಳಿ ಈರ್ವರೂ ರಾಜಧಾನಿಯನ್ನು ಪ್ರವೇಶಿಸಿದರು.

ಮೂರನೆಯ ಸಂಧಿ.

THE KING AND HIS HAPPY COUNCIL.

ರಾಜರಾಜಕಸಂಪತ್ತಿಗಳು.

ಇತ್ತಲಾ ಸಮಯಕ್ಕೆ ಸರಿಯಾಗಿ ಈರಾಷ್ಟ್ರಾಧಿಪತಿಯಾದ ದೇವ ಸೇನಮಹಾರಾಜನು ತನ್ನ ಮಂತ್ರಿಯಾದ ಸುಮತಿ, ಪ್ರಧಾನನಾದ ರಾಜ್ಯ ವರ್ಧನ, ಸೇನಾಧಿಪನಾದ ಅಭಿಸಾರಗ ಇವರುಗಳಿಂದಲೂ, ಪ್ರಜಾ ಪ್ರಮುಖರಿಂದಲೂ, ಪರಿವೇಷ್ಟಿತನಾಗಿ ಮಂತ್ರಾಲೋಚನಾಸಭೆಯಲ್ಲಿಕು ಳಿತು, ಆ ಸಭಿಕರನ್ನು ಕುರಿತಿಂತು ಪ್ರಶ್ನೆಮಾಡಿದನು:—" ಎಲೈ ಎನ್ನಾ

ಪ್ತರಿರ! ಎನ್ನೀ ರಾಜ್ಯರಕ್ಷಣಕ್ರಮವು ನಿಮಗೆ ಸಂಮತವಾಗಿಯೂ ಪ್ರಜೆಗಳಿಂದ ಗೌರವಿಸಲ್ಪಡುವುದಕ್ಕೆ ಅರ್ಹವಾಗಿಯೂ ಇರುವುದೇ? ''

ಇದನ್ನು ಕೇಳಿದ ಸುಮತಿಯು ತನ್ನಾಸನದಿಂದೆದ್ದು ಕೈಮುಗಿದು ಇಂತೆಂದನು:—

[೫. ತಾ|| ಮಹಾರಾಜನೆ! ನೀನು ನೂಡುವ ಕಾರ್ಯಗಳೆಲ್ಲವೂ ಪ್ರಜಾಹಿತೈಕಪರಾಯಣಗಳಾಗಿರುವುವು; ಹೀಗಿರುವಲ್ಲಿ ಅವುಗಳನ್ನು ನಾವುಗಳು ಅನುಮೋದಿಸದೆ ನಿರಾಕರಿಸುವುದೆಂದರೇನು? ನಿನ್ನ ನಡತೆಗಳು ಆ ಬ್ರಹ್ಮದೇವನಿಂದಲೂ ಕೂಡ ಅನುಮತಿಸಲ್ಪಡತಕ್ಕವಾಗಿಯೇ ಇರುವುವು. ಅದಲ್ಲದೆ ನೀನು ಸತ್ಪುರುಷರಿಗೂ ಕೂಡ ಮೇಲ್ಪಂಗ್ತಿಯಾಗಿರುವುದರಿಂದ ಎಮಗೂ ಪ್ರಮಾಣನೇ ಅಹುದು.]

ಇವನಂತೆಯೇ ರಾಜ್ಯವರ್ಧನನು ಕೈಮುಗಿದಿಂತೆಂದನು:—

[೬. ತಾ|| ದೇವ! ನೀನುರಾಜ್ಯಪರಿಪಾಲನೆಯೆಂಬ ಈ ಅಗಾಧ ಚಿಂತಾಭಾರವನ್ನು ನಿನ್ನ ಪ್ರಜೆಗಳ ಹಿತಾರ್ಥವಾಗಿ ವಹಿಸಿರುವೆಯೇ ಹೊರತು ನಿನ್ನ ಸುಖವನ್ನು ಹೊಂದುವುದಕ್ಕೆಂದಿಗೂ ಅಲ್ಲವು; ಮತ್ತು ನೀನುಮಾಡುವ ಸಮಸ್ತರಾಜಕೀಯಾಲೋಚನೆಗಳೂ ಪ್ರಜೆಗಳಿಗೆ ಹಿತವನ್ನುಂಟುಮಾಡುವ ಕಾರ್ಯಗಳಲ್ಲಿಯೇ ಗಮನವುಳ್ಳವುಗಳಾಗಿರುವುದರಿಂದ ರಾಜರೂಪವನ್ನು ಧರಿಸಿರುವ ಧರ್ಮವೇ ನೀನಾಗಿರುವೆ]

ಬಳಿಕ ಅಭಿಪಾರಗನು ಅವರಂತೆಯೇ ಕೈಮುಗಿದುಕೊಂಡಿಂತೆಂದನು:—" ಜೀಯ, ಸಿಂಹದಿಂದ ರಕ್ಷಿಸಲ್ಪಟ್ಟ ಗಿರಿಗುಹೆಯು ಇತರ

ಶ್ಲೋ॥ ಸರ್ವಾಃ ಕ್ರಿಯಾಸ್ತವ ಹಿತಪ್ರವಣಾಃ ಪ್ರಜಾನಾಂ
ತತ್ರಾವಮಾನನವಿಧೇರ್ನರದೇವ ಕೋ ಽರ್ಥಃ ||
ಬ್ರಹ್ಮಾಽಪಿ ತೇ ಚರಿತಮಭ್ಯನುಮಂತುಮರ್ಹಃ
ಸಾಧುಪ್ರಮಾಣ ಪರಮತ್ರ ಭವಾನ್ಪ್ರಮಾಣಮ್ ||೫||

ಶ್ಲೋ॥ ಸುಖೇಷ್ವಸಕ್ತಶ್ಚ ವಿಭಘ್ರಿ ದೇವ ರಾಜ್ಯಕ್ರಮಂ ಲೋಕಹಿತಾರ್ಥಮೇವ ||
ಪ್ರಜಾಹಿತೇಷ್ವಾಹಿತಸರ್ವಭಾವಸ್ತ್ವಮೇವ ಧರ್ಮೋ ಮನುಜೇಶರೂಪಃ ||೬||

ಕ್ಷುದ್ರಮೃಗಗಳಿಗೆ ಎಂತು ಆಸ್ಪದವಿಲ್ಲವೋ ಅದರಂತೆ, ನಿನ್ನ ಪರಾಕ್ರಮದಿಂದ ಪರಿಪಾಲಿಸಲ್ಪಟ್ಟ ಎಮ್ಮೀ ರಾಜ್ಯದಮೇಲೆ ಮತ್ತಾರಸಾಮರ್ಥ್ಯವು ತಾನೆ ನಡೆಯುವುದು? ಅದಲ್ಲದೆ,

[೭. ತಾ॥ ಜೀಯ! ಪ್ರಜೆಗಳು ತಮ್ಮಲ್ಲುಕ್ಕುವ ರಾಜಭಕ್ತಿಯಿಂದ ಪ್ರೇರಿತರಾಗಿ ಕೊಂಡಾಡುವುದು ನಿನಗೆ ಒಪ್ಪುವುದು; ಮತ್ತಾ ಲಕ್ಷ್ಮಿಯು (ವಿಷ್ಣುಸ್ವರೂಪನಾದ) ನಿನ್ನನ್ನು ತನಗೆ ಯೋಗ್ಯನಾದ ಪತಿಯೆಂದು ಭಾವಿಸಿ, (ತನ್ನ ತೌರುಮನೆಯಾದ) ಪಂಕಜವನವನ್ನು ತ್ಯಜಿಸಿ, ನಿನ್ನನ್ನು ಸೇರಲಾಗಿ ಶಾಶ್ವತ್ಯೆಯೆನಿಸಿಕೊಂಡಳು; ಮತ್ತು ದೇವೇಂದ್ರನೇ ರಾಜನಾಗುಳ್ಳ ಆ ಸ್ವರ್ಗವು, ನಿನ್ನ ಧರ್ಮದಿಂದ ಪರಿಪಾಲಿಸಲ್ಪಡುತ್ತಿರುವೀ ಭೂಲೋಕವನ್ನು ನೋಡಿ ನಿನ್ನಲ್ಲಿಗೆ ಬಂದು (ಧರ್ಮವೆನ್ನು ಕಲಿತುಕೊಳ್ಳಬೇಕೆಂಬ) ಆಶೆಯುಳ್ಳದಾಗಿ ನೋಡುವುದು; ಹಾಗೆ ನೋಡದೇಹೋಗಿದ್ದಲ್ಲಿ ನಿಜವಾಗಿಯೂ ಮೋಸಹೋಗುವುದು.]

ಈರೀತಿಯಾಗಿ ತನ್ನ ಅಧಿಕಾರಿಗಳು ಉಚ್ಚರಿಸಿದ ಅನುಮೋದವಚನಗಳನ್ನು ಕೇಳಿದ ದೇವಸೇನಮಹಾರಾಜನು, ಪರಮಸಂತುಷ್ಟನಾಗಿ, ಅವರುಗಳನ್ನು ಕುರಿತು ಈರೀತಿ ಕೃತಜ್ಞಭಾಷೆಗಳನ್ನಾಡಿದನು:—"ಎನ್ನಾಪ್ತರಿರಾ! ನಿಮ್ಮಗಳಲ್ಲಿ ನೆಲೆಗೊಂಡಿರುವ ಎನ್ನ ವಿಷಯಕವಾದ ಪ್ರೀತಿಬಹುಮಾನಗಳು ಎನ್ನನಿಂತು ಮಿತಿಮೀರಿ ಕೊಂಡಾಡುವಂತೆ ನಿಮ್ಮನ್ನು ಪ್ರೇರಿಸಿದುವೆಂದು ಭಾವಿಸುವೆನು. ಸದ್ಭೃತ್ಯರಾದ ನಿಮಗೆ ಈ ನಡತೆಯು ಭೂಷಣವೇ ಆಹುದು. ಆದರೆ ತತ್ವತಃ ಎನ್ನ ಬುದ್ಧಿಗೆ ಇಲ್ಲಿ ಅತಿಶಯವೇನೂ ತೋರಿಬಾರದು. ಏಕೆಂದರೆ ನಾನು ಲೋಕಹಿತೈಷಿಗಳಾದ ಮಹಾ

:ಶ್ಲೋ॥ ಸ್ಥಾನೇ ಭಕ್ತಿವಶೇನ ಗಚ್ಛತಿ ಜನಸ್ತ್ವತ್ಕೀರ್ತಿವಾಚಾಲತಾಂ ।
ಸ್ಥಾನೇ ಶ್ರೀಃ ಪರಿಭೂಯ ಪಂಕಜವನಂ ತ್ವತ್ಸಂಶ್ರಯಶ್ಲಾಘಿನೀ ॥
ವ್ಯಕ್ತಂ ಶಕ್ರಸನಾಥತಾಮಪಿ ಗತಾ ತ್ವದ್ಧರ್ಮಗುಪ್ತಾಮಿಮಾಂ ।
ದ್ಯೌಃ ಪಶ್ಯತ್ಯುದಿತಸ್ಪೃಹಾ ವಸುಮತೀಂ ನೋ ಚೇದಹೋ ವಂಚ್ಯತೇ ॥೭॥

ತ್ಮರಿಂದ ನಿಯಮಿತವಾದ ರಾಜಧರ್ಮಕ್ಕೆ ಅನುಸಾರವಾಗಿ ನಡೆದು, ಅದರಿಂದ ಎನ್ನ ಕರ್ತವ್ಯವನ್ನು ನೆರವೇರಿಸಿರುವೆನೇ ಹೊರತು ಮತ್ತೇನೂ ಇಲ್ಲವು. ಅದಲ್ಲದೆ ಉನ್ನತವಾದೊಂದು ಸೌಧವು, ನಿರಪಾಯವಾಗಿಯೂ ಸ್ಥಿರವಾಗಿಯೂ ನಿಲ್ಲಬೇಕಾದರೆ ಭಿತ್ತಿ ಸ್ತಂಭ ಲೋವೆ ವೇದಿಕೆ ಮುಂತಾದುವುಗಳ ಪರಸ್ಪರಾನುಕೂಲ್ಯವುಳ್ಳ ಸಾಹಾಯ್ಯವೆಂತು ಅವಶ್ಯಕವೋ ಅದರಂತೆ, ಎನ್ನೀರಾಜ್ಯರಕ್ಷಣೆಗೆ ಏಕಾಭಿಮತವುಳ್ಳ ನೀವುಗಳಲ್ಲದೆ ಸಹಾಯಕರು ಮತ್ತಾರಿರುವರು ? ನೀವುಗಳೆಲ್ಲರೂ ಎನ್ನನ್ನು ನಿಮ್ಮ ಮುಖ್ಯನೆಂದು ಭಾವಿಸಿ, ಅನೇಕಮಕ್ಕಳುಳ್ಳ ತಂದೆಯ ಪುತ್ರಪಾಲನಾಕಾರ್ಯಗಳಿಗೆ, ಪ್ರಾಪ್ತವಯಸ್ಕರಾದ ಹಿರಿಯಮಕ್ಕಳೆಂತು ಸಹಾಯಕರಾಗುವರೋ ಅದರಂತೆಯೇ, ಎನ್ನುಳಿದ ಪ್ರಜೆಗಳನ್ನು ರಕ್ಷಿಸುವ ಕಾರ್ಯಗಳಲ್ಲಿ ಎನಗೆ ಸಹಾಯವನ್ನು ಮಾಡುತ್ತಲೇ ಇರುವಿರಿ. ಆ ವಿಷಯವಾಗಿ ನಿಮ್ಮಲ್ಲಿ ಎನ್ನ ಪ್ರೀತಿಮಮತೆಗಳು ವರ್ಧಿಸುತ್ತಿರುವುವು. ಮತ್ತು ನಾನು ನಿಮಗೆ ಕೃತಜ್ಞನಾಗಿಯೂ ಇರುವೆನು ''

ಬಳಿಕ ಅಭಿಪಾರಗನು ಮರಳಿ ತನ್ನಾಸನದಿಂದೆದ್ದು ಕೈಮುಗಿದು ಕೊಂಡು, ರಾಜಭಕ್ತಿಪರವಶನಾಗಿ ಈರೀತಿ ಗೌರವೋಕ್ತಿಗಳನ್ನಾಡಿದನು— ದೇವ! ನೀನು ಹಾಗೆ ಹೇಳಲಾಗದು; ನೀನೆಮ್ಮ ಪ್ರತ್ಯಕ್ಷದೈವವು; ಮತ್ತು ತಂದೆಯಂತೆ ವಂದ್ಯನು. ಇದಲ್ಲದೆ ದೇಹಕ್ಕೆ ಪ್ರಧಾನವಾದ ಶಿರವು ಇಲ್ಲದಮೇಲೆ ಉಳಿದ ಅಂಗಗಳು ಎಷ್ಟುಬಲವಾಗಿದ್ದರೂ ಎಂತು ನಿಷ್ಪ್ರಯೋಜಕವಾಗುವುವೋ ಅದರಂತೆ, ಎಮ್ಮೆಲ್ಲರಿಗೂ ಶಿಖರಪ್ರಾಯನಾದ ನೀನುಮುಖ್ಯನೇ ಹೊರತು ನಾವುಗಳೆಂದಿಗೂ ಅಲ್ಲವು. ಇಂದ್ರಿಯಗಳು ತಂತಮ್ಮ ವ್ಯಾಪಾರಗಳನ್ನು ಜೀವಾತ್ಮನ ಪ್ರೇರಣಬಲದಿಂದ ಎಂತು ನಡೆಸುವುವೋ ಅದರಂತೆ ನಾವುಗಳೆಲ್ಲರೂ ನಿನ್ನ ಅನುಜೀವಿಗಳು.''

ಬಳಿಕ ದೇವಸೇನಮಹಾರಾಜನು ಇಂತೆಂದನು:—"ಎಲೈ ಅಭಿಪಾರಗನೇ! ನಿಮ್ಮ ಭಕ್ತಿಗೂ ಸ್ವಾಮಿಕಾರ್ಯಾಸಕ್ತಿಗೂ ಮೆಚ್ಚಿದೆನು." ಎಂದು ಹೇಳಿದಬಳಿಕ ಪ್ರಜಾಪ್ರಮುಖರನ್ನು ಕುರಿತು ಈರೀತಿ ಪ್ರೀತಿವೂ

ರ್ವಕವಾಗಿ ಪ್ರಶ್ನೆ ಮಾಡಿದನು:—" ಎಲೈ ಪ್ರಜಾಪ್ರಮುಖರೇ! ನಿಂನಿಮ್ಮ ಪ್ರಾಂತವಾಸಿಗಳಾದ ಎನ್ನ ಪ್ರಜೆಗಳು ಸುಕ್ಷೇಮಿಗಳೇ? ರೋಗ, ಹಿಂಸೆ ದಾರಿದ್ರ್ಯ ಮುಂತಾದ ಪ್ರಜೋಪದ್ರವಗಳೇನಾದರೂ ಉಂಟೋ ?"

ಈರೀತಿಯಿಂ ಬೆಸಗೊಳಲ್ಪಟ್ಟ ಪ್ರಜಾಪ್ರಮುಖರು ಭಯಭರಿತ ಭಕ್ತಿಗೌರವಗಳಿಂದೆದ್ದು ನಿಂತು ಕೈಮುಗಿದುಕೊಂಡಿಂತೆಂದರು :— "ದೇವ ಧರ್ಮದಮೇರೆಯನ್ನು ಅತಿಕ್ರಮಿಸದೆ ನಡೆವ ನಿನ್ನೀರಾಜ್ಯದಲ್ಲಿ ಋತುಧರ್ಮಗಳು ಸಕಾಲದಲ್ಲಿ ಪ್ರಾಪ್ತವಾಗಿ ಧಾನ್ಯಾದಿಗಳು ಅನ ರ್ಘ್ಯವಾಗಿ ಬೆಳೆಯುವುದರಿಂದಲೂ, ಮತ್ತು ನಿನ್ನ ಪ್ರಜೆಗಳಾದ ನಮ್ಮನ್ನು ನೀನು ಸ್ವಪುತ್ರರಂತೆ ಭಾವಿಸಿ ಪ್ರೀತಿಮಮತೆಗಿಳಿಂದ ಕಾಪಾಡುತ್ತಿರುವು ದರಿಂದಲೂ, ರೋಗ ದಾರಿದ್ರ್ಯ ಹಿಂಸೆ ಮುಂತಾದುವುಗಳು ಇಲ್ಲಿಗೆ ಪ್ರವೇ ಶಿಸಲು ಅವಕಾಶವೆಲ್ಲಿಹುದು ? ನಂನಮ್ಮ ಭಾಗದ ನಿನ್ನ ಪ್ರಜೆಗಳೆಲ್ಲರೂ ಸುಖಿಗಳಾಗಿಯೂ ಅನ್ನಪಾನಾದಿಗಳಿಂದ ತೃಪ್ತರಾಗಿಯೂ ಆರೋಗ ದೃಢಕಾಯರಾಗಿಯೂ ಸ್ವವೃತ್ತಿ ಸ್ವಕಾರ್ಯಗಳಲ್ಲಿ ದಕ್ಷರಾಗಿಯೂ ಇರುವರು. "

ದೇವಸೇನ:—" ಸಂತೋಷ! ಆದರೆ, ರಾಜ್ಯರಕ್ಷಣಕ್ರಮದ ವಿಷಯದಲ್ಲಿ ತಿಳಿಸತಕ್ಕ ನಿಮ್ಮ ಅಭಿಪ್ರಾಯಗಳೇನಾದರೂ ಉಂಟೋ"

ಪ್ರಜಾಪ್ರಮುಖರು—"ದೇವ, ರಾಜ್ಯವೆಂಬ ಕುಟುಂಬಕ್ಕೆ ಹಿತವನ್ನೂ ಸುಖಸಮೃದ್ಧಿಗಳನ್ನೂ ಉಂಟುಮಾಡುವ ಆಲೋಚನೆಗಳು, ಮಕ್ಕಳುಗಳಿಗಿಂತಲೂ ಭಾರವಾಹಕನಾದ ತಂದೆಗೆಂತು ಸಂಪೂರ್ಣವಾಗಿ ತಿಳಿದುಬರುವುವೋ ಅದರಂತೆ, ರಾಜ್ಯರಕ್ಷಣೋಪಾಯಗಳು ಪಿತೃಸ್ವರೂ ಪನಾದ ನಿನಗೆ ತಿಳಿದುಬರುವುವೇ ಹೊರತು, ಅನನುಭವಿಗಳಾಗಿಯೂ ಈಶ್ವರಬುದ್ಧಿಯಿಲ್ಲದವರಾಗಿಯೂ ಇರುವ ನಮಗೆಂತುತಾನೆ ತಿಳಿಯು ವುವು ? ಬಹುಭಾಷಣದಿಂದೇನು ಪ್ರಯೋಜನ—

[ಲ. ತಾ:—ದೇವ, ನಿನಗಾವುದು ಪ್ರಿಯವಾದುದೋ ಅದು ಎಮಗೂ ಪ್ರಿಯವಾದುದೇ ಆಹುದು; ಏಕೆಂದರೆ, ಎಮಗಾವುದು ಪ್ರಿಯವಾದುದೋ ಅದಲ್ಲದೆ ಮತ್ತಾವುದೂ ನಿನಗೆ ಪ್ರಿಯವಾಗಿರುವುದು.]

ರಾಜಭಕ್ತಿವಿಶಿಷ್ಟವಾದ ಈ ಪ್ರಜಾಪ್ರಮುಖರ ತೃಪ್ತಿವಚನಗಳನ್ನು ಕೇಳಿದ ಮಹಾರಾಜನು, ಸಂತುಷ್ಟನಾಗಿ ಇಂತೆಂದನು:– "ನಿಮ್ಮ ಸ್ವಾಮಿಭಕ್ತಿಗೂ ನಿಶ್ಚಲವಾದ ನಂಬುಗೆಗೂ ಸಂತುಷ್ಟನಾದೆನು. ಆದರೂ ಮಕ್ಕಳ ಇಚ್ಛೆಗಳನ್ನು ತಿಳಿಯುವುದು ಎಂತು ತಂದೆಯ ಕರ್ತವ್ಯವೊ ಆದರಂತೆಯೇ, ಪ್ರಜಾಭಿಮತವನ್ನು ತಿಳಿದು, ಆದರಂತೆ ಅವರುಗಳಿಗೆ ಅನುಕೂಲಗಳನ್ನು ಒದಗಿಸಿ ಕೊಟ್ಟು, ಸಂತೋಷಗೊಳಿಸುವುದಕ್ಕಿಂತಲೂ ಬೇರೆಯಾದ ಕಾರ್ಯವು ರಾಜನಾದ ಎನಗೆ ಆವುದೂ ಇಲ್ಲವು." ಎಂದ ಬಳಿಕ, ಸಂಧ್ಯಾಕಾಲದ ಮಂಗಳವಾದ್ಯಗಳು ಮೊಳಗಲುಪಕ್ರಮಿಸಿದುದನ್ನು ಕೇಳಿ, ಸಭಿಕರನ್ನು ಕುರಿತಿಂತೆಂದನು:—" ಒಳ್ಳೆಯದು, ದೇವವಂದನಾದಿ ಸಂಧ್ಯಾಕರ್ಮಗಳನ್ನು ಆಚರಿಸಲು ಕಾಲವು ಸಮೀಪಿಸಿರುವುದರಿಂದ ನೀವುಗಳೆಲ್ಲರೂ ನಿಂನಿಮ್ಮ ಗೃಹಗಳಿಗೆ ತೆರಳಬಹುದು." ಎಂದುಹೇಳಲು, ಸರ್ವರೂ ಹೊರಟುಹೋದ ತರುವಾಯ ಈ ರೀತಿ ಆತ್ಮಗತವಾಗಿ ಮಾತನಾಡಿಕೊಂಡನು:—" ಆಃ ! ಎನ್ನ ರಾಜ್ಯರಕ್ಷಣೆಯ ಕ್ರಮವು ಎನ್ನ ಅಧಿಕಾರಿಗಳಿಗೂ ಪ್ರಜಾಪ್ರಮುಖರಿಗೂ ಸಮ್ಮತವಾಗಿರುವಂತೆ ತೋರುವುದು. ಆದಲ್ಲದೆ ಇವರೆಲ್ಲರೂ ರಾಜಭಕ್ತಿನಿರತರಾಗಿಯೂ ಸುಖಿಗಳಾಗಿಯೂ ಇರುವುದರಿಂದ ಈ ರಾಜ್ಯಭಾರಚಿಂತೆಯು ಎನಗೆ ಸುಖರೂಪವಾಗಿಯೇ ಪರಿಣಮಿಸಿರುವುದು. ಇದುವರೆಗೆ ನಾನು ಪಟ್ಟ ಶ್ರಮವೆಲ್ಲವೂ ಸಾರ್ಥಕವಾಯಿತು. ಇನ್ನು ನಾನೂ ಧ್ಯಾನಾದಿ ದೇವಕರ್ಮಗಳನ್ನು ಆಚರಿಸಲು ಹೋಗುವೆನು." ಎಂದು ತನ್ನ ಅಂತಃಪುರಕ್ಕೆ ಹೊರಟುಹೊದನು.

ಶ್ಲೋ॥ ಪ್ರಿಯಂ ಯದೇವ ದೇವಸ್ಯ ತದಸ್ಮಾಕಮಪಿ ಪ್ರಿಯಮ್ ।
ಅಸ್ಮತ್ಪ್ರಿಯಹಿತಾದನ್ಯದ್ದೃಶ್ಯತೇ ನ ಹಿ ತೇ ಪ್ರಿಯಮ್ ॥೮॥

ನಾಲ್ಕನೆಯ ಸಂಧಿ.

GOOD AND BAD.

ಗುಣದೋಷಸಂವಾದ.

ಇದೆಲ್ಲವನ್ನೂ ಅದೃಶ್ಯರೂಪಿನಿಂದ ನಿಂತು ಕೇಳುತಿರ್ದ ದೇವದೂತನಾದ ಚಿತ್ರನು ಗುಪ್ತನನ್ನು ಕುರಿತು ಪರಮ ವಿಸ್ಮಯದಿಂದ ಇಂತೆಂದನು:— "ಗುಪ್ತನೇ! ಈ ಅತಿಶಯವನ್ನು ನೋಡಿದೆಯಾ! ಹಿಂದೆ ನಾವು ನೋಡಿದ ರಾಜ್ಯಗಳೊಳೊಂದರಲ್ಲಾದರೂ ಈ ರೀತಿಯಾದ ರಾಜಪ್ರಜೆಗಳ ಏಕಕಂಠ್ಯವು ತಿಳಿದುಬರಲೇ ಇಲ್ಲವು! ಇಲ್ಲಿ ರಾಜನಿಗೂ ಮತ್ತಿವನ ಪ್ರಜೆಗಳಿಗೂ ನಡುವೆ ಭೇದವೆಂಬುದೇ ಇಲ್ಲವಲ್ಲಾ! ಇದೆಂತಹ ಸದ್ರಾಜ್ಯವು!"

ಇದನ್ನು ಕೇಳಿದ ಗುಪ್ತನು ನಗುತ್ತ ಇಂತೆಂದನು:—"ಚಿತ್ರನೇ! ಹಾಗೆ ಹೇಳದಿರು; ಈ ರಾಜನೊಡನೆ ಸಂಭಾಷಣೆಯನ್ನೆಸಗಿ ರಾಜನನ್ನೂ ಅವನ ಕೃತ್ಯಗಳನ್ನೂ ಸ್ತುತಿಸಿದವರಲ್ಲಿ ಕೆಲವರು ಈ ರಾಜನ ಬಂಧುಗಳೂ, ಮತ್ತೆಕೆಲವರು ಇವನ ಸಮೀಪವರ್ತಿಗಳಾಗಿ ರಾಜನಿಂದ ನಿತ್ಯಪ್ರಯೋಜನವನ್ನು ಪಡೆವ ಮಂತ್ರಿ,ಪ್ರಧಾನ, ಸೇನಾಧಿಪ, ಮುಂತಾದ ಅಧಿಕಾರಿಗಳೂ ಆಗಿರುವುದರಿಂದ, ಇವರುಗಳ ಸಮ್ಮೋದಕಥನದ ಆಧಾರದಮೇಲೆಯೇ ಈ ರಾಜನ ಧರ್ಮಪ್ರಿಯತ್ವವನ್ನೂ ಸದ್ರಾಜ್ಯಭಾರಕ್ರಮವನ್ನೂ ನಿರ್ಣಯಿಸಲಾಗದು; ಇದಲ್ಲದೆ ಪ್ರಜಾಪ್ರಮುಖರೆಂಬುವರು ರಾಜನೂ ಮತ್ತವನ ಅಧಿಕಾರಿಗಳೂ ಹೇಳಿದುದಕ್ಕೆಲ್ಲ "ಹಸಾದ" ಎಂದು ಹೇಳಿ ಅವರುಗಳ ಪ್ರೇಮಬಹುಮಾನಗಳನ್ನಾರ್ಜಿಸುವುದು ಸ್ವಭಾವವು. ಹೀಗಿರುವುದರಿಂದ, ಈ ರಾಜನಿಗೂ ಮತ್ತವನ ಅಧಿಕಾರಿಗಳಿಗೂ ದೂರಸ್ಥರಾಗಿಯೂ ಕಾಲಭೇಷಜವನ್ನರಿಯದವರಾಗಿಯೂ ಕೃತಕದಂಭಾದಿಗಳಿಗೆ ದೂರರಾಗಿಯೂ ಅಲ್ಪತೃಪ್ತರಾಗಿಯೂ ಇರುವ ರಿಕ್ತಾನಾಥರಾದ ಪಳ್ಳಿಕಾರರ ಮುಖದಿಂದ ವಿಚಾರಿಸಿ, ಅವರಲ್ಲಿಯೂ

ಇಲ್ಲಿನಂತೆಯೇ ಏಕಕಂಠ್ಯವೂ ತೃಪ್ತಿಯೂ ಕಂಡುಬಂದರೆ ಆಗ್ಗೆ ಈ ರಾಜನನ್ನು ಧರ್ಮಜ್ಞನೆಂದು ನಿರ್ಧರಿಸಬಹುದು. ಆದಕಾರಣ ಅಂತಹ ಪ್ರದೇಶಕ್ಕೆ ಹೋಗಿ ವಿಚಾರಿಸಿ ತಿಳಿಯೋಣ ನಡೆ.'' ಎಂದು ಹೇಳಿ ಪಳ್ಳಿಕಾರನನ್ನು ಹುಡುಕುತ್ತ ಮುಂದಕ್ಕೆ ಹೋದರು.

ಐದನೆಯ ಸಂಧಿ

THE LOYAL SUBJECT

ಸತ್ಪ್ರಜಾಸಂಪತ್ತಿ.

ಇತ್ತಲಾ ಸಮಯಕ್ಕೆ ಸರಿಯಾಗಿ ಓರ್ವ ಪಶುಪಾಲಕನಾದ ಕುರುಬನು, ದುರ್ಗಮವಾದ ಒಂದು ಕಾಂತಾರಮಧ್ಯದಲ್ಲಿ ನಿರ್ಭಯನಾಗಿಯೂ, ಕೈಗೊಡಲಿಕೋಲ್ಗಳನ್ನು ಕರದೊಳ್ ಪಿಡಿದವನಾಗಿಯೂ, ಕಂಬಳಧಾರಿಯಾಗಿಯೂ, ವನಪುಷ್ಪಗಳನ್ನು ಶಿರದೊಳ್ ಮುಡಿದವನಾಗಿಯೂ ಸಂಚರಿಸುತ್ತ, ಅಲ್ಲಿರ್ದೊಂದು ಉನ್ನತವಾದ ವೃಕ್ಷದ ಛಾಯಾಪ್ರದೇಶದ ಶಾದ್ವಲದಿಂದ ಆವೃತವಾದ ಶಿಲಾತಲದಲ್ಲಿ ಸುಖಾಸೀನನಾಗಿ, ಒಂದುಕ್ಷಣ ಸೆಣಬಿನಿಂದ ಹಗ್ಗವನ್ನು ಹೊಸೆಯುತ್ತಲೂ, ಇನ್ನೊಂದು ಕ್ಷಣ ಮನೋಹರವಾಗಿ ವೇಣುಗಾನಮಾಡುತ್ತಲೂ, ಮತ್ತೊಂದು ಕ್ಷಣ ಅತ್ತಿತ್ತ ಚದರಿಹೋಗಿರ್ದ ತನ್ನ ದನಕುರಿಗಳನ್ನು ಗುಂಪುಗೂಡಿಸುತ್ತಲೂ ಅತಿಸಂಭ್ರಮದೊಡನೆ ವಿಹರಿಸುತ್ತಿರ್ದನು.

ಇವನನ್ನು ನೋಡಿದ ಚಿತ್ರನು ಗುಪ್ತನನ್ನು ಕುರಿತು ಸಂತೋಷದಿಂದ ಮೆಲ್ಲನೆ ಇಂತೆಂದನು:—''ಇತ್ತ ನೋಡು; ಈ ಪಶುಪಾಲಕನ ಮುಖದಿಂದ ಈ ರಾಜನ ಸಂಗತಿಗಳೆಲ್ಲವನ್ನೂ ಸವಿಸ್ತಾರವಾಗಿ ಕೇಳಿ ತಿಳಿಯುವುದು ಯುಕ್ತವಾಗಿ ಎನಗೆ ತೋರುವುದು. ಆದಕಾರಣ ಸ್ವಲ್ಪ ಹಿಂದಕ್ಕೆ ನಡೆ; ಬಾಹ್ಯದಲ್ಲಿ ಬ್ರಾಹ್ಮಣವೇಷವನ್ನು ಆಳವಡಿಸಿಕೊಂಡು

ಒಳಗೆ ರಾಕ್ಷಸರೂಪರಾಗಿ ದೇವಭಾಷೆಗಳನ್ನಾಡುತ್ತ ಇವನನ್ನು ಮೊದಲು ಬೆದರಿಸಿನೋಡೋಣ.'' ಎಂದು ಹಿಂದಕ್ಕೆ ಹೋಗಿ ಬ್ರಾಹ್ಮಣ ವೇಷಧಾರಿಗಳಾಗಿ ಅವನ ಸಮೀಪಕ್ಕೆ ಬಂದು ಅವನನ್ನು ಕುರಿತು ಧೃಷ್ಟತೆಯಿಂದ ಚಿತ್ರನಿಂತೆಂದನು:—

ಗದ್ಯಮ್॥ ಭೋ ಗೋಸಂರಕ್ಷಾಧಿಕೃತ ! ಏವಂ ವಿವಿಕ್ತೇ ನಿರ್ಜನಸಂಪಾತೇ ಕಸ್ಮಿನ್ನರಣ್ಯೇ ವಿಚರನ್ನೇವಮೇಕಾಕೀ ಕಥಂ ನ ಬಿಭೇಷಿ ? ॥

[ತಾ॥ ಎಲೈ ದನಾಕಾಯುವವನೇ! ಜನಸಂಚಾರವಿರಹಿತವಾದ ಗಿಡಪೊದರುಗಳುಳ್ಳ ಈ ಘೋರಾರಣ್ಯದ ಮಧ್ಯದಲ್ಲಿ ಓರ್ವನೇ ಸಂಚರಿಸುತಿರ್ದರೂ ನೀನೇಕೆ ಹೆದರದಿರುವೆ?]

ಇದನ್ನು ಕೇಳಿದ ಕುರುಬನು ಧೈರ್ಯದಿಂದ ಈರೀತಿ ಉತ್ತರವಿತ್ತನು:—

ಗದ್ಯಮ್॥ ಕುತೋವಾ ಭೇತವ್ಯಮ್ ॥

[ತಾ॥ ಏಕೆ ಹೆದರಬೇಕು?]

ಒಳಿಕ ಚಿತ್ರನು ಗರ್ಜನೆಯಿಂದ–

ಗದ್ಯಮ್॥ ಕಿಂ ತ್ವಯಾ ನ ಶ್ರುತಪೂರ್ವಾ ಯಕ್ಷರಾಕ್ಷಸಾನಾಂ ಪಿಶಾಚಾನಾಂ ವಾ ನಿಸರ್ಗರೌದ್ರಾಕೃತಿಃ? ॥ ಅಪಿ ಚ,

ಶ್ಲೋ॥ ಸಹಾಯಮಧ್ಯೇಽಪಿ ಹಿ ವರ್ತಮಾನೋ ।
ವಿದ್ಯಾತಪಸ್ಸ್ವಸ್ತ್ಯಯನೈರುಪೇತಃ ॥
ಯೇಭ್ಯಃ ಕಥಂಚಿತ್ಪರಿಮೋಕ್ಷಮೇತಿ ।
ಶೌರ್ಯಾದವಜ್ಞಾತಭಯೋಽಪಿ ಲೋಕಃ ॥೯॥

ತೇಭ್ಯೋನೃಮೇದಃ ಪಿಶಿತಾಶನೇಭ್ಯಃ ।
ಕಥಂ ಭಯಂ ತೇ ಽಸ್ತಿ ನ ರಾಕ್ಷಸೇಭ್ಯಃ ॥

ವಿವಿಕ್ತಗಂಭೀರಭಯಾನಕೇಷು ।
ಸಹಾಯಹೀನಸ್ಯ ವನಾಂತರೇಷು ॥೧೦॥

[ತಾ॥—ಗದ್ಯ ॥ ನೀನಾಯಕ್ಷರಾಕ್ಷಸರ ಅಥವಾ ಪಿಶಾಚರ ರೌದ್ರಸ್ವಭಾವಗಳನ್ನು ಹಿಂದಾವಾಗಲೂ ಕೇಳಿ ಅರಿಯೆಯಾ?'' ಅದಲ್ಲದೆ, ಶ್ಲೋ॥೯-೧೦॥ ಪ್ರಾಯೇಣ ಮನುಷ್ಯರು ಜನಸಮುದಾಯದ ಮಧ್ಯದಲ್ಲಿರ್ದರೂ, ವಿದ್ಯಾ ತಪಸ್ಸು ಸ್ವಸ್ತ್ಯಯನ (ಮಂತ್ರಶಕ್ತಿಯಿಂದುಂಟಾದ ರಕ್ಷೆ)ಗಳನ್ನು ಪಡೆದವರಾಗಿರ್ದರೂ, ತಮ್ಮ ಶೌರ್ಯಬಲದಿಂದ ಹಿಂದೆ ಇನ್ನಾವ ಭೀತಿಯನ್ನೂ ಗಣಿಸದವರಾಗಿರ್ದರೂ, ಮನುಷ್ಯರ ಮೇದೋ ಮಾಂಸಾದಿಗಳನ್ನು ಭಕ್ಷಿಸುವ ರಾಕ್ಷಸರನ್ನು ಸಂಧಿಸಿದಾಗ್ಗೆ, ಅಂಥವರೂ ಕೂಡ ಬಹುಪ್ರಯಾಸದಿಂದ ತಪ್ಪಿಸಿಕೊಂಡು ಹೋಗುವರು; ಹೀಗಿರುವಲ್ಲಿ ಗಿಡವೊದರುಗಳಿಂದ ಭೀಕರವಾದ ಈ ಘೋರಾರಣ್ಯದಲ್ಲಿ ಸಹಾಯ ಶೂನ್ಯನಾಗಿರ್ದರೂ ನಿನಗೇಕೆ ಆ ರಾಕ್ಷಸರ ಭಯವೇ ಇಲ್ಲವು?]

ಇದನ್ನು ಕೇಳಿದ ಕುರುಬನು ಫಕಫಕನೆ ನಕ್ಕು ನಿರ್ಲಕ್ಷ್ಯದೊಡನೆ ಇಂತೆಂದನು:—

ಶ್ಲೋ॥ ಜನಃ ಸ್ವಸ್ತ್ಯಯನೇನಾಯಂ ಮಹತಾ ಪರಿಪಾಲ್ಯತೇ ।
ಸೇವೇನ್ದ್ರೋಪ್ಯಶಕ್ಯೋಽಯಂಕಿಂಪುನಃಪಿಶಿತಾಶನೈಃ॥
ತೇನ ಗೇಹ ಇವಾರಣ್ಯೇ ರಾತ್ರಾವಪಿ ಯಥಾ ದಿವಾ ।
ಜನಾನ್ತ ಇವಚೈಕೋಽಪಿನಿರ್ಭಯೋವಿಚರಾಮ್ಯಹಮ್॥

[೧೧-೧೨. ತಾ:—ಈ ದೇಶದ ಜನರು ಶ್ರೇಷ್ಠವಾದ ಸ್ವಸ್ತ್ಯಯನದಿಂದ ಮಹತ್ತರವಾಗಿ ಪರಿಪಾಲಿಸಲ್ಪಡುತ್ತಿರುವುದರಿಂದ ಇವರ ಮೇಲೆ ದೇವೇಂದ್ರನ ಸತ್ವವೇ ನಡೆಯದೇ ಇರುವಲ್ಲಿ, ಎಲ್ಲಿಯೋ ತುಚ್ಛ ಮಾಂಸಭಕ್ಷಕರಿಂದೇನು ನಡೆದೀತು ? ಆದಕಾರಣ ಈ ಅರಣ್ಯದಲ್ಲಿರ್ದರೂ ಮನೆಯಲ್ಲಿರ್ದಂತೆಯೂ, ರಾತ್ರೆಯಾಗಿರ್ದರೂ ಹಗಲಿನಂತೆಯೂ, ಏಕಾಕಿಯಾಗಿರ್ದರೂ ಜನಸಮುದಾಯದಲ್ಲಿರ್ದಂತೆಯೂ, ನಿರ್ಭಯನಾಗಿ ಸಂಚರಿಸುವೆನು.]

ಬಳಿಕ ಚಿತ್ರನನ್ನು ಹಿಂದಿಟ್ಟು ಗುಪ್ತನು ಕುತೂಹಲದಿಂದ ಕುರು ಬನನ್ನು ಕುರಿತಿಂತೆಂದನು:—

ಗದ್ಯಮ್॥ ತತ್ಕಥಯ ತಾವದ್ಭದ್ರ ಕೀದೃಶೋ ಽಯಂ ಯು ಷ್ಮಾಕಂ ಸ್ವಸ್ತ್ಯಯನವಿಶೇಷಃ ? ॥

[ತಾ॥–"ಎಲೈ ಮಂಗಳಶೀಲನೇ! ಅಂತಹ ಅತಿಶಯವಾದ ನಿಮ್ಮ ಸ್ವಸ್ತ್ಯಯನವಾವುದೆಂಬುದನ್ನು ಹೇಳು?]

ಬಳಿಕ ಕುರುಬನು ಉತ್ಸಾಹದಿಂದಿಂತೆಂದನು:—

ಗದ್ಯಮ್ ॥ ಶ್ರೂಯತಾಂ ಯಾದೃಶೋ ಽಯಮಸ್ಮಾಕ ಮತ್ಯದ್ಭುತಸ್ವಸ್ತ್ಯಯನವಿಶೇಷಃ ॥

ಶ್ಲೋ॥ ಕನಕಗಿರಿಶಿಲಾವಿಶಾಲವಕ್ಷಾಃ ।
ಶರದಮಲೇಂದುಮನೋಜ್ಞವಕ್ತ್ರಶೋಭಃ ॥
ಕನಕಪರಿಘಪೀನಲಂಬಬಾಹು–
ರ್ವೃಷಭನಿಭೇಕ್ಷಣವಿಕ್ರಮೋ ನರೇಂದ್ರಃ ॥೧೩॥

[ತಾ॥–ಗದ್ಯ॥ "ಅತ್ಯದ್ಭುತವಾವ ಎಮ್ಮ ಸ್ವಸ್ತ್ಯಯನವಿಶೇಷ ವಾವುದೆಂಬುದನ್ನು ಹೇಳುವೆನು ಕೇಳಿರಿ॥" ಶ್ಲೋ ॥೧೩॥ ಮೇರುಪರ್ವ ತದ ಹಾಸುಗಲ್ಲಿನಂತೆ ವಿಶಾಲವಾದ ವಕ್ಷಸ್ಥಲವುಳ್ಳವನಾಗಿಯೂ, ಶರ ತ್ಕಾಲದ ನಿಷ್ಕಲಂಕೇಂದುವಿನಂತೆ ಮನೋಹರವಾದ ವದನಮಂಡಲದಿಂದ ಅಭಿರಾಮನಾಗಿಯೂ, ಸ್ವರ್ಣಕುಂತಗಳಂತೆ ಸ್ಥೂಲದೀರ್ಘವಾದ ಬಾಹು ದ್ವಯವುಳ್ಳವನಾಗಿಯೂ ವೃಷಭನಂತೆ ವಿಶಾಲವಾದ ನೇತ್ರಗಳಿಂದಲೂ ಸತ್ವದಿಂದಲೂ ಕೂಡಿ ಪ್ರಕಾಶಿಸುವ ಎಮ್ಮ ಮಹಾರಾಜನೇ (ಆಸ್ವಸ್ತ್ಯ ಯನವು.]

ಗುಪ್ತನು ಪುನಃ ಈರೀತಿ ಪ್ರಶ್ನೆ ಮಾಡಿದನು:—

ಗದ್ಯಮ್॥ ಭದ್ರಮುಖ ! ಕಥಯ ಕಿಂ ಕೃತೋ ಯಮು

ಸ್ಯ ರಾಜ್ಞಃ ಪ್ರಭಾವೋ ಯದಸ್ಮಾನುಪಾ ನ ಪ್ರಸಹನ್ತೇ ವಿಷಯವಾಸಿನಂ ಜನಂ ಹಿಂಸಿತುಮ್?॥

[ತಾ–ಎಲೈ ಸುಮುಖನೇ! ಈ ರಾಜ್ಯದ ಪ್ರಜೆಗಳನ್ನು ಹಿಂಸಿಸಲು ರಾಕ್ಷಸಾದಿಗಳಿಗೂ ಕೂಡ ಅಶಕ್ಯವಾಗಿರುವಂತಹ ಪ್ರಭಾವವು ನಿಮ್ಮ ಮಹಾರಾಜನಿಗೆ ಎಂತುಂಟಾಯಿತೊ ಅದನ್ನು ಹೇಳು?]

ಈಪ್ರಶ್ನೆಗುತ್ತರರೂಪವಾಗಿ ಕುರುಬನಿಂತೆಂದನು:—

ಗದ್ಯಮ್॥ ಸ್ವಮೂಹಾತ್ಮ್ಯಾದಧಿಗತಃ ಪ್ರಭಾವೋ ಽಯಮಸ್ಮಾಕಂ ಮಹಾರಾಜಸ್ಯ॥ ಪಶ್ಯತ ಮಹಾಬ್ರಾಹ್ಮಣಾಃ–

ವಿದ್ವಾನಪ್ಯಮದೋನ್ಮತ್ತೋ ನಿರ್ಲೋಭೋ ಧನಿಕೋ ಽಪಿ ಚ॥
ಕ್ಷಮಾಶೀಲಃ ಪ್ರಭುರಪಿ ತರುಣೋ ಽಪಿ ಜಿತೇಂದ್ರಿಯಃ॥೧೪॥

ಸಮಪ್ರಭಾವಾ ಸ್ವಜನೇ ಜನೇ ಚ ।
ಧರ್ಮಾನುವೃತ್ತಾ ತ್ವಸ್ಯ ಹಿ ದಣ್ಡನೀತಿಃ ॥
ಅಧರ್ಮಮಾವೃತ್ಯ ಜನಸ್ಯ ಮಾರ್ಗಂ ।
ಸೋಪಾನವೋಲೇವ ದಿವೋ ವಿಭಾತಿ ॥೧೫॥

ಅಮೈಷ್ಯಮಾಣಶ್ಚ ಜಗದ್ಗತಾನಾಂ ।
ದುಃಖೋದಯಾನಾಂ ಪ್ರಸೃತಾವಲೇಪಮ್ ॥
ದಾನೇಷು ವರ್ಷೀ ಕರುಣೋ ರುಚಾಪ–
ಸ್ತ್ರೈಯ್ಯುದ್ಧಸಂರಂಭಮಸೌ ಜಗಾಮ ॥೧೬॥

[ತಾ–ಎಮ್ಮ ಮಹಾರಾಜನ ಈ ಪ್ರಭಾವವು ಅವನ ಸ್ವಂತಗುಣ ವಿಶೇಷಗಳಿಂದಲೇ ಊಂಟಾಯಿತು. ಎಲೈ ಮಹಾಬ್ರಾಹ್ಮಣರೇ! (ಬ್ರಾಹ್ಮಣವೇಷಧಾರಿಗಳೇ!) ಅದನ್ನು ಹೇಳುವೆನು ಕೇಳಿರಿ:—

೧೪ ವಿದ್ವಾಂಸನಾಗಿದ್ದರೂ ಮದದಿಂದ ಮತ್ತತೆಯನ್ನು ಹೊಂದದವನಾಗಿಯೂ, ಧನಿಕನಾಗಿದ್ದರೂ ಲೋಭವಿಲ್ಲದವನಾಗಿಯೂ, ಪ್ರಭುತ್ವ

ವನ್ನು ಮಾಡುವವನು ತಾನೇಆಗಿರ್ದರೂ ಕ್ಷಮಾಗುಣವೇ ವ್ರತವುಳ್ಳವನಾಗಿಯೂ, ಯೌವನಸಮನ್ವಿತನಾಗಿರ್ದರೂ ಚಿಂತೇಂದ್ರಿಯನಾಗಿಯೂ ಇರುವನು. (೧೫) ಎಮ್ಮೀ ಮಹಾರಾಜನ ಧರ್ಮಬದ್ಧವಾದ ನೀತಿಯು ತನ್ನ ಬಂಧುಗಳಲ್ಲಿಯೂ ಇತರ ಪ್ರಜೆಗಳಲ್ಲಿಯೂ ಸಮಾನೋಪಯೋಗವುಳ್ಳವಾಗಿರುವುದರಿಂದ, ಪ್ರಜೆಗಳಿಗೆ ತೃಪ್ತಿಯನ್ನುಂಟುಮಾಡಿ, ಅವರು ಅಧರ್ಮಕಾರ್ಯಗಳಲ್ಲಿ ಪ್ರವೇಶಿಸಲು ಅವಕಾಶವನ್ನೀಯದೆ (ರಾಜ ಪ್ರಜೆಗಳೀರ್ವರಿಗೂ) ಸ್ವರ್ಗಕ್ಕೆ ಹಾಕಿದ ಸೋಪಾನಪಂಙ್ತಿಯೋ ಎಂಬಂತಾಗಿರುವುದು (೧೬) ಮತ್ತೆಮ್ಮ ಮಹಾರಾಜನು ತನ್ನ ಪ್ರಜೆಗಳನ್ನು ದುಃಖಗೊಳಿಸಲು ಯತ್ನಿಸಿದ (ದಾರಿದ್ರ್ಯರೋಗಗಳೆಂಬ) ಶತ್ರುಗಳ ಗರ್ವವನ್ನು ಸಹಿಸದವನಾಗಿ, ತನ್ನ ಕಾರುಣ್ಯವೆಂಬ ಮಹಾಧನಸ್ಸನ್ನು ಹಿಡಿದು, (ಧನ ಧಾನ್ಯ ಔಷದಿ) ಗಳೆಂಬ ಬಾಣಂಗಳ ಮಳೆಗರೆಯುತ್ತ ಅವರುಗಳೊಡನೆ ಯುದ್ಧಮಾಡುವುದರಲ್ಲಿಯೇ ನಿರತನಾಗಿರುವನು'']

ಬಳಿಕ ಚಿತ್ರನು ಗುಪ್ತನನ್ನು ಹಿಂದಿಟ್ಟು, ಕುರುಬನನ್ನು ಕುರಿತು ಕುತೂಹಲದಿಂದ ಇಂತೆಂದನು:–''ಮಿತ್ರನೇ ! ನಿನಗೆ ಗೀರ್ವಾಣಭಾಷೆಯಲ್ಲಿಯೂ ಪರಿಜಯವಿರುವುದನ್ನು ತಿಳಿದು ಸಂತುಷ್ಟರಾದೆವು. ನೀನಿದನ್ನು ಹೇಗೆ ಕಲಿತೆ?'' ಕುರುಬ:–''ಎಮ್ಮ ಮಹಾರಾಜನು ತನ್ನ ಪ್ರಜೆಗಳಲ್ಲಿ ಓರ್ವನೂ ಅವಿದ್ಯಾವಂತನಾಗಿರಕೂಡದೆಂಬುದಾಗಿಯೂ ದೇವಭಾಷೆಯನ್ನು (ಸಂಸ್ಕೃತವನ್ನು) ಸರ್ವರೂ ಕೂಡಿದಮಟ್ಟಿಗೂ ತಿಳಿದಿರಬೇಕೆಂಬುದಾಗಿಯೂ ಆಜ್ಞೆಮಾಡಿರುವುದರಿಂದ, ಪಶುಪಾಲಕನಾದ ಎನಗೆ ಸಂಸ್ಕೃತಭಾಷೆಯಲ್ಲಿ ಸಂಪೂರ್ಣಪಾಂಡಿತ್ಯವಿಲ್ಲದಿರ್ದರೂ ಸ್ವಲ್ಪಮಟ್ಟಿಗೆ ತಿಳಿಯುವುದು.'' ಚಿತ್ರ:–''ನೀನು ಇಷ್ಟು ವಿದ್ಯಾವಂತನಾಗಿರ್ದರೂ ಇನ್ನೂ ಪ್ರಾಕೃತನಂತೆ ಪಶುಪಾಲಕನವೃತ್ತಿಯನ್ನೇಕೆ ಅವಲಂಬಿಸಿರುವೆ? ಕುರುಬ:–''ಇದು ಎನ್ನ ಕುಲವೃತ್ತಿಯು; ಇದನ್ನು ಬಿಟ್ಟು ಪರಕರ್ಮವನ್ನು ಅವಲಂಬಿಸುವುದು ಕುಲಪುತ್ರರಿಗೆ ಯೋಗ್ಯವೆ? ಅದಲ್ಲದೆ ಪ್ರಜೆಗಳು ಅನುಭವಸಿದ್ಧವಾದ ಸ್ವವೃತ್ತಿಗಳನ್ನು ತ್ಯಜಿಸಿ ಅಪರಿಚಿತವಾದ

ಪರವೃತ್ತಿಗಳನ್ನು ಅವಲಂಬಿಸಿದರೆ, ಅಂಥವರು ಉಭಯಭ್ರಷ್ಟರಾಗುವುದ ಲ್ಲದೆ ವೃತ್ತಿಗಳ ಪರಿಣಾಮಗಳು ಕೆಟ್ಟುಹೋಗಿ ರಾಜ್ಯಕುಟುಂಬದ ಸುಖ ಯಾತ್ರೆಗೂ ಮತ್ತು ರಾಜನ ಆಯಕ್ಕೂ ಕುಂದುಂಟಾಗುತ್ತಾದುದರಿಂದ, ಅಂತಹ ಸ್ವವೃತ್ತಿಭ್ರಷ್ಟರನ್ನು ಎಮ್ಮ ರಾಜನು ದಂಡಿಸುವನು. ಆದಲ್ಲದೆ ಮನುಷ್ಯನು ಆವ ಕುಲವೃತ್ತಿಯನ್ನು ಅವಲಂಬಿಸಿದ್ದರೂ ಧರ್ಮಾನುಸಾರವಾಗಿ ನಡೆದುಕೊಂಡರೆ ಇಹಪರಸುಖಂಗಳೆರಡನ್ನೂ ಪಡೆಯಬಹುದಲ್ಲವೆ ?'' ಚಿತ್ರನು ಆಶ್ಚರ್ಯದಿಂದ:–''ಒಳ್ಳೆಯದು ನೀನಾವದೇವರನ್ನು ಪೂಜಿಸುವೆ? ಕುರುಬ:–''ಪ್ರತ್ಯಕ್ಷದೈವನಾದ ಎಮ್ಮ ಮಹಾರಾಜನನ್ನೂ, ಪರೋಕ್ಷದೈವನಾದ ಯನ್ನ ಅಂತರಾತ್ಮನನ್ನೂ ಪೂಜಿಸುವೆನು.''ಚಿತ್ರ:–'' ನಿಮ್ಮ ಮಹಾರಾಜನ ಶತ್ರುಗಳಾರಾದರೂ ಅವನನ್ನು ಹಿಂಸಿಸುವುದಕ್ಕೆ ಯತ್ನಿಸಿದರೆ ಆಗ ನೀನೇನುಮಾಡುವೆ ?'' ಕುರುಬನು ನಗುತ್ತ:–'' ಎಮ್ಮ ಮಹಾರಾಜನನ್ನು ಇತರದೇಶದ ರಾಜರುಗಳೆಲ್ಲರೂ ಧರ್ಮಸ್ವರೂಪನೆಂದು ಪೂಜಿಸುತ್ತಿರುವಲ್ಲಿ ಹೊಸಶತ್ರುವೆಲ್ಲಿಂದ ಬರುವನು ? (ಕೋಪದಿಂದ) ಹಾಗೆ ಒಂದುವೇಳೆ ದುರಾಶಾಸೂಯೆಗಳಿಂದ ಪ್ರೇರಿತರಾದ ದುಷ್ಟರಾಜರಾರಾದರೂ ಪ್ರಜಾಪಿತನಾದ ಎಮ್ಮ ಮಹಾರಾಜನನ್ನು ಹಿಂಸಿಸಲು ಯತ್ನಿಸಿದರೆ ತಂದೆಯನ್ನು ದುಷ್ಟರು ಹಿಂಸೆಮಾಡುವಸಂದರ್ಭದಲ್ಲಿ ಸುಪುತ್ರರು ತಮ್ಮ ತನು ಧನ ಪ್ರಾಣಗಳನ್ನಾದರೂ ಲಕ್ಷಿಸದೆ ಹೇಗೆ ತಂದೆಯನ್ನು ಕಾಪಾಡುವರೋ ಅದರಂತೆಯೇ, ನಾನೂ ಎಮ್ಮದೇಶದ ಪ್ರತಿಯೊಬ್ಬ ಪ್ರಜೆಯೂ ಮಾಡುವೆವು.'' ಎಂದು ಹೇಳಿ ತನ್ನ ಕೈಗೊಡಲಿಯನ್ನು ಅಳ್ಳಾಡಿಸಲುಪಕ್ರಮಿಸಿದನು.

ಇದನ್ನು ನೋಡಿದ ಚಿತ್ರನು ಲಜ್ಜೆಯಿಂದಲೂ ಆಶ್ಚರ್ಯದಿಂದಲೂ ಭೀತಿಯಿಂದಲೂ ಕೂಡಿ, ಇನ್ನು ಇವನಲ್ಲಿ ಕೊಪೋದ್ರೇಕಕರವಾದ ಮಾತುಗಳನ್ನಾಡುವುದು ಉಚಿತವಲ್ಲವೆಂದು ನಿಶ್ಚಯಿಸಿ, ನಮ್ರಭಾವದಿಂದೀರೀತಿ ಹೇಳಿದನು:–'' ಮಿತ್ರನೇ ! ಈಗ ನಮಗೆ ಭಕ್ತಕಾಲ (ಉಟದ ಹೊತ್ತು) ಸಮೀಪಿಸಿತು ; ಇನ್ನು ನಾವು ಮುಂದಕ್ಕೆ ಹೊರಡುವೆವು.''

ಚಿತ್ರಗುಪ್ತರು ಕುರುಬನ ರಾಜಭಕ್ತಿ ಮೊದಲಾದ ಗುಣವಿಶೇಷಗಳನ್ನು ಯತಿ ವೇಷದಿಂದ ಪರೀಕ್ಷಿಸುವಿಕೆ.

ನೀತಿ :—ಸತ್ಪ್ರಜೆಗಳೇ ರಾಜ್ಯಕ್ಕೆ ಭೂಷಣ.

The celestial spies, Chitra and Gupta, guising themselves as Brahmanas, test the loyalty and other virtues of the shepherd.

MORAL :—Loyal subjects are real ornaments of a kingdom. (PAGE 21)

ಇದನ್ನು ಕೇಳಿದೊಡನೆಯೇ ಕುರುಬನು, ಕೈಗೊಡಲಿಯನ್ನು ಕೆಳಗಿಟ್ಟು ಅತಿದೈನ್ಯದಿಂದೀರೀತಿ ಪ್ರಾರ್ಥಿಸಿದನು:-"ಪೂಜ್ಯರೇ! ಮಧ್ಯಾಹ್ನ ಕಾಲವಾಗಿರುವುದು; ಈಗೆನ್ನ ಆತಿಥ್ಯವನ್ನು ಕೃಪೆಯಿಂದ ಸ್ವೀಕರಿಸಿ, ಎನ್ನ ಧರ್ಮಕ್ಕೆ ಸಾಚಿವ್ಯವನ್ನು ಮಾಡಬೇಕೆಂದು ಬೇಡುವೆನು; ಇದೋ ಅಲ್ಲಿ ಕಾಣುವುದೇ ಎನ್ನ ಕುಟೀರವು; ಬಿಜಯಮಾಡಬೇಕು; ನಾನೂ ಇದರಿಹೋಗಿರುವ ಈ ದನಕುರಿಗಳನ್ನು ಆಟ್ಟಿತರುವೆನು." ಚಿತ್ರ:-"ಒಳ್ಳೆಯದು! ನೀನು ಮುಂಚಿತವಾಗಿ ನಡೆ; ನಾವೂ ಹಿಂದೆಬರುವೆವು." ಎಂದು ಹೇಳಲು ಕುರುಬನು ನಮಸ್ಕರಿಸಿ ಅತ್ತ ತೆರಳಿದ ಬಳಿಕ, ಚಿತ್ರನನ್ನು ಕುರಿತು ಪರಮ ವಿಸ್ಮಯದೊಡನೆ ಇಂತೆಂದನು:—

"ಚಿತ್ರನೇ! ಈ ಕುರುಬನ ಧೈರ್ಯವನ್ನೂ ವಿದ್ಯಾಪ್ರೌಢಿಮೆಯನ್ನೂ ನೆಲೆಗೊಂಡಿರುವ ರಾಜಭಕ್ತಿಯನ್ನೂ ವಿನಯಾದಿ ಗುಣಸಂಪತ್ತಿಯನ್ನೂ ನೋಡಿದೆಯಾ! ಇಂತಹ ಪ್ರಜೆಗಳನ್ನು ಪಡೆದಿರುವ ಈ ಭೂಪಾಲನು ಇನ್ನೆಂತಹ ಮಹಾತ್ಮನಾಗಿರಬೇಕು! ನಾವು ಹಿಂದೆಸೋಡಿವ ರಾಜ್ಯಗಳಲ್ಲಿನ ಪಳ್ಳಿಕಾರರು ನಮ್ಮನ್ನು ದೂರದಿಂ ನೋಡಿದೊಡನೆಯೇ ಭೀತರಾಗಿ ಓಡಿಹೋದರು; ಮತ್ತೆ ಕೆಲವು ಪ್ರದೇಶಗಳಲ್ಲಿ ಎಮ್ಮ ದೇವಭಾಷೆಗಳನ್ನು ಕೇಳಿದೊಡನೆಯೇ ಭಯಗ್ರಸ್ತರಾಗಿ, ಮಾತನಾಡಲೂ ತೋರದೆ, ನಡುಗುತ್ತ ಭೂತಗ್ರಸ್ತರಂತೆ ಸ್ತಬ್ಧರಾಗಿ ತದ್ದ್ವಾರಾ ತಮ್ಮ ಮೌಢ್ಯವನ್ನೂ ಅನಾರ್ಯತ್ವವನ್ನೂ ಪ್ರಕಾಶಗೊಳಿಸಿದರು; ಇಲ್ಲೀ ಕುರುಬನಾದರೊ, ನಮ್ಮ ಸುಸಂಸ್ಕೃತಾಗ್ರೇಸರರಿಗಿಂತಲೂ ಪ್ರೌಢನಾಗಿಯೂ ಧೈರ್ಯಶಾಲಿಯಾಗಿಯೂ, ಆರ್ಯವಿಹಿತವಾದ ಸದಾಚಾರಗಳನ್ನು ಅರಿತವನಾಗಿಯೂ ಇರುವನು, ಮುಖ್ಯವಾಗಿ ಈ ರಾಜ್ಯದಲ್ಲಿ ಪ್ರಜೆಗಳಿಗೆ ಚೋರರಿಂದಾದರೂ, ಘೋರಕೃತ್ಯಗಳನ್ನು ಎಸಗುವ ರಾಕ್ಷಸಸದೃಶರಾದ ದುಷ್ಟರಿಂದಾದರೂ, ಅಧಿಕಾರಮತ್ತರಾದ ರಾಜಕರಿಂದಾದರೂ, ಲಂಚವಣಿಗರಾದ ಸೇವಕರಿಂದಾದರೂ, ಭೀತಿಯೇ ಆಗಲಿ ಉಪದ್ರವವೇ ಆಗಲಿ ಸ್ವಲ್ಪವೂ ಇಲ್ಲವೆಂದು ತೋರುವುದು! ಮತ್ತಿದು ಈದೇಶದ ರಾಜನ ಆಜ್ಞಾ

ಪ್ರಭಾವವನ್ನೂ ಸದ್ರಕ್ಷಣಕ್ರಮವನ್ನೂ ಸೂಚಿಸುವುದು! ಈ ವಿಷಯಗಳನ್ನೆಲ್ಲ ದೀರ್ಘವಾಗಿ ಪರಿಭಾವಿಸಿ ನೋಡಿದರೆ, ಈ ಸರ್ವಸುಖಗಳಿಗೂ ಈ ರಾಜನ ಧರ್ಮಪ್ರಿಯತ್ವವೇ ಮೂಲಕಾರಣವಾಗಿರಬೇಕೆಂದು ಸಿದ್ಧಾಂತವಾಗುವುದು! ಅಂತೂ ಬೃಹಸ್ಪತಿಯು ಊಹಿಸಿದಂತಹ ಮಹಾರಾಜನು ಇವನೇ ಆಗಿರಬೇಕೆಂದು ತೋರುವುದು! ''

ಇದೆಲ್ಲವನ್ನೂ ಆಕರ್ಣಿಸಿದ ಚಿತ್ರನು ಆಶ್ಚರ್ಯಪಟ್ಟವನಾದರೂ ಒಂದುಕ್ಷಣ ಹಾಗೆಯೇ ಯೋಚಿಸುತಿರ್ದು ಬಳಿಕ ಇಂತೆಂದನು:— "ನೀನು ಹೇಳಿದುದೆಲ್ಲವೂ ನಿಜವೇ ಆಹುದು; ಆದರೂ ತಂತಮ್ಮ ರಾಜರನ್ನು ಇತರರಲ್ಲಿ ಸುತ್ತಿಸುವುದು ಪ್ರಜೆಗಳಾದವರಿಗೆ ಕರ್ತವ್ಯವೇ ಆಗಿರುವುದು! ಆದುದರಿಂದ ಇವನೊಬ್ಬನ ಮಾತೇ ನಮ್ಮ ಸಿದ್ಧಾಂತಕ್ಕೆ ಸಾಕಾದ ಆಧಾರವಲ್ಲವು; ಪ್ರತ್ಯಕ್ಷತಃ ನಾವೇ ಪರೀಕ್ಷಿಸಿ ನೋಡಿದ ಬಳಿಕ ನಿಜವನ್ನು ಹೇಳಬಹುದು. ಆದಕಾರಣ ನಾವೀಗ ಈಕುರುಜನ ಆತಿಥ್ಯವನ್ನು ಸ್ವೀಕರಿಸಿ ಬಳಿಕ ಇತರರನ್ನೂ ಪರೀಕ್ಷಿಸೋಣ ನಡೆ! '' ಎಂದು ಈರ್ವರೂ ಆಸ್ಥಲವನ್ನು ಬಿಟ್ಟು ಮುಂದಕ್ಕೆ ತೆರಳಿದರು.

ಎರಡನೆಯ ಅಂಗ

ಒಂದನೆಯ ಸಂಧಿ

PEEPING OF MARA; THE CUPID.

ಮಾರಪ್ರವೇಶ.

ಇತ್ತಲಾಗಿ ಒಂದುದಿನ ದೇವಸೇನಮಹಾರಾಜನೂ ಸುಮತಿಯೂ ರಾಜಮಂದಿರದಲ್ಲಿ ಕುಳಿತು ಪರಸ್ಪರ ಮಾತನಾಡುತಿರ್ದ ಸಮಯದಲ್ಲಿ ದ್ವಾರಪಾಲಕನು ಬಂದು ತಲೆವಾಗಿ ಕೈಮುಗಿದು ಮಹಾರಾಜನನ್ನು

ಕುರಿತಿಂತೆಂದನು:– " ಜಯವಾಗಲಿ ಮಹಾರಾಜನಿಗೆ ; ಮಹಾಪಾದ ದರ್ಶನಾರ್ಥವಾಗಿ ಕಿರೀಟವತ್ಸನು ಬಂದು ಕಾದಿರುವನು. "

ಇದನ್ನು ಕೇಳಿದ ದೇವಸೇನನು: –" ಅವನನ್ನು ಒಳಕ್ಕೆ ಕಳುಹಿಸಿ ನೀನಲ್ಲಿಯೇ ಇರು. " ಎಂದು ಅಜ್ಞಾಪಿಸಲು ದ್ವಾರಪಾಲಕನು ಕೈಮುಗಿದು ಹೋಗಿ ಕಿರೀಟವತ್ಸನನ್ನು ಕಳುಹಿದನು.

ಬಳಿಕ ಕಿರೀಟವತ್ಸನು ಒಳಕ್ಕೆ ಪ್ರವೇಶಿಸಿ, ರಾಜನಿಗೆ ತಲೆವಾಗಿ ವಂದಿಸಿ, ತನ್ನ ಕೈಲಿರ್ದ ಪುಷ್ಪಮಾಲೆಯನ್ನು ಅವನಿಗರ್ಪಿಸಿ ಭಕ್ತಿಗೌರವಗಳಿಂದ ಇಂತು ಪ್ರಾರ್ಥಿಸಿದನು:–ಜೀಯ! ನಿನ್ನ ಸೇವಕನಾದೆನಗೆ ಓರ್ವಮಗಳು ಜನಿಸಿಹಳು. ಅವಳ ಜನ್ಮನಾಮವು ' ಗೌರೀ ' ಎಂದಾಗಿರ್ದರೂ, ಅವಳ ರೂಪಾತಿಶಯವು ಮುನಿಚಿತ್ತಾಕರ್ಷಣದಕ್ಷವಾಗಿರುವುದರಿಂದ, ಎಮ್ಮ ನೆರೆಹೊರೆಯವರೆಲ್ಲರೂ ಅವಳನ್ನು ' ಉನ್ಮಾದಯಸ್ತೀ ' ಅಥವಾ ' ಉನ್ಮಾದಿನೀ ' ಎಂದು ಕರೆಯಲಾರಂಭಿಸಿ, ಇವಳು ರಾಜಪತ್ನೀತ್ವಕ್ಕೆ ಅರ್ಹಳೇಹೊರತು ಸಾಮಾನ್ಯಜನಯೋಗ್ಯಳಲ್ಲವೆಂದು ಅವಳ ಬಾಲ್ಯಾದಾರಭ್ಯ ಹೇಳುತ್ತಿರುವುದರಿಂದ ಅವಳು ಆಗಿನಿಂಗಲೂ ನಿನ್ನನ್ನೇ ತನ್ನ ಪತಿಯನ್ನಾಗಿ ವರಿಸಬೇಕೆಂದು ಸಂಕಲ್ಪಿಸಿಹಳು. ಈಗ ಅವಳು ಪ್ರಾಪ್ತಯೌವನೆಯಾಗಿರುವುದರಿಂದ ಅವಳನ್ನು ಪತ್ನಿಯನ್ನಾಗಿ ಸ್ವೀಕರಿಸುವನಾಗು. "

ಈರೀತಿ ಪ್ರಾರ್ಥಿತನಾದ ದೇವಸೇನನು ಪರಮಪಸ್ಮಿತನಾದರೂ ಒಂದು ಕ್ಷಣಕಾಲ ಹಾಗೆಯೇ ಆಲೋಚಿಸಿ, ಬಳಿಕ ಇಂತೆಂದನು:–" ಭದ್ರೆಯದು! ವಿಚಾರಮಾಡಿ ಹೇಳಿಕಳುಹುವೆನು; ನೀನು ಹೊರಡಬಹುದು. " ಎಂದು ಹೇಳಲು ಕಿರೀಟವತ್ಸನು ಮಂತ್ರಿಯಿಂದ ಕೊಡಲ್ಪಟ್ಟ ತಾಂಬೂಲವನ್ನು ಸ್ವೀಕರಿಸಿ ಹೊರಟುಹೋದ ತರುವಾಯ, ಮಂತ್ರಿಯಾದ ಸುಮತಿಯನ್ನು ಕುರಿತು ದೇವಸೇನನು ಈರೀತಿ ಪ್ರಶ್ನೆಮಾಡಿದನು:—" ಸುಮತಿಯೇ! ಈತನ ಮಗಳನ್ನು ಪರಿಗ್ರಹಿಸುವ ವಿಷಯದಲ್ಲಿ ನಿನ್ನ ಅಭಿಪ್ರಾಯವೇನು ? "

ಬಳಿಕ ಸುಮತಿಯು ಒಂದು ಕ್ಷಣಕಾಲ ಆತ್ಮಚಿಚ್ಛಾಸೆಯನ್ನು ಮಾಡಿದ ಒಳಿಕ ಮಹಾರಾಜನನ್ನು ಕುರಿತು ವಿನಯಗೌರವಗಳಿಂದ ಇಂತೆಂದನು:—"ದೇವ! ಈತನೇನೋ ಸತ್ಕುಲಪ್ರಸೂತನು? 'ಮುನಿ ಚಿತ್ತಾಕರ್ಷಣದಕ್ಷ' ಎಂಬ ಪದವನ್ನು ಪ್ರಯೋಗಿಸಿರುವುದರಿಂದ ಆ ಕನ್ಯೆಯು ಮಹಾರೂಪವತಿಯೆಂದೇ ಅರ್ಥವಾಯಿತು; ಆದರೂ ಸ್ವವಸ್ತುಗಳನ್ನು ಇತರರಲ್ಲಿ ಶ್ಲಾಘಿಸುವುದು ಲೋಕಸಾಮಾನ್ಯವು; ಆದ ಕಾರಣ, ಎಮ್ಮಾಸ್ಥಾನದ ಪುರೋಹಿತಸ್ತ್ರೀಲಕ್ಷಣಜ್ಞರನ್ನು ಕಳುಹಿ ಪರೀಕ್ಷಿಸಿದ ಅನಂತರ, ಆ ಕನ್ಯೆಯು ನಿನಗೆ ಅನುರೂಪೆಯೆಂದು ಅವರು ಹೇಳಿದರೆ ಆಗ್ಗೆ ಅವಳನ್ನು ಪರಿಗ್ರಹಿಸಬಹುದು."

ಇದನ್ನು ಕೇಳಿ ಸಂತುಷ್ಟನಾದ ದೇವಸೇನನು ಇಂತೆಂದನು:—"ಹಾಗಾದರೆ ಎಮ್ಮ ಆಸ್ಥಾನಪುರೋಹಿತನಿಗೂ ಸ್ತ್ರೀಲಕ್ಷಣಜ್ಞನಿಗೂ ಕನ್ಯೆಯನ್ನು ಪರೀಕ್ಷಿಸಿಕೊಂಡು ಬಂದು ನನಗೆ ತಿಳಿಸುವಂತಾಜ್ಞಾಪಿಸಿ, ಅವರುಗಳು ಬರುವ ವರ್ತಮಾನವನ್ನು ಮುಂಚಾಗಿಯೇ ಕಿರೀಟವತ್ಸನಿಗೆ ಹೇಳಿಕಳುಹೋಣ ನಡೆ." ಎಂದು ಹೇಳಿ ಈರ್ವರೂ ಎದ್ದು ಹೊರಟು ಹೋದರು.

ಎರಡನೆಯ ಸಂಧಿ

BEAUTY DELUDES KNOWLEDGE.

ಅವಿದ್ಯಾಮಹಿಮೆ

ಇತ್ತಲಾ ಕಿರೀಟವತ್ಸನು ತನ್ನ ಮಡದಿಯಾದ ಇಂದುಮತಿಯೊಡನೆ ಮನೆಯ ಹಜಾರದಲ್ಲಿ ಕುಳಿತು ಅವಳನ್ನು ಕುರಿತು ಸಂಭ್ರಮದಿಂದ ಈರೀತಿ ಪ್ರಶ್ನೆ ಮಾಡಿದನು:—"ಭದ್ರೆ! ಪುರೋಹಿತಾದಿಗಳನ್ನು ಉಪಚರಿಸುವುದಕ್ಕೆ ಉನ್ಮಾದಿನಿಯನ್ನೇ ನಿಯಮಿಸಿದರೆ, ಅವಳೇ ಉಪಚರಿಸುವುದರಿಂದ, ಅವಳ ವಿನಯಾದಿ ಗುಣಸಂಪತ್ತಿಯು ಅವರಿಗೆ ತಿಳಿದು

ಬರುವುದಕ್ಕೂ ಅವಳ ರೂಪಲಾವಣ್ಯಾದಿಗಳನ್ನು ಪರೀಕ್ಷಿಸಿಕೊಳ್ಳುವದಕ್ಕೂ ಅವಕಾಶವಾಗುವುದು; ಹೀಗೆ ಮಾಡುವುದರಿಂದ ಅವರು ತೃಪ್ತರಾಗಿ ನಮಗೆ ಅನುಕೂಲವಾಗಿ ರಾಜನಲ್ಲಿ ವಿಜ್ಞಾಪಿಸುವರು; ಹಾಗೆ ಮಾಡುವುದು ಉತ್ತಮವಲ್ಲವೆ?'' ಇದನ್ನು ಕೇಳಿದ ಇಂದುಮತಿಯು ನಗುತ್ತ:–''ಹಾಗೇ ಆಗಲಿ!'' ಎಂದು ಹೇಳಿದಳು. ಬಳಿಕ ಕಿರೀಟವತ್ಸನು ತವಕದಿಂದ:–''ಮಧುಪರ್ಕಾದಿ ಸತ್ಕಾರಸಾಮಗ್ರಿಗಳನ್ನು ಸಿದ್ಧಮಾಡಿರುವೆಯಾ?'' ಎಂದು ಕೇಳಲು ಇಂದುಮತಿಯು ಉತ್ಸಾಹದಿಂದ:–''ರಮಣನೇ! ಮಹಾರಾಜನ ಕಡೆಯಿಂದ ದೂತನು ಬಂದು ಹೇಳಿದ ಒಡನೆಯೇ ಸರ್ವವನ್ನೂ ಸಿದ್ಧಮಾಡಿ, ಉನ್ಮಾದಿನಿಯನ್ನೂ ಚೆನ್ನಾಗಿ ಅಲಂಕರಿಸಿರುವೆನು.'' ಎಂದು ಹೇಳಿದಳು. ಇದನ್ನು ಕೇಳಿದ ಕಿರೀಟವತ್ಸನು ಸಂತುಷ್ಟನಾಗಿ ಮಂದಹಾಸದಿಂದ:–'' ನಿನ್ನಂತಹ ವಿಜಕ್ಷಣೆಗೆ ಇದನ್ನೆಲ್ಲ ಹೇಳಿಕೊಡಬೇಕೆ? ವಿವಾಹವಿಚಾರಗಳಲ್ಲಿ ಪುರುಷರಿಗಿಂತಲೂ ಸ್ತ್ರೀಯರಿಗೆ ಆದರೋತ್ಸಾಹಗಳು ಅಧಿಕವಲ್ಲವೆ? ಅದು ಹಾಗಿರಲಿ, ಪುರೋಹಿತಾದಿಗಳನ್ನು ಭಕ್ತಿಗೌರವಗಳಿಂದ ಸತ್ಕರಿಸತಕ್ಕ ವಿಧಾನವನ್ನು ಉನ್ಮಾದಿನಿಗೆ ತಿಳಿಸಿರುವೆಯೋ ಇಲ್ಲವೋ?'' ಎಂದು ಕೇಳಲು, ಇಂದುಮತಿಯು ಓರೆಗಣ್ಣಿನಲ್ಲಿ ಪತಿಯನ್ನು ನೋಡುತಿಂತೆಂದಳು:– '' ಎಮ್ಮುನ್ಮಾದಿನಿಗೆ ಅವುಗಳನ್ನು ತಿಳಿಸಬೇಕಾದುದಿಲ್ಲ; ಆದರೂ ನಾನೂ ಸಂಕ್ಷೇಪವಾಗಿ ತಿಳಿಸಿರುವೆನು.'' ಎಂದು ಹೇಳುತಿರುವಲ್ಲಿ ಬೀದಿಯ ಬಾಗಿಲಿನ ಬಳಿ ಶಬ್ದವಾಗಲು ಕಿರೀಟವತ್ಸನು ತಪಕದಿಂದೆದ್ದುನಿಂತು:– '' ಪುರೋಹಿತಾದಿಗಳು ಬಂದಂತಿರುವುದು; ನೀನು ಒಳಕ್ಕೆನಡೆ; ಪಾದಪ್ರಕ್ಷಾಳನೆಕ್ಕೆ ಜಲವನ್ನು ಉನ್ಮಾದಿನಿಯ ಕೈಲಿ ಕೊಟ್ಟುಕಳುಹು.'' ಎಂದು ಹೇಳಲು ಇಂದುಮತಿಯು:— '' ಹಾಗೇ ಮಾಡುವೆನು.'' ಎಂದು ಹೇಳಿ ಒಳಕ್ಕೆ ಹೋದಳು.

ಒಳಿಕ ಆ ಕಿರೀಟವತ್ಸನು ಒಳಕ್ಕೆ ಬಂದ ಪುರೋಹಿತಸ್ತ್ರೀಲಕ್ಷ್ಮಣಜ್ಞರಿಗೆ ಉನ್ಮಾದಿನಿಯಿಂದ ಪಾದಪ್ರಕ್ಷಾಲನವನ್ನು ಮಾಡಿಸಿ ಅಲ್ಲಿ

ಅನುಗೊಳಿಸಿದ ಪೀಠಪ್ರದೇಶದ ಬಳಿಗೆ ಅವರುಗಳನ್ನು ಮರ್ಯಾದೆಯಿಂದ ಕರೆದುತಂದು, ಅವರು ಆಸನಗಳನ್ನ ಲಂಕರಿಸಿದ ಬಳಿಕ ಉನ್ಮಾದಿನಿಯನ್ನು ಕುರಿತಿಂತೆಂದನು:—"ವತ್ಸೆ ಉನ್ಮಾದಿನಿ! ಈ ದ್ವಿಜೋತ್ತಮರಿಗೆ ನಮಸ್ಕರಿಸು; ಇದೋ ಸತ್ಕಾರಸಾಮಗ್ರಿಗಳಿಲ್ಲಿಯೇ ಇರುವುವು; ಭಕ್ತಿಯಿಂದುಪಚರಿಸು."

ಈ ಆಜ್ಞೆಯನ್ನು ಮೌನದಿಂದ ಅಂಗೀಕರಿಸಿದ ಉನ್ಮಾದಿನಿಯು ಅವರುಗಳಿಗೆ ನಮಸ್ಕರಿಸಿ ಲಜ್ಜಾಗಾಂಭೀರ್ಯಗಳಿಂದೊಡಗೂಡಿ ಉಪಚರಿಸುತ್ತಿರುವಲ್ಲಿ, ಪುರೋಹಿತಸ್ತ್ರೀಲಕ್ಷಣಜ್ಞರು ಮಧುಪರ್ಕಾದಿಗಳನ್ನು ಸ್ವೀಕರಿಸುವುದನ್ನು ಮರೆತು, ಉನ್ಮಾದಿನಿಯ ಮುಖವನ್ನೂ, ಗತಿವಿಶೇಷಗಳನ್ನೂ, ಪಶ್ಚಾತ್ಪುರೋಭಾಗಾಂಗಗಳನ್ನೂ ನೋಡುತ್ತ, ಅವಳು ಜಲಿಸಿದ ಕಡೆಗೇ ತಮ್ಮ ದೃಷ್ಟಿಗಳನ್ನೂ ಚಲನಗೊಳಿಸುತ್ತ, ಕ್ಷಣೇ ಕ್ಷಣೆ ಆಶ್ಚರ್ಯಪಡುತ್ತ, ಒಂದೊಂದು ವೇಳೆ ಅವಳನ್ನೇ ನೋಡುತ್ತ, ಸೂತ್ರಪ್ರತಿಮೆಗಳಂತಾದರು. ಇದನ್ನು ನೋಡಿದ ಕಿರೀಟವತ್ಸನು:—"ಇವಳನ್ನು ಇವರ ದೃಷ್ಟಿಪಾತದಿಂದ ದೂರಗೊಳಿಸಿದ ಹೊರತೂ ಇವರು ಸ್ವಸ್ಥರಾಗುವುದಿಲ್ಲ!" ಎಂದು ನಿಶ್ಚಯಿಸಿ, ಉನ್ಮಾದಿನಿಯನ್ನು ಕುರಿತು:— "ವತ್ಸೆ! ಅದೇಕೋ ನಿಮ್ಮ ಜನನಿಯು ಕರೆದಳು; ಹೋಗಿ ಕೇಳು." ಎಂದು ಹೇಳಲು, ಉನ್ಮಾದಿನಿಯು ಒಳಕ್ಕೆ ಹೊರಟು ಹೋದ ತರುವಾಯ ಆದ್ವಿಜರನ್ನು ಕುರಿತು ದೈನ್ಯದಿಂದ:—"ಪೂಜ್ಯರೆ! ಇದೇಕೆ ಮಧುಪರ್ಕಾದಿಗಳನ್ನು ಸ್ವೀಕರಿಸಲೇ ಇಲ್ಲವು? ಈ ಕುವರಿಯು ಇನ್ನೂ ಬಾಲಿಕೆಯಾಗಿರುವುದರಿಂದ ಉಪಚರಿಸುವ ಕ್ರಮವು ತಿಳಿಯದೇ ಇರಬಹುದು; ಲೋಪವೇನಾದರೂ ಇರ್ದಲ್ಲಿ ಕ್ಷಮಿಸಿ ಎನ್ನನ್ನು ಕಾಪಾಡಬೇಕು; ನಾನೇ ತಮ್ಮ ಪರಿಚರ್ಯೆಗೆ ಸಿದ್ಧನಾಗಿರುವೆನು; ತಮ್ಮ ಇಚ್ಛೆಯನ್ನು ತಿಳುಹಬೇಕು." ಎಂದು ಪ್ರಾರ್ಥಿಸಿದನು.

ಇದನ್ನು ಕೇಳಿದ ಪುರೋಹಿತಸ್ತ್ರೀಲಕ್ಷಣಜ್ಞರು, ತೃಪ್ತಿಯನ್ನು

ರಾಜಪುರೋಹಿತಸ್ತ್ರೀಲಕ್ಷಣಜ್ಞರು ಕನ್ನೆಯಾದುನ್ಮಾದಯನ್ತ್ರಿಯ ರೂಪರೇಖಾ
ದಿಗಳನ್ನು ನೋಡಿ ಬೆರಗಾಗುವಿಕೆ.

ನೀತಿ :—ಸೌಂದರ್ಯವು ವಿವೇಕವನ್ನು ಮಂಕುಗೊಳಿಸುವುದು.

The royal priest and the palmister were struck with wonder at the ravishing beauty of Unmadayanti, the proposed wife of the king.

MORAL : -Beauty deludes knowledge. (PAGE 26)

ನಟಿಸುತ್ತ:– "ಕಿರೀಟವತ್ಸನೆ! ಹಾಗೆ ಶಂಕಿಸದಿರು; ನಾವಾಕನ್ಯೆಯ ವಿನಯೋಪಚಾರಗಳಿಂದ ಸಂತುಷ್ಟರಾದೆವು; ಇನ್ನೂ ದೇವವಂದನಾದಿ ನಿತ್ಯಕರ್ಮವನ್ನು ಆಚರಿಸಿಲ್ಲ; ಆದಕಾರಣ ಈಗ ಫಲಾದಿಗಳಂ ಭಕ್ಷಿಸಲು ಯತ್ನವಿಲ್ಲ. ಅಂತೂ ನಾವು ಬಂದ ಕಾರ್ಯವಾಯಿತು; ನಾವಿನ್ನು ಹೊರಡುವೆವು; ನಿನಗೆ ಮಂಗಳವಾಗಲಿ." ಎಂದು ಆಶೀರ್ವದಿಸಿ ಫಲ ತಾಂಬೂಲಗಳನ್ನು ಸ್ವೀಕರಿಸಿ ಅಲ್ಲಿಂದ ತೆರಳಿದರು.

ಮೂರನೆಯ ಸಂಧಿ.

PRIESTHOOD

ಪೌರೋಹಿತ್ಯ.

ಬಳಿಕ ಸ್ತ್ರೀಲಕ್ಷಣಜ್ಞನು ಪುರೋಹಿತನೊಡನೆ ಮನೆಯಿಂದ ಹೊರಟು ರಾಜಬೀದಿಯಲ್ಲಿ ಬರುತ್ತ ಅವನನ್ನು ಕುರಿತು ಆಶ್ಚರ್ಯದಿಂದ:– "ಮಿತ್ರನೆ! ಏನುಹೇಳಲಿ! ನಾನು ಇದುವರೆಗೆ ಅನೇಕ ಕನ್ಯೆಯರನ್ನು ಪರೀಕ್ಷಿಸಿರುವೆನು! ಆರಲ್ಲಿಯೂ ಈರೀತಿಯಾದ ರೂಪಾತಿಶಯವು ಕಂಡುಬರಲೇ ಇಲ್ಲವು! ಸಾಮಾನ್ಯವಾಗಿ ಸ್ತ್ರೀಯರಲ್ಲಿ ವರ್ಣರಮ್ಯತೆಯು ಇರ್ದರೂ ವಕ್ರಾಂಗದೋಷಗಳಿರುವುವು! ಉಪಾಂಗ ಸಾಮರಸ್ಯಗಳಿರ್ದರೂ ಕುವರ್ಣದೋಷವಿರುವುದು! ಇವೆರಡೂ ನಿರ್ದೋಷವಾಗಿರ್ದರೆ ವಕ್ರಗಮನಾದಿ ದುಶ್ಚೇಷ್ಟೆಗಳಿರುವುವು! ಹಾಗೆ ಇವೆಲ್ಲವೂ ಸಮಂಜಸವಾಗಿರ್ದರೆ ಕುರೇಖಾದೋಷವಾದರೂ ಇರ್ದೇ ಇರುವುದು! ಆವದೋಷವೂ ಇಲ್ಲದೆ ಶುಭಲಕ್ಷಣಗಳೇ ಇರುವುದು ಅತಿದುರ್ಲಭವು! ಹಾಗೆ ಕೋಟಿಗೋರ್ವಳಲ್ಲಿ ಕಂಡುಬಂದರೂ ಆಲ್ಲಿ ದುಃಸ್ವಭಾವ ದುರ್ಗುಣಂಗಳಾದರೂ ಇರ್ದೇ ಇರುವುವು! ನಾನೆಷ್ಟುಸೂಕ್ಷ್ಮವಾಗಿ ಪರೀಕ್ಷಿಸಿ ನೋಡಿದರೂ ಈ ಕನ್ಯೆಯಲ್ಲಿ ಈಷತ್ತಾದರೂ ದೋಷವೇ ಕಾಣದು! ದೇವಮಹಿಳೆಯರಿಗೂ ಸಂಪೂರ್ಣವಾದ ರೂಪಸಂಪತ್ತಿ

ಯು ಇಲ್ಲವೆಂದು ಸಾಮುದ್ರಿಕಶಾಸ್ತ್ರದಲ್ಲಿ ಹೇಳಲ್ಪಟ್ಟಿರುವುದಲ್ಲದೆ, ಶ್ರೀ, ವಾಣೀ, ಗಿರಿಜೆಯರು ಮಾತ್ರವೆ ನಿರ್ದುಷ್ಟರೂಪವತಿಯರೆಂದು ಹೇಳಲ್ಪಟ್ಟಿರುವುದು! ಆ ಗುಣಗಳೆಲ್ಲವೂ ಈ ಕನ್ಯೆಯಲ್ಲಿ ಸಂಪೂರ್ಣವಾಗಿ ಇರುವುದರಿಂದ ಇವಳು ಸಾಕ್ಷಾತ್ ಆ ಪರಾಪರಶಕ್ತಿಯೇ ಎಂದು ಹೇಳಬೇಕಾಗಿಹುದು ! ಮುಖ್ಯವಾಗಿ ಇವಳನ್ನು ಪರಿಗ್ರಹಿಸುವ ಎಮ್ಮ ಮಹಾರಾಜನು ಧನ್ಯನೇ ಸರಿ! ಆದರೆ ಇಂತಹ ಕನ್ಯಾಕುಲರತ್ನವನ್ನು ಕೊಡೆಯುವುದರಿಂದ ಇತರ ರತ್ನಾದಿಜಡಾಭರಣಗಳನ್ನು ಲಕ್ಷಿಸುವುದಿಲ್ಲ ; ಮತ್ತು ಇವಳ ಪರಿಚಯಸುಖಾನುಭವವನ್ನೇ ಮುಖ್ಯಕರ್ತವ್ಯವೆಂದು ಭಾವಿಸುವನೇ ಹೊರತು ಮತ್ತಾವಕಾರ್ಯವನ್ನೂ ಗಮನಿಸುವುದಿಲ್ಲ! ಇದನ್ನು ನಿಶ್ಚಯವೆಂದು ತಿಳಿ! ''

ಇದನ್ನು ಕೇಳಿದ ಪುರೋಹಿತನು, ಪರಮವಿಸ್ಮಿತನಾಗಿ ತನ್ನಲ್ಲಿ ತಾನೇ ಇಂತು ಮಾತಾಡಿಕೊಂಡನು:-''ಈತನು ಹೇಳುವುದೆಲ್ಲವೂ ನಿಜವೇ ಅಹುದು ! ಗತವಯಸ್ಕರೂ ಜಿತೇಂದ್ರಿಯರೂ ಪ್ರಪಂಚದ ವಿಹಿತಾವಿಹಿತಗಳನ್ನರಿತವರೂ ಆಗಿರುವ ನಾವುಗಳೇ, ಈ ಕನ್ಯೆಯ ಸೌಂದರ್ಯಾತಿಶಯದಿಂದ ವೈವರ್ಣ್ಯವನ್ನೂ ವಿಸ್ಮೃತಿಯನ್ನೂ ಹೊಂದಿದುದು ಮಾತವಲ್ಲದೆ, ಮನುಷ್ಯರಾಗಿದ್ದರೂ ನಾವಾಕನ್ಯೆಯನ್ನು ನೋಡುವಾಗ್ಗೆ ಹರಿಣಮರ್ಕಟಗಳ ಸಹಜಚೇಷ್ಟೆಗಳನ್ನು ದೃಜ್ಮನಗಳೊಳ್ ಧರಿಸಿದೆವು! ಹೀಗಿರುವಲ್ಲಿ ಯುವಕನಾಗಿಯೂ ಸಕಲಸಾಹಾಯ್ಯಸಂಪತ್ತಿಗಳಿಂದೊಡಗೂಡಿದವನಾಗಿಯೂ, ವಿಭವೈಶ್ವರ್ಯಸಮೃದ್ಧನಾ[illegible]ಯೂ, ಭೋಗಾಸ್ಪದನಾಗಿಯೂ, ರಜೋಗುಣಪ್ರಧಾನನಾಗಿಯೂ, ಇ[illegible] ಎಮ್ಮ ಮಹಾರಾಜನು-ಈ ಸೌಂದರ್ಯರಾಶಿಯನ್ನು ನೋಡಿದವನಾದರೆ, ತತ್ ಕ್ಷಣವೇ ಇವಳನ್ನು ಪರಿಗ್ರಹಿಸಿ, ಇವಳ ಕೇಳಿಗಳಲ್ಲಿಯೇ ಮಗ್ನನಾಗಿ, ಧರ್ಮಾರ್ಥಗಳಲ್ಲಿ ಉಪೇಕ್ಷೆಯನ್ನು ತಳೆದು, ಕಾಮೈಕಪರಾಯಣನಾಗುವುದರಿಂದ-ರಾಜ್ಯಕ್ಕೂ ಪ್ರಜೆಗಳಿಗೂ ವಿಪದುತ್ಪಾತಗಳು ಪ್ರಾಪ್ತವಾಗಿ ರಾಜ್ಯವೇ ಹೀನಸ್ಥಿತಿಗೆ ಬರುವುದು ! ಆದಕಾರಣ ಇವಳನ್ನು

ರಾಜನಿಗೆ ಸೇರಿಸುವುದು ಅಯುಕ್ತವು!" ಎಂದು ಆಲೋಚಿಸಿದ ಬಳಿಕ ಸ್ತ್ರೀಲಕ್ಷ್ಮಣಜ್ಞನನ್ನು ಕುರಿತು:-" ಮಿತ್ರನೇ! ಈ ಕನ್ಯೆಯನ್ನು ಮಹಾ ರಾಜನಿಗೆ ಸೇರಿಸುವುದರಿಂದ ರಾಜ್ಯಕ್ಕೇ ಹಾನಿಯುಂಟಾಗುವಂತೆ ಎನಗೆ ತೋರುವುದು; ಈ ವಿಷಯದಲ್ಲಿ ನಿನ್ನ ಅಭಿಪ್ರಾಯವೇನು?" ಎಂದು ಕೇಳಿದನು.

ಈರೀತಿ ಬೆಸಗೊಳ್ಳಲ್ಪಟ್ಟ ಸ್ತ್ರೀಲಕ್ಷ್ಮಣಜ್ಞನು ಆಶ್ಚರ್ಯದಿಂದ:- "ಇದೇನೈ ಈರೀತಿ ಶಂಕಿಸುವೆ? ಲಕ್ಷ್ಮ್ಯಯನ್ನು ವಿಷ್ಣುವೂ, ಗೌರಿ ಯನ್ನು ಶಂಕರನೂ, ವಾಣಿಯನ್ನು ಪದ್ಮಜನೂ, ಪಡೆದುದರಿಂದಲ್ಲವೆ- ಅವರಿಗೆ ಲಕ್ಷ್ಮೀಪತಿ ಗೌರೀಪತಿ ವಾಣೀಪತಿಗಳೆಂಬ ಮಂಗಳನಾಮಗ ಳುಂಟಾಗಿ, ಈ ದಂಪತಿಗಳ ವಾಸಪುರಿಗಳು ವೈಕುಂಠ ಕೈಲಾಸ ಸತ್ಯ ಲೋಕಗಳೆಂಬ ಪುಣ್ಯಭೂಯಿಷ್ಠವಾದ ಕೀರ್ತಿಯನ್ನು ಪಡೆದು, ಇವು ಗಳ ನಿವಾಸಸುಖವನ್ನು ಅನುಭವಿಸಬೇಕೆಂಬ ಕುತೂಹಲವನ್ನು ಸರ್ವ ಲೋಕದವರಿಗೂ ಉಂಟುಮಾಡಿದುವು? ಅದರಂತೆಯೇ ನಿರ್ದುಷ್ಟನಾದ ಎಮ್ಮ ಮಹಾರಾಜನು ಶಕ್ತಿತ್ರಯಸ್ವರೂಪಿಣಿಯಾದ ಈ ಕನ್ಯೆಯನ್ನು ಸೇರಿ ಸುಖಿಸುವುದರಿಂದ ಎಮ್ಮ ಪುಣ್ಯಭೂಮಿಯಾದ ಭರತಖಂಡಕ್ಕೂ ಅದರ ರಾಜಧಾನಿಯಾದ ಎಮ್ಮೀರಾಜಗೃಹಕ್ಕೂ ಮಹಾಕೀರ್ತಿಯುಂ ಟಾಗುವುದಿಲ್ಲವೆ?" ಎಂದು ಹೇಳಿದನು.

ಪುನಃ ಪುರೋಹಿತನು ನಗುತ್ತ:-" ಮಿತ್ರನೇ! ನೀನು ಹೇಳಿದುದೆ ಲ್ಲವೂ ನಿಜವೇ ಆಹುದು. ಆದರೆ ತ್ರಿಮೂರ್ತಿಗಳಲ್ಲಿ ಓರೋರ್ವರನ್ನು ಒಂದೊಂದು ಶಕ್ತ್ಯಂಶವು ಸೇರಲಾಗಿ ಓರೋರ್ವರೊಂದೊಂದು ಸ್ವಪರ ಹಾನಿಯನ್ನುಂಟುಮಾಡುವವರಾದರು; ಹೀಗಿರುವಲ್ಲಿ ಶಕ್ತಿತ್ರಯಾಂಶ ವನ್ನೂ ಒಳಗೊಂಡಿರುವಳೆಂದು ನೀನು ಹೇಳಿದ ಈ ಕನ್ಯೆಯನ್ನು ಮಹಾ ರಾಜನು ಸೇರಿದುದೇ ಆದರೆ, ತ್ರಿಗುಣವಾಗಿ ಸ್ವಪರಹಾನಿಗಳನ್ನು ಉಂಟುಮಾಡುವವನಾಗಬಹುದೆಂಬ ಶಂಕೆಯುಂಟಾಗುವುದು. ಇದ ಕ್ಕೇನು ಹೇಳುವೆ?" ಎಂದು ಹೇಳಲು ಸ್ತ್ರೀಲಕ್ಷ್ಮಣಜ್ಞನು ಕುತೂಹಲ

ದಿಂದ:– " ಇದೇನೈ ಈರೀತಿ ಸಂಶಯಪಡುವೆ ! ತ್ರಿಮೂರ್ತಿಗಳು ಮಾಡಿದ ಸ್ವಪರಹಾನಿಗಳಾವುವು ? " ಎಂದು ಪ್ರಶ್ನಿಮಾಡಲು, ಪುರೋಹಿತನು ನಗುತ್ತ:—" ಹಾಗಾದರೆ ಹೇಳುವೆನು ಕೇಳು–ಮಹಾ ವಿಷ್ಣುವು ಪ್ರಪಂಚವನ್ನೆಲ್ಲ ಧರ್ಮಸಂಮತವಾಗಿ ಪರಿಪಾಲಿಸುತ್ತ ಪುರುಷೋತ್ತಮನೆಂಬ ವಿಖ್ಯಾತಿಯನ್ನು ಪಡೆದಿದ್ದರೂ, ಸ್ವಲ್ಪಕಾಲ ಸ್ತ್ರೀತ್ವ (ಮೋಹಿನೀವೇಷ) ವನ್ನು ಧರಿಸಲಾಗಿ ಅನೇಕ ಪ್ರಾಣಿಗಳ ನಾಶಕ್ಕೆ ಕಾರಣಭೂತನಾದನು ; ಮತ್ತು ಸ್ತ್ರೀಕಾಂಕ್ಷೆಯಿಂದ ಅನೇಕಜನರ ದ್ವೇಷಕ್ಕೆ ಪಾತ್ರನಾಗಿ, ತನ್ನ ರಾಜಧಾನಿಯನ್ನು ಬಿಟ್ಟು ದಿಕ್ಕೆಟ್ಟು ಓಡಿ ಹೋಗಿ, ಪ್ರಾಣಸಂರಕ್ಷಣಾರ್ಥವಾಗಿ ದ್ವೀಪಾಂತರವಾಸಸಂಕಟವನ್ನೂ ಅನುಭವಿಸಿದನು. ಇನ್ನು ಶಂಕರನ ವಿಷಯವನ್ನು ಕೇಳು–ಶಿವನು ಕೈಲಾಸವಾಸಿಗಳನ್ನು ಧರ್ಮಸಮ್ಮತವಾಗಿ ಪರಿಪಾಲಿಸಿಕೊಂಡು, ಸರ್ವೇಶ್ವರನೆಂಬಪ್ರತೀತಿಯನ್ನು ಪಡೆದಿದ್ದರೂ, ಸ್ತ್ರೀಸಂಪರ್ಕವಾದಮೇಲೆ ತನ್ನ ಈಶ್ವರತ್ವಕ್ಕೆ ದೂರನಾಗಿ, ಸ್ತ್ರೀತಂತ್ರಕ್ಕಧೀನನಾಗಿ, ಸ್ತ್ರೀವಿಯೋಗಜನ್ಯ ದುಃಖದಿಂದ ಚಿತ್ತಶಾಂತಿಯನ್ನು ಕಳೆದುಕೊಂಡು, ರೌದ್ರಾವೇಶದಿಂದ ತನ್ನ ಮಾವನನ್ನೇ ಕೊಂದು ಬಿಟ್ಟುದಲ್ಲದೆ, ತನ್ನ ದಿವ್ಯರಾಜಧಾನಿಯನ್ನು ಶ್ಮಶಾನವನ್ನಾಗಿ ಮಾಡಿ, ತಾನೂ ಭಿಕ್ಷುಕನಾಗಿ ತಿರಿದು ತಿಂದನು. ಬಳಿಕ ಕೆಲಕಾಲ ಸ್ತ್ರೀಸಂಪರ್ಕವು ದೂರವಾಗಲು ಪ್ರಶಾಂತನಾಗಿ ದಕ್ಷಿಣಾಮೂರ್ತಿ (ಜ್ಞಾನಮೂರ್ತಿ) ಎಂಬ ಉದ್ದಾಮಕೀರ್ತಿಯನ್ನು ಪಡೆದು ಜಗದ್ವಂದ್ಯನಾಗಿದ್ದರೂ, ಪುನಶ್ಚ ಸ್ತ್ರೀಕಾಮವುಂಟಾಗಲು ರೋಷಾವೃತನಾಗಿ, ಸ್ತ್ರೀಭೋಗಪ್ರೇರಕನನ್ನು ಸುಟ್ಟು ಭಸ್ಮಮಾಡಿದನು. ಅಷ್ಟರಲ್ಲಿಯೇ ಬಾಲಯುವತಿಯು ಅರ್ಪಿಸಲ್ಪಡಲು ಆ ಕ್ಷಣವೇ ಕೋಪತಾಪಾದಿಗಳನ್ನೆಲ್ಲ ನೀಗಿ, ಹಸನ್ಮುಖನಾಗಿ, ಸ್ತ್ರೀಗೆ ಆವಾಗಲೂ ಮೈಗೊಟ್ಟುಕೊಂಡಿರುತ್ತ, ಲೋಕಹಿತಕರವಾದ ತನ್ನ ಕರ್ತವ್ಯಗಳೆಲ್ಲದರಲ್ಲಿಯೂ ಸಂಪೂರ್ಣವಾಗಿ ಉಪೇಕ್ಷೆಯನ್ನು ತಳೆದು, ಸ್ತ್ರೀಭೋಗದಲ್ಲಿಯೇ ಮಗ್ನನಾಗಿರುತ್ತಿದ್ದನು. ಇದ್ಯಾವ ವಿಷಯವಿದು ಇನ್ನೂ ಕೆಲ

ಜನೀಯವಾದುದು–ಸತ್ಯಲೋಕವಾಸಿಗಳನ್ನು ಧರ್ಮಸಂಮತವಾಗಿ ಪಾಲಿಸುತ್ತ, ಲೋಕವಸ್ತುಗಳನ್ನೆಲ್ಲ ಸೃಷ್ಟಿಸಿ ಅವುಗಳ ತಾರತಮ್ಯಾನುಸಾರವಾಗಿ ವೃತ್ತಿಗಳನ್ನೂ ಸಂಯೋಜನಗಳನ್ನೂ ನಿಯಮಿಸುತ್ತಿರ್ದು, ತಾನು ನಿರ್ಮಿಸಿದ ಅತಿಸುಂದರವಾದ ಒಂದು ವಸ್ತುವು ಸ್ತ್ರೀಯಾಗಿರ್ದುದರಿಂದ ಮೋಹಪರವಶನಾಗಿ, ಪಿತೃಪುತ್ರಿಯೆಂಬ ಸಂಬಂಧಮರ್ಯಾದೆಯನ್ನು ಉಲ್ಲಂಘಿಸಿ, ತನ್ನಿಂದ ನಿರ್ಮಿಸಲ್ಪಟ್ಟ ಸ್ತ್ರೀಯನ್ನು ತಾನೇ ವಿವಾಹಮಾಡಿಕೊಂಡನು. ಇಷ್ಟೇ ಅಲ್ಲದೆ, ತಾನು ಒಹುಸೂಕ್ಷ್ಮವಿವೇಚನೆಯುಳ್ಳವನಾಗಿರ್ದರೂ ಸ್ತ್ರೀಸಮ್ಮೇಳನದಲ್ಲಿ ವಿಭ್ರಾಂತಿಯನ್ನು ಹೊಂದಿ, ಪರಸತಿಯನೈದಲಿಚ್ಛಿಸಿ ತನ್ನೊಂದುತಲೆಯನ್ನೇ ಕಳೆದುಕೊಂಡನು. ಮತ್ತು ಇವುಗಳೆಲ್ಲಕ್ಕಿಂತಲೂ ಅತಿವಿಚಿತ್ರವಾದ ಮತ್ತೊಂದು ವಿಷಯವನ್ನು ಹೇಳುವೆನು ಕೇಳು– ಈ ತ್ರಿಮೂರ್ತಿಗಳು ಸ್ವಧೈರ್ಯಸ್ವತಂತ್ರತಾವಷ್ಟಂಭರಾಗಿರ್ದರೂ, ತಂತಮ್ಮ ಸ್ತ್ರೀಯರ ಮಧುರಾಲಾಪತಂತ್ರಕ್ಕೆ ಅಧೀನರಾಗಿ,ಮುನಿಪತ್ನಿಯ ಪಾತಿವ್ರತ್ಯಕ್ಕೆ ಭಂಗವನ್ನುಂಟುಮಾಡುವುದರಿಂದ ತಮ್ಮ ಈಶ್ವರತ್ವವನ್ನು ವ್ಯಕ್ತಗೊಳಿಸಿ ತಮ್ಮ ಪತ್ನಿಯರ ಪ್ರೇಮವನ್ನಾರ್ಜಿಸಬೇಕೆಂಬ ಕುತೂಹಲದಿಂದ ತಮ್ಮ ವೈಲಕ್ಷಣ್ಯವನ್ನೂ, ಆ ಮುನಿಪತ್ನಿಯಲ್ಲಿ ಕೃತ್ರಿಮವನ್ನೆಸಗಲುದ್ಯುಕ್ತರಾಗಿ ತಮ್ಮ ಯಾವಚ್ಛಕ್ತಿಯನ್ನೂ ಕಳೆದುಕೊಂಡು, ಅಜ್ಞಾನಾವೃತವಾದ ಶೈಶವಾವಸ್ಥೆಯನ್ನು ಅನುಭವಿಸಿದರು. ಲೋಕವಿಖ್ಯಾತರೂ ಸರ್ವಜ್ಞರೂ ಸರ್ವತಂತ್ರಸ್ವತಂತ್ರರೂ ಆದ ಆ ತ್ರಿಮೂರ್ತಿಗಳೇ ಸ್ತ್ರೀತಂತ್ರಕ್ಕೆ ಅಧೀನರಾಗಿ ಹೋಗಿರುವಲ್ಲಿ ಎಮ್ಮ ಮಹಾರಾಜನ ಪಾಡಿನ್ನೇನು ? ಅದಲ್ಲದೆ

[೧೭. ತಾ:–ಇವಳು ತನ್ನನ್ನು ನೋಡಿದಮಾತ್ರದಿಂದಲೇ (ಮಹಾತಪಸ್ವಿಗಳಾದ) ಮುನಿಗಳ (ಆತ್ಮ) ಸಿದ್ಧಿಕಾರ್ಯಗಳಿಗೂದರೂ ವಿಘ್ನವನ್ನುಂಟುಮಾಡಲು ಸಮರ್ಥಳಾಗಿರುವಲ್ಲಿ, ಇಂದ್ರಿಯತೃಪ್ತಿಕರವಾದ ವಸ್ತುಗಳಲ್ಲಿಯೇ ದೃಷ್ಟಿಯುಳ್ಳ ಯುವಕನಾದ ಮತ್ತು ಸುಪ್ರಿಯಾದ ಎಮ್ಮ ಮಹಾರಾಜನ ಪಾಡೇನು ?]

ಶ್ಲೋ॥ ಇಹಂ ಹಿ ಸಂದರ್ಶನಮಾತ್ರಕೇಣ ಕುರ್ಯಾನ್ಮುನೀನಾಮಪಿ ಸಿದ್ಧಿವಿಘ್ನಮ್ ।
ಪ್ರಾಗೇವ ಭಾವಾರ್ಪಿತದೃಷ್ಟಿವೃತ್ತೇರ್ಯೂನಃ ಕ್ಷಿತೀಶಸ್ಯ ಸುಖೇ ಸ್ಥಿತಸ್ಯ ॥೧೭॥

ಇದನ್ನು ಕೇಳಿದ ಸ್ತ್ರೀಲಕ್ಷಣಜ್ಞನು:—"ಮಿತ್ರನೇ! ಎಲ್ಲಿಯೋ ಪುರಾಣಗಳ ಮಾತುಗಳನ್ನು ನಿಜವೆಂದು ನಂಬಿಕೊಂಡು ಈರೀತಿ ವಿವಾಹಕ್ಕೆ ವಿಘ್ನವನ್ನುಂಟುಮಾಡಬಾರದು. ಏಕೆಂದರೆ ಎಮ್ಮ ಮಹಾರಾಜನು ದೋಷಿಯೂ ಅಲ್ಲ; ಕಾಮುಕನೂ ಅಲ್ಲ. ಹಾಗೆ ಒಂದು ವೇಳೆ ಅವನು ಕಾಮದಲ್ಲಿಯೇ ಮಗ್ನನಾದರೆ ಅಗ್ಗೆ ಸರಿಯಾದ ಬುದ್ಧಿವಾದವನ್ನು ಹೇಳೋಣ." ಎಂದು ಹೇಳಲು ಪುರೋಹಿತನು ನಗುತ್ತ ಇಂತೆಂದನು:-"ನಿನಗೆ ಇನ್ನೂ ಪ್ರಪಂಚಾನುಭವವು ಸಾಲದೆಂದು ತೋರುವುದು. ಹಾಗಾದರೆ ಪುರಾಣೋಕ್ತಿಗಳು ಸುಳ್ಳೇ? ಒಂದುವೇಳೆ ಪುರಾಣಗಳಲ್ಲಿ ನಿನಗೆ ನಂಬಿಕೆ ಇಲ್ಲದಿರುವ ಪಕ್ಷಕ್ಕೆ ಎನ್ನೀ ಪ್ರಶ್ನೆಗಳಿಗೆಲ್ಲ ಉತ್ತರವನ್ನು ಹೇಳು-" ಅಂತರಿಕ್ಷದಿಂದ ಬೀಳುವ ಮಳೆಯ ನೀರನ್ನು ಆವಾಗಲಾದರೂ ಪಾನಮಾಡಿರುವೆಯಾ?" ಸ್ತ್ರೀಲ-"ಪಾನಮಾಡಿರುವೆನು." ಪುರೋ:-"ಅದು ಹೇಗಿರುವುದು ? ಮತ್ತು ಎಂತಹ ರುಚಿಯನ್ನುಂಟುಮಾಡುವುದು?" ಸ್ತ್ರೀಲ:-"ನಿರ್ಮಲವಾಗಿಯೂ ಮಧುರರುಚಿಯುಳ್ಳದಾಗಿಯೂ ಇರುವುದು." ಪುರೋ:-"ಒಳ್ಳೆಯದು, ಅದು ಭೂಸಂಪರ್ಕವಾದಮೇಲೆ ಎಂತಾಗುವುದು?" ಸ್ತ್ರೀಲ:-"ತನ್ನ ನೈರ್ಮಲ್ಯವನ್ನೂ ಸಹಜಗುಣವನ್ನೂ ಕಳೆದುಕೊಂಡು, ತಾನು ಪ್ರವೇಶಿಸಿದ ಭೂಮಿಯ ಗುಣವನ್ನೂ ವರ್ಣವನ್ನೂ ಅವಲಂಬಿಸುವುದು." ಪುರೋ:—(ತೃಪ್ತಿಯಿಂದ) ಅದರಂತೆಯೇ ಪುರುಷರು ಸ್ವಭಾವತಃ ಶುದ್ಧರಾಗಿಯೂ ಸ್ವತಂತ್ರರಾಗಿಯೂ ಇರ್ದರೂ, ಪ್ರಕೃತಿಸ್ವರೂಪೆಯರಾದ ಸ್ತ್ರೀಯರ ಸಂಪರ್ಕವನ್ನು ಪಡೆದೊಡನೆಯೇ, ತಮ್ಮ ಸಹಜಗುಣವನ್ನು ಬಿಟ್ಟು ಪ್ರಾಕೃತತ್ವವನ್ನು ಅವಲಂಬಿಸಿ ಸ್ತ್ರೀಯರಿಚ್ಛಾನುಸಾರಿಗಳಾಗುವರು. ಮತ್ತು ಈ ಪ್ರಶ್ನೆಗೂ ಉತ್ತರವನ್ನು ಹೇಳು-ರೋಗವು ಪ್ರಾಪ್ತವಾದನಂತರ ಔಷಧವನ್ನು ಸೇವಿಸಿ ಸ್ವಸ್ಥರಾಗೋಣವೆಂಬುದು ಯುಕ್ತವೋ ಅಥವಾ ರೋಗವು ಪ್ರಾಪ್ತವಾಗುವುದಕ್ಕೆ ಮುಂಚೆಯೇ ಎಚ್ಚರಿಕೆಯಿಂದ ಇರುವುದು ಯುಕ್ತವೋ?" ಸ್ತ್ರೀಲ:-"ರೋಗಕ್ಕೆ ಅವಕಾಶಕೊಡದಂತೆ ಮುಂಚಿತವಾಗಿಯೇ

ಎಚ್ಚರಿಕೆಯಿಂದ ಇರುವುದೇ ಉತ್ತಮವು. ಪುರೋ:- (ತೃಪ್ತಿಯಿಂದ) "ಅದಕಾರಣದಿಂದಲೇ ಅಶುಭಸೂಚಕವಾದ ಈ ವಿವಾಹವನ್ನು ನೆರವೇರಿಸದಂತೆ ತಡೆಯುವುದೇ ಉತ್ತಮವು."

ಇದನ್ನು ಕೇಳಿದ ಸ್ತ್ರೀಲಕ್ಷಣಜ್ಞನು, ಪರಿಭವದಿಂದ ಖಿನ್ನನಾಗಿ ಪುನಃ ಪುರೋಹಿತನನ್ನು ಕುರಿತು ನಮ್ರಭಾವದಿಂದ:-" ಮಿತ್ರನೇ! ನೀನು ಪ್ರಾಜ್ಞನೇ ಅಹುದು. ಆದರೂ ಎನಗೆ ಇನ್ನೂ ಕೆಲವು ಸಂಶಯಗಳಿರುವುವು; ದಯವಿಟ್ಟು ಅವನ್ನು ಸಕಾರಣವಾದ ಜಿಜ್ಞಾಸದಿಂದ ಪರಿಹರಿಸು- ಮನುಷ್ಯನು ಎಷ್ಟು ಎಚ್ಚರಿಕೆಯಿಂದಿರ್ದರೂ ರೋಗಾದ್ಯುಪದ್ರವಗಳೂ ಉದ್ದೇಶಭಂಗಗಳೂ ಉಂಟಾಗುವುವಲ್ಲ; ಆಗ್ಗೆ ಮನುಷ್ಯಪ್ರಯತ್ನದಿಂದೇನು ಪ್ರಯೋಜನ? ಪುರೋ:-(ಪ್ರಸನ್ನನಾಗಿ) "ಮಿತ್ರನೇ! ನಾನು ಹೇಳುವುದನ್ನು ಸಾವಧಾನಚಿತ್ತನಾಗಿ ಅವಧರಿಸು-ಲೋಕದಲ್ಲಿ ಜನ್ಮಿಸಿದ ಪ್ರತಿಯೊಬ್ಬನಿಗೂ ಮೃತಿಯು ಸಿದ್ಧವೆಂಬುದು ಎಲ್ಲರಿಗೂ ತಿಳಿದೇ ಇರುವುದು. ಹೀಗಿರ್ದರೂ ರೋಗಾದ್ಯುಪದ್ರವಗಳು ಪ್ರಾಪ್ತವಾಗದಂತೆ ಸರ್ವರೂ ಸಾಧ್ಯವಾದಮಟ್ಟಿಗಾದರೂ ಎಚ್ಚರಿಕೆಯಿಂದಲೇ ಇರುವರು. ಆದರೂ ದೈವಿಕ ಸಂಬಂಧವಾದ ಅಥವಾ ಭೌತಿಕಸಂಬಂಧವಾದ ಸಂಯೋಜನದಿಂದ ಉಪದ್ರವಗಳುಂಟಾಗುವುವು. ಆಗ್ಗೆ 'ಹೇಗಿರ್ದರೂ ಮೃತಿಯು ಸಿದ್ಧವಾಗಿರುವಲ್ಲಿ ನಮ್ಮ ಪ್ರಯತ್ನವೇಕೆ?' ಎಂದು ತಟಸ್ಥರಾಗದೆ ಅದರ ನಿವಾರಣೆಗಾಗಿ ಸಾಧ್ಯವಾದ ಸಾಹಸಗಳನೆಲ್ಲ ಪ್ರಯೋಗಿಸಿ, ಸುಖಿಗಳಾಗಲು ಬಯಸಿಯೇ ಬಯಸುವೆವು. ಈರೀತಿಯಾದ ಉದ್ದೇಶಗಳಿಂದಲೇ ಈ ಲೋಕಯಾತ್ರೆಯು ನಡೆಯುತ್ತಿಹುದು. ಹಾಗಿಲ್ಲದೇ ಇರ್ದರೆ ಲೋಕವು ಶೂನ್ಯವಾಗಿಯೇ ಹೋಗುವುದು. ಆದರೆ, ಉದ್ದೇಶವು ಸ್ವಪರಹಿತವನ್ನುಂಟುಮಾಡತಕ್ಕುದಾಗಿರಬೇಕು. ಆಗ್ಗೆ ಒಂದುವೇಳೆ ನಾವುಮಾಡುವ ಪ್ರಯತ್ನಗಳು ದೇವಭೂತಗಳ ಸಮುಚಿತ್ವದಿಂದ ಉದ್ದಿಷ್ಟ ಫಲವನ್ನು ಉಂಟುಮಾಡಿದರೆ, ಆಗ್ಗೆ ಶ್ರಮವು ಸಾರ್ಥಕವಾಗಿ, ಮನಸ್ಸಿಗೆ ತೃಪ್ತಿಯೂ ಲೋಕದ ಸುಖಯಾತ್ರೆಗೆ ಸಾಹಾಯ್ಯವೂ ಆಗುವುವು. ಹಾಗಲ್ಲಪಕ್ಷೆ ಎರು

ದ್ಧವಾಗಿ ಪರಿಣಮಿಸದರೆ, ಆಗ್ಗೆ ಪ್ರಯತ್ನಹಾನಿಯೂ ಲೋಕಕ್ಕೆ ಅಸಾ ಹಾಯ್ಯವೂ ಉಂಟಾದರೂ ಕರ್ತವ್ಯಗಳನ್ನು ನಿರ್ವಂಚನೆಯಾಗಿ ಮಾಡಿದು ದರಿಂದ ಉಂಟಾಗುವ ಆತ್ಮತೃಪ್ತಿಯಾದರೂ ಲಭಿಸುವುದು. ಇದೂ ಆಲ್ಲದೆ ಒಂದುವೇಳೆ ಪ್ರಯತ್ನದಿಂದಲೂ ಕಾರ್ಯದಿಂದಲೂ ಸ್ವಹಾ ನಿಯು ಪ್ರಾಪ್ತವಾದರೂ, ಆಲ್ಲಿಗೂ ಅದು ಸುಖವನ್ನೇ ಉಂಟುಮಾ ಡುವುದು; ಹಾಗಲ್ಲದೆ ಪರಹಾನಿಯುಂಟಾದರೆ, ನಾವದಕ್ಕೆ ಹೊಣೆಗಾ ರರೂ ಅಲ್ಲ; ಮತ್ತು ಅದರಿಂದುಂಟಾಗುವ ದುಃಖಗಳು ನಮ್ಮನ್ನು ಲೇಪಿ ಸುವುದೂ ಇಲ್ಲ. ಏಕೆಂದರೆ ಉದ್ದೇಶವು ಒಳ್ಳೆಯದಾಗಿರುವುದು. ಇದ ರಂತೆಯೇ ನಾನೀ ವಿವಾಹಕ್ಕೆ ವಿಘ್ನವನ್ನುಂಟುಮಾಡುವುದರಿಂದ ಇತರ ರಿಗೆ ಹಾನಿಯುಂಟಾದರೂ ಎನ್ನುದ್ದೇಶವು ವಿಹಿತವಾದುದರಿಂದ ಆ ಪಾಪ ವು ಎನ್ನನ್ನು ಲೇಪಿಸುವುದಿಲ್ಲ; ಹಾಗೆ ಈ ಕಾರ್ಯದಿಂದ ಎನಗೇ ಹಾನಿ ಯುಂಟಾದಲ್ಲಿ ಅದನ್ನಾದರೂ ಅನುಭವಿಸುವೆನೇ ಹೊರತು, ಒಂದು ಕಾ ರ್ಯದಿಂದ ಒಬ್ಬನಿಗೆ ಮಾತ್ರ ಹಿತವುಂಟಾಗಿ ಉಳಿದ ಅನೇಕರಿಗೆ ಹಾನಿ ಯುಂಟಾಗುವುದಾಗಿದ್ದರೆ ಅಂತಹದನ್ನು ನಾನೂ ಮಾಡುವುದಿಲ್ಲ; ಇತ ರರು ಮಾಡಲು ಅವಕಾಶವನ್ನೂ ಕೊಡುವುದಿಲ್ಲ. ಏಕೆಂದರೆ, ನಾನು ರಾ ಜಪುರೋಹಿತನು.'' ಎಂದು ಹೇಳಿದನು.

ಇದನ್ನು ಕೇಳಿದ ಸ್ತ್ರೀಲಕ್ಷಣಜ್ಞನು ತವಕದಿಂದ:-" ಮಿತ್ರನೇ! ನೀನು ರಾಜಪುರೋಹಿತನಾಗಿರುವುದರಿಂದ ಈ ಅತಿಶಯವಾದ ರಾಜವಿ ವಾಹವನ್ನು ಮಾಡಿಸಿ ರಾಜನಿಂದ ಅಪಾರವಾದ ಸಂಭಾವನೆಯನ್ನು ಪಡೆ ಯಲು ಪ್ರಯತ್ನಿಸಬೇಕೇ ಹೊರತು ಈರೀತಿ ವಿವಾಹಕ್ಕೇ ವಿಘ್ನವನ್ನುಂ ಟುಮಾಡಬಹುದೆ ? ಅದಲ್ಲದೆ ವಿವಾಹಕಾರ್ಯಗಳನ್ನು ಸುಳ್ಳು ಹೇಳಿ ಯಾದರೂ ಆಗಮಾಡಿಸಬೇಕೆಂದು ಲೋಕರೂಢಿಯಿರುವುದಿಲ್ಲವೆ? " ಎಂದು ಹೇಳಲು ಪುರೋಹಿತನು ವಿಷಾದದಿಂದ :-" ಅಯ್ಯೋ! ಮಂದ ಮತಿಯೇ! ಸ್ವಲಾಭ ಸ್ವಕ್ಷೇಮ ಸ್ವಸುಖಗಳ ಮೇಲೆಯೇ ಗಮನವ ನ್ನಿಟ್ಟು, ತಮ್ಮ ಕಾರ್ಯದಿಂದ ಇತರರಿಗೆ ಉಂಟಾಗುವ ಹಾನಿ ದುಃಖಗ

ಳನ್ನು ಉಪೇಕ್ಷಿಸುವ ಉದರಭರಣೋದ್ಯೋಗತತ್ಪರರಾದ ನೀಚಪುರೋ ಹಿತರಂತೆ ಎನ್ನನ್ನೂ ಎಣಿಸಿದೆಯಾ? ಹಾಗಲ್ಲ ! ರಾಜನಿಗೂ ಮತ್ತವನ ಪ್ರಜೆಗಳಿಗೂ ಮುಂದುಂಟಾಗುವ ಹಾನಿಗಳನ್ನು ಸರ್ವಪ್ರಯತ್ನದಿಂದಲೂ ತಡೆದು, ಸುಖವನ್ನುಂಟುಮಾಡುವ ಕಾರ್ಯಗಳನ್ನೇ ಮಾಡುವ ವೃತ್ತಿಯು ಳ್ಳ 'ರಾಜ + ಪುರೋ + ಹಿತ' ನೆಂದು ತಿಳಿ! ರಾಜಪೌರೋಹಿತ್ಯವು ಸಾಮಾ ನ್ಯರಾದವರಿಂದ ಅಧಿಕರಿಸಲ್ಪಡತಕ್ಕ ವಿಷಯವಲ್ಲ. ಏಕೆಂದರೆ, ರಾಜಪ್ರಜೆ ಗಳೀರ್ವರಿಗೂ ಪುರೋಹಿತನೇ ಮಂತ್ರದೇಶಕನು; ಮತ್ತು ಪ್ರಜೆಗಳಾಚರಿ ಸುವ ಪಾಪಕಾರ್ಯಗಳ ಫಲಿತಾಂಶವು ರಾಜನನ್ನೂ, ರಾಜನ ದುರ್ನೀತಿ ದೋಷದ ದುಃಖವು ಪುರೋಹಿತನನ್ನೂ ಲೇಪಿಸುವುವು.'' ಎಂದು ಹೇಳಲು ಸ್ತ್ರೀಲಕ್ಷಣಜ್ಞನು ಆಶ್ಚರ್ಯಮಗ್ನನಾಗಿ, ಭಕ್ತಿಗೌರವಗಳಿಂದ ವಂದಿಸಿ:– "ಬ್ರಹ್ಮನ್ ! ಅಲ್ಪಪರಿಚಯದೋಷದಿಂದ ನಿನ್ನನ್ನು ಹೊಟ್ಟೆಹೊರದುಕೊ ಳ್ಳುವೊಂದನ್ನು ಮಾತ್ರವೇ ಒಲ್ಲ ಪುರೋಹಿತನೆಂದು ಭಾವಿಸಿರ್ದೆನು. ನೀನು ಅಂಥವನೆಂದಿಗೂ ಅಲ್ಲವು. ನೀನು ತ್ರಿಲೋಕಾಧಿಪತ್ಯವನ್ನು ಜೇಕಾ ದರೂ ನಿರ್ವಹಿಸಬಲ್ಲೆ. ನಿನ್ನನ್ನು ಆಚಾರ್ಯನನ್ನಾಗಿ ಪಡೆದಿರುವ ಎಮ್ಮ ಮಹಾರಾಜನೂ ಮತ್ತವನ ಪ್ರಜೆಗಳೂ ನಾನೂ ಭಾಗ್ಯಶಾಲಿಗಳೆಂದೇ ಹೇಳಬೇಕು! ಅಲ್ಪಬುದ್ಧಿದೋಷದಿಂದ ನಿನ್ನಲ್ಲಿ ಇಷ್ಟುಹೊತ್ತು ಅಯುಕ್ತ ವಾದವನ್ನು ಮಾಡಿದ ಎನ್ನ ಮೌಢ್ಯವನ್ನು ಕ್ಷಮಿಸುವನಾಗು. ಮುಂದೆ ನೀನಾವ ರೀತಿ ಆಜ್ಞೆಮಾಡುವೆಯೋ ಅದರಂತೆಯೇ ಆಚರಿಸುವೆನು. '' ಎಂದು ಹೇಳಿ ನಮಸ್ಕರಿಸಲು ಪುರೋಹಿತನು ಪ್ರಸನ್ನನಾಗಿ:–"ಮಿತ್ರನೇ! ಹಾಗಾದರೆ ರಾಜನಲ್ಲಿಗೆ ಹೋಗಿ ' ಆ ಕನ್ಯೆಯ ಮುಖಾವಲೋಕನಮಾ ತ್ರದಿಂದಲೇ ನಿನಗೂ ನಿನ್ನ ಪ್ರಜೆಗಳಿಗೂ ಹಾನಿಯುಂಟಾಗುವಂತಹ ಅಮಂಗಲದೋಷವಿರುವುದು! '' ಎಂದು ಮೊದಲು ನೀನು ಹೇಳು; ಬಳಿಕ ನಾನೂ ಅದಕ್ಕೆ ಅನುಗುಣವಾಗಿ ಹೇಳುವೆನು.'' ಎಂದು ಹೇಳಿ ಈರ್ವರೂ ರಾಜಸನ್ನಿಧಿಯನ್ನು ಕುರಿತು ತೆರಳಿದರು.

ನಾಲ್ಕನೆಯ ಸಂಧಿ.

THE DIVINE DISPENSATION.

ದೈವಿಕತಂತ್ರ

ಇತ್ತಲಾ ದೇವಸೇನಮಹಾರಾಜನು, ತನ್ನಾಲೋಜನಾ ಮಂದಿರದಲ್ಲಿ ಓರ್ವನೇ ಕುಳಿತು ಸಂತೋಷದಿಂದ:—"ಎನ್ನ ಮಂತ್ರಿ ಮುಂತಾದ ಸಮಸ್ತ ಅಧಿಕಾರಿಗಳೂ ಎನ್ನ ಆಜ್ಞೆಯನ್ನೇ ಅನುಸರಿಸುವವರಾಗಿಯೂ, ಎನ್ನಲ್ಲಿ ಭಕ್ತಿಗೌರವಗಳುಳ್ಳವರಾಗಿಯೂ, ಪ್ರಜೆಗಳ ಹಿತವನ್ನು ಬಯಸುವವರಾಗಿಯೂ ಇರುವರು. ಆದರೂ ಅವರುಗಳು ಮಾಡುವ ಕಾರ್ಯಗಳು ಧರ್ಮಸಂಮತವಾಗಿಯೂ, ಪಕ್ಷಪಾತದೂರವಾಗಿಯೂ, ರಾಜ ಪ್ರಜೆಗಳಿಗೆ ಹಿತಕರವಾಗಿಯೂ, ಸ್ವಪರಾರ್ಥವಿಶಿಷ್ಟವಾಗಿಯೂ ಇರುವುವೋ ಇಲ್ಲವೋ ಎಂಬುದನ್ನು ಪರೀಕ್ಷಿಸುವುದು ಎನ್ನ ಕರ್ತವ್ಯವಾಗಿರುವುದರಿಂದ, ಅವರೆನ್ನ ಸಿದ್ಧಾಂತಕ್ಕೆ ಕಳುಹಿರುವ ವಿಜ್ಞಾಪನಾಪತ್ರಗಳನ್ನು ಓದಿನೋಡುವೆನು." ಎಂದು ಅವುಗಳೆಲ್ಲವನ್ನೂ ಓದಿದನಂತರ ತೃಪ್ತಿಯಿಂದ:—"ಆಃ! ಚಿಕ್ಕ ಅಧಿಕಾರಿ ಮೊದಲ್ಗೊಂಡು ಎನ್ನ ಮುಖ್ಯ ಮಂತ್ರಿಯ ವರೆಗಿನ ಪ್ರತಿಯೋರ್ವನ ಅಭಿಪ್ರಾಯವೂ ಪ್ರಜಾಹಿತೈಕ ಪರಾಯಣವಾಗಿಯೂ, ದೋಷರಹಿತವಾಗಿಯೂ ಇರುವುದು. ನಾನು ಅವರುಗಳಿಗೆ ಎಷ್ಟು ಕೃತಜ್ಞನಾಗಿರ್ದರೂ ತೀರದು. ದಿಗ್ಗಜಗಳ ಸತ್ವ ಸಾಹಸಗಳಿಂದ ಈ ಪೃಥ್ವಿಯು ಎಂತು ಧರಿಸಲ್ಪಟ್ಟಿದೆಯೋ ಅದರಂತೆ, ಎನ್ನೀ ಅಧಿಕಾರಿಗಳ ಬುದ್ಧಿ ಶಕ್ತಿ ಸಾಹಸಗಳಿಂದ ಈ ರಾಜ್ಯವು ಅಚಲ ಸ್ಥಾಯಿಯಾಗಿಹುದು. ಮುಖ್ಯವಾಗಿ ನಾನು ಧನ್ಯನು." ಎಂದು ಆತ್ಮಗತವಾಗಿ ಮಾತನಾಡಿಕೊಳ್ಳುತ್ತಿರುವ ಸಮಯಕ್ಕೆ ಸರಿಯಾಗಿ ದ್ವಾರಪಾಲಕನು ಬಂದು ತಲೆವಾಗಿವಂದಿಸಿ:—"ಮಹಾರಾಜನೇ, ರಾಜದರ್ಶನಾರ್ಥವಾಗಿ ಪುರೋಹಿತಸ್ತ್ರೀಲಕ್ಷಣಜ್ಞರು ಬಂದಿರುವರು." ಎಂದು ವಿಜ್ಞಾಪಿಸಲು ದೇವಸೇನನು ಸಂತೋಷದಿಂದ:—"ಅವರನ್ನು ಒಳಕ್ಕೆ

ಬರಹೇಳು'' ಎಂದಾಜ್ಞಾಪಿಸಿದ ಬಳಿಕ ಒಳಕ್ಕೆ ಪ್ರವೇಶಮಾಡಿದ ಅವರನ್ನು ಕುರಿತು ವಿನಯದಿಂದೀರೀತಿ ಪ್ರಶ್ನೆಮಾಡಿದನು:—''ಪೂಜ್ಯರೆ! ಈ ಆಸನಗಳನ್ನು ಅಲಂಕರಿಸಬೇಕು; (ಅವರು ಕುಳಿತನಂತರ) ಕನ್ಯಾಪರೀಕ್ಷೆಯು ಆಯಿತೆ? ಆ ವಿಷಯದಲ್ಲಿ ನಿಮ್ಮ ಅಭಿಮತವೇನು?'' ಎಂದು ಕೇಳಲು ಸ್ತ್ರೀಲಕ್ಷಣಜ್ಞನು ಸಂಕೋಚದೊಡನೆ:—''ಮಹಾರಾಜನೇ! ನಾವುಗಳಾಕನ್ಯೆಯನ್ನು ಪರೀಕ್ಷಿಸಿದೆವು. ಅವಳಲ್ಲಿ ರೂಪಚಾತುರ್ಯಗಳು ಇರ್ದರೂ ಸಂಪನ್ನಾಶಕವಾದ ಅಮಂಗಲದೋಷವು ನೆಲೆಗೊಂಡಿರುವುದು. ಆದಕಾರಣ ನೀನು ಆ ನಿಂದಾಸ್ಪದಗಳನ್ನು ನೋಡುವುದೂ ಕೂಡ ಶುಭವಾದುದಲ್ಲವಾದುದರಿಂದ, ಅವಳು ನಿನ್ನ ಪತ್ನೀತ್ವವನ್ನು ಪಡೆಯುವುದೆಂದರೇನು?'' ಎಂದು ಹೇಳಿದ ತತ್‌ಕ್ಷಣವೇ ಪುರೋಹಿತನು ಇಂತೆಂದನು:—''ಮಹಾರಾಜನೇ! ಅದು ನಿಜವು; ಏಕೆಂದರೆ, ದೋಷಯುಕ್ತವಾದ ಸ್ತ್ರೀಯವಿಷಯದಲ್ಲಿ ಪ್ರಾಜ್ಞರೂ ಈರೀತಿ ಅಭಿಪ್ರಾಯಪಟ್ಟಿರುವರು:—

[೧೮. ತಾ||—''ಮೇಘದಿಂದಾವರಿಸಲ್ಪಟ್ಟ ರಾತ್ರಿಯ ಚಂದ್ರನು ಭೂಮ್ಯಂತರಿಕ್ಷಗಳ ದಿಗ್ವಿಭಾಗವನ್ನೂ ವಿವಿಧರಜನಾಕೃತ್ಯವನ್ನೂ ಸಹ ಎಂತು (ಜನರಿಗೆ) ತೋರುವುದಿಲ್ಲವೊ ಅದರಂತೆ ನಿಂದೆಗಾಸ್ಪದಳಾದ ಸ್ತ್ರೀಯು (ತಂದ ಮತ್ತು ಕೊಟ್ಟ) ಕುಲಗಳೆರಡರ ಕೀರ್ತಿಸೌಭಾಗ್ಯಗಳನ್ನು ಹಾಳುಮಾಡುವಳು.]

ಇಷ್ಟರಮೇಲೆ ನಿನಗೆ ಯುಕ್ತವಾದಂತೆ ಆಜ್ಞಾಪಿಸಬಹುದು.''

ಇದನ್ನು ಕೇಳಿದ ಮಹಾರಾಜನು:—''ಪೂಜ್ಯರೆ! ನಿಮ್ಮ ಅಭಿಮತವೇ ಎನಗೆ ಸಿದ್ಧಾಂತವು. ಅದರಮೇಲೆ ನಾನು ಚರ್ಚಿಸುವುದೇನಿದೆ? ಆಕನ್ಯೆಯನ್ನು ನಾನು ಪರಿಗ್ರಹಿಸಲು ಯತ್ನವಿಲ್ಲವೆಂಬ ಅಂಶವನ್ನು ಸೂಚಿಸುವ ಒಂದು ಪತ್ರವನ್ನು ಬರೆದು ಈಗಲೇ ಗೋಪ್ಯವಾಗಿ ಕಳುಹುವೆನು'' ಎಂದು ಹೇಳಿ ಅವರುಗಳೊಡನೆ ಅಲ್ಲಿಂದ ತೆರಳಿದನು.

ಕುಲದ್ವಯಸ್ಯಾಪಿ ಹಿ ನಿಂದಿತಾ ಸ್ತ್ರೀ ಯಶೋ ವಿಭೂತಿಂ ಚ ತಿರಸ್ಕರೋತಿ ।
ನಿಮಗ್ನಚಂದ್ರೇವ ನಿಶಾ ಸಮೇಘಾ ರೋಧಾಂ ವಿಭಾಗಂ ಚ ದಿವಸ್ಪೃಥಿವ್ಯೋಃ ॥೧೮॥

ಐದನೆಯ ಸಂಧಿ

FRUSTRATION OF HUMAN HOPE.

ಉದ್ದೇಶಭಂಗ.

ಇತ್ತಲಾಕಿರೀಟವತ್ಸನು, ತನ್ನ ಮಂದಿರದಲ್ಲಿ ಪತ್ನೀಪುತ್ರಿಯರಿಂದೊಡಗೂಡಿ, ಉನ್ಮಾದಿನಿಯ ವಿವಾಹವಿಷಯಕವಾಗಿ ಪ್ರಮೋದಭಾಷಣಗಳನ್ನಾಡುತ್ತ ಕುಳಿತಿರುವಲ್ಲಿ, ರಾಜದೂತನೊರ್ವನು ಬಂದು, ರಾಜನು ಕಳುಹಿದ್ದಪತ್ರವನ್ನು ಕಿರೀಟವತ್ಸನಕೈಗಿತ್ತು, ಅವನಿಂದ ಉಡುಗೆರೆಯನ್ನು ಸ್ವೀಕರಿಸಿ, ಅಪ್ಪಣೆಯನ್ನು ಪಡೆದು ಹೊರಟುಹೋದನು. ತರುವಾಯ, ಕಿರೀಟವತ್ಸನು ಅತಿ ಸಂಭ್ರಮದಿಂದ ಆಪತ್ರದ ಮುದ್ರೆಯನ್ನು ಬಿಚ್ಚಿ, ಪತ್ರವನ್ನು ಓದಿನೋಡಿಕೊಂಡು, ಏನ್ನನಾಗಿ ವಿಷಾದದಿಂದ ಉನ್ಮಾದಿನಿಯನ್ನು ಕುರಿತು:–"ಎಲ್ಲೆ ಉನ್ಮಾದಿನೀ! ನೀನಿನ್ನು ರಾಜನ ಆಸೆಯನ್ನು ಮರೆ! ಇನ್ನಾರನ್ನಾದರೂ ವರಿಸು!" ಎಂದು ಹೇಳಲು ಉನ್ಮಾದಿನಿಯು ಭಗ್ನಾಶಯಳಾಗಿ ತವಕದಿಂ:–"ಒನಕನೇ! ಇದೇನು ಹೀಗೆಹೇಳುವೆ? ಕಾರಣವೇನು?" ಎಂದು ಕೇಳಲು, ಕಿರೀಟವತ್ಸನು ದುಃಖದಿಂದಲೂ ಸಂಕೋಚದಿಂದಲೂ ಕುಗ್ಗಿದವನಾಗಿ:– "ಅದರ ಕಾರಣಗಳನ್ನೆಲ್ಲ ಕೇಳಬೇಡ! ನಿನ್ನ ಮನವು ಇನ್ನಾರನ್ನು ಒಪ್ಪುವುದೋ ಅವನನ್ನು ಹೇಳು! ಅವನಿಗೇ ನಿನ್ನನ್ನು ಕೊಟ್ಟು ವಿವಾಹಮಾಡುವೆನು." ಎನ್ನಲು ಉನ್ಮಾದಿನಿಯು ವಿಕಲ್ಪಗೊಂಡು:–" ಬಾಲ್ಯದಿಂದಲೂ ರಾಜನನ್ನೇ ಪತಿಯನ್ನಾಗಿ ನಿಶ್ಚಯಿಸಿರುವುದನ್ನು ತಿಳಿದಿರ್ದರೂ ಇದೇಕೆ ಈರೀತಿ ಹೇಳುವೆ? ಅದರಕಾರಣವೇನೆಂಬುದನ್ನು ಹೇಳು?" ಎಂದು ಕೇಳಲು ಕಿರೀಟವತ್ಸನು ವ್ಯಸನಾಕ್ರಾಂತನಾಗಿ ಜುಗುಪ್ಸೆಯಿಂದ:–"ಅಯ್ಯೋ! ಹಾಳುಕಾರಣವೇ! ಇದೋನೋಡು!" ಎಂದು ಆ ಪತ್ರವನ್ನು ಉನ್ಮಾದಿನಿಯ ಬಳಿಗೆ ಬಿಸುಡಿದನು. ಅದನ್ನು ಉನ್ಮಾದಿನಿಯು ತೆಗೆದುಕೊಂಡು ನಡುಗುವ ಕೈಗಳಿಂದ ಬಿಚ್ಚಿ ಓದಿನೋಡಿ ಕಣ್ಣೀರನ್ನು ಸುರಿಸುತ್ತ ಒಂದು ಕ್ಷಣ ದಿಕ್ಕುತೋರದವಳಂತೆ

ಸ್ತಬ್ಧಳಾಗಿ ದುಃಖಾತಿಶಯವನ್ನು ಸಹಿಸಲಾರದೆ ಗದ್ಗದಸ್ವರದಿಂದ:—
"ನಾನಿನ್ನಾರನ್ನೂ ವರಿಸುವುದಿಲ್ಲ!" ಎಂದುಹೇಳಿ ರೋದಿಸುತ್ತ ತನ್ನ
ಕೇಳೀಮಂದಿರವನ್ನು ಕುರಿತು ಹೊರಟುಹೋದಳು. ಇದೆಲ್ಲವನ್ನೂ
ನೋಡುತಿರ್ದ ಇಂದುಮತಿಯು, ಮಗಳ ದುಃಖವನ್ನು ನೋಡಿ ಸಹಿಸ
ಲಾರದೆ ವ್ಯಸನಗೊಂಡವಳಾಗಿ, ಪತಿಯನ್ನು ಕುರಿತು ವಿನಯದಿಂದ:—
"ಆರ್ಯ! ಇದೇಕೆ ಈನ್ಮಾದಿನಿಯಮೇಲೆ ಇಷ್ಟು ಕೋಪಿಸುವೆ? ಆ
ಕಾಗದದ ವಿಷಯವೇನು?" ಎಂದು ಕೇಳಲು ಕಿರೀಟವತ್ಸನು ಜುಗುಪ್ಸೆ
ಯಿಂದ:—"ಅಯ್ಯೋ! ನಿನ್ನ ವೇಧೆ ಬೇರೆ ಪ್ರಾಪ್ತವಾಯಿತೆ! (ಉಚ್ಚ
ಸ್ವರದಿಂದ) 'ನಿನ್ನ ಮಗಳು ಕುಲಕ್ಷಣೆಯಾದುದರಿಂದ ಅವಳ ಮುಖಾವ
ಲೋಕನವೂ ಕೂಡ ಅಶ್ರೇಯಸ್ಕರವು. ಆದಕಾರಣ ನಾನು ಅವಳನ್ನು
ವಿವಾಹಮಾಡಿಕೊಳ್ಳುವುದಿಲ್ಲ, ಎಂದು ಮಹಾರಾಜನು ಪತ್ರದಲ್ಲಿ ಬರೆದು
ಕಳುಹಿಸಿರುವನು!" ಎಂದು ಹೇಳಲು ಇಂದುಮತಿಯು ಬೆದರಿ, ಬಳಿಕ ಒಂ
ದುಕ್ಷಣಕಾಲ ಹಾಗೆಯೇ ಯೋಚಿಸುತಿರ್ದು ಪುನಃ ಪತಿಯನ್ನು ಕುರಿತು
ದೈನ್ಯದಿಂದ:—"ಆರ್ಯ! ನೀನೂ ಹೀಗೆ ಕೋಪಿಸಿದರೆ ನಾನಿನ್ನಾರಿಗೆ ಮೊರೆ
ಯಿಡಲಿ? (ಕೈಮುಗಿದುಕೊಂಡು) ಎನ್ನಮಾತನ್ನು ಲಾಲಿಸು—ಮಧ್ಯದಲ್ಲೇ
ನೊ ಕೃತ್ರಿಮವು ನಡೆದಂತೆ ತೋರುವುದು; ಆದಕಾರಣ ನೀನಿನ್ನೊಂದುವೇಳೆ
ರಾಜನಲ್ಲಿಗೆ ಹೋಗಿ ಸ್ವತಃ ಪರೀಕ್ಷಿಸೆಂದು ವಿಜ್ಞಾಪಿಸುವನಾಗು." ಎಂದು
ಪ್ರಾರ್ಥಿಸಿದುದನ್ನು ಕೇಳಿದ ಕಿರೀಟವತ್ಸನು ಕೋಪದಿಂದವಳಕಡೆಗೆ ತಿರು
ಗಿ:—"ನಿನಗೇನು ವಿವೇಕವಿದೆಯೋ ಇಲ್ಲವೊ? ನಿನ್ನಮಾತನ್ನು ಕೇಳಿ ದೇಶ
ಭ್ರಷ್ಟನಾಗಲೆ? ಇಲ್ಲವೆ ಶೂಲಾರೋಹಣಕ್ಕೆ ಸಿದ್ಧನಾಗಲೆ?" ಎಂದು
ಗರ್ಜಿಸಲು ಇಂದುಮತಿಯು ಲಜ್ಜಾಭೀತಿಗಳಿಂದ ಕುಗ್ಗಿ ಅಳುತ್ತ:—"ಇದೇ
ಕಿಂತು ಕೋಪಿಸುವೆ?" ಎಂದು ಖಿನ್ನಳಾಗಿ ನಿಂತಿರಲು ಕಿರೀಟವತ್ಸನು
ನೋಡಿ ಕೃಪಾನ್ವಿತನಾಗಿ:—"ಅಯ್ಯೋ! ಮುಗ್ಧೆ! ನಿನ್ನ ಉದ್ದೇಶವು
ಎನಗೆ ತಿಳಿಯದೇ ಇಲ್ಲ; ನಿನಗಿಂತಲೂ ಎನಗೆ ವ್ಯಥೆಯು ಸಹಸ್ರಪಾಲು
ಅಧಿಕವಾಗಿದೆ; ಆದರೇನುಮಾಡಲಿ? ಮಹಾರಾಜನೇ ತನ್ನ ಪಸ್ತಾಕ್ಷರ

ದಿಂದ ಬರೆದು ರಾಜಮುದ್ರೆಯನ್ನು ಹಾಕಿ ಪತ್ರವನ್ನು ಕಳುಹಿರುವುದರಿಂದ, ಅದರಮೇಲೆ ತರ್ಕಮಾಡುವುದು ಪ್ರಜೆಗಳಾದೆಮಗೆ ಧರ್ಮವಲ್ಲ! ಅದರಿಂದ ಹಾನಿಯೇ ಆಗಲಿ ವೃದ್ಧಿಯೇ ಆಗಲಿ ಅದನ್ನು ನಾವು ಅನುಭವಿಸಿಯೇ ತೀರಬೇಕು.'' ಎಂದು ಹೇಳಲು ಇಂದುಮತಿಯು ಸಂಕಟದಿಂದ:—'' ಈ ಕೈತ್ರಿಮವೆಲ್ಲ ಇಲ್ಲಿಗೆ ಪರೀಕ್ಷೆಗೆ ಬಂದಿರ್ದ ಆ ಬ್ರಾಹ್ಮಣರಿಂದಲೇ ನೆರವೇರಿಸಲ್ಪಟ್ಟಿರುವಂತೆ ತೋರುವುದು! ಭಕ್ತಿಗೌರವಗಳಿಂದ ಉಪಚರಿಸಿ ಕಳುಹಿಸಿದುದಕ್ಕೆ ಇದೇ ಅವರು ಮಾಡಿದ ಪ್ರತಿಫಲವ್ರ? ಎಮ್ಮ ದುಃಖವೆಲ್ಲ ಅವರಿಗೇ ಕಟ್ಟಲಿ!'' ಎಂದು ಕೈಸೆಟ್ಟಿಗೆಗಳನ್ನು ಮುರಿಯಲು, ಕಿರೀಟವತ್ಸನು ಕುಪಿತನಾಗಿ:—''ಛೀ! ಭ್ರಷ್ಟಹೇಗುಸೆ! ಬ್ರಾಹ್ಮಣರಿಂದೆಯನ್ನು ಮಾಡದಿರು! ಈ ವಿಷಯದ ಒಳಮರ್ಮವು ಹೇಗಿರುವುದೊ ಏನೋ! ಅವರೇನು ನಮಗೆ ದ್ವೇಷಿಗಳೆ ? ಸುಮ್ಮನೆ ವಿವೇಚನೆಯಿಲ್ಲದೆ ವಿಕಲ್ಪಗೊಳ್ಳದಿರು! ಮುಂದಿನ್ನಾರಿಗಾದರೂ ಕೊಟ್ಟು ವಿವಾಹಮಾಡುವ ಪ್ರಯತ್ನವನ್ನು ಮಾತ್ರಪೇಕ್ಷೆ ಹೊರತು ಇತರರನ್ನು ನಿಂದಿಸಬಾರದು' ಎಂದು ಹೇಳಿ ಗದರಿಸಲು, ಇಂದುಮತಿಯು ಹುಬ್ಬುಗಂಟಿಕ್ಕಿ '' ನಿನಗೇಕೆ ಕೋಪ ? ನಾನು ಹೋಗುವೆನು ! '' ಎಂದು ಹೇಳಿ ಬಿರಿಬಿರನೆ ಒಳಕ್ಕೆ ಹೊರಟುಹೋದಳು.

ಬಳಿಕ ಕಿರೀಟವತ್ಸನು ಈ ದುಸ್ಸಂಭವಗಳಿಂದ ಧೈರ್ಯಗುಂದಿದವನಾಗಿ ಏನೂ ತೋರದೆ ಒಂದು ಕ್ಷಣಕಾಲ ಸ್ತಬ್ಧನಾಗಿರ್ದು, ಅನಂತರ ಈರೀತಿ ತನ್ನೊಳಗಾಲೋಚನೆಯಂ ಮಾಡಿಕೊಂಡನು:—''ಮಹಾರಾಜನಾದರೋ, ಇತರರ ಮಾತನ್ನು ನಂಬಿ ಉನ್ಮಾದಿನಿಯನ್ನು ಕುಲಕ್ಷಣೆಯೆಂದು ವರಿಸದೆ ಅನ್ಯಾಯವಾಗಿ ಧಿಕ್ಕರಿಸಿದನು; ಇವಳಾದರೊ ರಾಜನ ಹೊರತು ಇನ್ನಾರನ್ನೂ ವರಿಸೆನೆಂದು ಹಠವನ್ನು ಪಿಡಿದಿರುವಳು; ಮಹಾರಾಜನಾರೋಪಿಸಿದ ನಿಂದೆಯು ಬಂಧುಜನರಿಗೆ ತಿಳಿದುಬಂದರೆ ಅಪಹಾಸ್ಯಕ್ಕೆಡೆಯಾಗುವುದುಮಾತ್ರವಲ್ಲದೆ ಇವಳನ್ನು ಮುಂದಿನ್ನಾರೂ ವಿವಾಹಮಾಡಿಕೊಳ್ವುದೂ ಇಲ್ಲವು; ಒಂದುವೇಳೆ ವಿವಾಹವೇ ಬೇಡವೆಂದು

ಯೋಚಿಸಿದರೆ, ಮಹಾ ರೂಪವತಿಯಾಗಿಯೂ ಯೌವನಸಮನ್ವಿತೆಯಾಗಿಯೂ ಇರುವ ಮಗಳನ್ನು ಮನೆಯಲ್ಲಿ ಇಟ್ಟುಕೊಂಡಿದ್ದರೆ, ಮಹಾ ನರ್ಥಗಳೂ ಅನೇಕಜನರ ದ್ವೇಷವೂ ಪ್ರಾಪ್ತವಾಗುವುವು. "ಅವೆಲ್ಲವೂ ಹಾಗಿರಲಿ" ಎಂದು ಯೋಚಿಸಿದರೆ, ಕಾಲಾನುಸಾರವಾದ ದೇಹವ್ಯಾಪಾರಕ್ಕೆ ಸಮಸ್ತಪ್ರಾಣಿಗಳ ಮನವೂ ಒಡಂಬಡುವುದು ಲೋಕಸ್ವಭಾವವಾಗಿರುವುದರಿಂದ, ಇವಳೇನಾದರೂ ಕಾಮಕ್ಕಧೀನಳಾಗಿ ಅಂತರಂಗ ಪಾಪಗಳನ್ನಾಗಲೀ ಕುತ್ಸಿತಸಂಗವನ್ನಾಗಲೀ ಮಾಡಿದಲ್ಲಿ ಲೋಕಾಪವಾದವು ಪ್ರಾಪ್ತವಾಗುವುದಲ್ಲದೆ ಕುಲಕ್ಕೆ ಹಾನಿಯೂ ವಂಶಕ್ಷಯವೂ ಆಗುವುವು. ಈಗೇನು ಮಾಡಲಿ ? " ಎಂದು ಚಿಂತಿಸಿದ ಬಳಿಕ ಒಂದು ಕ್ಷಣಕಾಲ ಯೋಚಿಸುತಿರ್ದು ಬಳಿಕ ಸಂತೋಷದಿಂದ: "ಆಃ! ಎಮ್ಮ ಮಹಾರಾಜನ ಸೇನಾಪತಿಯಾದ ಅಭಿಸಾರಗನು, 'ನಿನ್ನ ಮಗಳಿಗೆ ಇನ್ನೂ ವಿವಾಹವಿಲ್ಲವೇ? ಮಹಾಲಾವಣ್ಯವತಿಯಾಗಿಹಳು.' ಎಂದು ಎನ್ನೊಡನೆ ಈಗ್ಗೆ ಎಂಟುಹತ್ತು ದಿನಗಳ ಹಿಂದೆ ಹೇಳಿದ್ದನು; ಅವನಿಗೆ ಇನ್ನೂ ವಿವಾಹವೇ ಇಲ್ಲ; ಸರ್ವಗುಣಗಳಲ್ಲಿಯೂ ಅವನು ಮಹಾರಾಜನಿಗೆ ಎರಡನೆಯವನೇ ಆಗಿರುವನು; ಒಳ್ಳೆಯದು! ಈಗಲೇ ಉನ್ಮಾದಿನಿಯನ್ನು ಅವನಿಗೆ ಕೊಟ್ಟುವಿವಾಹವನ್ನು ಮಾಡಿಬಿಡುವೆನು. " ಎಂದು ನಿಶ್ಚಯಿಸಿಕ್ಕೊಂಡು ಅಭಿಸಾರಗನ ಬಳಿಗೆ ಹೊರಟುಹೋದನು.

ಎರಡನೆಯ ಸಂಧಿ.

WOMAN'S TRUE LOVE CANNOT BE ALTERED.

ಸತೀತ್ವಾವಷ್ಟಂಭ.

ಬಳಿಕ ಕಿರೀಟವತ್ಸನು ಅಭಿಸಾರಗನ ಗೃಹವನ್ನೆ ೃದಿ, ಉನ್ಮಾದಿನಿಯನ್ನು ರಾಜನು ಧಿಕ್ಕರಿಸಿದುದೇ ಮುಂತಾದ ವಿಷಯಗಳೆಲ್ಲೊಂದನ್ನೂ ಅವನಿಗೆ ತಿಳಿಸದೆ, ಇವಳನ್ನು ನೀನು ವಿವಾಹಮಾಡಿಕೊಳ್ಳೆಂದು ಪ್ರಾರ್ಥಿ

ಸಿದನು. ಇದನ್ನು ಕೇಳಿದ ಅಭಿಪಾರಗನು, ತಾನು ರಾಜನಾಜ್ಞೆಯಂತೆ ಇನ್ನು ನಾಲ್ಕೈದುದಿನಗಳಲ್ಲಿಯೇ ಸೇನೆಯೊಡನೆ ಕಾಶ್ಮೀರದೇಶಕ್ಕೆ ಹೋಗ ಬೇಕಾಗಿರುವ ವಿಷಯವನ್ನು ಹೇಳಲು, ಕಿರೀಟವತ್ಸನು ತನ್ನ ಉಪಾ ಯವು ಕಾಲಾತಿಕ್ರಮದೋಷದಿಂದ ವಿಫಲವಾದೀತೆಂಬ ಶಂಕೆಯಿಂದ, ಅಷ್ಟರೊಳಗೇ ವಿವಾಹವನ್ನು ನೆರವೇರಿಸುವುದಾಗಿ ವಾಗ್ದಾನಮಾಡಿ, ಆತ ನಿಂದ ಸಂಮತಿಯನ್ನು ಪಡೆದು ಮನೆಗೆಬಂದು, ಮೌಹೂರ್ತಿಕರಿಂದ ವಿವಾಹಲಗ್ನವನ್ನು ನಿಶ್ಚಯಗೊಳಿಸಿ, ವಿವಾಹಕ್ಕೆ ತಕ್ಕ ಸಾಮಗ್ರಿಗಳ ನ್ನೆಲ್ಲ ಸಿದ್ಧಮಾಡಿದನು. ಬಳಿಕ ವಿವಾಹದ ದಿನ ಕನ್ಯೆಯನ್ನು ಅಲಂಕರಿ ಸುವುದಕ್ಕೆ ಇಂದುಮತಿಯು ಪ್ರಯತ್ನಮಾಡಲು, ಉನ್ಮಾದಿನಿಯು ಅಸಂ ಮತಿಯನ್ನು ಸೂಚಿಸಿದಳು. ಅನಂತರ ಇಂದುಮತಿಯು ಉನ್ಮಾದಿನಿ ಯನ್ನು ಸಿಂಗರಿಸುವುದಕ್ಕೆ ಕುಂತಳೆ ಮತ್ತು ಕನಕಲತೆಯರೆಂಬ ಅವಳ ಗೆಳತಿಯರನ್ನೇ ನಿಯಮಿಸಿದಳು. ಅದರಂತೆ ಆಗೆಳತಿಯರು ಉನ್ಮಾದಿ ನಿಯ ಕೇಳೀಗೃಹಕ್ಕೆ ಪ್ರವೇಶಿಸಿ, ಅವಳನ್ನು ಸಿಂಗರಿಸಿಕೊಳ್ಳೆಂದು ಅನೇಕ ವಿಧವಾಗಿ ಬೋಧಿಸಿದರು. ಆದರೂ ಉನ್ಮಾದಿನಿಯು ಒಡಂಬಡದೆ ವ್ಯಸ ನದಿಂದ ಆಸ್ಥಳವನ್ನು ಬಿಟ್ಟು ತನ್ನ ಮನೆಯ ಹಿಂದಣ ಕೇಳೀವನಕ್ಕೆ ಹೊರಟುಹೋದಳು. ಬಳಿಕ ಕುಂತಳೆಯೂ ಕನಕಲತೆಯೂ ಅವಳ ಬೆನ್ನ ಟ್ಟಿಬರಲು ಉನ್ಮಾದಿನಿಯು ಜುಗುಪ್ಸೆಯಿಂದ:—"ಎಲ್ಲಿಗೆ ಹೋದರೂ ಎನ್ನನ್ನು ಈ ಸಖಿಯರು ಬಿಡರಲ್ಲ; ಇವರ ಪರಿಹಾಸಗಳಿನಗೇನುಬೇಕು?" ಎಂದು ಹೇಳಲು ಕುಂತಳೆಯು ಕನಕಲತೆಯನ್ನು ಕುರಿತು ಆಶ್ಚರ್ಯದಿಂದ :—"ಎಲೌ ಸಖಿ! ಇದೇಕೆ ಉನ್ಮಾದಿಯು ಹೀಗಾಡುವಳು? ಮಾತನಾಡಿಸಿ ದರೂ ಮಾತನಾಡಳು?" ಎಂದು ಕೇಳಲು ಕನಕಲತೆಯು ಹಾಸ್ಯದೊಡನೆ:— "ಎಲೌ ಕುಂತಳೆ! ಅದರ ತತ್ವವು ನಿನಗೆ ತಿಳಿಯದು ; ಅದು ಬೇರೆ." ಎಂದು ಹೇಳಲು ಕುಂತಳೆಯು ಕುತೂಹಲದಿಂದ:—"ಅದೇನು ಹೇಳು?" ಎನಲು ಕನಕಲತೆಯು ಕಿರುನಗೆಯೊಡಗೂಡಿ ಓರೆನೋಟದಿಂದ ಉನ್ಮಾ ದಿನಿಯನ್ನು ನೋಡುತ್ತ:— "ಇದು ವಿವಾಹಕಾಲವೆಂಬುದರಿಯೆಯಾ?

ನಾರಿಕೇಳವು ಜಲಗರ್ಭಿತವಾಗಿರ್ದರೂ ಚಿಪ್ಪಿನಿಂದ ಮುಚ್ಚಲ್ಪಟ್ಟಿರುವು ದರಿಂದ ಹೊರಗೆ ಕಠಿಣವಾಗಿ ತೋರುವಂತೆ, ಉನ್ಮಾದಿನಿಯು ಒಳಗೆ ಆನಂದರಸದಿಂದ ಭರಿತೆಯಾಗಿರ್ದರೂ ಸಹಜಲಜ್ಜೆಯಿಂದಾವೃತೆಯಾಗಿ ಮೇಲೆ ಕೋಪಗೊಂಡವಳಂತೆ ನಟಿಸುತ್ತಿರುವಳು.'' ಎಂದು ಹೇಳಲು ಕುಂತ ಳೆಯು ನಗುತ್ತ ಉನ್ಮಾದಿನಿಯನ್ನು ನೋಡಿ ಸಹಾಸ್ಯಕವಾಗಿ:– '' ಸಖೀ ಉನ್ಮಾದಿನಿ ! ಮದುವೆಯಾಗುವುದಕ್ಕೆ ಮುಂಜೆಯೇ ಎಮ್ಮನ್ನು ಈ ರೀತಿ ಅಲಕ್ಷಿಸುವೆ ; ಗಂಡನನ್ನು ಸೇರಿದಮೇಲೆಯಾದರೊ ಎಮ್ಮನ್ನು ದೃಷ್ಟಿಸುವುದೂ ಇಲ್ಲವೆಂದು ತೋರುವುದು; ಒಳ್ಳೆಯದು ! ನಿನ್ನ ಇಷ್ಟ ಬಂದಂತೆ ಮಾಡು ; ಸದ್ಯಃ ವಿವಾಹಮಂಟಪದಲ್ಲಿ ಸರ್ವರೂ ಕಾದು ಕೊಂಡಿರುವುದರಿಂದ, ನಿನ್ನಲ್ಲಿ ಪರಿಹಾಸ್ಯವಾಡಲು ಕಾಲವಿಲ್ಲ ; ಕುಳಿ ತುಕೋ, ಜಡೆಯನ್ನು ಹಾಕುವೆನು.'' ಎಂದು ಇತ್ತತಿರುಗಿ ಕನಕಲತೆ ಯನ್ನು ಕುರಿತು ತವಕದಿಂದ:–'' ಎಲೌ ಕನಕಲತೆ ! ಜಾಜೀಮೊಗ್ಗಿ ನಿಂದ ಒಂದು ದಂಡೆಯನ್ನು ಜಾಗ್ರತೆಯಾಗಿ ರಚಿಸು. '' ಎಂದು ಹೇಳಿ ಉನ್ಮಾದಿನಿಯ ತಲೆಯ ಕೂದಲನ್ನು ಹಿಡಿದುಕೊಂಡಳು.

ಬಳಿಕ ಉನ್ಮಾದಿನಿಯು ತನ್ನಂತರಂಗವನ್ನು ತಿಳಿಯದೆ ತನ್ನ ಸಖಿ ಯರು ಈ ರೀತಿ ಪರಿಹಾಸಮಾಡುತ್ತಿರುವುದನ್ನು ಸಹಿಸಲಾರದೆ, ಅವ ರಲ್ಲಿ ತನ್ನ ಅಂತರಂಗವನ್ನು ತಿಳುಹುವುದು ಅಯುಕ್ತವೆಂದು ಭಾವಿಸಿ, ಈ ಹಿಂಸೆಯಿಂದ ತಪ್ಪಿಸಿಕೊಳ್ಳುವುದಕ್ಕೆ ಇವರನ್ನು ಕಟುಭಾಷೆಗಳಿಂದ ಧಿಕ್ಕರಿಸುವುದೇ ಯುಕ್ತವೆಂದು ನಿಶ್ಚಯಿಸಿ, ತನ್ನ ತಲೆಯ ಕೂದಲನ್ನು ಹಿಡಿದಿರ್ದ ಕುಂತಳೆಯ ಕೈಯನ್ನು ಕಿತ್ತುಬಿಸುಟು ಮುನಿಸಿನಿಂದ:— '' ಛೀ ! ತೆಗೆ ! ಎನ್ನನ್ನು ಹಿಂಸಿಸಬೇಡ ; ನಿಮ್ಮ ಮನೆಗೆ ಹೋಗಿ ಏನಾ ದರೂ ಕೆಲಸವಿರ್ದರೆ ಅದನ್ನು ಮಾಡು ; ಹೋಗು ! '' ಎಂದು ಹೇಳ ಲು ಕುಂತಳೆಯು ಖಿನ್ನಳಾಗಿ ಇತ್ತಸರಿದು ಕೋಪದಿಂದ:– ''ಎಲೌ ಕನಕ ಲತೆ ! ಈರೀತಿ ಇವಳು ಗಜರಿದಮೇಲೆ ಎಮಗೇನು ಇವಳಲ್ಲಿ ಕೆಲಸ ? ನಡೆ; ಹೋಗಿ ಇವಳು ಮಾಡಿದ ಅಪಮಾನವನ್ನು ಅವಳ ತಾಯಿಗೆ ಹೇಳಿ

ಬಿಡೋಣ.''ಎಂದು ಈರ್ವರೂ ಉನ್ಮಾದಿನಿಯ ತಾಯಿಯ ಒಳಿಗೆ ಹೊರ ಟುಹೋದರು.

ಬಳಿಕ ಉನ್ಮಾದಿನಿಯು, ತನ್ನ ವಿವಾಹಕ್ಕಾಗಿ ತನ್ನ ತಂದೆಯು ಮಾಡಿರುವ ಗೂಢೋಪಾಯಗಳೊಂದನ್ನೂ ಅರಿಯದೆ, ತನ್ನ ಸಖಿಯರೂ ಮತ್ತು ತನ್ನ ತಾಯಿಯೂ ತನ್ನ ವ್ಯಥೆಯನ್ನು ಶಾಂತಿಗೊಳಿಸುವುದಕ್ಕಾಗಿ, ವಿವಾಹಕ್ಕೆ ಸರ್ವವೂ ಸಿದ್ಧವಾಗಿರುವುದೆಂಬುದಾಗಿಯೂ ಅದಕ್ಕಾಗಿ ಎನ್ನ ನ್ನು ಸಿಂಗರಿಸಿಕೊಳ್ಳೆಂಬುದಾಗಿಯೂ ಹೇಳಿದರೆಂದು ಭಾವಿಸಿಕೊಂಡು, ನಿಜವಾಗಿಯೂ ವಿವಾಹವನ್ನು ನಿಶ್ಚಯಿಸಿರುವುದನ್ನು ತಿಳಿಯದೆ ರಾಜ ನನ್ನೇ ಕುರಿತು ಹಂಬಲಿಸುತ್ತ, ಅಲ್ಲಿಯೇ ನಿಂತುಕೊಂಡು ನಿಟ್ಟುಸಿರು ಬಿಡುತಿರ್ದಳು. ಅಷ್ಟರಲ್ಲಿಯೇ ಆಗತಾನೇ ಉದಯಿಸುತಿರ್ದ ಚಂದ್ರ ನನ್ನು ಅಂಧಕಾರವು ಮುಸುಕುತ್ತಿರುವಲ್ಲಿ, ವಿರಹದಿಂದ ಹಾರಾಡುತಿರ್ದ ಚಕೋರಿಯು ಕಣ್ಣಿ ಕಾಣಿಸಲು, ಅದನ್ನು ಕುರಿತು ಅನ್ಯಾಪದೇಶವಾಗಿ “ ಹಾ ! ದುರ್ದೈವವೆ ! ನಾನೊಬ್ಬಳೇ ಹತಭಾಗ್ಯಳೆಂದಿರ್ದೆನು ; ಎಲೌ ಚಕೋರಿಯೇ ! ನೀನೂ ಭಾಗ್ಯಹೀನೆಯೆ ? ಮಹಾಧರ್ಮಜ್ಞರೆಂದೂ ಲೋಕಪೂಜ್ಯರೆಂದೂ ಪ್ರಖ್ಯಾತಿಯನ್ನು ಪಡೆದಿರುವ, ಎಲೈ ಪವನಪರ್ಜ ನ್ಯರಿರಾ! ಹಸಿವಿನಿಂದ ಒಳಲಿ ಕಂಗೆಟ್ಟ ಚಕೋರಾಂಗನೆಯನ್ನು ದುಃಖ ಗೊಳಿಸುವುದು ಯುಕ್ತವೆ? ನಿಮ್ಮ ಕ್ರೌರ್ಯವನ್ನು ಅಬಲೆಯರಮೇಲೂ ಸಾತ್ವಿಕರಮೇಲೂ ಪ್ರಯೋಗಿಸುವುದು ನಿಮಗೆ ಗೌರವವೆ? ಹಾ! ರಾಜ ನೆ! ಜನಾಹ್ಲಾದಕರನೆಂದೂ ಕರುಣಾಶಯನೆಂದೂ ಸಕಲಕಲಾಭಿಜ್ಞ ನೆಂದೂ ಪ್ರತೀತಿಯನ್ನು ಪಡೆದ ನೀನೂ ಪರಕೈತವಕ್ಕಧೀನನಾಗಿ ಜಡಮತಿ ಯೆನಿಸಬಹುದೆ? ಹಾ! ಚಕೋರಿಗೆ ನೀನಲ್ಲದೆ ಜೀವನವಿನ್ನಾರು ? ನೀನೂ ನಿರ್ದಯನಾಗಬಹುದೆ? ಇದು ನಿನ್ನದೋಷವಲ್ಲ : ಏಕೆಂದರೆ ನೀನು ಪರ ಮಶಾಂತನು, ದಯಾರಸಭರಿತನು; ಇತರರು ನಿನಗೆ ಹಾನಿಯನ್ನುಂಟುಮಾಡಿ ದರೂ ಅಕಷ್ಟಗಳನ್ನೆಲ್ಲ ಶಾಂತತೆಯಿಂದ ಸಹಿಸಿ ಪುನಃ ನಿನ್ನ ಗುಣಪ್ರಭಾವ ವನ್ನು ತೋರುವೆ; ಎಲೌ ಚಕೋರಿಯೇ! ಸ್ವಲ್ಪಕಾಲ ನಿನ್ನ ದುಃಖವನ್ನು

ಶಾಂತತೆಯಿಂದ ಸಹಿಸು; ಏಕೆಂದರೆ ಪವನಪರ್ಜನ್ಯರ ದೃಷ್ಟತೆಯು ಕ್ಷಣಿಕವಾದುದು; ಬಳಿಕ ನಿನ್ನ ಮನೋರಥವು ನೆರವೇರಿ ರಾಜನ ಕರಸ್ಪರ್ಶದಿಂದ ನಿನ್ನ ದಾರುಣದುಃಖಗಳೆಲ್ಲವೂ ಶಮನವಾಡಲ್ಪಡುವುವು?'' ಎಂದು ಹಂಬಲಿಸುತ್ತಿರುವಲ್ಲಿ ನೂಪುರದ ಝಣತ್ಕಾರಶಬ್ದವು ಕೇಳಿಬರಲು.ಬೆಚ್ಚಿ ಅತ್ತಿತ್ತ ನೋಡಿ ಲಜ್ಜೆಯಿಂದ ಪುನಃ:— ''ಎಲ್ಲಿಯೋ ಸಮೀಪದಲ್ಲಿಯೇ ಅಂದುಗೆಯ ಝಣತ್ಕಾರವು ಕೇಳಿಬರುತ್ತಿರುವುದು ; ನಾನೀರೀತಿ ಮಾತನಾಡಿಕೊಂಡುದನ್ನು ಆರಾದರೂ ಕೇಳಿದರೊ? ಒಳ್ಳೆಯದು! ನಾನಿನ್ನು ದುಃಖವನ್ನು ಮರೆಮಾಜುವೆನು. '' ಎಂದು ಸೆರಗಿನಿಂದ ಕಣ್ಣೀರನ್ನು ಒರಸಿಕೊಂಡಳು.

ಇತ್ತಲಾ ಇದೆಲ್ಲವನ್ನೂ ಮರೆಯಲ್ಲಿ ನಿಂತು ಕೇಳುತಿರ್ದ ಇಂದುಮತಿಯು ಉನ್ಮಾದಿನಿಗೆ ಕಾಣಿಸದಂತೆ, ಮರೆಯೋಳ್ನಿಂದು ವ್ಯಸನದಿಂದ:— ಆಹಾ! ಉನ್ಮಾದಿನಿಯು, ತನ್ನನ್ನು ಚಕೋರಿಗೂ, ಮಹಾರಾಜನನ್ನು ಚಂದ್ರನಿಗೂ, ತನ್ನ ವಿವಾಹಕ್ಕೆ ವಿಘ್ನವನ್ನುಂಟುಮಾಡಿದ ಪುರೋಹಿತಸ್ತ್ರೀಲಕ್ಷಣಜ್ಞರನ್ನು ಪವನಪರ್ಜನ್ಯರಿಗೂ, ಅಂತರಿಕ್ಷವನ್ನು ವಿಧಿಗೂ, ಹೋಲಿಸಿಕ್ಕೊಂಡು ಮಾತನಾಡಿಕೊಳುತಿರ್ದುದನ್ನು ನೋಡಿದರೆ—ಇವಳಿಗೆ ರಾಜನಲ್ಲಿಯೇ ಮನಸ್ಸು ನೆಟ್ಟಿರುವ ಅಂಶವೂ, ಮತ್ತು ಚಕೋರಿಯನ್ನು ಸಂತೈಸುವ ವ್ಯಾಜದಿಂದ ತಾನು ಮುಂದೆ ರಾಜನನ್ನೇ ಹೇಗಾದರೂ ಸೇರುವೆನೆಂಬ ಭರವಸೆಯಿಂದ, ತನ್ನನ್ನು ತಾನೇ ಸಂತೈಸಿಕೊಂಡ ವಿಷಯವೂ ವ್ಯಕ್ತವಾಗುವುವು. ಮತ್ತು ರಾಜನು ತನ್ನನ್ನು ತಿರಸ್ಕರಿಸಿರ್ದರೂ ಇತರಸ್ತ್ರೀಯರಂತೆ ಅವನನ್ನು ನಿಂದಿಸದೆ ಅವನ ಗುಣಗಳನ್ನೇ ಕೊಂಡಾಡುವುದನ್ನು ನೋಡಿದರೆ, ಇವಳು ಇತರರನ್ನು ವರಿಸಲು ಇಚ್ಛೆಯಿಲ್ಲದವಳೆಂದು ವ್ಯಕ್ತವಾಗುವುದು. ನಿಜ! ಮಹಾನದಿಗಳು ಸಮುದ್ರದಲ್ಲಿ ಜೆರೆಯಲಿಚ್ಛಿಸುವುವೇ ಹೊರತು ಪಲ್ವಲಗಳನ್ನು ಜೆರೆಯುವುವೆ? ಇಲ್ಲ! ಮನೆಯ ಯಜಮಾನನಾದರೋ ಇವಳ ಮನೋನಿಶ್ಚಯವನ್ನು ತಿಳಿಯದೆ ವಿವಾಹವನ್ನು ತ್ವರೆಗೊಳಿಸಿರುವನು; ಇವಳಿಗಂತೂ ಈ ವಿಷಯವು ಇನ್ನೂ ಚೆನ್ನಾಗಿ ತಿಳಿಯದು; ಈಗೇನು

ಮಾಡಲಿ? ವಿವಾಹ ಮಂಟಪದಲ್ಲಿ ಎಲ್ಲವೂ ಸಿದ್ಧವಾಗಿರುವುವು; ವರನಾದ ಅಭಿಪಾರಗನೂ ಬಂದು ಕುಳಿತಿರುವನು. ಒಳ್ಳೆಯದು! ನಾನೂ ಹೋಗಿ ಎನ್ನ ಪ್ರಯತ್ನಗಳನ್ನೆಲ್ಲ ಮಾಡಿ ಒಡಂಬಡಿಸುವೆನು. '' ಎಂದು ಉನ್ಮಾದಿನಿಯ ಬಳಿಗೈದಿ ವಿನಯಗೌರವಗಳಿಂದ:— '' ವತ್ಸೆ ಉನ್ಮಾದಿನಿ! ಇದೇಕೆ ಓರ್ವಳೇ ಯೋಚಿಸುತ್ತ ಹೀಗೆ ಕುಳಿತಿರುವೆ? ನಿನಗೊಂದು ಸಂತೋಷವಾರ್ತೆಯನ್ನು ತಂದಿಹೆನು; ಅದನ್ನು ಕೇಳಿದ ಕ್ಷಣವೆ ನಿನ್ನ ಚಿಂತೆಗಳೆಲ್ಲಾ ತೊಲಗಿಹೋಗಿ ತೃಪ್ತಿಯೂ ಸಂತೋಷವೂ ಉಂಟಾಗುವುವು.'' ಎಂದು ಹೇಳಲು ಉನ್ಮಾದಿನಿಯು ಕುತೂಹಲದಿಂದ:—'' ಮಹಾರಾಜನು ಎನ್ನನ್ನು ಪರಿಗ್ರಹಿಸುವುದಾಗಿ ಏನಾದರೂ ತಿರಿಗಿ ಹೇಳಿಕಳುಹಿರುವನೆ? '' ಎಂದು ಕೇಳಲು ಇಂದುಮತಿಯು, ಉನ್ಮಾದಿನಿಗೆ ಇನ್ನೂ ರಾಜನಲ್ಲಿಯೇ ನೆಲಸಿರುವ ಆಸೆಯನ್ನರಿತು ಆಶ್ಚರ್ಯಪಟ್ಟು, ಬಳಿಕ ತನ್ನ ಯತ್ನವು ವಿಫಲವಾದೀತೆಂಬ ಭೀತಿಯಿಂದ ಬೆದರಿ, ಮುಂದಣ ಕಾರ್ಯವನ್ನು ಸಫಲಗೊಳಿಸುವ ಉದ್ದೇಶದಿಂದ ಸಂತೋಷವನ್ನು ನಟಿಸುತ್ತ, ಅವಳನ್ನು ಕುರಿತಿಂತೆಂದಳು:— '' ಅದಕ್ಕಿಂತಲೂ ಹಿತವನ್ನುಂಟುಮಾಡುವ ವಿಷಯ.'' ಉನ್ಮಾದಿನಿ:- (ಕುತೂಹಲದಿಂದ) '' ಅದೇನು? '' ಎಂದು ಕೇಳಲು ಇಂದುಮತಿಯು ಉತ್ಸಾಹದಿಂದ:—'' ರೂಪವೋ ಮನ್ಮಥನನ್ನು ಧಿಕ್ಕರಿಸುವುದು; ಆಭರಣಗಳೋ ಕುಬೇರನಲ್ಲಿಯೂ ಅಪ್ಪಿಲ್ಲ; ತೇಜಸ್ಸೋ ಸೂರ್ಯನನ್ನು ಹೀಯಾಳಿಸುವುದು; ಬ್ರಹ್ಮಚರ್ಯದ ಅವಧಿಯೋ ಈಗತಾನೆ ಕಳೆದಿರುವುದು; ಪರಾಕ್ರಮವೋ ಕುಮಾರನ ಖ್ಯಾತಿಯನ್ನು ಮಂಕುಗೊಳಿಸಿರುವುದು; ವಿದ್ಯೆಯೋ ಸರಸ್ವತಿಗೆ ಗುರುಸ್ಥಾನವಾಗಿಹುದು; ಅಯ್ಯೋ! ನಾನೇನೊ ಅಂದುಕೊಂಡಿದ್ದೆನು; ಮುಖ್ಯವಾಗಿ ಅವನು ನಿನ್ನನ್ನು ಮದುವೆಯಾದರೆ ನಿನ್ನ ಜನ್ಮವು ಸಾರ್ಥಕವಾಗುವುದಲ್ಲದೆ, ನಿನ್ನನ್ನು ಪಡೆದ ನಾವುಗಳೂ ಧನ್ಯರೇ ಸರಿ. ಅವನನ್ನು ನೋಡಿದಾರಭ್ಯ ಎನ್ನ ಮತ್ತು ನಿನ್ನ ತಂದೆಯ ಹರ್ಷಕ್ಕೆ ಪಾರವೇ ಇಲ್ಲ ದಂತಾಗಿದೆ. ಜಾಗ್ರತೆಯಾಗಿ ಏಳು, ಹೋಗೋಣ; ಅವನನ್ನು ನೋಡಿದ

ಕ್ಷಣವೇ ನೀನು ಪ್ರಪಂಚವನ್ನೇ ಮರೆತು ಬಿಡುವೆ; ಆಃ! ಇಂತಹ ವರನು ಎಮ್ಮ ಭಾಗ್ಯೋದಯದಿಂದ ಲಭಿಸಿರುವನು.'' ಎಂಬಿವೇವೊದ ಲಾದ ಚತುರಾಲಾಪಪ್ರಯೋಗದಿಂದ ಸಂಮತಿಪಡಿಸುವುದಕ್ಕುಪಕ್ರಮಿಸ ಲು, ಉನ್ಮಾದಿನಿಯು ಶಂಕೆಯಿಂದ:—'' ಆವನಾರು?'' ಎಂದು ಕೇಳಲು ಇಂದುಮತಿಯು ಬೆಚ್ಚಿ ಬಳಿಕ ಕೈಯನ್ನು ಮೇಲಕೆತ್ತಿಕೊಂಡು ವಿಜೃಂ ಭಣೆಯಿಂದ:—'' ಕಾಂಭೋಜಾಧಿಪತಿಯನ್ನು ಯುದ್ಧದಲ್ಲಿ ಈಗತಾನೆ ಜಯಿಸಿ, ಸೆರೆಗೊಂಡು ಬಂದಿರುವ, ಆ ಮಹಾಪರಾಕ್ರಮಿಯೆ!'' ಎಂದು ಹೇಳಲು ಉನ್ಮಾದಿನಿಯು, ಮತ್ತಷ್ಟು ಸಂಶಯಗೊಂಡು ಬಳಿಕ ಕುತೂಹಲದಿಂದ:—'' ಇಷ್ಟೆಲ್ಲ ಗುಣಕಥನವನ್ನು ಮಾಡಿದೆಯಲ್ಲ, ಅವನ ಹೆಸರೇನು?'' ಎಂದು ಕೇಳಲು ಇಂದುಮತಿಯು ಸ್ವಲ್ಪಹಿಂದೆಗೆದು, ಬಳಿಕ ಅಟ್ಟಹಾಸದಿಂದ:—'' ಆಹಾಹಾಹಾ !!! ಏನೂ ತಿಳಿಯದವ ಳಂತೆ ಕೇಳುವೆ ? ಎಮ್ಮ ಮಹಾರಾಜನೂ ಅವನೂ ಕೂಡಿ ಒಂದೊಂದು ವೇಳೆ ಒಂದೇ ರಥದಲ್ಲಿಯೂ, ಇನ್ನೊಂದೊಂದುವೇಳೆ ಇಬ್ಬರೂ ಅಶ್ವಾರೂ ಢರಾಗಿಯೂ, ಒಟ್ಟಿಗೆ ಬೀದಿಗಳಲ್ಲಿ ತಿರುಗುವುದಿಲ್ಲವೆ, ಆ ಮುಖ್ಯಸೇನಾ ಪತಿಯಾದ ಅಭಿಪಾರಗನೇ! ಇನ್ನಾವ ಅನಾಮಧೇಯನೂ ಅಲ್ಲ.'' ಎಂದು ಹೇಳಿದಳು.

ಇದನ್ನು ಕೇಳಿದೊಡನೆಯೇ ಉನ್ಮಾದಿನಿಯು ಕಿವಿಗಳನ್ನು ಮುಚ್ಚಿಕೊಂಡು ಕುತ್ಸಿತಭಾವನೆಯಿಂದ:—ಛೇ! ತೆಗೆ! ಇತರರ ನಾಮ ಗಳನ್ನು ಹೇಳಿ ಎನಗೆ ಕರ್ಣಶೂಲೆಯನ್ನುಂಟುಮಾಡಬೇಡ; ನಿನಗೆ ಇನ್ನಾವಕಾರ್ಯವಾದರೂ ಇರ್ದರೆ ಅದನ್ನು ಕುರಿತು ದಯವಿಟ್ಟು ಇಲ್ಲಿಂದ ತೆರಳು; ಇದೊ ನಿನಗೆ ನಮಸ್ಕರಿಸುವೆನು.'' ಎಂದು ಹಾಗೆ ಮಾಡಿದಳು.

ಇತ್ತಲಾಹೊತ್ತಿಗೆ ಸರಿಯಾಗಿ ಕಿರೀಟವರ್ಮನು ಇಲ್ಲಿಗೆ ಆತುರದಿಂದ ಪ್ರವೇಶಿಸಿ ಅಲ್ಲಿ ನಿಂತಿರ್ದ ತನ್ನ ಹೆಂಡತಿಯನ್ನು ಕುರಿತು ಕೋಪದಿಂದ:—'' ನೀನೇನು ಹೆಂಗಸೋ? ಇಲ್ಲವೆ ಮರದ ತುಂಡೋ ? ಉನ್ಮಾದಿನಿಯನ್ನು

ಬೇಗನೆ ಕರೆದುಕೊಂಡು ಬಾರೆಂದು ಕಳುಹಿಸಿ ಎಷ್ಟೋಹೊತ್ತಾದರೂ ಹಾಗೆಮಾಡದೆ, ಇಲ್ಲಿವಳೊಡನೆ ಸರಸವಾಡುತ್ತ ಕುಳಿತಿರುವೆ! ಜೆನ್ನಾಯಿತು! ಜೆನ್ನಾಯಿತು!!'' ಎಂದು ಗಜರಲಾಗಿ, ಇಂದುಮತಿಯು ಉತ್ಸಾಹರಹಿತಳಾಗಿ:—'' ನಾನು ಎಷ್ಟು ವಿಧವಾಗಿ ಒಡಂಬಡಿಸಿದರೂ ಒಪ್ಪದೆ, ಧಿಕ್ಕರಿಸುವಳು; ಹಾಗಾದರೆ ನೀವೇ ಅವಳನ್ನು ಸಮಾಧಾನಪಡಿಸಿ ಕರೆದುಕೊಂಡುಬನ್ನಿರಿ; ನಾನು ಹೋಗುವೆನು.'' ಎಂದು ವಿವಾಹಮಂಟಪಕ್ಕೆ ಹೊರಟುಹೋದಳು.

ಬಳಿಕ ಕಿರೀಟವತ್ಸನು, ತಾನಿನ್ನು ಕಟುಭಾಷೆಗಳನ್ನು ಪ್ರಯೋಗಿಸಿದರೆ ಕಾರ್ಯವು ಕೆಟ್ಟುಹೋಗುವುದೆಂಬ ಭೀತಿಯಿಂದ ಉನ್ಮಾದಿನಿಯನ್ನು ಕುರಿತು, ವಿನಯದೊಡನೆ:—'' ವತ್ಸೆ! ಏಳಮ್ಮಾ ಏಳು; ಲಗ್ನವು ಮೀರಿಹೋಗುವುದು; ರಾಜನ ಯೋಜನೆಯನ್ನು ಬಿಡು; ಈಗ ನಾನು ಗೊತ್ತುಮಾಡಿರುವ ವರನು ಅವವಿಧದಲ್ಲಿಯೂ ರಾಜನಿಗಿಂತಲೂ ಕಡೆಯಾಗಿಲ್ಲ; ಅವನಾಗಲೇ ಬಂದು ವಿವಾಹಪೀಠದಮೇಲೆ ಕುಳಿತಿರುವನು; ಜಾಗ್ರತೆಯಾಗಿ ಬಂದು ವರಿಸು.'' ಎಂದು ಹೇಳಲು ಉನ್ಮಾದಿನಿಯು ಲಜ್ಜೆಯಿಂದ ಆನತಶಿರಸ್ಕಳಾಗಿ, ಅಸಂಮತಿಯನ್ನು ವ್ಯಕ್ತಗೊಳಿಸುತ್ತ:—'' ಜನಕನೆ! ಕುಮುದಿನಿಯ ಹೃತ್ಕೊರಕವು ಜನಾಹ್ಲಾದಕರನಾದ ರಾಜನ ಕರಸ್ಪರ್ಶವಾದಲ್ಲದೆ, ಇತರ ಕ್ರೂರದ್ಯುತಿಗಳಿಂದ ವಿಕಸನವನ್ನು ಹೊಂದುವುದೆ?'' ಎಂದು ಹೇಳಲು, ಕಿರೀಟವತ್ಸನು ಸಖೇದನಾಗಿ ಜುಗುಪ್ಸೆಯಿಂದ:—'' ಈ ಮುಗ್ಧಾಲಾಪಗಳಿಂದೀಗೇನೂ ಪ್ರಯೋಜನವಿಲ್ಲ; ಮೂರ್ಖತನವನ್ನು ಮಾಡದೆ ಸುಮ್ಮನೆ ನಡೆ; ಮಕ್ಕಳು ತಂದೆತಾಯ್ಗಳ ಆಜ್ಞೆಯನ್ನು ಮೀರಬಾರದು.'' ಎಂದು ಹೇಳಲು ಉನ್ಮಾದಿನಿಯು ಮೌನದಿಂದ ಮುಖವನ್ನು ಹಿಂತಿರುಗಿಸಲು, ಕಿರೀಟವತ್ಸನು ಕೋಪಗೊಂಡು:—'' ಒಳ್ಳೆಯಮಾತಿನಿಂದೇಳು; ಎನ್ನ ಮನಸ್ಸಿಗೆದುಃಖವನ್ನೂ ಕೋಪವನ್ನೂ ಉಂಟುಮಾಡಬೇಡ.'' ಎಂದು ಗದರಿಸಲು ಉನ್ಮಾದಿನಿಯು ಭೀತಳಾಗಿ, ಬಳಿಕ ವಿನಯದಿಂದ ನಮಸ್ಕರಿಸಿ, ಕೈಮಗಿದುಕೊಂಡು ದೈನ್ಯದಿಂದ:—

[೧೯ ತಾ:—" ತಂದೆಯೆ ! ಎನ್ನ ಮನಸ್ಸು ಎನ್ನನ್ನು ರಾಜನಿಗೆ ಆಗಲೇ ದಾನಮಾಡಿಬಿಟ್ಟಿರುವುದು; ಎನ್ನೀ ಮನೋಗತವನ್ನು ತಿಳಿದಿರ್ದರೂ ನೀನದನ್ನು ಉಪೇಕ್ಷಿಸುವೆ; ನಾನವನನ್ನು (ಅಭಿಪಾರಗನನ್ನು) ವರಿಸುವುದಿಲ್ಲವು; ಆದರೆ, ಎನ್ನೀ ಅವಿಧೇಯತೆಯನ್ನು ಕ್ಷಮಿಸುವ ನಾಗು. "]

ಇದನ್ನು ಕೇಳಿದ ಕಿರೀಟವತ್ಸನು ರೋಷಾವಿಷ್ಟನಾಗಿ:—"ಛೀ ಮೂರ್ಖಳೆ! ಎಮ್ಮ ಮಾತುಗಳನ್ನು ತಿರಸ್ಕರಿಸಿದುದೂ ಅಲ್ಲದೆ, ಮಹಾಧರ್ಮಜ್ಞಳಂತೆ ಪ್ರಜ್ಞಾವಾದಗಳನ್ನು ಗಳಹುವೇ; ನಡೆನಡೆ !!" ಎಂದು ಮುಂದಕ್ಕೆ ತಳ್ಳಲು ಅವಳು ಭೂಮಿಯಮೇಲೆ ಬಿದ್ದು ಮೂರ್ಛಿತೆಯಾದಳು. ಬಳಿಕ ಕಿರೀಟವತ್ಸನು, ಅವಳ ಮೂರ್ಛೆಯು ಕೃತಕವಾದುದೆಂದು ಭಾವಿಸಿ ಖತಿಯಿಂದ:—" ಈ ಭೇಷಜವನ್ನೆಲ್ಲಾ ನಾನು ಬಲ್ಲೆನು; ನಾನು ಎಷ್ಟೊ ಕಷ್ಟಪಟ್ಟು ಈವರನನ್ನು ಒದಗಿಸಿದರೆ, ನೀನೀಗ ಹಾಳುಮಾಡುವೆಯಾ ? ನೆಲದಲ್ಲಿ ಬಿದ್ದಮಾತ್ರದಿಂದ ನಾನು ಬಿಟ್ಟುಬಿಡುವೆನೆ?" ಎಂದು ಅವಳ ಕೈಗಳನ್ನು ಹಿಡಿದುಕೊಂಡು ಮೂರ್ಛಿತೆಯಾಗಿರುವಲ್ಲಿಯೇ ವಿವಾಹಮಂಟಪಕ್ಕೆ ಎಳೆದುಕೊಂಡು ಹೋದನು.

ವಿಳನೆಯ ಸಂಧಿ.

MARRIAGE BY FORCE, BUT DEVOID OF LOVE.

ಅನಿಚ್ಛಾ ವಿವಾಹ.

ಇತ್ತಲಾ ವಿವಾಹಮಂಟಪದಲ್ಲಿ ಪುರೋಹಿತನು ಅಲ್ಲಿಗೆ ಬಂದ ಕಿರೀಟವತ್ಸನನ್ನು ಕುರಿತು ಆತುರದಿಂದ:—" ಅಯ್ಯಾ ಕಿರೀಟವತ್ಸನೆ ! ಲಗ್ನಕಾಲವು ಮೀರಿಹೋಗುತ್ತ ಬಂದಿತು; ಇನ್ನು ಎರಡು ನಿಮಿಷಗಳು

ಶ್ಲೋ॥ ನ ತಂ ತಾತ ವರಿಷ್ಯಾಮಿ ತ್ವಂ ತು ನೇಕ್ಷಸಿ ಮದ್ವ್ರತಮ್ ।
ರಾಜಾರ್ಪಿತಾಹಂ ಮನಸಾ ಕ್ಷನ್ತವ್ಯೋ ಽಯಂ ವ್ಯತಿಕ್ರಮಃ ॥೧೯॥

ಮಾತ್ರವೆ ಉಳಿದಿವೆ; ಹೀಗೆ ನೀನು ತಡಮಾಡಬಹುದೆ? ಬೇಗ ವಧುವನ್ನು ಪೀಠದಮೇಲೆ ಕುಳ್ಳಿರಿಸು.'' ಎಂದು ಹೇಳಲು ಕಿರೀಟವರ್ಮನು ಉನ್ಮಾದಿನಿಯನ್ನು ಪೀಠದಮೇಲೆ ಕುಳ್ಳಿರಿಸಿ ಅವಳು ಹಿಂದಕ್ಕೆ ಬಿದ್ದುಹೋಗದಂತೆ ಹಿಡಿದುಕೊಂಡು ತಾನೂ ಹಿಂದೆ ಕುಳಿತುಕೊಂಡನು.

ಬಳಿಕ ಅಭಿಪಾರಗನು ತನ್ನ ಪಾರ್ಶ್ವದಲ್ಲಿರುವ ಉನ್ಮಾದಿನಿಯ ದುರವಸ್ಥೆಯನ್ನು ನೋಡಿ, ಕಿರೀಟವರ್ಮನನ್ನು ಕುರಿತು ಶಂಕೆಯಿಂದ:—''ಇದೇಕೀಕನ್ಯೆಯು ಮೂರ್ಛಿತೆಯಂತೆ ಕಾಣುವಳು ?'' ಎಂದು ಪ್ರಶ್ನೆ ಮಾಡಲು ಕಿರೀಟವರ್ಮನು ನಿಜವನ್ನು ಮಾಜಿ ಸುಳ್ಳಾದ್ಭುತವನ್ನೆಗೆಯಿಂದೊಡಗೂಡಿ:—'' ತನ್ನ ಗೆಳತಿಯರೊಡನೆ ಗಾನಮಾಡುತಿರ್ದಳು, ಅದನ್ನು ಬಿಟ್ಟು ಬರಲಾರದೆ ಮೂರ್ಛಿತ್ವವನ್ನು ಮಾಡಲಾಗಿ, ಸ್ವಲ್ಪ ಗಜರಿದೆನು. ಅದರಿಂದ ಅವಮಾನವೂ ಲಜ್ಜೆಯೂ ಉಂಟಾಗಿ ಈರೀತಿ ಮೂರ್ಛಿತೆಯಂತೆ ನಟಿಸುವಳು.'' ಎಂದು ಹೇಳಲು, ಇದಕ್ಕನುಸಾರವಾಗಿ ಪುರೋಹಿತನು:—'' ಹೆಣ್ಣುಮಕ್ಕಳ ಸ್ವಭಾವವೇ ಅಷ್ಟು!'' ಎಂದು ಬಳಿಕ ಅಭಿಪಾರಗನ ಕಡೆಗೆ ತಿರುಗಿ ಗಜಬಜಗುಟ್ಟುತ್ತ:—'' ಅಯ್ಯಾ ವರನೆ! ಈಮಾಂಗಲ್ಯವನ್ನು ತೆಗೆದುಕೊಂಡು ಕನ್ಯೆಯಕೊರಲಿಗೆ ಬೇಗನೆ ಕಟ್ಟು; ಮುಹೂರ್ತವು ಮೀರಿಹೋದೀತು.'' ಎಂದು ತ್ವರೆಪಡಿಸಲು ಅಭಿಪಾರಗನು ಆದರಂತೆಯೇ ಮಾಂಗಲ್ಯವನ್ನು ಬಂಧಿಸಿದ ಬಳಿಕ, ಆಕನ್ಯೆಯ ಅಂಗವು ತಪಿಸುತ್ತಿರುವುದನ್ನು ಅರಿತು ಭೀತಿಯಿಂದ:—'' ಇದೇಕೀ ಕನ್ಯೆಯ ಮೈ ಕಾಯುತ್ತಿಹುದು? ಬಹು ಬಳಲಿ ವಿಸ್ಮೃತಿಗೊಂಡಿರುವಂತೆ ಕಾಣುವುದು! ಮುಂದಿನಕಾರ್ಯಗಳು ನಡೆಯುವ ಬಗೆ ಎಂತು?'' ಎಂದು ಭೀತಿಪಡಲು ಪುರೋಹಿತನು ನಗುತ್ತ ಅಲಕ್ಷ್ಯದೊಡನೆ:—''ಅದೇನು ಮಾಡುತ್ತೆ? ವಾಸಿಯಾದರೆ ಹೋಗುತ್ತೆ! ಹಾಗೆ ಮುಂದಿನ ಕಾರ್ಯಗಳು ಈಗ ಆಗದೇ ಇರ್ದರೂ, ಮುಂದೆ ಆವಾಗಬೇಕಾದರೂ ಮಾಡಿಕೊಳ್ಳಬಹುದು; ಸದ್ಯಕ್ಕೆ ಮಾಂಗಲ್ಯಧಾರಣವಾಯಿತಲ್ಲಾ, ಆಷ್ಟು ಸಾಕು; ಮೊದಲು ಕನ್ಯೆಯನ್ನು ಒಳಕ್ಕೆ ಕರೆದುಕೊಂಡುಹೋಗಿ ಜಾಗ

ಮೂರ್ಛಿತೆಯಾಗಿದ್ದ ಉನ್ಮಾದಯಂತಿಯ ಅನಿಚ್ಛಾ ವಿವಾಹ.

ನೀತಿ :—ಅನಿಚ್ಛಾ ವಿವಾಹವು ಮಹಾನರ್ಥಗಳಿಗೆ ಕಾರಣವು.



Unmadayanti's marriage against her will and when in faint.

MORAL :—Marriage by force becomes the source of manifold dangers.

ತೆಯಿಂದ ಉಪಚರಿಸಿ.'' ಎಂದುಹೇಳಲು ಅಲ್ಲಿಗೇ ವಿವಾಹ ಕಾರ್ಯವನ್ನು ಮುಗಿಸಿ ಕನ್ಯೆಯನ್ನು ಕರೆದುಕೊಂಡು ಹೊರಟುಹೋದರು.

ಎರಡನೆಯ ಅಂಗವು ಮುಗಿದುದು.

ಮೂರನೆಯ ಅಂಗ.

ಒಂದನೆಯ ಸಂಧಿ

CHASTE LOVE REFLECTS EVEN IN DREAMS

ಸಾಧ್ವೀವಿಲಾಸ

ಬಳಿಕ ಮರುದಿವಸ ಕಿರೀಟವರ್ಮನ ಗೃಹದ ದಾದಿಯೋರ್ವಳು ಮೂರ್ಛಿತೆಯಾದ ಉನ್ಮಾದಿನಿಯನ್ನು ಮಲಗಿಸಿದ್ದ ಚಂದ್ರಕಾಂತ ನಿರ್ಮಿತವಾದ ಕರುಮಾಡದಬಳಿಗೈದಿ, ಸುಮತಲ್ಪದಲ್ಲಿ ಪವಡಿಸಿರುವ ಉನ್ಮಾದಿನಿಯನ್ನು ನೋಡಿ ಚಿಂತೆಯಿಂದ:—'' ಎಷ್ಟು ಉಪಚರಿಸಿದರೂ ಈ ಬಾಲಕಿಗೆ ಇನ್ನೂ ಎಚ್ಚರಿಕೆಯು ಉಂಟಾಗಲಿಲ್ಲವು; ಪ್ರಾಣಕ್ಕೆ ಅಪಾಯವಾದರೆ ಇನ್ನೇನುಗತಿ? ಒಳ್ಳೆಯದು! ಈಕರವಸ್ತ್ರವನ್ನು ಪನ್ನೀರಿನಲ್ಲಿ ಅದ್ದಿ ಇವಳ ನೆತ್ತಿಯಮೇಲೆ ಹಾಕಿ, ಕಣ್ಣುಗಳಿಗೂ ಸ್ವಲ್ಪ ಪನ್ನೀರನ್ನು ತೊಡೆಯುವೆನು!'' ಎಂದು ಆತ್ಮಗತವಾಗಿ ಮಾತನಾಡಿಕೊಂಡು, ಹಾಗೆಯೇ ಮಾಡಿದಳು.

ಬಳಿಕ ಉನ್ಮಾದಿನಿಯು ಮೆಲ್ಲನೆ ಕಣ್ದೆರೆದೆದ್ದು ಕುಳಿತು ತಾನು ಅನುಭವಿಸುತಿರ್ದ ಸ್ವಪ್ನವೃತ್ತಾಂತವನ್ನು ಕುರಿತು ಆತ್ಮಗತವಾಗಿ ಈರೀತಿ ಜುಗುಪ್ಸೆಯಿಂದ ಮಾತನಾಡಿಕ್ಕೊಂಡಳು:—''ಎನ್ನ ಸ್ವಪ್ನಸುಖಕ್ಕೂ ವಿಘ್ನವುಂಟಾಗಬಹುದೆ? ನಾನೆಂತಹ ಹತಭಾಗ್ಯಳು! ಮಹಾರಾಜನು ಸಿಂಹಾಸನದಮೇಲೆ ಕುಳಿತು ಎನ್ನನ್ನು ಕುರಿತು ಕರುಣದಿಂದ:—'ಎಲೌ

ಸಾಧ್ವಿಯೆ! ಇಲ್ಲಿಬಾ; ಎನ್ನ ಅರ್ಧಾಸನವನ್ನು ಅಲಂಕರಿಸು! ' ಎಂದು ಹೇಳಿ, ಎನ್ನ ಕೈಗಳನ್ನು ಹಿಡಿದು ಮೇಲಕ್ಕೆ ಕರೆದುಕೊಂಡು, ನಾನಲ್ಲಿ ಕುಳಿತತರುವಾಯ ವಿನಯದಿಂದ—' ಎಲೌ ಸರ್ವಮಂಗಳೆ! ನಿನ್ನನ್ನು ಅಮಂಗಳೆಯೆಂದು ಅನ್ಯಾಯವಾಗಿ ನಿಂದಿಸಿ, ಅನೇಕ ದುಃಖ ಗಳಿಗೆ ಗುರಿಮಾಡಿದೆನು. ಎಲೌ ಮಾನಿನಿ! ಆಕ್ರೋಪವನ್ನು ಮರೆ. ಪ್ರಿಯೆ! ಆ ಅಪರಾಧವನ್ನು ಕ್ಷಮಿಸು' ಎಂದು ಬೇಡಿದಬಳಿಕ ಎನ್ನ ಗಲ್ಲವನ್ನ ಲುಗಿ, ಪನ್ನೀರಿನಲ್ಲಿ ನೆನೆದ ತನ್ನ ಚೀನಾಂಬರದ ನೆರಿಗಿನಿಂದ ಎನ್ನ ಕಂಬನಿ ಗಳನ್ನು ತೊಡೆಯುತಿರ್ದ ಸಮಯಕ್ಕೆ ಸರಿಯಾಗಿ ಆರೋ ಎನ್ನ ಕಣ್ಣನ್ನು ಮುಟ್ಟಿ ಎಚ್ಚರಗೊಳಿಸಿದರು. ಮಹಾರಾಜನಿಂದೊಡಗೂಡಿ ಜಾಗ್ರತ್ಸು ಖವನ್ನು ಪಡೆಯುವ ಭಾಗ್ಯವೆನಗೆ ಇಲ್ಲಗೇ ಇರ್ದರೂ ಸ್ವಪ್ನಸುಖವ ನ್ನಾದರೂ ಅನುಭವಿಸುತಿರ್ದೆನು. ಈಗ ಅದಕ್ಕೂ ವಿಘ್ನ ವುಂಟಾಯಿತೆ? ಹಾ ವಿಧಿಯೆ! '' ಎಂದು ವಿಷಾದಪಡುತ್ತಿರುವಲ್ಲಿ ಅವಳ ತಲೆಯಮೇ ಲಿರ್ದ ಕರವಸ್ತ್ರದಿಂದ ಪನ್ನೀರಿನ ಹನಿಗಳು ಜಾರಿ ಅವಳ ಕೈಮೇಲೆ ತೊಟ್ಟಿ ಡಲು ಬೆಚ್ಚಿದವಳಾಗಿ ಆಶ್ಚರ್ಯದಿಂದ:—''ಇದೇನು! ಈ ನೀರಿನ ಹನಿಗಳೆ ಲ್ಲಿಯವು? '' ಎಂದು ಕೈಯನ್ನು ಆಘ್ರಾಣಿಸಿ:—'' ಇವು ಪನ್ನೀರಿನ ಹನಿಗಳಂತೆ ತೋರುವುವು! ಇವೆಲ್ಲಿಂದುದಿರುವುವು? '' ಎನ್ನುವುದರೊಳ ಗಾಗಿ ಮತ್ತೊಂದು ಹನಿಯು ಕಪೋಲಪ್ರದೇಶದಿಂದ ಜಾರಿಬರಲು, ತನ್ನ ಕಪೋಲನ್ನು ಮುಟ್ಟಿಕೊಳ್ವಲ್ಲಿ ನೆನೆದ ಆಕರವಸ್ತ್ರದ ತುದಿಯು ಕೈಗೆಸಿಲು ಕಲು, ಅದನ್ನು ತೆಗೆದುಕೊಂಡು ನೋಡಿ ಆಶ್ಚರ್ಯದಿಂದ:—'' ಇದಾ ವುದೀಸೂಕ್ಷ್ಮವಾದ ಕರವಸ್ತ್ರವು? ಇದು ನಮ್ಮದೇಶದಲ್ಲಿ ರಚಿಸಲ್ಪಟ್ಟು ದಲ್ಲವೆಂದು ತೋರುವುದು! ಪನ್ನೀರಿನಿಂದ ನನೆಯಿಸಲ್ಪಟ್ಟಿದು, ಎನ್ನ ತಲೆಯ ಮೇಲಕ್ಕೆ ಬರಲು ಕಾರಣವೇನು? '' ಎಂದು ಕುತೂಹಲದಿಂದ ಅತ್ತಿತ್ತ ನೋಡುವಲ್ಲಿ ದಾದಿಯು ಕಣ್ಣಿ ಕಾಣಿಸಿಕೊಂಡು ಪರಿಹಾಸ ದೊಡನೆ:—'' ಎಲೌ ಕುವರಿ ! ನಿನಗೆ ಆಶ್ಚರ್ಯವನ್ನುಂಟುಮಾಡಿದೀಕರವ ಸ್ತ್ರವು ನಿನಗೆ ಉಡುಗೆರೆಯಾಗಿ ಕೊಡಲ್ಪಟ್ಟ ಅಮೂಲ್ಯವಸ್ತುಗಳಲ್ಲಿ

ಒಂದಲ್ಲವೆ ? '' ಎಂದು ಹೇಳಲು, ಉನ್ಮಾದಿನಿಯು ಭ್ರಾನ್ತೆಯಾಗಿ:—
' ಇದನ್ನಾರೆನಗೆ ಕೊಟ್ಟರು ? '' ಎಂದು ಕೇಳಲು,ದೂತಿಯು ನಸು
ನಕ್ಕು: —''ಇಂತಹ ಉಡುಗೆರೆಯನ್ನಿನ್ನಾರು ಕೊಡುವರು; ನಿನ್ನ ಪ್ರಾಣ
ಪ್ರಿಯನಾದ ಅಭಿಪಾರಗನೇ! '' ಎಂದು ಪರಿಹಾಸ್ಯಮಾಡಲು, ಉನ್ಮಾ
ದಿನಿಯು ಕಿವಿಗಳನ್ನು ಮುಚ್ಚಿಕೊಂಡು ಅಸಹ್ಯಭಾವದಿಂದ:—'' ಛೀ!
ನೀಚಳೆ!'' ಎಂದು ಕೋಪದಿಂದ ಆ ಕರವಸ್ತ್ರವನ್ನು ಆಕ್ಷಣವೇ ಛಿದ್ರಛಿದ್ರ
ವಾಗಿ ಹರಿದುಹಾಕಿ, ರೋಷದಿಂದ:—'' ಎನಗೆ ಉಡುಗೆರೆಯನ್ನು
ಕೊಡಲು ಅವನಾರು?'' ಎಂದು ಕೇಳಲು, ದೂತಿಯು ಪುನಃ ನಗುತ್ತ:—
''ನಿನಗೆ ಮಾಂಗಲ್ಯವನ್ನು ಕಟ್ಟಿದ ಪತಿಯು ! '' ಎಂದು ಹೇಳಲು
ಉನ್ಮಾದಿನಿಯು ಕೋಪೋದ್ರೇಕವನ್ನು ತಾಳಲಾರದೆ ಉಚ್ಚಸ್ವರದಿಂದ:—
'ಹಾ! ದುಷ್ಟೆಯೆ ! ನೀನಿಂತಹ ಅಪ್ರಿಯವಾದ ವಾಕ್ಯಗಳನ್ನು ಛಿಟ್ಟ
ತನದಿಂದ ಎನ್ನಿದಿರಿಗೆ ಮಾತನಾಡದೆ ಆಚೆಗೆ ತೆರಳು! '' ಎಂದು ಆರ್ಭ
ಟಿಸಲು ದಾದಿಯು ಸ್ವಲ್ಪ ಬೆದರಿದವಳಾಗಿ, ಬಳಿಕ ಖಿನ್ನತೆಯೊಡನೆ:—
''ನಿಜಾಂಶವನ್ನು ಹೇಳಿದರೆ ಎನ್ನಮೇಲೇಕೆ ಕೋಪಿಸಿಕೊಳ್ವೆ ? ಒಳ್ಳೆ
ಯದು! ನಾನು ಹೇಳಿದ ಮಾತುಗಳು ನಿಜವೋ ಸುಳ್ಳೋ ಎಂಬು
ದನ್ನು ಪರೀಕ್ಷಿಸುವುದಾದರೆ ಈ ಮುಕುರವನ್ನು ತೆಗೆದುಕೊಂಡು ನೋ
ಡಿಕೊ ; ಈ ಮಾಂಗಲ್ಯವೂ ಮತ್ತು ನೀನು ಧರಿಸಿರುವೀಉಡಿಗೆತೊಡಿಗೆಗ
ಳೆಲ್ಲವೂ ಅವನಿಂದಲೇ ಕೊಡಲ್ಪಟ್ಟವೆಂಬಂಶವು ನಿನಗೇ ವ್ಯಕ್ತವಾಗು
ವುದು. '' ಎಂದು ಹೇಳಿ ಅಲ್ಲಿನ್ನ ಕನ್ನಡಿಯನ್ನು ತೆಗೆದು ಅವಳಮುಂದೆ
ಹಿಡಿದಳು ಬಳಿಕ ಉನ್ಮಾದಿನಿಯು ಆ ಕನ್ನಡಿಯಲ್ಲಿ ಮೊದಲು ಕಂಡು
ಬಂದ ಮಾಂಗಲ್ಯವನ್ನು ರೋಷದಿಂದ ಕಿತ್ತುಬಿಸುಟು, ಅಸಹ್ಯಭಾವನೆ
ಯಿಂದ:—''ಈ ಹಾಳು ಆಭರಣಗಳನ್ನು ಸುಡು! ನನಗೇಕೆಬೇಕು?''
ಎಂದು ಅವುಗಳನ್ನೆಲ್ಲ ಕಳೆದು ಈಡಾಡಿ, ದುಃಖವನ್ನು ಸಹಿಸಲಾರದೆ ಬಾ
ಷ್ಪನಯನಳಾಗಿ ಗದ್ಗದಕಂಠದಿಂದ:—''ಅಲ್ಲಿರುವ ಎನ್ನ ನಾರುಮಡಿಯನ್ನು
ಬೇಗ ಕೊಡು.'' ಎಂದು ಅವಳಿಂದ ಅದನ್ನು ತರಿಸಿಕೊಂಡು ಅವಳನ್ನು

ಕುರಿತು:–"ನಾನಿನ್ನು ಈ ಕೇಳೀನಿಲಯದಲ್ಲಿ ವಾಸಮಾಡುವುದಿಲ್ಲ; ಮನೆಯಹಿಂದಿರುವ ದೇವೀಮಂದಿರದಲ್ಲಿಯೇ ವಾಸಮಾಡುವೆನು." ಎಂದು ರೋದಿಸುತ್ತ ಧರ್ಮದೇವೀಮಂದಿರವನ್ನು ಕುರಿತು ಪಿತ್ತಲಕಡೆಗೆ ಹೊರಟುಹೋದಳು.

ಎರಡನೆಯ ಸಂಧಿ

ವೀರಪಾತಿವ್ರತ್ಯ

NO ADVERSITY CAN POLLUTE THE REAL CHASTITY.

ಬಳಿಕ ಉನ್ಮಾದಿನಿಯು ಧರ್ಮದೇವೀ ಮಂದಿರವನ್ನು ಸೇರಿ, ನಾರುಮಡಿಯನ್ನುಟ್ಟು, ಸ್ವಭಾವಗುಣಗಳೆಂಬ ಅಭರಣಗಳಿಂದ ಅಲಂಕೃತೆಯಾಗಿ, ಮನೋವ್ಯಥೆಯಿಂದ ಕೊರಗಿ, ಕಾಳ್ಗಿಚ್ಚಿಗೊಳಗಾದ ಕೋಮಲಲತೆಯಂತೆ ನಯನಾಂಬುವನ್ನು ಸುರಿಸುತ್ತ ಕುಳ್ಳಿರ್ದು, ಬಳಿಕ ಈರೀತಿ ಶಾತ್ಮಜಿಜ್ಞಾಸೆಯನ್ನು ಮಾಡಿದಳು:—"ಹಾ! ಹತಭಾಗ್ಯಳೆ! ನಾನೀಗೇನುಮಾಡಲಿ ? ರಾಜನಂತೂ ಎನ್ನನ್ನು ಅನ್ಯಾಯವಾಗಿ ಧಿಕ್ಕರಿಸಿದನು; ಅವಿಧೇಯಳಾದಳೆಂದು ಎನ್ನನ್ನು ಎನ್ನ ಜನನೀಜನಕರೂ ಧಿಕ್ಕರಿಸಿದುವರು; ಎನ್ನ ಕರ್ಣಗಳಿಗೆ ರಾಜನ 'ದೇವಸೇನ' ಎಂಬ ನಾಮವೊಂದು ಹೊರತು ಉಳಿದುವುಗಳು ಶೂಲಪ್ರಾಯವಾಗಿರುವುವಲ್ಲದೆ, ಎನ್ನ ಮನವು ಅತನನ್ನು ಹೊರತು ಇತರಪುರುಷರನ್ನೆಲ್ಲ ಒಸಕಸಹೋದರ ಸಮಾನರೆಂದು ನಿಶ್ಚಯಿಸಿಬಿಟ್ಟಿರುವುದು ; ನಾನಾದರೋ ಅಸ್ವತಂತ್ರಳು ಮತ್ತು ಅಬಲೆ; ಇಲ್ಲಿಯೇ ವಾಸಮಾಡಿಕೊಂಡು ಇರೋಣವೆಂದರೆ, ಎನ್ನ ಮಾತಾಪಿತೃಗಳ ಗರ್ಹಣವನ್ನೂ ಹಿಂಸೆಯನ್ನೂ ಸಹಿಸಲಾರೆನು; ಅದಲ್ಲದೆ ಅಭಿಪಾರಗನ ದೆಸೆಯಿಂದ ಕ್ಷಿಪ್ರದಲ್ಲಿಯೇ ಎನ್ನ ಪಾತಿವ್ರತ್ಯವು ಭಂಗಗೊಳ್ಳುವುದು; ಅಥವಾ ಅರಿಗೂ ಅರಿಯದಂತೆ ವನಾಂತರಕ್ಕಾದರೂ

ಹೊರಟುಹೋಗೋಣವೆಂದರೆ, ಈ ಯೌವನವೂ ಈ ಹಾಳು ರೂಪವೂ ಎಷ್ಟಗೂ ಎನ್ನ ವ್ರತಕ್ಕೂ ಮೃತ್ಯುಗಳಾಗಿ ಪರಿಣಮಿಸುವುವು; ಹಾ! ವಿಧಿಯೆ! ನಾನೀಗೇನುಮಾಡಲಿ? ಸರ್ವಾಶೆಗಳೂ ಭಗ್ನವಾದುವ; ನಾನಿನ್ನು ಜೀವಿಸಿ ಫಲವೇನು? ಈಗೆನಗೆ ಮೃತಿಯೇ ಪಥ್ಯವ.''ಎಂದು ಸ್ಖಲಾಪಿಸಿದ ಬಳಿಕ, ಅಲ್ಲಿರ್ದ ಮಾಧವೀಲತೆಯನ್ನು ತನ್ನ ಕೊರಳ್ಗೆ ಸುತ್ತಿಕೊಳುತ್ತ ದೇವಿಗೆ ತಲೆವಾಗಿ ನಮಿಸಿ, ನೇಣ್ಗೊಳಲುಬ್ಬುಗಿಸುತ್ತಿರುವಲ್ಲಿ ದೇವೀ ಮಂದಿರದಿಂದ ಘನಗಂಭೀರವಾದ ಒಂದು ಸುನಾದವು ಥಟ್ಟನೆ ಕೇಳಿಸಿತು.

ಅಷ್ಟುಹೊತ್ತಿಗೆ ಸರಿಯಾಗಿ ಇದೆಲ್ಲವನ್ನೂ ಮರೆಯೋಳ್ ನಿಂತು ನೋಡುತಿರ್ದ ಆ ದಾದಿಯು ವೇಗದಿಂದೋಡಿಬಂದು:—''ಹಾ ! ವತ್ಸೆ ದುಡುಕದಿರು! ದುಡುಕದಿರು!! '' ಎಂದು ಅವಳ ಕೊರಳೊಳಿರ್ದ ಲತೆಯನ್ನು ತೆಗೆದು ಬಿಸುಟು, ಅವಳನ್ನು ತಕ್ಕೈಸಿ, ಪ್ರೀತಿಬಹುಮಾನಗಳಿಂದ:—'' ಎಲೌ ಮಾನಿನಿ ! ನಿನ್ನ ಸ್ವಪ್ನವಿಷಯವನ್ನು ಮರೆತೆಯಾ ? ನೀನು ಮಹಾಪತಿವ್ರತೆಯಾದುದರಿಂದ ನಿನ್ನ ಸ್ವಪ್ನಫಲವು ಸಿದ್ಧಿಸುವುದು ! ಈರೀತಿ ಪ್ರಾಣವನ್ನು ತ್ಯಜಿಸುವುದು ಯುಕ್ತವಲ್ಲ; ನೀನಿಲ್ಲಿಯೇ ಬ್ರಹ್ಮ ಚರ್ಯೆಯಲ್ಲಿರ್ದು ದೇವೀವ್ರತವನ್ನಾಚರಿಸು; ನಿನ್ನ ಕೋರಿಕೆಗಳೆಲ್ಲವೂ ಕ್ಷಿಪ್ರದಲ್ಲಿಯೇ ಸಿದ್ಧಿಸುವುವು; ನಿನ್ನ ಪಾತಿವ್ರತ್ಯಕ್ಕೆ ಭಂಗವುಬಾರದಂತೆ ತಕ್ಕ ಉಪಾಯವದ್ದು ಮಾಡುವೆನು ! ಅದಲ್ಲದೆ ನೀನು ಅಸ್ವಸ್ಥೆಯಾಗಿರುವುದರಿಂದ ಅಭಿಪಾರಗನು ವಿವಾಹವನ್ನು ಪೂರೈಸುವುದಕ್ಕೆ ಯತ್ನವಿಲ್ಲವೆಂದು ನಿಶ್ಚಯಿಸಿ ಈದಿನ ಸೈನ್ಯಸಮೇತನಾಗಿ ಕಾಶ್ಮೀರದೇಶದ ಯುದ್ಧಕ್ಕೆ ಹೊರಟುಹೋಗುವನು; ಯುದ್ಧಕ್ಕೆ ಹೋದವನ ಮುಂದಿನ ಸ್ಥಿತಿಯನ್ನು ಹೇಗೆ ಹೇಳುವುದಕ್ಕಾದೀತು; ಹಾಗೆ ಅವನು ಉಳಿದು ಬಂದರೆ ಆಗ್ಗೆ ತಕ್ಕ ಉಪಾಯವನ್ನು ಮಾಡೋಣ ! ಪ್ರಕೃತದಲ್ಲಿ, ನೀನು ಬಾಲ್ಯದಿಂದಲೂ ಆಚರಿಸುತಿರ್ದ ಧರ್ಮದೇವೀವ್ರತವನ್ನು ಸಾಂಗಗೊಳಿಸುವವರೆಗೂ ಪುರುಷಸಂಪರ್ಕವನ್ನು ಮಾಡುವುದಿಲ್ಲವೆಂಬುದಾಗಿಯೂ,

ಅದಾದ ಬಳಿಕ ಪತ್ನೀತ್ವವನ್ನು ಅವಲಂಬಿಸುವುದಾಗಿಯೂ ವರ್ತಮಾನವನ್ನು ಹುಟ್ಟಿಸಿ, ಈ ವಿಷಯವನ್ನು ನಿನ್ನ ಜನನೀಜನಕರಿಗೂ ತಿಳುಹುವಂತೆ ಮಾಡಿ, ನಿನಗೆ ಆವ ಅಪಾಯವೂ ಉಂಟಾಗದಂತೆ ಮಾಡುವೆನು! ನೀನು ದುಃಖವನ್ನು ತ್ಯಜಿಸಿ ಸಮಾಧಾನಚಿತ್ತಳಾಗು! " ಎಂದು ಹೇಳಿ ಹೊರಟುಹೋದಳು.

ಮೂರನೆಯ ಸಂಧಿ.

ರಾಜಶಾಸನೋದ್ಘೋಷಣೆ

ROYAL PROCLAMATION

ಒಳಿಕ ಉನ್ಮಾದಿನಿಯು ಅಲ್ಲಿಯೇ ಇರ್ದು, ದಾದಿಯು ಹೇಳಿದಂತೆಯೇ ಬ್ರಹ್ಮಚರ್ಯವ್ರತವನ್ನವಲಂಬಿಸಿ, ಪತಿಧ್ಯಾನದಲ್ಲಿಯೇ ಅನೇಕ ದಿನಗಳನ್ನು ಕಳೆದಳು. ಹೀಗಿರುವಲ್ಲಿ ಕ್ರಮಾಗತವಾದ ಕೌಮುದೀಮಹೋತ್ಸವವು ಮರುದಿನ ಪ್ರಾಪ್ತವಾಗುವುದನ್ನು ಗ್ರಾಮದ ತಳವಾರನು ಪುರವಾಸಿಗಳೆಲ್ಲರಿಗೂ ತಿಳಿಯಪಡಿಸುವ ಉದ್ದೇಶದಿಂದ ಪ್ರತಿಯೊಂದು ಬೀದಿಯಲ್ಲಿಯೂ ಸಾರಿಕೊಂಡುಬಂದು, ಈ ಉನ್ಮಾದಿನಿಯ ಗೃಹದಿದಿರಿನಲ್ಲಿಯೂ ತಂಬಟೆಯನ್ನು ಧ್ವನಿಗೆಯ್ಯುತ್ತ ಧೃಷ್ಟತೆಯಿಂದ:–" ಎಮ್ಮನ್ನಾಳುವ ಮಹಾರಾಜನು ಪ್ರತಿವರ್ಷದಲ್ಲಿಯೂ ಪ್ರಾಪ್ತವಾದಂತೆ ಈ ವರ್ಷದಲ್ಲಿಯೂ ಪ್ರಾಪ್ತವಾಗುವ ಕೌಮುದೀಮಹೋತ್ಸವದಲ್ಲಿ, ತನ್ನ ಪ್ರಜೆಗಳ ಸುಕ್ಷೇಮವನ್ನೂ ಪುರದ ರಾಮಣೀಯಕತ್ವವನ್ನೂ ನೋಡುವುದಕ್ಕಾಗಿ ಈ ಪಟ್ಟಣದ ರಾಜವೀಧಿಗಳಲ್ಲಿ ಜಿಒಯವಾಡುವನು! ಇದಕಾರಣ ಪುರವಾಸಿಗಳೆಲ್ಲರೂ ತಂತಮ್ಮ ಗೃಹಗಳನ್ನು ಗುಡಿತೋರಣ ಪತಾಕೆಗಳಿಂದ ಪರಮದರ್ಶನೀಯವಾಗುವಂತೆ ಅಲಂಕರಿಸತಕ್ಕದ್ದು! ಮತ್ತು ಪ್ರಜೆಗಳಾದವರೆಲ್ಲರೂ ದಿವ್ಯವಸ್ತ್ರಭೂಷಣಗಳಿಂದ ಅಲಂಕೃತ

ರಾಗಿ ರಾಜದರ್ಶನವನ್ನು ಪಡೆಯುತಕ್ಕುದು; ಮತ್ತು ಸಮಸ್ತದೇವಮಂದಿರಗಳಲ್ಲಿಯೂ ದೀಪೋತ್ಸವಾದಿ ಸೇವೆಗಳು ನಡೆಸತಕ್ಕುದು. '' ಎಂದು ಸಾರುತ್ತ ಹೋದನು.

ನಾಲ್ಕನೆಯ ಸಂಧಿ.

INFLUENCE OF CUPID

ಮನ್ಮಥಪ್ರಭಾವ

ಈ ಘೋಷಣೆಯನ್ನು ಕೇಳಿದ ಉನ್ಮಾದಿನಿಯು ಪರಮಾನಂದ ಭರಿತೆಯಾಗಿ, ಮಾರಣೆಯ ದಿನ ತನ್ನ ತಂದೆಯ ಮನೆಯ ಮುಮ್ಮಾಳಿಗೆಯಮೇಲೆ ರಾಜನಾಗಮನವನ್ನು ನಿರೀಕ್ಷಿಸುತ್ತ ಒರ್ವಳೇ ನಿಂದು ವ್ಯಸನದಿಂದ:— '' ನೆರೆಮಾಳಿಗೆಯಲ್ಲಿ ನಿಂತಿರುವ ಎನ್ನ ಗೆಳತಿಯರೆಲ್ಲರೂ ವಿವಿಧ ವಸ್ತ್ರಾಲಂಕೃತೆಯರಾಗಿ ಮೆರೆಯುತ್ತಿಹರು; ನಾನಾದರೊ ವಿಗತಭೂಷಣಳಾಗಿಯೂ ಕೃಶಳಾಗಿಯೂ ಇರುವೆನು; ಹೀಗಿರುವಲ್ಲಿ ಮಹಾರಾಜನು ಎನ್ನನ್ನು ನೋಡುವನೆ? ವಿವಿಧವಾದ ಪೂದೊಡವುಗಳಿಂದಲಂಕೃತವಾಗಿ ನವಸೌರಭಗಳನ್ನು ಬೀರುವ ವನವನಿತೆಯ ಸೊಬಗು ವಸಂತರಾಜನ ಚಿತ್ತಾಕ್ಷಿಗಳನ್ನು ಆಕರ್ಷಿಸುವುದೇ ಹೊರತು, ಜೀರ್ಣತರುಪಂಗ್ತಿಗಳ ಆಸ್ತಿತ್ವವಲ್ಲವು; ಅದರಂತೆ ರಾಜನ ದೃಷ್ಟಿಯು ಅವರ ಮೇಲೆ ಬೀಳುವುದೇ ಹೊರತು ಎನ್ನ ಮೇಲೆ ಬೀಳಲಾರದು; ಈಗ ನಾನೂ ವಸ್ತ್ರಾಭರಣಗಂಧಮಾಲ್ಯಾದಿಗಳಿಂದ ಅಲಂಕೃತೆಯಾಗಿ ಎನ್ನ ಪ್ರಾಣವಲ್ಲಭನ ಚಿತ್ತಾಕ್ಷಿಗಳನ್ನು ಆಕರ್ಷಿಸೋಣವೆಂದರೆ, ವ್ರತವನ್ನು ಕೈಕೊಂಡಿರುವೆನು, ಅದಲ್ಲದೆ ಎನ್ನ ತಂದೆತಾಯ್ಗಳು ಹಾಸ್ಯಮಾಡುವರು; ಈಗ ಬಿಟ್ಟರೆ ಮಹಾರಾಜನ ಸಂದರ್ಶನಕ್ಕೆ ಅವಕಾಶವೇ ಇಲ್ಲವು; ಈಗೇನು ಮಾಡಲಿ?'' ಎಂದು ಒಂದುಕ್ಷಣಕಾಲ ತಳಮಳಗುಟ್ಟುತಿರ್ದು ಬಳಿಕ ಪ್ರಶಾಂತೆಯಾಗಿ ಸಂತೋಷದಿಂದ:—'' ಆಃ!

ಮಹಾರಾಜನ ದೃಷ್ಟಿಯನ್ನಾಕರ್ಷಿಸುವುದಕ್ಕೆ ನಾನು ಹೀಗಿರುವುದೇ ಯುಕ್ತವಾಗಿಹುದು ; ಏಕೆಂದರೆ, ಎನ್ನ ಪ್ರಾಣಪ್ರಿಯನು ಇತರ ರಾಜರಂತೆ ಬಾಹ್ಯಾಡಂಬರಕ್ಕೆ ಬೆರಗಾಗತಕ್ಕವನೂ ಅಲ್ಲ; ಧನಿಕರನ್ನು ಮಾತ್ರವೇ ಪುರಸ್ಕರಿಸತಕ್ಕವನೂ ಅಲ್ಲ, ಮುಖ್ಯವಾಗಿ ಅನಾಥರನ್ನೂ ದರಿದ್ರರನ್ನೂ ದುಃಖಿತರನ್ನೂ ಕಾಪಾಡುವ ಕಾರ್ಯವನ್ನೇ ತನ್ನ ಪರಮಧರ್ಮವನ್ನಾಗಿ ಅವಲಂಬಿಸಿರುವನು ; ಈ ವಿಷಯಗಳೆಲ್ಲವೂ ಲೋಕವಿದಿತವಾಗಿರುವುವು ; ಈ ಕಾರಣದಿಂದಲೇ ಈ ದಿನ ನಗರಯಾತ್ರೆಯನ್ನು ಮಾಡುವನು ; ಮತ್ತು ತನ್ನ ರಾಜ್ಯದಲ್ಲಿ ಜನರಿಗೆ ಅವವಿಧವಾದ ದುಃಖವೂ ಇರಕೂಡದೆಂಬುವದಕ್ಕಾಗಿಯೇ ಪ್ರತಿವರ್ಷವೂ ಉತ್ಸವವ್ಯಾಜದಿಂದ ಸಮಸ್ತ ಪ್ರಜೆಗಳನ್ನೂ ಗುಂಪುಗೂಡುವಂತೆ ಮಾಡಿ, ಅವರುಗಳಿಗೆ ದರ್ಶನವನ್ನೀಯುವ ಮಧ್ಯಕಾಲದಲ್ಲಿ ತನ್ನ ಪ್ರಜೆಗಳ ಸುಖದುಃಖಸ್ಥಿತಿಗಳನ್ನು ತಾನೇ ತಿಳಿದುಕೊಳ್ವನು ; ಆದಕಾರಣ ನಾನಿಲ್ಲಿ ದುಃಖಿಸುತ್ತ ನಿಂತಿರ್ದರೆ ಅದರ ಕಾರಣವನ್ನೂ ವಿಚಾರಿಸಬಹುದು; ಅನಂತರ ಎನ್ನ ಕಷ್ಟಗಳೆಲ್ಲವೂ ನಿವಾರಣವಾಗಲೂ ಬಹುದು.'' ಎಂದು ಮಾತನಾಡಿಕೊಳುತ್ತಿರುವ ಸಮಯಕ್ಕೆ ಸರಿಯಾಗಿ ಮಹಾರಾಜನು ದಿವ್ಯರಥದಲ್ಲಿ ಕುಳಿತು ಬರುತ್ತಿರುವುದನ್ನು ನೋಡಿ, ತಾನಾಗಿಯೇ ಉಕ್ಕಿಬರುತ್ತಿರುವ ದುಃಖವನ್ನು ಸಹಿಸಲಾರದೆ ಕಂಬನಿಗರೆಯಲಾರಂಭಿಸಿದಳು.

ಇತ್ತಲಾ ದೇವಸೇನಮಹಾರಾಜನು ತನ್ನ ಪುರದಲಂಕಾರವನ್ನು ನೋಡುತ್ತ ಹಾಗೆಯೇ ಇತ್ತ ತಿರುಗಲು, ಉನ್ಮಾದಿನಿಯ ಅಸಮವಾದ ಸೌಂದರ್ಯಪ್ರಭೆಯು ಅವನ ಚಿತ್ತಾಕ್ಷಿಗಳನ್ನು ದೂರದಿಂದಲೇ ಆಕರ್ಷಿಸಿತು. ಬಳಿಕ ದೇವಸೇನನು ಪರಮವಿಸ್ಮಿತನಾಗಿ ಅವಳನ್ನೇ ದಿಟ್ಟಿಸುತ್ತ ಆತ್ಮಗತವಾಗಿ:—

[ತಾ:—" ಇವಳೇನು, ಸಾಕ್ಷಾತ್ ಆ ಕೌಮುದೀಲಕ್ಷ್ಮಿಯೊ !

ಶ್ಲೋ॥ ಕಾಮುದೀ ಕಿಂ ಸ್ವಯಂ ಶಾಕ್ಷಾದ್ಭವನಸ್ಯಾಸ್ಯ ದೇವತಾ ।
ಸ್ವರ್ಗಸ್ತ್ರೀ ದೈತ್ಯಯೋಷಿದ್ವಾ ನ ಹ್ಯೇತನ್ಮಾನುಷಂ ವಪುಃ ॥೨೦॥

ಅಥವಾ ಈ ಮನೆಯ ದೇವತೆಯೊ ! ಅಥವಾ ದೈತ್ಯಸ್ತ್ರೀಯೊ ! ಇಲ್ಲವೆ ಸ್ವರ್ಗಾಂಗನೆಯೊ ! ಅಂತೂ ಈಕೆಯ ಅಂಗವಿಲಾಸವು ನಿಜವಾಗಿಯೂ ಮನುಷ್ಯಸಂಬಂಧವಾದುದಲ್ಲ !''

ಎಂದು ಆಶ್ಚರ್ಯಪಡುತ್ತಿರುವಲ್ಲಿ ರಥವು ಆ ಮನೆಯ ಸಮೀಪಕ್ಕೆ ಬರಲು ಅವಳನ್ನು ಚೆನ್ನಾಗಿ ನೋಡಿ ಶಂಕೆಯಿಂದ:–'' ಇದೇಕೀಕೆಯು, ಶರದಭ್ರದಿಂದ ಪರಿವೇಷ್ಟಿತವಾದ ಸಂಧ್ಯೆಯಂತೆ, ತನ್ನ ಅಂಗಸೌವರ್ಣ್ಯವನ್ನು ಈ ನಾರುಮಡಿಯಿಂದ ಮರೆಗೊಳಿಸಿಹಳು? ಮತ್ತು ದಾವಾಗ್ನಿಗೊಳಗಾದ ಕೋಮಲಲತೆಯಂತೆ ಕಂಬನಿಗರೆಯುದ್ದಿಹಳು ? ಇವಳನ್ನು ನೋಡಿದರೆ, ನಂದನಿಂದ ಧಿಕ್ಕೃತೆಯಾದ ಆ ಸುಂದರಿಯನ್ನು ಪೋಲ್ವಳು ; ಇವ್ವಾದರೂ ಇವಳು ಅನಾಸ್ವಾದಿತಪದ್ಮಿನಿಯಂತಿರುವಳು ; ಹೀಗಿರುವಲ್ಲಿ ಇವಳ ದುಃಖಕ್ಕೆ ಕಾರಣವೇನಾಗಿರಬಹುದು ! '' ಎಂದು ತನ್ನಲ್ಲಿ ತಾನೇ ಮಾತನಾಡಿಕೊಳುತ್ತ ಅವಳನ್ನೇ ನೋಡುತ್ತಿರುವುದನ್ನು ಸಾರಥಿಯಾದ ಸುನಂದನು ನೋಡಿ ಭಯದಿಂದ:—'' ಇದೇನೀಪ್ರಮಾದವು! ಮಹಾರಾಜನು ಈ ಕಿರೀಟವತ್ಸನ ಮಗಳನ್ನೇ ನೋಡುತ್ತಿಹನು; ಅದಕ್ಕೆ ತಕ್ಕಂತೆ ಇವಳ ರೂಪವೊ ಅತ್ಯಾಶ್ಚರ್ಯಕರವಾಗಿಹುದು ; ಇವಳೂ ಮಹಾರಾಜನನ್ನೇ ಪಾನಮಾಡುವಂತೆ ನೋಡುತ್ತಿರುವುದಲ್ಲದೆ ಮಗುಳುವುಂಟಾಗುವಂತೆ ಅಳುತ್ತಲೂ ಇರುವಳು; ಮತ್ತು ಮಹಾರಾಜನುಎಲ್ಲರೂ ನೋಡುವಂತೆ ರಾಜಬೀದಿಯಲ್ಲಿ ಸುಂದರಿಯಾದೀಬಾಲಿಕೆಯನ್ನು ಈರೀತಿ ದೀರ್ಘದೃಷ್ಟಿಯಿಂದ ನೋಡುತ್ತಿರುವುದನ್ನು ಜನರು ಕಂಡರೆ ರಾಜನಲ್ಲಿ ಅವರಿಗೆ ಬಹುಲಾಘವವು ಉಂಟಾಗುವುದರಿಂದ ಇದು ರಾಜಮರ್ಯಾದೆಗೂ ನೀತಿಗೂ ಕೇವಲ ವಿರುದ್ಧವು ; ಅದಲ್ಲದೆ ಮಹಾರಾಜನು ಇನ್ನೂ ತರುಣನು ; ಇದಾದರೊ ಬಾಲಯುವತಿಯ ಸಂದರ್ಶನವು; ಆದಕಾರಣ ಬೇಗನೆ ರಥವನ್ನು ಮುಂದುವರಿಸುವುದೇ ಈಗ್ಗೆ ಯುಕ್ತವು. ಎಂದು ರಥಾಶ್ವಗಳನ್ನು ವೇಗಗೊಳಿಸಿದನು.

ಬಳಿಕ ಮಹಾರಾಜನು, ಆತುರದಿಂದ:–ಸುನನ್ದನೆ! ರಥವನ್ನು

ನಿಲ್ಲಿಸು! ನಿಲ್ಲಿಸು!! ಇಂತಹ ಉತ್ಸವದ ದಿನವಾಗಿರ್ದರೂ ಈ ನವಯು ವತಿಯು ಸಂತೋಷಪಡುವುದಕ್ಕೆ ಪ್ರತಿಯಾಗಿ ದುಃಖಿಸುತ್ತಿಹಳು; ಆಕೆಯ ಕಷ್ಟವನ್ನು ವಿಚಾರಿಸದೆ ಮುಂದಕ್ಕೆ ಹೋಗತಕ್ಕುದು ಎನಗೆ ಯುಕ್ತವಲ್ಲ; ನಿಲ್ಲಿಸು! ನಿಲ್ಲಿಸು!! '' ಎಂದು ಹೇಳಿದರೂ ಸಾರಥಿಯು, ರಥವನ್ನು ನಿಲ್ಲಿಸುವುದು ಯುಕ್ತವಲ್ಲವೆಂದು ಮನದೋಳ್ ನಿಶ್ಚಯಿಸಿ ಮಹಾರಾಜನನ್ನು ಕುರಿತು:—"ಮಹಾರಾಜನೇ! ಕುದುರೆಗಳು ಸ್ವಾತಂತ್ರ್ಯವನ್ನು ಮೀರಿಹೋದುವು. ''ಎಂದು ಹೇಳುತ್ತ ರಥವನ್ನು ವೇಗಗೊಳಿಸಲು, ರಾಜನು ಉನ್ಮಾದಿನಿಯನ್ನೂ ಉನ್ಮಾದಿನಿಯು ರಾಜನನ್ನೂ ಮರೆಯಾಗುವವರೆಗೂ ಒಬ್ಬರಿಗೊಬ್ಬರು ನೋಡುತಿರ್ದು ಹಾಗೆಯೇ ಅಗಲಿಹೋದರು.

ಐದನೆಯು ಸಂಧಿ

REPENTANCE

ಪಶ್ಚಾತ್ತಾಪ

ಬಳಿಕ ದೇವಸೇನ ಮಹಾರಾಜನು ಅರಮನೆಯನ್ನು ಸೇರಿದ ತರುವಾಯ, ಮಹಾಚಿಂತಾಕ್ರಾಂತನಾಗಿ—"ಎನ್ನ ರಾಜ್ಯದಲ್ಲಿ. . ., ಅದರಲ್ಲಿಯೂ ಎನ್ನ ರಾಜಧಾನಿಯಲ್ಲಿ. . ., ಅದರೊಳಗೂ ರಾಜವೀಥಿಯಲ್ಲಿ. . ., ಇಷ್ಟೇ ಅಲ್ಲದೆ ಮಹೋತ್ಸವದದಿನ. . ., ಈರೀತಿ ಸ್ತ್ರೀಯು ಎನ್ನ ಕಣ್ಣಿದಿರಿನಲ್ಲಿಯೇ ದುಃಖಿಸುತಿರ್ದುದನ್ನು ನೋಡಿದೆನಲ್ಲ! ಹಾ! ಇದೆಂತಹ ಅನ್ಯಾಯವ! ರಾಜಧಾನಿಯಲ್ಲಿಯೇ ಈ ರೀತಿಯಾದಮೇಲೆ ದೂರಗ್ರಾಮಗಳಲ್ಲಿ ಇನ್ನೆಂತಿರಬಹುದು! ಒಳ್ಳೆಯದು ಮೊದಲು ಇವಳ ಸಂಗತಿಯನ್ನು ತಿಳಿಯುವೆನು! '' ಎಂದು ತನ್ನಲ್ಲಿತಾನೇ ಮಾತನಾಡಿಕೊಂಡ ಬಳಿಕ, ಸಾರಥಿಯಾದ ಸುನಂದನನ್ನು ಕುರಿತು ಕುತೂಹಲದಿಂದಿಂತೆಂದನು:—"ಸುನಂದನೇ !

[೨೧ ತಾ:—"ಬಿಳುಪಾದಗೊಡೆಯಿಂದ ಸುತ್ತಲ್ಪಟ್ಟ ನಾವು ನೋ

ಶ್ಲೋ॥ ಸಿತಪ್ರಾಕಾರಸಂವೀತಂ ವೇತ್ತಿ ಕಸ್ಯ ನು ತದ್ಗೃಹಮ್ ।
ಕಾ ಸಾ ತತ್ರ ವ್ಯರೋಚಿಷ್ಟ ವಿದ್ಯುತ್ಸಿತಇವಾಮ್ಬುದೆ ॥೨೧॥

ಡಿದ ಆ ಸುನೆಯು ಅರದೆಂಬುದನ್ನೂ, ಮತ್ತಾ ಶುಕ್ಲಮೇಘದಗ್ರದಲ್ಲಿ ಹೊಳೆವ ವಿದ್ಯುಲ್ಲತೆಯಂತೆ ಅಲ್ಲಿ ಶೋಭಿಸುತಿರ್ದವಳಾರೆಂಬುದನ್ನೂ ನೀನು ಬಲ್ಲೆಯಾ ?'']

ಎಂದು ಕೇಳಲು ಸಾರಥಿಯು ವಿನಯದಿಂದ:– '' ದೇವ! ಆಮನೆಯು ನಿನ್ನ ರಾಜಧಾನಿಯ ವಾಸಸ್ಥನಾಗಿಯೂ ಮಹಾಧನಿಕನಾಗಿಯೂ ಇರುವ ಆ ಕಿರೀಟವತ್ಸನದು; ಅಲ್ಲಿ ನಿನ್ನನ್ನು ನೋಡುತ್ತ ನಿಂತಿರ್ದವಳೇ ಅವನ ಮಗಳು; ಅವಳನ್ನೇ ಉನ್ಮಾದಿನೀ ' ಅಥವಾ 'ಉನ್ಮಾದಯನ್ತೀ' ಎಂದು ಜನರು ಕರೆವರು. '' ಎಂದು ಹೇಳಲು ದೇವಸೇನನು ಅತ್ಯಂತಕುತೂಹಲದಿಂದ:– '' ಏನು ಏನು! ಇನ್ನೊಂದು ಸಾರಿ ಹೇಳು !!'' ಎಂದು ಕೇಳಲು ಸಾರಥಿಯು ಮೊದಲಿನಂತೆಯೇ ಪುನಃ ಹೇಳಲು, ಮಹಾರಾಜನು ಸಾರಥಿಗೆ ಅಪ್ಪಣೆಯನ್ನಿತ್ತು ಕಳುಹಿದ ತರುವಾಯ, ವ್ಯಸನವಿಷಾದಗಳಿಂದ:– '' ಅಹಾ! ಎಂತಹ ಪ್ರಮಾದವಾಯಿತು! ಸಂದೇಹವೇನು! ಕಿರೀಟವತ್ಸನು ಹಿಂದೆ ಎನ್ನಲ್ಲಿಗೆ ಬಂದು ಎನ್ನ ಮಗಳನ್ನು ಪತ್ನಿಯನ್ನಾಗಿ ಸ್ವೀಕರಿಸೆಂದು ಪ್ರಾರ್ಥಿಸಿದನಷ್ಟೆ; ಇವಳಿಗಾಗಿಯೇ ಅಲ್ಲವೆ? ಊಃ! ಇವಳೇ ಆ ಉನ್ಮಾದಯನ್ತಿಯು! ಅಡ್ಡಿಯೇನು –

[೨೨.ತಾ:–''ಅಯ್ಯೋ! ಮನೋಹರವಾದ ಅಕ್ಷರಗಳಿಂದ ಕೂಡಿರುವ ಆಕೆಯ (ಉನ್ಮಾದಯನ್ತೀ) ಎಂಬ ದಿವ್ಯನಾಮವು ಎಂತು ಅನ್ವರ್ಥವುಳ್ಳದಾಗಿರುವುದೊ ಅದರಂತೆಯೇ, ಆ ಉನ್ಮಾದನ್ತಿಯ ಶುಭ್ರವಾದ ಮಂದಹಾಸವು ಎನ್ನನ್ನು ನಿಜವಾಗಿಯೂ ಉನ್ಮತ್ತನಂತೆ ಮಾಡಿರುವುದು! '']

ಎಂದು ಹಂಬಲಿಸಿದುದಲ್ಲದೆ ಪುನಃ ಪಶ್ಚಾತ್ತಾಪದಿಂದ:–''ಅಯ್ಯೋ! ಇಂತಹ ಸರ್ವಮಂಗಳೆಯಲ್ಲಿ ಇಲ್ಲದ ಅಮಂಗಲದೋಷವನ್ನಾರೋಪಿಸಿ, ವರಿಸದೆ ಧಿಃಕರಿಸಿದುದಲ್ಲದೆ ಅವಮಾನಕ್ಕೂ ಗುರಿಮಾಡಿದೆನಲ್ಲಾ! ಅವಳೂ ಮತ್ತವಳ ತಂದೆತಾಯ್ಗಳೂ ಎಷ್ಟುನೊಂದುಕೊಂಡರೊ ಕಾಣೆ

ಅನ್ವರ್ಥರಮ್ಯಾಕ್ಷರಸೌಕುಮಾರ್ಯಮಹೋ ಕೃತಂ ನಾಮ ಯಥೇದಮಸ್ಯಾಃ|
ಉನ್ಮಾದಯನ್ತೀತಿ ಶುಚಿಸ್ಮಿತಾಯಾಸ್ತಥಾ ಹಿ ಸೋನ್ಮಾದಮಿವಾಕರೋನ್ಮಾಮ್ ||

ನು; ಈಕೆಗಿಂತಲೂ ಅನುರೂಪೆಯಾದ ಕನ್ಯೆಯು ಭುವನತ್ರಯದಲ್ಲಿ ಹುಡುಕಿದರೂ ಎನಗೆ ಲಭಿಸುವಳೆ? ತಾನಾಗಿಯೇ ಒಲಿದು ಬಂದಿರ್ದಾಗ ಧಿಕ್ಕರಿಸಿ, ಈಗ ಲಜ್ಜೆಯಿಲ್ಲದೆ ಹೇಗೆ ಪುನಃ ಅಪೇಕ್ಷಿಸಲಿ? ಬಾಲ್ಯದಾರಭ್ಯ ಆಕೆಗೆ ಎನ್ನಲ್ಲಿಯೇ ಅನುರಾಗವಿರ್ದುದರಿಂದಲೇ ಎನ್ನನ್ನು ನೋಡುವಲ್ಲಿ ಅಳುತಿರ್ದಳು. ಹಾ! ಎಂತಹ ಅಚಾತುರ್ಯವಾಯಿತು!''ಎಂದು ಪಶ್ಚಾತ್ತಾಪಪಡುತ್ತಿರುವ ಸಮಯಕ್ಕೆ ಸರಿಯಾಗಿ ರಾಜಕಾರ್ಯಗಳ ನಿಯಮಿತಕಾಲಗಳನ್ನು ಸೂಚಿಸುವ ಘಂಟೆಯ ' ಢಣ್ ಢಣ್ ' ಎಂಬ ತೀವ್ರಶಬ್ದವಾಗಲು ಮಹಾರಾಜನು ಅಸಹ್ಯಭಾವದಿಂದ:—

[೨೧.ತಾ:—'' ಎನ್ನ ಮನವು ಆಕೆಯ ಅಂಗವಿಲಾಸವನ್ನೂ ಮುಖ ಭಾವವನ್ನೂ ದೃಂಗ್ಮಾಧುರ್ಯವನ್ನೂ ಸ್ಮರಿಸುತ್ತ ನಿಶ್ಚಲತ್ವವನ್ನು ಹೊಂದಿರುವಲ್ಲಿ, ಈ ಹಾಳುನಾಳಿಕೆಯು ಕರ್ಣಕಠೋರವಾದ ಶಬ್ದವನ್ನು ಮಾಡುವುದರಿಂದ ಎನಗೆ ಕೋಪವನ್ನುದ್ರೇಕಿಸುವುದು! '']

ಎಂದು ಖಿನ್ನನಾಗಿ ಒಳಿಕ ಒಂದುಕ್ಷಣ ಯೋಚಿಸಿ:—''ಅವರೊ ಹಿತಸ್ತ್ರೀಲಕ್ಷಜನ್ಯರು ಎನ್ನನ್ನು ಮೋಸಗೊಳಿಸಿರಬಹುದೆ?...ಹಾಗೆ ಊಹಿಸಲು ಅವಕಾಶವಿಲ್ಲ; ಏಕೆಂದರೆ, ಅವರು ಧರ್ಮಪರಾಯಣರು ; ಮತ್ತು ಹಿಂದಾವವಿಧವಾದ ಕೃತ್ರಿಮವನ್ನೂ ಎನ್ನಲ್ಲಿ ಎಸಗಿಲ್ಲ; ಆದಕಾರಣಇದು ದೈವವೈಚಿತ್ರ್ಯವಾಗಿರಬೇಕು, ಇವ್ವಾದರೂ ಎನ್ನ ಮನವು ವಿಷಾದದಿಂದ ನೋಯುವುದು ; ಅಯ್ಯೋ ! ಎನಗೆ ಸುಖವನ್ನೂ ಸಂತೋಷವನ್ನೂ ಉಂಟುಮಾಡುವ ಸದುದ್ದೇಶದಿಂದ ಎನ್ನಲ್ಲಿಗೆ ಬಂದ ಸಭ್ಯನಾದ ಆಕಿರೀಟವತ್ಸನಿಗೆ ಮನ್ನಣೆಯನ್ನು ಮಾಡುವುದಕ್ಕೆ ಪ್ರತಿಯಾಗಿ ಅಪಮಾನವನ್ನೂ ದುಃಖವನ್ನು ಉಂಟುಮಾಡಿದೆನಲ್ಲಾ ! ಈಗೇನು ಮಾಡಲಿ? ಈ ದುಃಖವನ್ನೆಂತು ಮರೆಯಲಿ? ಹಾ ! ದುಷ್ಟವಿಧಿಯೆ ! '' ಎಂದು ವಿಷಾದಪಡುತ್ತಿರುವಲ್ಲಿ ಪಾಕಶಾಲಾಧ್ಯಕ್ಷನು ರಾಜನಲ್ಲಿಗೆಬಂದು ಕೈಮು

ತಸ್ಯಾ ವಪುರ್ವಲಸಿತಸ್ಮಿತವೀಕ್ಷಿತೇಷು ಸಂರಾಗಸಿಶ್ಚಲಮತೇಃ ಸಹಸಾ ಸ್ಮರನ್ತಿ।
ಕಾರ್ಯೋಂತರಕ್ರಮನಿವೇದನದೃಷ್ಟಶಬ್ದಾ ವಿದ್ವೇಷಮುತ್ತುದತಿಚೇತಸಿನಾಲಿಕಾಮೆ॥

ಗಿದು:—" ಜೀಯಾ! ಭೋಜನಕಾಲವು ಮೀರಿ ಬಹುಹೊತ್ತಾಯಿತು; ನಿನ್ನಾಗಮನವನ್ನು ನಿರೀಕ್ಷಿಸುತ್ತ ರಾಜಕುಲದವರು ಊಟವಿಲ್ಲದೆ ಕುಳಿತಿರುರು; ಬೇಗ ಬಿಜಯಮಾಡಬೇಕಾಗು. " ಎಂದು ಪ್ರಾರ್ಥಿಸಲು ಮಹಾರಾಜನು ಜುಗುಪ್ಸೆಯಿಂದ:—" ಒಳ್ಳೆಯದು! ಬರುವೆನು ನಡೆ." ಎಂದು ಅವನನ್ನು ಕಳುಹಿದ ಬಳಿಕ ತನ್ನಲ್ಲಿತಾನೇ:—" ಎನ್ನಿಂದ ಇತರರಿಗೇಕೆ ಹಿಂಸೆಯುಂಟಾಗಬೇಕು? ನಾನೂ ಹೋಗಿಬಂದ ಶಾಸ್ತ್ರವನ್ನು ಮಾಡುವೆನು. "ಎಂದು ವ್ಯಸನದಿಂದ ಭೋಜನಶಾಲೆಗೆ ಹೊರಟುಹೋದನು.

ಐರನೆಯ ಸಂಧಿ.

THE PREVALENCE OF UNRIGHTEOUSNESS.
ಅಧರ್ಮಪ್ರವೇಶ

ಬಳಿಕ ದೇವಸೇನಮಹಾರಾಜನು ಪಶ್ಚಾತ್ತಾಪದಿಂದ ಕೊರಗಿದವನಾಗಿ, ಇದರಂತೆಯೇ ಅನ್ನಪಾನಾದಿಗಳಲ್ಲಿಯೂ ರಾಜಕಾರ್ಯಗಳಲ್ಲಿಯೂ ಉಪೇಕ್ಷೆಯನ್ನು ಹೊಂದಿ ದಿನೇದಿನೇ ಕ್ಷಯಿಸುತ್ತಿರುವ ದೇಹಧೈರ್ಯಗಳುಳ್ಳವನಾಗಿ, ಏಕಾಕಿಯಾಗಿಯೇ ವಾಸಮಾಡಲುಪಕ್ರಮಿಸಿದನು.

ಇತ್ತಲಾ ದೇವೇಂದ್ರನೇ ಮೊದಲಾದ ದೇವತೆಗಳು ಈರಾಷ್ಟ್ರದಲ್ಲಿ ತಮ್ಮ ಕೃತ್ರಿಮಾದಿಗಳನ್ನು ಪ್ರಯೋಗಿಸಿ ತದ್ದ್ವಾರ ಈ ರಾಜನನ್ನೂ ಇವನ ಪ್ರಜೆಗಳನ್ನೂ ಪಾಪಕಾರ್ಯಾಸಕ್ತರನ್ನಾಗಿಮಾಡಿ ನಾಶಪಡಿಸಲು ಇದೇ ಸಕಾಲವೆಂದು ಭಾವಿಸಿ, ಇತರದೇಶದ ಅನಾರ್ಯರಿಗೆಲ್ಲ ದುರಾಶೆಯನ್ನುಂಟುಮಾಡಲಾಗಿ, ಅವರುಗಳು ಈ ರಾಷ್ಟ್ರವನ್ನು ಪ್ರವೇಶಿಸಿ ಕ್ರೂರಕರ್ಮಗಳನ್ನೂ ಘಾತುಕತ್ವವನ್ನೂ ಮಾಡಲಾರಂಭಿಸಿದರು. ಬಳಿಕ ತಾವೂ ತಮ್ಮ ತಮ್ಮ ದುಷ್ಪ್ರಭಾವಗಳನ್ನು ಪ್ರಯೋಗಿ

ಸಲುಪಕ್ರಮಿಸಿದರು. ಹೀಗಾಗಲು ಈ ರಾಷ್ಟ್ರದಲ್ಲಿ ಎಲ್ಲೆಲ್ಲಿ ನೋಡಿದರೂ ಕೊಲೆಯೂ, ಚೌರ್ಯವೂ, ದ್ರೋಹವೂ ದಿನಕ್ರಮೇಣ ಪ್ರಬಲಿಸಲುಪಕ್ರಮಿಸಿದುವು. ಹೀಗಿರುವಲ್ಲಿ ಒಂದುದಿನ ಈ ರಾಜಧಾನಿಯು ವಾಸಸ್ಥನಾಗಿಯೂ ಧನಿಕರಲ್ಲಿ ಅಗ್ರಗಣ್ಯನಾಗಿಯೂ ರಿಕ್ತಾನಾಥರಿಗೆ ಆಶ್ರಯಭೂತನಾಗಿಯೂ ಧರ್ಮಪರಾಯಣನಾಗಿಯೂ ಇರ್ದ ವೈಶ್ಯ ಕುಲತಿಲಕನಾದ ' ದಾಯಕಶ್ರೇಷ್ಠಿ ' ಎಂಬುವನ ಮನೆಗೆ ಇತರ ದೇಶದ ಚೋರರು ಪ್ರವೇಶಿಸಿ, ಅವನ ಮನೆಯಲ್ಲಿರ್ದ ಸಮಸ್ತವಸ್ತುಗಳನ್ನೂ ಅಪಹರಿಸಿಬಿಟ್ಟಿರ್ದರು. ಆ ಶ್ರೇಷ್ಠಿಯು ಪ್ರಭಾತದ ಪ್ರತ್ಯೂಷ ಸಮಯದಲ್ಲಿ ನಿದ್ರೆಯಿಂದೆದ್ದು ನೋಡುವಲ್ಲಿ, ಒಂದು ಹಗ್ಗದ ಶಿಂಬಿಯೂ ಮತ್ತೊಂದು ದಾತ್ರವೂ (ಕುಡುಗೋಲೂ) ಮಾತ್ರವೇ ಇರ್ದಿತೇ ಹೊರತು ಮತ್ತೊಂದು ವಸ್ತುವೂ ಗೋಚರಿಸದೇ ಇರಲು ಚಿಂತಾಕ್ರಾಂತನಾಗಿ ವ್ಯಸನದಿಂದ:—

" ಹಾ ! ವಿಧಿಯೇ ! ಇದುವರೆಗೂ ಎಮ್ಮ ರಾಜ್ಯದಲ್ಲಿ ಪ್ರಜೆಗಳಿಗೆ ಆವುದೊಂದು ಉಪದ್ರವವೂ ಇರಲಿಲ್ಲ; ಈಗ ಎಲ್ಲೆಲ್ಲಿ ನೋಡಿದರೂ ಚೌರ್ಯವು ಪ್ರಬಲಿಸಿ ಅನೇಕರ ಮನೆಗಳು ಹಾಳಾಗಿಹೋದುವು; ಎನ್ನ ಮನೆಯಲ್ಲಾದರೋ ಈ ಹಗ್ಗವನ್ನೂ ಈ ದಾತ್ರವನ್ನೂ ಮಾತ್ರವೇ ಬಿಟ್ಟು ಉಳಿದ ಎನ್ನ ಧನವನ್ನೆಲ್ಲ ಅಪಹರಿಸಿಕೊಂಡು ಹೋಗಿರುವರು. ಈಗ ನಾನೇನುಮಾಡಲಿ ? ಎನ್ನಿಧನವು ಅನ್ಯದೇಶದ ದರಿದ್ರರಿಂದ ಅಪಹರಿಸಲ್ಪಟ್ಟಿರ್ದರೆ ಅದು ಸೂಪಯುಕ್ತವೇ ಆಯಿತು ; ಹಾಗಲ್ಲದೆ ಎನ್ನ ಧನೋಚ್ಛ್ರಾಯವನ್ನು ನೋಡಿ ಸಹಿಸಲಾರದ ದುಷ್ಟರಿಂದೇನಾದರೂ ಅಪಹರಿಸಲ್ಪಟ್ಟಿರ್ದಲ್ಲಿ ಅದುಮಾತ್ರ ಎನಗೆ ಮಹಾದುಃಖವನ್ನುಂಟುಮಾಡುವುದು ; ಒಳ್ಳೆಯದು! ಈ ವಿಷಯವನ್ನು ರಾಜದೂತರಿಗೆ ತಿಳುಹುವೆನು." ಎಂದು ಆ ರಜ್ಜುದಾತ್ರಗಳನ್ನು ಕೈಯಲ್ಲಿ ಪಿಡಿದುಕೊಂಡು ಮನೆಯನ್ನು ಬಿಟ್ಟು ಸ್ವಲ್ಪದೂರ ಹೋದನು.

ಅಷ್ಟುಹೊತ್ತಿಗೆ ಸುಯೋಗಿ ಇವನಿದಿರಿಗೆ ಬರುತಿರ್ದ ಪತ್ನೀಪುತ್ರರಿಂದ ಸಮೇತನಾದ ಶೀಲಾಸನನೆಂಬ ಒಬ್ಬ ಬಡಬ್ರಾಹ್ಮಣನು ದುಃಖಿ

ಸುತ್ತ ಇವನನ್ನು ಸಂಧಿಸಿದನು. ಇವನನ್ನು ನೋಡಿದ ದಾಯಕಶ್ರೇಷ್ಠಿಯು ಬಹುವ್ಯಸನಗೊಂಡು:–"ಧರ್ಮಾತ್ಮನಾಗಿಯೂ ಸದಾಚಾರಸಂಪನ್ನನಾಗಿಯೂ ಜ್ಞಾನೈಶ್ವರ್ಯಶೋಭಿತನಾಗಿಯೂ ಇರ್ದ ಈ ಬ್ರಾಹ್ಮಣೋತ್ತಮನ ದುಃಖಕ್ಕೆ ಕಾರಣವೇನಾಗಿರಬಹುದು? ಒಳ್ಳೆಯದು! ಹೊದಲು ಇದನ್ನು ವಿಚಾರಿಸಿ ಬಳಿಕ ಇತರಕಾರ್ಯವನ್ನು ಮಾಡುವೆನು." ಎಂದು ನಿಶ್ಚಯಿಸಿ, ಆಬ್ರಾಹ್ಮಣನನ್ನು ಕುರಿತು ಭಕ್ತಿಗೌರವಗಳಿಂದ:–"ಸ್ವಾಮಿ! ಇದೇಕೆ ಈರೀತಿ ದುಃಖಿಸುವಿರಿ?" ಎಂದು ಪ್ರಶ್ನೆ ಮಾಡಲು ಶೀಲಾಸನನು:–"ಕಾಲಾನುಗತವಾದ ವಾರ್ಧಕದಿಂದಲೂ, ಈಗ ಪ್ರಾಪ್ತವಾಗಿರುವ ದಾರಿದ್ರ್ಯದೋಷದಿಂದಲೂ, ನೇತ್ರಪಾಟವವು ಕುಂದುತ್ತಿರುವುದರಿಂದ ನಿನ್ನನ್ನು ಗುರ್ತಿಸಲಾರೆನು ; ದಯೆಯಿಂದ ನಿನ್ನ ನಾಮವನ್ನು ತಿಳುಹು?" ಎಂದು ಕೇಳಲು ದಾಯಕಶ್ರೇಷ್ಠಿಯು ಸಖೇದನಾಗಿ:–"ಹಾ! ನೀಚದಾರಿದ್ರ್ಯವೇ ?" ಎಂದು ನಿಟ್ಟುಸಿರುಬಿಟ್ಟು ಬಳಿಕ ವಿನಯದಿಂದ:–"ನಾನು ದಾಯಕಶ್ರೇಷ್ಠಿಯು; ತಾವು ಈರೀತಿ ದುಃಖಿತರಾಗಲು ಕಾರಣವೇನು? ತಮ್ಮ ಸೇವೆಗೆ ನಾನು ಸಿದ್ಧನಾಗಿಹೆನು." ಎಂದು ಹೇಳಲು ಶೀಲಾಸನನು:–ನಿನಗೆ ಮಂಗಳವಾಗಲಿ! ಹಾಗಾದರೆ ಹೇಳುವೆನು ಕೇಳು——ಎಮ್ಮ ಮಹಾರಾಜನ ಈ ರಾಜಧಾನಿಯಲ್ಲಿ ನಾವುಗಳಿದುವರೆಗೂ ಆವುದೊಂದು ದುಃಖವನ್ನೂ ಉಪದ್ರವವನ್ನೂ ಅರಿಯದೆ, ಆರ್ಯವಿಹಿತವಾದ ಧರ್ಮವನ್ನೂ ಕುಲವಿಹಿತವಾದ ವೃತ್ತಿಯನ್ನೂ ಅನುಷ್ಠಿಸುತ್ತ, ಮಹಾರಾಜನ ಶ್ರೇಯಃಪ್ರಾರ್ಥನೆಯನ್ನು ಮಾಡಿಕೊಂಡು ಸುಖವಾಗಿರ್ದೆವು ; ಇತರ ರಾಜ್ಯಗಳಲ್ಲಿ ಕ್ಷಾಮ ದಾರಿದ್ರ್ಯ ಮುಂತಾದುವು ಪ್ರಾಪ್ತವಾದರೂ ಧರ್ಮಪ್ರಿಯನಾದೆಮ್ಮ ಮಹಾರಾಜನ ಈ ರಾಷ್ಟ್ರದಲ್ಲಿ ಋತುಧರ್ಮಗಳು ಸಕಾಲದಲ್ಲಿ ಪ್ರಾಪ್ತವಾಗಿ ಅನರ್ಘ್ಯವಾಗಿ ಧಾನ್ಯಾದಿಗಳು ಬೆಳೆಯುತಿರ್ದುದರಿಂದಲೂ ಮತ್ತು ಪ್ರಜೆಗಳೆಲ್ಲರೂ ಸ್ವಧರ್ಮ ಸ್ವವೃತ್ತಿಗಳಿಂದ ಪತಿತರಾಗದೆ ಕಾರ್ಯದಕ್ಷರಾಗಿರ್ದುದರಿಂದಲೂ ಯಾವುದೊಂದು ವಿಪತ್ತಿಗೂ ಪೂರ್ಗವೇ ಇರಲಿಲ್ಲವು ; ಈಗಲಾದರೊ ಅನಾ

ವೃಷ್ಟಿ ಕ್ಷಾಮ ದಾರಿದ್ರ್ಯ ರೋಗ ಮುಂತಾದುವು ಪ್ರಾಪ್ತವಾಗಿಹವು; ಇದಕ್ಕನುಕೂಲವಾಗಿ ಜನರಲ್ಲಿ ಪರೋಪಕಾರಬುದ್ಧಿಯೂ ಅನ್ಯೋನ್ಯ ಮೈತ್ರಿಯೂ ಸಾಹಾಯ್ಯಬುದ್ಧಿಯೂ ತಪ್ಪಿಹೋಗಿ ಸ್ವಾರ್ಥಕಲಹಗಳೂ ಪರಸ್ಪರದ್ರೋಹಗಳೂ ಉಂಟಾಗಿ ರಾಜ್ಯವೇ ದುಸ್ಥಿತಿಗೆ ಪ್ರಾಪ್ತವಾಯಿತು; ಇಷ್ಟೇಅಲ್ಲದೆ ಕೊಲೆಗಳೂ ಚೌರ್ಯವೂ ಎಲ್ಲೆಲ್ಲಿಯೂ ವೃದ್ಧಿಯಾಗಿರುವುದಲ್ಲದೆ ಎನ್ನ ಮನೆಯೂ ಆಚೌರ್ಯದಿಂದಲೇ ನಿರ್ಮೂಲವಾಗಿ, ಆಚೋರರ ಕ್ರೂರಹಿಂಸೆಗಳಿಂದ ಕೆಲವು ಪ್ರಾಣಗಳೂ ನಾಶವಾಗಿ, ನಾವುಗಳೂ ಅಪಾರವಾಗಿ ನೊಂದು, ಪ್ರಾಣರಕ್ಷಣೆಗಾಗಿ ರಾಜ್ಯಾಧಿಕಾರಿಗಳಲ್ಲಿ ಮೊರೆಗೊಂಡೆವು; ಸ್ವಕ್ಷೇಮಚಿಂತನೆಯಲ್ಲಿಯೂ ವನಿತಾಭೋಗದಲ್ಲಿಯೂ ನಿರತರಾದ ಆ ಅಧಿಕಾರಗಳು ಎಮ್ಮ ಕಷ್ಟವನ್ನು ಉಪೇಕ್ಷಿಸಿದುದರಿಂದ ಎಮಗೆ ಇನ್ನು ಈ ಅಧರ್ಮದ ಮಧ್ಯದಲ್ಲಿರ್ದರೆ ಸ್ವಧರ್ಮವೂ ಮಾನವೂ ನಾಶವಾದೀತೆಂಬ ಭೀತಿಯಿಂದ ಉಳಿದಿರುವ ಪತ್ನೀಪುತ್ರರಿಂದೊಡಗೂಡಿ ವನಕ್ಕಾದರೂ ಹೋಗಿ ಅಲ್ಲಿ ಸ್ವಧರ್ಮವನ್ನೂ ಪ್ರಾಣಗಳನ್ನೂ ರಕ್ಷಿಸಿಕೊಳ್ಳಬೇಕೆಂದು ಉದ್ಯುಕ್ತನಾಗಿ ಇತ್ತ ಬಂದೆನು.'' ಎಂದು ಹೇಳಿ ರೋದನಮಾಡಲುಪಕ್ರಮಿಸಲು, ದಾಯಕಶ್ರೇಷ್ಠಿಯು ಚೌರ್ಯದಿಂದ ತನಗುಂಟಾದ ಹಾನಿಯನ್ನೂ ಸವಿಸ್ತಾರವಾಗಿ ಹೇಳಿ, ತಾನು ರಾಜಸೇವಕರಲ್ಲಿಗೆ ಹೋಗಬೇಕೆಂದಿದ್ದ ಕಾರ್ಯವನ್ನು ಶುದ್ಧಾಂಗವಾಗಿ ಮರೆತು, ಆ ಬ್ರಾಹ್ಮಣನನ್ನು ಕುರಿತು ಧೈರ್ಯದಿಂದ:—'' ಪೂಜ್ಯರೇ! ತಾವು ಚಿಂತಿಸಕೆಲಸವಿಲ್ಲ; ನಾನು ಈದಿನಮೊದಲ್ಗೊಂಡು ಕಷ್ಟಜೀವನವನ್ನು ಅವಲಂಬಿಸಿ ಎನ್ನೀಕೈಯೊಳಿರುವ ಕುಡುಗೋಲಿನಿಂದ ಅರಣ್ಯದ ತೃಣಗಳನ್ನು ಕುಯಿದು ತಂದು ಅದರ ವಿಕ್ರಯದಿಂದ ಲಭಿಸಿದ ದ್ರವ್ಯದಲ್ಲಿ ಎನ್ನುದರ ಪೋಷಣೆಯನ್ನೂ ಬ್ರಾಹ್ಮಣರಾದ ನಿಮ್ಮ ಪೂಜೆಯನ್ನೂ ಮಾಡಿಕೊಂಡು ಸುಖವಾಗಿರುವೆನು. ನೀವು ವನಕ್ಕೆ ತೆರಳಕೆಲಸವಿಲ್ಲ. '' ಎಂದು ಹೇಳಲು ಆಬ್ರಾಹ್ಮಣವನು ಕರುಣದಿಂದ:—ಆಯುಷ್ಮಂತನೆ! ನಿನ್ನ ಧರ್ಮಬುದ್ಧಿಗೂ ಅನುಕಂಪೆಗೂ ಮೆಚ್ಚಿದೆನು; ಕುಬೇರನಿಗೆ

ಸಮವಾದ ಸಂಪತ್ತುಳ್ಳ ನೀನು ಎಂತು ಶ್ರಮಾಜೀವಿಯಾಗುವೆ? ಅದು ಹಾಗಿರಲಿ! ಎಮ್ಮಾರಾಜ್ಯದೊಳೆಲ್ಲೆಲ್ಲಿಯೂ ಅಧರ್ಮವೇ ಪ್ರಬಲಿಸಿ ಧರ್ಮವು ಶುದಾ೦ಗವಾಗಿ ಮುಳುಗಿಹೋಗಿರುವುದರಿಂದ ಧರ್ಮಜ್ಞರಿಗೆ ಇಲ್ಲಿರುವುದು ಯುಕ್ತವಲ್ಲ; ಆದಕಾರಣ ವನಪ್ರದೇಶವೇ ಈಗ್ಗೆ ಎಮಗೆ ಶ್ರೇಷ್ಠವು.'' ಎಂದು ಹೇಳಿದನು.

ಏಳನೆಯ ಸಂಧಿ

CONFLICT BETWEEN RIGHT AND WRONG.

ಧರ್ಮಾಧರ್ಮಸಂಗ್ರಾಮ

ಇತ್ತಲಾ ಸಮಯಕ್ಕೆ ಸರಿಯಾಗಿ, ಇದೆಲ್ಲವನ್ನೂ ಅದೃಶ್ಯರಾಗಿ ನೋಡುತಿರ್ದ ಚಿತ್ರಗುಪ್ತರು, ಇವರುಗಳ ಧರ್ಮಸ್ಥೈರ್ಯವನ್ನು ಪರೀಕ್ಷಿಸಲು ಇದೇ ತಕ್ಕಕಾಲವೆಂದು ನಿಶ್ಚಯಿಸಿ, ಧರ್ಮೋಪದೇಶಕರ ವೇಷಗಳನ್ನಳವಡಿಸಿಕೊಂಡು ಇವರುಗಳೆದಿರಿಗೆ ಬರಲು, ದಾಯಕ ಶ್ರೇಷ್ಠಿಯು ಅವರುಗಳನ್ನು ನೋಡಿ ಸಂಶಯದಿಂದ:– ''ಇವರ ವೇಷಗಳನ್ನು ನೋಡಿದರೆ, ಸ್ವಲ್ಪ ಆರ್ಯರಂತೆಯೂ, ಜೇಷ್ಟೆಗಳನ್ನು ನೋಡಿದರೆ ಅನಾರ್ಯರಂತೆಯೂ ತೋರುವುದು; ಅಂತೂ ಗುರುಜನರಂತೆ ಕಾಣುವರು!'' ಎಂದು ಮಾತನಾಡಿಕೊಳ್ಳುವುದರೊಳಗಾಗಿ ಚಿತ್ರನು ದಾಯಕಶ್ರೇಷ್ಠಿಯನ್ನು ಕುರಿತು ವಿನಯಸಂಪನ್ನನಂತೆ ಮೃದುವಾಗಿ:—''ಆಯುಷ್ಮಂತನೆ! ನೀನಾರು? ನಿನ್ನ ಹೆಸರೇನೆಂಬುದನ್ನು ದಯಯಿಂದ ಹೇಳುವುದರದ್ವಾರಾ ಎನ್ನನ್ನು ಉಪಕರಿಸುವೆಯಾ?'' ಈ ಸವಿನುಡಿಗಳನ್ನು ಕೇಳಿದ ದಾಯಕ ಶ್ರೇಷ್ಠಿಯು ತನ್ನ ಮನಸ್ಸಿನಲ್ಲಿ ಈರೀತಿ ಯೋಚಿಸಿದನು:—''ಇವರುಗಳಿಗೆ ಎಮ್ಮ ದೇಶಭಾಷೆಯು ಬಾರದು; ಮತ್ತು ವಾಕ್‌ಶುದ್ಧಿಯೂ ಇಲ್ಲದೇ ಇರುವುದನ್ನು ನೋಡಿದರೆ ಅಸಂಸ್ಕೃತರಂತೆಯೂ, ಅನಾರ್ಯರಂತೆ

ಯೂ, ಜನ್ಮಸೋಪಾನಗಳಲ್ಲಿ ಮೃಗಸೋಪಾನವನ್ನು ಕಳೆದು ಈಗತಾನೇ ಮನುಷ್ಯಸೋಪಾನವನ್ನು ಸೇರಿರುವಂತೆಯೂ ತೋರುವುದು! ನಿಜಸ್ಥಿತಿಯು ಹೀಗಿದ್ದರೂ ಬಾಹ್ಯತಃ ರಮ್ಯವಾದ ವೇಷವನ್ನು ಧರಿಸಿರುವುದನ್ನೂ ಮತ್ತು ಎಮ್ಮ ದೇಶಭಾಷೆಯನ್ನು ಅಪಭ್ರಂಶವಾಗಿಯೂ, ಒಹು ಪ್ರಯಾಸಪ್ರಯತ್ನಗಳಿಂದ ಒಂದೊಂದು ಅಕ್ಷರವಾಗಿಯೂ ಆಡುವುದನ್ನು ನೋಡಿದರೆ, ಸ್ವಕಾರ್ಯಸಾಧನೆಗಾಗಿ ಬಂದಿರುವಂತೆಯೂ ತೋರುವುದು! ಆದರೂ ಪರೀಕ್ಷಿಸಿನೋಡುವುದು ಉತ್ತಮ!" ಎಂದು ನಿಶ್ಚಯಿಸಿದ ಬಳಿಕ ಪ್ರಕೃತಿಸಿದ್ಧವಾದ ತನ್ನ ವಾಂಗ್ಮಾಧುರ್ಯವನ್ನು ವ್ಯಕ್ತಮಾಡುತ್ತ ವಿಸ್ಪಷ್ಟತರಾಕ್ಷರಗಳಿಂದ:- "ಪೂಜ್ಯರೇ! ನಾನೀ ಪುರನಿವಾಸಿಯು, ಎನ್ನನ್ನು ಜನರು ದಾಯಕಶ್ರೇಷ್ಠಿ ಎಂದು ಕರೆವರು." ಎಂದು ಹೇಳಲು ಚಿತ್ರನು ಇನ್ನೂ ವಿನಯವನ್ನುನಟಿಸುತ್ತ:—"ಇಲ್ಲಿ ನಿಂತಿರುವ ಇವರುಗಳು ಆರು?" ಎಂದು ಕೇಳಲು ದಾಯಕಶ್ರೇಷ್ಠಿಯು ವಿನಯದಿಂದ:- "ಶ್ರೋತ್ರಿಯಕುಲತಿಲಕನಾದ ಈ ಭೂಸುರೋತ್ತಮನು ಈ ರಾಜಧಾನಿಯ ನಿವಾಸಿಯು." ಎಂದು ಹೇಳಲು ಚಿತ್ರನು:—"ನಿಮ್ಮನ್ನು ನೋಡಿದರೆ ವ್ಯಸನಗೊಂಡವರಂತೆ ತೋರುವುದು, ಕಾರಣವೇನು?" ದಾಯಕ:- "ಪೂಜ್ಯರೇ! ವಿಧಿಶಾಸನವನ್ನು ಪ್ರತಿಬಂಧಿಸಲು ಮನುಷ್ಯನಿಗೆ ಸಾಧ್ಯವೆ! ಎನ್ನ ಧನವೆಲ್ಲವನ್ನೂ ಈ ದೇಶಕ್ಕೆ ಪ್ರವೇಶಿಸಿರುವ ಅನಾರ್ಯಕುಲದ ಚೋರರು ಅಪಹರಿಸಿ, ಎನ್ನ ಕೈಲಿರುವೀದಾತ್ರರಜ್ಜುಗಳನ್ನು ಮಾತ್ರ ಇಲ್ಲಿಯೇ ಬಿಟ್ಟಿರ್ದರು." ಚಿತ್ರ:—"ಅಯ್ಯೋ! ನಿನಗೆ ಇಂತಹ ದುರ್ದಶೆಯು ಪ್ರಾಪ್ತವಾಯಿತೆ? ಆದರೆ ಈಗೇನು ಮಾಡುವೆ?" ದಾಯಕ:—(ಧೈರ್ಯವಾಗಿ) "ಈ ರಜ್ಜುದಾತ್ರಗಳ ಸಹಾಯದಿಂದಲೇ ಎನ್ನುದರ ಪೋಷಣೆಯನ್ನೂ ಕುಲಧರ್ಮರಕ್ಷಣೆಯನ್ನೂ ಮಾಡಿಕೊಳ್ವೆನು." ಚಿತ್ರ:—(ಶಂಕೆಯಿಂದ) "ಮಹೈಶ್ವರ್ಯಸಂಪನ್ನನಾಗಿರ್ದ ನೀನು ಈಗ ದೇಹಶ್ರಮವನ್ನೆಂತು ಸಹಿಸುವೆ?" ದಾಯ:—(ಧೈರ್ಯದಿಂದ) "ಪೂಜ್ಯರೆ! ಕಷ್ಟಬಂದಾಗ ಧೈರ್ಯವನ್ನವಲಂಬಿಸಬೇಕೇ ಹೊರತು ದೈನ್ಯವಿನಾ

ದಾರಿದ್ರ್ಯದಶೆಗೊಳಗಾದ ಪ್ರಜೆಗಳ ಶೀಲಸ್ವಭಾವಗಳನ್ನು ಚಿತ್ರಗುಪ್ತರು ಉಪದೇಶಕರ ವೇಷದಿಂದ ಪರೀಕ್ಷಿಸುವಿಕೆ.

ನೀತಿ :—ಸ್ವಧರ್ಮಸ್ಥೈರ್ಯವೇ ಕೀರ್ತಿಪ್ರಮೋದಗಳಿಗೆ ಕಾರಣ.

Chitra and Gupta test under the guise of preachers, the faith and conduct of the people in their adversity.

MORAL :—Firmness in one's own faith and duty brings him glory and happiness.

ದಗಳಿಗಧೀನರಾಗಬಾರದು ; ಏಕೆಂದರೆ ಪ್ರಾಜ್ಞರು ಈರೀತಿ ಹೇಳಿರುವರು: —

[ತಾ:—(೨೪) " (ಮನುಷ್ಯನು) ವಿಷಾದಪಡುವುದರಿಂದ ಅವನ ಆಪತ್ತು ಶಮನವಾಗಲಾರದು; ಆದಕಾರಣ ಇನ್ನು ದೈನ್ಯಪರಿಗ್ರಹವು ಸಾಕು; ಏಕೆಂದರೆ, ಕಾರ್ಯದಕ್ಷರು ದೈರ್ಯವನ್ನವಲಂಬಿಸಿ ವಿಪತ್ತುಗಳನ್ನೆಲ್ಲ ಶ್ರಮವಿಲ್ಲದೆ ದಾಟಿಹೋಗುವರು. (೨೫) ಆದಕಾರಣ ವಿಷಾದದೈನ್ಯಗಳನ್ನು ಈಗ ತ್ಯಜಿಸಿ ಮುಂದಣ ಕಾರ್ಯಕ್ಕೆ ಅವಕಾಶವನ್ನು ಹುಡುಕುವೆನು; ಏಕೆಂದರೆ, ವಿವೇಕಿಗಳ ಚಿತ್ತಸ್ಥೈರ್ಯವು ಧೈರ್ಯದಿಂದ ಉತ್ತೇಜನವನ್ನು ಹೊಂದಿ, ಬಯಸಿದ ಫಲಗಳನೆಲ್ಲ ಗ್ರಹಿಸುವುದಕ್ಕಾಗಿ ನೀಡಿದ ಕೈಯಂತಾಗುವುದು. "]

ಎಂದು ಹೇಳಲು ಚಿತ್ರನು ಫಕಫಕನೆ ನಕ್ಕು:—" ಆಯುಷ್ಮಂತನೆ! ನಿನ್ನ ಮಾತನ್ನು ಕೇಳಿದರೆ ಎಮಗೆ ವ್ಯಸನವುಂಟಾಗುವುದು ; ಈ ಹಗ್ಗಕುಡುಗೋಲುಗಳ ಸಹಾಯದಿಂದ ಎಂತು ನಿನ್ನ ಜೀವನವನ್ನೂ ಮಾಡಿಕೊಂಡು ನಿನ್ನ ಧರ್ಮವನ್ನೂ ಕಾಪಾಡಿಕೊಳ್ವೆ ? " ದಾಯಕ:—" ಇತರರಿಗೂ ಎನಗೂ ಹಿಂಸೆಯುಂಟಾಗದಂತೆ ವನಕ್ಕೆ ಹೋಗಿ ಹುಲ್ಲನ್ನು ಕುಯಿದು ತಂದು ಅದರ ವಿಕ್ರಯದಿಂದ ಲಭಿಸಿದ ದ್ರವ್ಯದಿಂದ ನಾನು ಹೇಳಿದಂತೆ ಮಾಡಿಕೊಳ್ವೆನು. " ಚಿತ್ರ:—" ಆಯುಷ್ಮಂತನೇ! ಅದುಸರಿಯಲ್ಲ ; ನೀನು ಜಾಗ್ರತೆಯಾಗಿ ಧನಿಕನಾಗುವ ವೃತ್ತಿಯನ್ನು ಅವಲಂಬಿಸಬೇಕು ; ಅದಕ್ಕೆ ತಕ್ಕ ಉಪಾಯವಿರುವುದು. " ದಾಯಕ:—" ಅದಾವುದು? " ಚಿತ್ರ:—(ಉತ್ಸಾಹದಿಂದ) " ದೇಹಕ್ಕೆ ಪುಷ್ಟಿಯನ್ನುಂಟುಮಾಡುವ ಮಾಂಸವು ಸರ್ವರಿಗೂ ಪ್ರಿಯಕರವಾದ ವಸ್ತುವು ;

ನಾಪತ್ಪತೀಕಾರವಿಧಿರ್ವಿಷಾದಸ್ತತ್ಸ್ಮಾದಲಂ ದೈನ್ಯಪರಿಗ್ರಹೇಣ ।
ಧೈರ್ಯಾತ್ತು ಕಾರ್ಯಪ್ರತಿಪತ್ತಿದಕ್ಷಾಃ ಕೃಛ್ರಾಣ್ಯಕೃಚ್ಛ್ರೇಣ ಸಮುತ್ತರನ್ತಿ ॥೨೪॥
ವಿಷಾದದೈನ್ಯಂ ವ್ಯವಧೂಯ ತಸ್ಮಾತ್ಕಾರ್ಯಾವಕಾಶಂ ಕ್ರಿಯಯಾ ಭಜಾಮಿ ॥
ಪ್ರಾಜ್ಞಸ್ಯ ಧೈರ್ಯಜ್ವಲಿತಂ ಹಿ ತೇಜಃ ಸರ್ವಾರ್ಥಸಿದ್ಧಿಗ್ರಹಣಾಗ್ರಹಸ್ತಃ ॥೨೫॥

ಅದಕ್ಕೆ ಹೆಚ್ಚು ಬೆಲೆಯನ್ನಿತ್ತು ಸರ್ವರೂ ಕೊಳ್ಳುವರು ; ಆದಕಾರಣ ನೀನು ಪ್ರತಿನಿತ್ಯವೂ ಅರಣ್ಯಕ್ಕೆ ಹೋಗಿ ಹುಲ್ಲನ್ನು ಕುಯಿದು ತರುವುದಕ್ಕೆ ಪ್ರತಿಯಾಗಿ ಒಂದೊಂದು ಪ್ರಾಣಿಯನ್ನು ಕೊಂದು ಅದನ್ನು ತಂದು ಮಾರಿದರೆ, ಹುಲ್ಲಿನ ನೂರರಷ್ಟು ಲಾಭವು ಲಭಿಸುವುದು ; ಹೀಗೆಯೇ ಕೆಲವು ಕಾಲ ನೀನು ಮಾಡುವುದರೊಳಗಾಗಿ ಕೋಟ್ಯಧೀಶ್ವರನಾಗುವೆ ; ಆದಕಾರಣ ಇಂದಿನಿಂದ ಹಾಗೆ ಮಾಡಿ ಸುಖಿಯಾಗು. ” ಎಂದು ಹೇಳಲು ದಾಯಕಶ್ರೇಷ್ಠಿಯು ಖಿನ್ನನಾಗಿ:—“ ಅಯ್ಯೋ ! ಅನಾರ್ಯರಿಲ್ಲಿ ನಿಮ್ಮ ದುರ್ಬುದ್ಧಿಯು ಎಂದಿಗೆ ನಾಶವಾದೀತು! ” ಎಂದು ಮನಸ್ಸಿನಲ್ಲಿ ವ್ಯಥೆಗೊಂಡವನಾದರೂ ಮೇಲೆ ಪ್ರಶಾಂತಿಯನ್ನೇ ವ್ಯಕ್ತ ಮಾಡುತ್ತ ಭಯವನ್ನು ನಟಿಸಿ:—“ ಅಯ್ಯೋ ! ಅಯ್ಯೋ !! ಜೆನ್ನಾಗಿ ಹೇಳಿದಿರಿ !!! ನಾನು ಹಾಗೆ ಮಾಡಿದರೆ, ನೀವು ಹೇಳಿದಂತೆ ಸುಖಿಯಾಗುವುದಕ್ಕೆ ಪ್ರತಿಯಾಗಿ ಎನಗೆ ಮರಣದಂಡನೆಯೇ ಪ್ರಾಪ್ತವಾಗುವುದು ; ಏಕೆಂದರೆ, ಪ್ರಾಣಿವಧೆಯಂ ಮಾಡುವವನಿಗೆ ಮರಣವೇ ಇಲ್ಲಿನ ರಾಜದಂಡನೆಯು. ” ಎಂದು ಹೇಳಲು ಚಿತ್ರನು:—“ ಈ ರಾಷ್ಟ್ರವನ್ನು ಬಿಟ್ಟು ಇತರದೇಶದಲ್ಲಿ ಈ ವೃತ್ತಿಯನ್ನವಲಂಬಿಸಿ ಜೀವಿಸುವುದರಿಂದ ಭಯವೇನೂ ಇರದು. ” ಇದನ್ನು ಕೇಳಿದ ದಾಯಕಶ್ರೇಷ್ಠಿಯು ವಿಷಾದದಿಂದ:—“ಪೂಜ್ಯರೇ! ಧರ್ಮಜ್ಞರಾದ ನೀವು ಈ ರೀತಿ ಬೋಧೆಮಾಡುವುದನ್ನು ನೋಡಿದರೆ, ಎನಗೆ ಲಜ್ಜೆಯೂ ಶೋಕವೂ ಉಂಟಾಗುವುವು. ಅದಲ್ಲದೆ.

[ತಾ:—(೨೬)ಎಲೈ ಯತೀಂದ್ರನೇ! ಮನುಷ್ಯನು ದಾರಿದ್ರ್ಯಸ್ಥಿತಿಯಲ್ಲಿ ಅನಾರ್ಯವನ್ನು (ನೀಚಕಾರ್ಯವನ್ನು) ಮಾಡುವುದು ಅತಿ ಸುಲಭವಾದರೂ, ನಿಜವಾದ ಆರ್ಯವಂಶೋತ್ಪನ್ನನಿಗೆ ಮಾತ್ರ ದುಷ್ಕರವಾಗುವುದು ; ಆದಕಾರಣ ಅವುದರ ಪ್ರಾಪ್ತಿಗಾಗಿ ನಾನು ನಿರ್ದಯತ್ವವನ್ನು

ಅನಾರ್ಯಮಾರ್ಯೇಣ ಯತೀನ್ದ್ರ ಲೋಕೇ ಸುದುಷ್ಕರಂ ಸುಷ್ಠ್ವಪಿ ದುರ್ಗತೇನ ।
ನಾಚ್ಮೈವ ಭೂನ್ಮೇ ನನು ವಿತ್ತಸಿದ್ಧಿರ್ಯತ್ಪ್ರಾಪ್ತಿಹೇತೋರದಯಾಶಯಸ್ಸ್ಯಾಮ್॥೨೬॥

ಅವಲಂಬಿಸಬೇಕಾಗುವುದೋ ಅಂತಹ ದ್ರವ್ಯಲಾಭವು ಎನಗೆಂದಿಗೂ ಬೇಡ!''

ಆದರೆ ನಾನೀರೀತಿ ಪ್ರತಿವಾದವಾಡಿದೆನೆಂದು ಕೋಪಿಸಲಾಗದು. ಅಪ್ಪಣೆಯಾದರೆ ಎನ್ನ ಕಾರ್ಯವನ್ನು ಕುರಿತು ತೆರಳುವೆನು.'' ಎಂದು ಹೇಳಿ ಅಲ್ಲಿಂದ ಮುಂದಕ್ಕೆ ಹೊರಟುಹೋದನು.

ಬಳಿಕ ಗುಪ್ತನು ಚಿತ್ರವನ್ನು ಹಿಂದಿಟ್ಟು ಈ ಬ್ರಾಹ್ಮಣನನ್ನೂ ಅವನ ಪತ್ನೀಪುತ್ರರನ್ನೂ ಪರೀಕ್ಷಿಸುವ ಕುತೂಹಲದಿಂದ ಅವನ ಬಳಿಗೈದಿ ಏನಯವನ್ನು ನಟಿಸುತ್ತ:—'' ಎಲೈ ವೃದ್ಧಬ್ರಾಹ್ಮಣನೆ! ಮೂರ್ಖನಾದ ಆ ವೈಶ್ಯನಂತೆ ಎಮ್ಮ ಮಾತನ್ನು ನೀನೂ ನಿರಾಕರಿಸುವೆಯೊ, ಇಲ್ಲವೆ ಅಂಗೀಕರಿಸಿ ಸುಖಿಯಾಗುವೆಯೊ?'' ಎಂದು ಕೇಳಲು ಶೀಲಾಸನನು ವಿನಯದಿಂದ:— '' ಮಹಾತ್ಮನೆ! ನೀನೇನಾಜ್ಞಾಪಿಸುವೆ?'' ಎಂದು ಕೇಳಲು ಗುಪ್ತನು ಪ್ರಸನ್ನನಂತೆ ನಟಿಸುತ್ತ:—'' ಹಾಗಾದರೆ ನಾನು ಹೇಳುವುದನ್ನೆಲ್ಲ ಸಾವಧಾನವಾಗಿ ಕೇಳು–ನೀನಾದರೋ ಬಹುವೃದ್ಧನು; ಮತ್ತು ಪತ್ನೀಪುತ್ರರಿಂದ ಸಮೇತನಾಗಿಯೂ ಇರುವೆ; ಈಗಲೋ ಆಪತ್ಕಾಲವಾಗಿರುವುದು; ಇವೆಲ್ಲ ಕಿಂತಲೂ ನಿನ್ನ ದಾರಿದ್ರ್ಯವು ಅತಿ ಶೋಚನೀಯವಾಗಿಯೂ, ಸಹಿಸಲಶಕ್ಯವಾಗಿಯೂ ಇರುವುದು. ಇವೆಲ್ಲವೂನಿಜವೋ ಅಲ್ಲವೋ ಹೇಳು?'' ಶೀಲಾಸನ:— (ನಮ್ರಭಾವದಿಂದ) '' ಇವೆಲ್ಲವೂ ನಿಜವು.'' ಗುಪ್ತ:–(ಉತ್ಸಾಹದಿಂದ) '' ಪಂಚಭೂತಾತ್ಮಕವಾದೀ ವ್ಯಷ್ಟಿಸಮಷ್ಟಿಪ್ರಪಂಚಗಳು ಪ್ರತಿಕ್ಷಣದಲ್ಲಿಯೂ ವಿಕಾರವನ್ನು ಹೊಂದುತ್ತಿರುವ ಅಂಶವೂ; ಮತ್ತಾವೃಕ್ಷಗಳು ಋತುವ್ಯತ್ಯಾಸಗಳಿಗನುಗುಣವಾಗಿ ತಾವೂ ವ್ಯತ್ಯಾಸವನ್ನು ಹೊಂದುವಂತೆ–ನಾವುಗಳೂ ಅವಸ್ಥಾಭೇದಗಳನ್ನು ಹೊಂದುವ ವಿಷಯವೂ, ಮತ್ತೀರೀತಿ ಪ್ರಪಂಚದ ಪ್ರತಿಯೊಂದು ವಸ್ತುವೂ ಕಾಲಾನುಸಾರವಾಗಿ ವಿಕಾರಗಳನ್ನು ತಪ್ಪದೆ ಹೊಂದುವ ಅಂಶವೂ ಕೂಡ, ನಿಜವೋ ಅಲ್ಲವೋ?'' ಶೀಲಾ:—''ಅದೂ ನಿಜ.'' ಗುಪ್ತ:—(ಧೃಷ್ಟತೆಯಿಂದ) '' ಹಾಗಾದರೆ ನೀನೀ ಅಪಚ್ಛಮನಾರ್ಥ

ವಾಗಿ ತಕ್ಕ ಉಪಾಯವನ್ನೂ ವೃತ್ತಿಯನ್ನೂ ಅವಲಂಬಿಸಬೇಕೊ ಬೇಡವೋ ಹೇಳು.'' ಶೀಲಾ:– ''(ಒಂದುಕ್ಷಣಕಾಲಯೋಚಿಸಿ) '' ಅವಲಂಬಿಸಬೇಕು; ಆದರೆ, ಮೂಲಧರ್ಮಕ್ಕೂ ಸ್ವಭಾವಕ್ರಮಕ್ಕೂ ವಿರೋಧವಾಗದಂತೆ ಎಚ್ಚರಿಕೆಯಿಂದಿರಬೇಕು.'' ಗುಪ್ತ:— (ತನ್ನ ಮಾತಿಗೆ ಒಡಂಬಡಲಾರನೆಂದು ಬೆದರಿ) '' ಅದು ಹೇಗೆ ?'' ಶೀಲಾ:—(ಚಿತ್ತ ಸ್ಥೈರ್ಯದಿಂದ) '' ಪಂಚಭೂತಗಳು ಪರಸ್ಪರ ವ್ಯತ್ಯಸ್ತವಾದ ಗುಣಕರ್ಮಸ್ವಭಾವಗಳುಳ್ಳವಾದರೂ ತಂತಮ್ಮ ಸಹಜಕರ್ಮಗಳನ್ನು ನಿಯಮಿತಕಾಲದಲ್ಲಿ ಆಚರಿಸುವುದೇ ಹೊರತು ಒಂದರ ಕರ್ಮವನ್ನು ಮತ್ತೊಂದು ಮಾಡುವುದೇ ಆಗಲಿ, ಅಥವಾ ಅಕಾಲದಲ್ಲಿ ಪ್ರಾಪ್ತವಾಗುವುದೇ ಆಗಲಿ, ಎಂತು ಆಗುವುದಿಲ್ಲವೋ–ಮತ್ತು ವೃಕ್ಷಗಳು ತತ್ತತ್ಕಾಲದಲ್ಲಿ ಬಾಹ್ಯವ್ಯತ್ಯಾಸಗಳನ್ನು ಋತುಧರ್ಮಾನುಸಾರವಾಗಿ ಹೊಂದಿದರೂ ಮೂಲದಲ್ಲಿ ಮಾತ್ರ ನಿರ್ವಿಕಾರವುಳ್ಳವಾಗಿ ಎಂತಿರುವುವೋ–ಮತ್ತು ಸೂರ್ಯನು ಧರ್ಮನಿಯಮಿತವಾದ ಮಾರ್ಗದಲ್ಲಿ ಮೊದಲು ತಾನು ನಡೆದು, ತದ್ದ್ವಾರ ತನ್ನನುಗಾಮಿಗಳಾದ ಇತರ ಗ್ರಹಗಳನ್ನೂ ಅವವುಗಳಿಗೆ ನಿಯತವಾದ ಮಾರ್ಗದಲ್ಲಿ ನಡೆಯುವಂತೆ ಎಂತು ಪ್ರೇರಿಸುವನೋ–ಅದರಂತೆಯೇ ಪ್ರಾಜ್ಞನಾದ ಮನುಷ್ಯನೂ ಕೂಡ, ಮೊದಲು ತಾನು ಧರ್ಮಪಥದಲ್ಲಿ ನಡೆದು ತದ್ದ್ವಾರ ಇತರರಿಗೂ ಅವರವರಿಗೆ ವಿಹಿತವಾದ ಧರ್ಮಪಥದಲ್ಲಿ ನಡೆಯುವಂತೆ ಬೋಧಿಸಬೇಕು ; ಹೀಗೆ ಮಾಡಿದಲ್ಲಿ ಸ್ವಭಾವವಿರುದ್ಧವಾದ ದೋಷಗಳು ಪ್ರಾಪ್ತವಾಗದೆ, ಜಗತ್ತು ನಿಯತಮಾರ್ಗದಲ್ಲಿ ನಡೆದು, ಸಂಕರದೋಷಗಳೆಲ್ಲವೂ ಶಮನವಾಗಿ, ಲೋಕಕ್ಕೆ ಸುಖವೂ ಲಾಭವೂ ಶಾಂತತೆಯೂ ಉಂಟಾಗುವುವು !''

ಈ ರೀತಿ ಸಕಾರಣವಾದ ಮತ್ತು ಧರ್ಮಸಂಮತವಾದ ಉತ್ತರಗಳನ್ನು ಕೇಳಿದ ಗುಪ್ತನು, ಇವನನ್ನು ಈರೀತಿಯಾದ ತತ್ವವಿಚಾರದಿಂದ ಗೆಲ್ಲುವದಕ್ಕಾಗಲಾರದೆಂದು ನಿಶ್ಚಯಿಸಿದವನಾಗಿ, ಲೋಕನ್ಯಾಯವನ್ನು ಬೋಧಿಸುವುದರ ಮುಖೇನ ಇವನ ಬುದ್ಧಿಗೆ ವೈಕಲ್ಯವನ್ನುಂಟು

ಮಾಡಬೇಕೆಂಬ ಕುತೂಹಲದಿಂದ, ಚಿತ್ರನನ್ನು ಕುಹಕದೃಷ್ಟಿಯಿಂ ನಂಬಿ ಮಾಡಿದ ಬಳಿಕ ಅವನನ್ನು ಕುರಿತು ಮಿಥ್ಯಾವಿನಯದಿಂದ:—"ಇವುಗಳಿಲ್ಲಾ ಹಾಗಿರಲಿ; ಈಗ್ಗೆ ಉಪಯುಕ್ತವಾದ ವಿಚಾರವನ್ನು ಮಾಡೋಣ; ಅದೇನೆಂದರೆ—ಈಗ ನಿನಗೆ ಕೇವಲ ವಾರ್ಧಕವು; ಆದ್ದರಿಂದ ನೀನು ಒಂದು ಕಡೆ ಕುಳಿತು ಹೆಚ್ಚು ಶ್ರಮವಿಲ್ಲದೆ ಜೀವನವಂ ಮಾಡಲು ಅನುಕೂಲಿಸುವ ಒಂದು ಉಪಾಯವಿರುವುದು; ಅದೇನೆಂದರೆ–ಅವುದನ್ನು ಪಾನಮಾಡಿದುದರಿಂದ ದೇವತೆಗಳು ಸುರರೆಂಬ ಖ್ಯಾತಿಯನ್ನು ಪಡೆದರೋ, ಮುನಿಜನರನ್ನು ಸತ್ಕರಿಸುವ ಸಾಮಗ್ರಿಗಳಲ್ಲಿ ಪ್ರಥಮವಾದುದೆಂದು ನಿಮ್ಮ ವೇದಗಳಲ್ಲಿಯೂ ಧರ್ಮಗ್ರಂಥಗಳಲ್ಲಿಯೂ ಆವುದು ವಿಖ್ಯಾತಿಯನ್ನು ಹೊಂದಿದೆಯೊ, ಆವುದನ್ನು ಸೇವಿಸದವನು ಸುಖಿಯೂ ಭೋಗಿಯೂ ಎಂದೆನಿಸನೋ, ಮತ್ತಾವುದು ಈಗ ಧನಿಕರೆಲ್ಲರಿಗೂ ಅತಿಪ್ರಿಯವಾದುದಾಗಿಯೂ ಆನಂದವನ್ನುಂಟುಮಾಡುವುದಾಗಿಯೂ ಇರುವುದೋ ಅಂತಹ ಸುರೆಯನ್ನು (ಹೆಂಡ ಮೊದಲಾದ ಮಾದಕಗಳನ್ನು) ವಿಕ್ರಯಿಸುವ ವೃತ್ತಿಯನ್ನು ಅವಲಂಬಿಸಿದುದೇ ಆದರೆ, ನಿನಗೆ ಕ್ಷಾಮಭೀತಿಯೂ ತೋರದೆ, ಸುಖವೂ ಲಾಭವೂ ಉಂಟಾಗಿ, ಕ್ಷಿಪ್ರದಲ್ಲಿಯೇ ಧನಿಕನೂ ಆಗುವೆ; ಇಷ್ಟೇಅಲ್ಲದೆ ಕ್ರಮೇಣ ನೀನೂ ಸೇವಿಸುತ್ತ ಬಂದರೆ ವಾರ್ಧಕ ಜನ್ಯವಾದ ದೌರ್ಬಲ್ಯವೂ ನಾಶವಾಗಿ, ಪ್ರಪಂಚಭೋಗವನ್ನು ಅನುಭವಿಸಲು ಆರ್ಹನೂ ಆಗುವೆ; ಕ್ಷಿಪ್ರದಲ್ಲಿಯೇ ಹಾಗೆಮಾಡು."

ಇದನ್ನು ಕೇಳಿದ ಶೀಲಾಸನನು ಕಿವಿಗಳನ್ನು ಮುಚ್ಚಿಕೊಂಡು "ಶಾಂತಂಪಾಪಂ! ಶಾಂತಂಪಾಪಂ!!" ಎಂದಬಳಿಕ ವಿಷಾದದಿಂದ ಗುಪ್ತನನ್ನು ಕುರಿತಿಂತೆಂದನು:—"ಮಹಾತ್ಮನೇ! ಎನ್ನ ಕುಲಧರ್ಮಕ್ಕೆ ವಿರುದ್ಧವಾದ ನಿನ್ನ ದುರ್ಬೋಧೆಯು ಸಾಕು; ನಿನ್ನ ಕನಿಕರಕ್ಕೆ ನಾನು ಮರುಗುವೆನು" ಇದನ್ನು ಕೇಳಿದ ಗುಪ್ತನು ಕೋಪಗೊಂಡು:—"ಅಯ್ಯೋ! ಮೂರ್ಖ; ನಿನ್ನ ದುಃಸ್ಥಿತಿಯನ್ನು ನೋಡಲಾರದೆ ದ್ರವ್ಯಾರ್ಜನೆಗೂ ಪ್ರಾಣರಕ್ಷಣೆಗೂ ಸುಲಭೋಪಾಯವನ್ನು ಸೂಚಿಸಿದರೆ, ಅದನ್ನು ಗಮ

ನಿಸದೆ ಅವಿವೇಕದಿಂದ ಈರೀತಿ ಮಾತನಾಡುವೆ?'' ಎಂದು ಗದರಿಸಲು ಶೀಲಾಸನನು ಅವನ ಅವಿವೇಕಕ್ಕೆ ನಕ್ಕು, ಒಳಿಕ ಅವನನ್ನು ಕುರಿತು ವಿಷಾದದಿಂದ:—''ಪೂಜ್ಯನೇ! ನೀನು ಹೇಳಿದುದು ಅನಾರ್ಯರಿಗೆ ವಿಹಿತವಾದ ಧರ್ಮದಂತೆ ತೋರುವುದು; ಆದರೆ ಇದನ್ನು ಕೇಳು—

[೨೭. ತಾ:—''(ಚಿತ್ತಸ್ಥೈರ್ಯವಿಲ್ಲದ) ಅವಿವೇಕಿಗಳು, ಆವುದಾದರೂ ಒಂದು ನೆಪವನ್ನು ಮಾಡಿಕೊಂಡು, ಸ್ವಧರ್ಮಮಾರ್ಗಗಳನ್ನು ಬಿಟ್ಟುಬಿಡುವರು; ಆದರೆ, ತಪಸ್ಸು ವಿದ್ಯೆ ಸ್ವರೂಪಜ್ಞಾನಗಳೇ ಧನವಾಗಿ ಉಳ್ಳ ಸತ್ಕುಲಪ ಸೂತರು ಮಾತ್ರ, ಅತಿನೀಚವಾದ ಕಷ್ಟದಶೆಯಲ್ಲಿಯೂ ಕೂಡ ಸ್ವಕರ್ಮಭ್ರಷ್ಟರಾಗರು.'']

ಆದಕಾರಣ ನಿನ್ನಮಾತಿನಂತೆ ಆಕೃತ್ಯವನ್ನೆಂದಿಗೂ ಮಾಡಲಾರೆನು. ಅಲ್ಲದೆ, ಧರ್ಮೋಪದೇಶಕನಾಗಿಯೂ ಯತಿಯಾಗಿಯೂ ಇರುವ ನೀನು ಇಂತಹ ಬೋಧೆಯನ್ನು ಮಾಡಬಹುದೆ? ನಿಮ್ಮ ಧರ್ಮದಲ್ಲಿ ಮದ್ಯಪಾನವು ವಿಹಿತವಾಗಿರಬಹುದೆಂದು ತೋರುವುದು! ನಿಮ್ಮನ್ನು ನೋಡಿದರೆ ಆರ್ಯಧರ್ಮವು ನಿಮಗಿನ್ನೂ ತಿಳಿಯದೆಂದು ತೋರುವುದು! ಆದಕಾರಣ ನೀವುಗಳಾಚರಿಸುವ ಮದ್ಯಪಾನದಿಂದುಂಟಾಗುವ ಹಾನಿಯನ್ನರಿತಿರುವ ಎಮ್ಮ ಮಹಾರಾಜನು, ಮದ್ಯಪಾಯಿಗಳಿಗೆ ಲೋಹರಸವನ್ನು ಕುಡಿಸುವ ದಂಡನೆಯನ್ನು ವಿಧಿಸಿರುವನು. ಆದಕಾರಣ ಎಮ್ಮದೇಶದಲ್ಲಿ ಇತಃಪರ ಮದ್ಯಶಬ್ದವನ್ನೇ ಎತ್ತಬೇಡ. ನಿನಗೂ ಅದೇ ದಂಡನೆಯುಂಟಾಗುವುದು; ಮತ್ತು ನೀನೂ ಸೇವಿಸುವುದನ್ನು ಶುದ್ಧಾಂಗವಾಗಿ ತ್ಯಜಿಸು. ಏಕೆಂದರೆ, ಮದ್ಯಪಾನದ ಹಾನಿಗಳನ್ನು ಹೇಳುವೆನು ಕೇಳು:—

[ತಾ:—''(೨೮) ಆವುದು ತನ್ನನ್ನು ಪಾನಮಾಡಿದವನ ಶೀಲ

ನಮಿತ್ತಮಾಸಾದ್ಯ ಯದೇವ ಕಿಂಚನ ಸ್ವಧರ್ಮಮಾರ್ಗಂ ವಿಸೃಜನ್ತಿ ಬಾಲಿಶಾಃ । ತಪಶ್ಶ್ರುತಜ್ಞಾನಧನಾಸ್ತು ಸಾಧವೋ ನ ಯಾನ್ತಿ ಕೃಚ್ಛ್ರೇ ಪರಮೇ ೨ಪಿ ವಿಕ್ರಿಯಾಮ್॥

ಶೀಲಂ ನಿಮೀಲಯತಿ ಹಂತಿ ಯಶಃ ಪ್ರಸಹ್ಯ ಲಜ್ಜಾಂ ನಿರಸ್ಯತಿ ಮತಿಂ ಮಲಿನೀಕರೋತಿ । ಯನ್ನಾಮ ಪೀತಮುಪಹನ್ತಿ ಗುಣಾಂಶ್ಚ ತಾಂಸ್ತಾಂಸ್ತತ್ಪಾತುಮರ್ಹಸಿ ಕಥಂ ಮುನಿವರ್ಯ ಮದ್ಯಮ್ ॥೨೮॥

(ಸದಾಚಾರ) ವನ್ನು ಹಾಳುಮಾಡುವುದೊ? ಯಶಸ್ಸನ್ನು ಕ್ಷಿಪ್ರದಲ್ಲಿಯೇ ನಾಶಮಾಡುವುದೊ, ಲಜ್ಜೆಯನ್ನು ದೂರಗೊಳಿಸುವುದೊ, ಬುದ್ಧಿಗೆ ಮಾಲಿನ್ಯವನ್ನುಂಟುಮಾಡುವುದೊ, ಅಂತಹ ಮದ್ಯವನ್ನು, ಎಲೈ ಯತಿವರ್ಯನೆ! ನೀನೆಂತು ಕುಡಿಯಲು ಸಮರ್ಥನಾಗುವೆ? (೨೯) ಮತ್ತು ಮನುಷ್ಯರು ಆವುದನ್ನು ಪಾನಮಾಡುವುದರಿಂದ ಕೆಟ್ಟನಡತೆಗಳುಳ್ಳವರಾಗಿ, ಭೀಕರವಾದ ನರಕವೆಂಬ ಹಳ್ಳದಲ್ಲಿ ಬೀಳುವರೋ, ಮತ್ತು (ಮುಂದೆ) ಮೃಗಾದಿಗಳಜನ್ಮವನ್ನೂ ಅಥವಾ ಪ್ರೇತತ್ವವನ್ನೂ ಇಲ್ಲವೆ ದಾರಿದ್ರ್ಯವನ್ನೂ ಕೂಡ ಅನುಭವಿಸುವರೋ ಅಂತಹ ಹಾಳು ಹೆಂಡವನ್ನು ನೋಡುವುದಕ್ಕೂ ಕೂಡ ಆವನುತಾನೇ ಪ್ರಯತ್ನಿಸುವನು?'']

ಇದನ್ನು ಕೇಳಿದ ಗುಪ್ತನು ಪರಿಭವದಿಂದ ಧೈರ್ಯಗುಂದಿದವನಾದರೂ, ಬಾಹ್ಯತಃ ಪ್ರಶಾಂತನಂತೆ ನಟಿಸುತ್ತ ಅವನನ್ನು ಕುರಿತು ಪುನಃ—''ಹಾಗಾದರೆ ಈಗ ನೀನೇನುಮಾಡುವೆ?'' ಎಂದು ಕೇಳಲು ಶೀಲಾಸನನು:—"ಸ್ವಧರ್ಮವನ್ನು ಕಾಪಾಡಿಕೊಳ್ಳುವುದಕ್ಕಾಗಿ ವನಕ್ಕೆ ತೆರಳುವೆನು.'' ಎಂದು ಹೇಳಿದ ಬಳಿಕ ಪತ್ನೀಪುತ್ರರನ್ನು ಕುರಿತು:—"ಹೋಗೋಣ ನಡೆಯಿರಿ.'' ಎಂದು ಹೇಳಿ ಮುಂದಕ್ಕೆ ಹೊರಟುಹೋದನು.

ಬಳಿಕ ಚಿತ್ರನು, ತಂದೆಯಹಿಂದೆ ಹೊರಡುತಿರ್ದ ಆ ವೃದ್ಧಬ್ರಾಹ್ಮಣನ ಕುಮಾರನಿಗೆ ಸಮುಖನಾಗಿ ನಿಂದು:—ಇವನನ್ನು ಇನ್ನು ಪರೀಕ್ಷಿಸಿನೋಡುವೆನು.'' ಎಂಬ ತವಕದಿಂದ ಪ್ರೇಮವನ್ನು ನಟಿಸುತ್ತ ಅವನನ್ನು ಕುರಿತು:—''ಎಲೈ ವಟುವೆ! ನಿನ್ನ ತಂದೆಯು ಪ್ರಪಂಚದ ಪ್ರಕೃತಸ್ಥಿತಿಯನ್ನು ಅರಿಯದೆ, ವೃದ್ಧಾಚಾರವೆಂಬ ಗ್ರಹದಿಂದ ಹಿಡಿಯಲ್ಪಟ್ಟವನಾಗಿ, ನಾವು ಹೇಳುವ ಹಿತೋಕ್ತಿಗಳನ್ನೆಲ್ಲ ತಿರಸ್ಕರಿದನು; ಅವನಂತೂ ಸಾಯುವ ಮುದುಕ; ಅವನದು ಹಾಗಿರಲಿ! ಆದರೆ, ನೀನು ಇನ್ನೂ ಬಾಲಕನಾಗಿರುವೆ. ಮುಂದೆ ಅನೇಕ ವಿಧವಾಗಿ ಪ್ರಪಂಚದಲ್ಲಿ ಬದು

ನಿಷೇವ್ಯ ಯದ್ದುಶ್ಚರಿತಪ್ರಸಕ್ತಾಃ ಪತಂತಿಭೀಮಾನ್ನರಕಪ್ರಪಾತಾನ್ ।
ತಿರ್ಯಗ್ಗತಿಂವ್ರೇತದರಿದ್ರತಾಂ ಚ ಕೋ ನಾಮ ಶದ್ಧ್ರಾಪ್ಯುಮಪಿ ವ್ಯವಸ್ಯೇತ್ ॥೨೯॥

ಕಬೇಕು ; ಆದಕಾರಣ ಆ ಮುದುಕನ ಮಾರ್ಗವದ್ದು ನೀನೂ ಅನುಸರಿಸದೆ, ಎಮ್ಮ ಮಾತುಗಳನ್ನು ಲಾಲಿಸಿ ಸುಖಿಯಾಗು. " ವಟು:—ವಿನಯದಿಂದ ವಂದಿಸಿ) " ಪೂಜ್ಯರೇ ! ನಾನಿಲ್ಲಿ ನಿಲ್ಲಲು ಯತ್ನವಿಲ್ಲ, ವೃದ್ಧನಾದೆನ್ನ ಜನಕನು ಓರ್ವನೇ ಹೋಗುತ್ತಿಹನು ; ನಾನಾತನ ಸೇವೆಗೆ ಹೋಗಬೇಕಾಗಿಹುದು ; ಆದಕಾರಣ ಜಾಗ್ರತೆಯಾಗಿ ಆಜ್ಞಾಪಿಸಿರಿ." ಚಿತ್ರ:—(ಪ್ರೀತಿಯನ್ನು ನಟಿಸುತ್ತ) " ವತ್ಸನೆ! ನೀನೂ ಈ ರೀತಿ ವಿಕಲ್ಪಗೊಂಡರೆ ಹೇಗೆ ಹೇಳುವುದು ? ಸ್ವಲ್ಪಕಾಲ ಶಾಂತನಾಗಿ, ನಾವು ಹೇಳುವುದನ್ನು ಕೇಳು—ನೀನೀಗ ನಿನ್ನ ತಂದೆಯನ್ನು ಕಾಪಾಡಬೇಕೆಂದು ಹೇಳಿದೆಯಷ್ಟೆ, ಆದು ನ್ಯಾಯವಾಗಿಯೇ ಇರುವುದು ; ಆದರೆ ಬ್ರಹ್ಮಚರ್ಯಕ್ಕೆ ವಿಹಿತವಾದ ಭಿಕ್ಷಾವೃತ್ತಿಯಿಂದ ಹಾಗೆ ಮಾಡಲು ಈಗ ಕೇವಲ ದುರ್ಭಿಕ್ಷಕಾಲವಾಗಿಹುದು ; ಆದಲ್ಲದೆ ನಿಮ್ಮ ದಾರಿದ್ರ್ಯವ ಸ್ಥಿಯನ್ನು ನೋಡಿದರೆ ನಿಮ್ಮನ್ನು ನಿಮ್ಮ ಬಂಧುಗಳು ಕೂಡ ಧಿಕ್ಕರಿಸುವರು ; ಆದಕಾರಣ ನೀನೀಗ ಧನವನ್ನಾರ್ಜಿಸಿದರೆ ನಿಮ್ಮನ್ನು ನಿಮ್ಮ ಬಂಧುಗಳೂ ಮತ್ತು ಇತರರೂ ಗೌರವಿಸುವರು ; ಇದಕ್ಕನುಸಾರವಾಗಿ ಲೋಕಾನುಭವಿಗಳೂ ಈರೀತಿ ಹೇಳಿರುವರು:—

[೩೦ ತಾ:—" (ಮನುಷ್ಯನು) ಆವುದನ್ನು ಆರ್ಜಿಸುವುದರಿಂದ ಸ್ವಜರೂ ಗೌರವಿಸುವರೊ ಅಂತಹ ಧನವು ದಾರಿದ್ರ್ಯದುಃಖವನ್ನು ನಾಶಮಾಡುವುದು. "]

ಆದಕಾರಣ ಮೊದಲು ನೀನೀಗ ಧನವನ್ನಾರ್ಜಿಸುವ ಉಪಾಯವನ್ನು ಹುಡುಕಬೇಕು." ವಟು:— (ಖಿನ್ನನಾಗಿ) " ಈಗ ದುರ್ಭಿಕ್ಷಕಾಲವಾಗಿರುವುದರಿಂದ ಜನರು ಸ್ವಕ್ಷೇಮಚಿಂತನೆಯಲ್ಲಿ ನಿರತರಾಗಿ, ಇತರರ ದುಃಖವನ್ನು ಲಕ್ಷಿಸುವುದೇ ಇಲ್ಲ ; ಈಗ ನಾನೇನು ಮಾಡಲಿ ? " ಚಿತ್ರ:— (ಸಖೇದನಾಗಿ) " ಯುವಕನಾಗಿಯೂ ದೃಢಾಂಗನಾಗಿಯೂ

ಶ್ಲೋ ॥ ಹಂತಿ ದಾರಿದ್ರ್ಯದುಃಖಂ ತು ಸನ್ತತ್ಯಾರಾಧನಂ ಧನವ್ ॥೩೦॥

ಇರ್ದರೂ, ಈರೀತಿ ಚಿಂತಿಸಬಹುದೆ? ಜನರು ಸ್ವಕ್ಷೇಮನಿರತರಾದರೇನು? ಬೇರೆ ಉಪಾಯವಿದ್ದೇ ಇರುವುದು.'' ವಟು:—(ವಿನಯದಿಂದ) ''ಅದಾವುದು?'' ಚಿತ್ರ:—(ಉಟ್ಟಹಾಸದಿಂದ) ''ಧನಿಕರಾಗಿರುವವರು, ದೈನ್ಯದಿಂದ ಬೇಡುವವರಿಗೆ ಕೊಡುವುದಿಲ್ಲವಷ್ಟೆ, ಅಂಥವರ ಧನವನ್ನು ಬಲಾತ್ಕಾರದಿಂದ ಅಪಹರಿಸು; ಹಾಗೂ ಆಗದೇ ಇರ್ದರೆ ಕಳ್ಳತನವು ಸಿದ್ಧವಾಗಿಯೇ ಇಹುದು.'' ವಟು:—(ಖಿನ್ನನಾಗಿ) ''ಜೆನ್ನಾಗಿ ಸೂಚಿಸಿದಿ! ನಾನು ಬ್ರಾಹ್ಮಣವಂಶೊತ್ಪನ್ನನಾಗಿ ಕಳ್ಳತನಮಾಡಿದರೆ ಎನ್ನ ಕುಲದ ಮತ್ತು ಎಮ್ಮ ಮಹಾರಾಜನ ಕೀರ್ತಿಗಳೇನಾಗಬೇಕು?'' ಚಿತ್ರ:—(ಸಖೇದನಾಗಿ) ''ಅಯ್ಯೋ! ಅಜ್ಜ! ನೀನಿನ್ನೂ ಬಾಲಕ; ಶಾಸ್ತ್ರಪರಿಚಯವೂ ಇಲ್ಲದಂತೆ ತೋರುವುದು; ನಿಮ್ಮ ಗ್ರಂಥಗಳಲ್ಲಿಯೇ ಹೇಳಿರುವ ಶಾಸ್ತ್ರವಚನವನ್ನು ಕೇಳು:—

[ತಾ:—''(೫೧) ಆಪತ್ಕಾಲದಲ್ಲಿ ಕಳ್ಳತನವು ಬ್ರಾಹ್ಮಣನಾದವನಿಗೆ ವಿಹಿತವಾದ ವೃತ್ತಿಯೆಂದು ಧರ್ಮವಚನವಿರುವುದು; ಮತ್ತು ದಾರಿದ್ರ್ಯವೆಂಬುದೋ ಲೋಕದಲ್ಲಿ ಅತಿನೀಚವಾದ ಆಪದವ; ಆದಕಾರಣ ಧನಿಕರ ಸ್ವತ್ತನ್ನು (ಬ್ರಾಹ್ಮಣನು) ಭೋಗಿಸುವುದು ದೋಷವಲ್ಲ; ಏಕೆಂದರೆ, ನ್ಯಾಯತಃ ಲೋಕದ ವಸ್ತುಗಳೆಲ್ಲವೂ ಬ್ರಾಹ್ಮಣರದೇ ಆಗಿರುವುವು. (೫೨)ಹೀಗವಕಾಶವಿರುವಲ್ಲಿ ಬಲಾತ್ಕಾರದಿಂದ ಇತರರ ಧನವನ್ನು ಅಪಹರಿಸಲು ನಿನ್ನಂತಹ (ಯುವಕರಿಗೆ) ಶಕ್ತಿಯೂ ಇರುವುದು; ಆದರೆ ಇಂತಹ ಕಾರ್ಯವು ನಿನ್ನ ಯಶಸ್ಸಿಗೆ ಹಾನಿಯನ್ನುಂಟುಮಾಡುವದೆಂದು ಶಂಕಿಸುವಪಕ್ಷಕ್ಕೆ, ಅದೂ ಇಲ್ಲದ ಸ್ಥಳದಲ್ಲಿ ಗೋಪ್ಯವಾಗಿ ಈ ವ್ಯವಸಾಯವನ್ನು ಮಾಡಲೇ ಬೇಕು.'']

ಆಪದ್ಧರ್ಮಸ್ತೇಯಮಿಷ್ಟಂ ದ್ವಿಜಾನಾಮಾಪಜ್ಜಾನ್ತ್ಯನಿಷ್ಟತಾ ನಾಮ ಲೋಕೆ।
ತಸ್ಮಾನ್ಮೋಚ್ಯಂ ಸ್ವಂಪರೇಷಾಮದುಷ್ಟೈಃ ಸರ್ವಂ ಚೈತದ್ಬ್ರಾಹ್ಮಣಾನಾಂ ಸ್ವಮೇವ॥
ಕಾಮಂ ಪ್ರಸಹ್ಯಾಪಿ ಧನಾನಿ ಹರ್ತುಂ ಶಕ್ತಿರ್ಭವೇದೇವಭವದ್ವಿಧಾನಾಮ್।
ನತ್ವೇಷ ಯೋಗಃ ಶ್ವಯಶೋ ಹಿ ರಕ್ಷ್ಯಂ ಶೂನ್ಯೇಷು ತಸ್ಮಾದ್ವ್ಯವಸೇಯಮೇವ॥

ವಟ :—(ಖಿನ್ನನಾಗಿ) " ತಾವೇನೋ ಎನ್ನ ಹಿತಕ್ಕಾಗಿ ಬಹು ಶ್ರಮಪಡುವಂತೆ ತೋರುವುದು ; ಆದರೆ, ಎನಗೀ ಆಜ್ಞೇಧ್ಯವಾದ ಸಂಶಯವು ಉಂಟಾಗಿರುವುದು; ಆದೇಂದರೆ—

[ತಾ:—" (೩೩) ಲೋಕದಲ್ಲಿ ಶೂನ್ಯಪ್ರದೇಶವೆಂಬುದನ್ನೇ ನಾನು ಅರಿಯೆನು. ಎಲ್ಲಿ ಇತರನನ್ನು ನಾನು ನೋಡುವುದಿಲ್ಲವೋ ಅದು ಎನ್ನಿಂದೆಂದಿಗೂ ಶೂನ್ಯವಾಗಿರದು. (೩೪) ಮತ್ತು ಆವ ದುಷ್ಕಾರ್ಯವು ಇತರರಿಂದ ನೋಡಲ್ಪಟ್ಟುದಾಗಲೀ ಅಥವಾ ತನ್ನಿಂದ ನೋಡಲ್ಪಟ್ಟುದಾಗಲಿ, ಅಂತೂ ಅದು ಬಹಿರಂಗವಾದಂತೆಯೇ ಆಯಿತು; ಏಕೆಂದರೆ, ಆಕೃತ್ಯವನ್ನು ಎನ್ನಂತರಾತ್ಮನು ನೋಡಿಯೇ ನೋಡುವನು."]

ಆದಕಾರಣ ಗೋಪ್ಯವಾಗಿ ಕಳ್ಳತನಮಾಡಲೆಂತಾಗುವುದು? ಅದಲ್ಲದೆ ನಿಮ್ಮ ಮಾತನ್ನು ಕೇಳಿ ನಾನು ಈಗಲೇ ಜೋರನಾದರೆ, ಮುಂದಕ್ಕೆ ಗೌರವದಿಂದ ಬಾಳುವ ಬಗೆಹೇಗೆ? ಮತ್ತು ಎನ್ನ ಜಯ್ಯನು ರಾಜನಿಗೆ ತಿಳಿದು ಒಂದರೆ ಎನ್ನ ಹಸ್ತವನ್ನು ಛೇದಿಸದೇ ಬಿಡುವನೆ? ಅದೂ ಅಲ್ಲದೆ, ಮನುಷ್ಯನು ದಾರಿದ್ರ್ಯವು ಪ್ರಾಪ್ತವಾದಾಗ ಒರುವ ಕಷ್ಟಗಳನ್ನೆಲ್ಲ ಶಾಂತತೆಯಿಂದ ಸಹಿಸಿ ಸುವೃತ್ತನಾಗಿರ್ದರೆ ಜನರೆಲ್ಲರೂ ಗೌರವಿಸುವುದಲ್ಲದೆ ರಾಜನೂ ಮರ್ಯಾದಿಸುವನು; ಮತ್ತು ದಾರಿದ್ರ್ಯವೂ ಶಾಶ್ವತವಾಗಿರದು. ತತ್ವವು ಹೀಗಿರುವಲ್ಲಿ ಧರ್ಮವಿಹಿತವಾದ ಮಾರ್ಗವನ್ನವಲಂಬಿಸಬೇಕಲ್ಲದೆ ನಿಮ್ಮ ಮಾತನ್ನು ಕೇಳಿ ಇಹಪರಸುಖಗಳೆರಡನ್ನೂ ಹೇಗೆ ಕೆಡಿಸಿಕೊಳ್ಳಲಿ? ನಿಮ್ಮ ಬೋಧೆಯು ಸಾಕು; ಇನ್ನು ಮುಂದೆ ಎಮ್ಮ ದೇಶಾವರಣದಲ್ಲಿ ಇಂತಹ ದುರ್ಬೋಧೆಯನ್ನು ನೀವು ಮಾಡತೊಡಗಿದರೆ ಮಹಾ ದುಃಖವನ್ನನುಭವಿಸುವಿರಿ; ಜಾಗರೂಕರಾಗಿರಿ; ನಮ್ಮ

ಶ್ಲೋ॥ ಅಹಂ ಲೋಕೇ ನ ಪಶ್ಯಾಮಿ ಶೂನ್ಯಂ ಕ್ವಚನ ಕಿಂಚನ |
ಯತ್ರಾಪ್ಯನ್ಯಂ ನ ಪಶ್ಯಾಮಿ ನನ್ವಶೂನ್ಯಂ ಮಯೈವ ತತ್ ॥೩೩॥
ಪರೇಣ ಯಚ್ಚ ದೃಶ್ಯೇತ ದುಷ್ಕೃತಂ ಸ್ವಯಮೇವ ವಾ
ಸುದೃಷ್ಟತರಮೇತತ್ಸ್ಯಾದ್ದೃಶ್ಯತೇ ಸ್ವಯಮೇವ ಯತ್ ॥೩೪॥

ತಂದೆಯು ಓರ್ವನೇ ಹೋಗುತ್ತಿಹನು; ನಾನೂ ಹೊರಡುವೆನು; ಎನ್ನಲ್ಲಿ ಅವಿಧೇಯತೆಯೇನಾದರೂ ಇರ್ದರೆ ಕ್ಷಮಿಸಿ. '' ಎಂದುಹೇಳಿ ಕೈಮುಗಿದು ಓಡಿಹೋದನು.

ಬಳಿಕ ಚಿತ್ರನು ತನಗುಂಟಾದ ಪರಾಜಯದಿಂದ ಖಿನ್ನನಾಗಿ ವ್ಯಸನದಿಂದ ಅತ್ತ ಸರಿದು ನಿಂತುದನ್ನು ನೋಡಿದ ಗುಪ್ತನು, ಅಂತಃ ಭಯಗೊಂಡರೂ ಅದನ್ನು ಬಾಹ್ಯತಃ ವ್ಯಕ್ತಪಡಿಸದೆ, ಧೈರ್ಯವನ್ನು ನಟಿಸುತ್ತ, ಆ ವಟುವಿನಹಿಂದೆ ಹೊರಡಲುದ್ಯುಕ್ತಳಾಗಿರ್ದ ಅಬ್ರಾಹ್ಮಣಪತ್ನಿಯನ್ನು ಕುರಿತು ಕೃತಕವಾದ ವಿನಯದಿಂದ:—"ಅಮ್ಮಾ ತಾಯಿ! ನಿನ್ನ ಶ್ರಮವನ್ನು ನೋಡಿದರೆ, ನಮಗೆ ಬಹು ವ್ಯಸನವಾಗುವುದು. ನಿನ್ನ ರೂಪವನ್ನೂ ನಿನ್ನ ಇರುವಿಕೆಯನ್ನೂ ನೋಡಿದರೆ ಕಷ್ಟಪಟ್ಟವಳಂತೆ ಕಾಣುವುದಿಲ್ಲ;ನನ್ನ ಪತಿಗೂ ನಿನ್ನ ಪುತ್ರನಿಗೂ ಬಹುವಿಧವಾಗಿ ಬುದ್ಧಿವಾದವನ್ನು ಹೇಳಿದೆವು; ಅವರು ಪ್ರಕೃತಕಾಲಸ್ಥಿತಿಯನ್ನೂ ಈಗುಂಟಾಗಿರುವ ದಾರಿದ್ರ್ಯಸ್ಥಿತಿಯನ್ನೂ ಅರಿಯದೆ, ಬಹುಕಾಲದಿಂದಲೂ ಅನುಸರಿಸಿಬಂದ ಮೌಢ್ಯಕ್ಕೆ ಅಧೀನರಾಗಿ ಕಾಡಿಗೆ ಹೋಗಲುದ್ಯುಕ್ತರಾದರು; ನಿನ್ನ ಪತಿಯು ಕೇವಲ ವೃದ್ಧನು; ಇಂದೊನಾಳೆಯೊ ಸಾಯುವಸ್ಥಿತಿಯಲ್ಲಿರುವನು; ಅದಲ್ಲದೆ ವಾನಪ್ರಸ್ಥವನ್ನು ಅವಲಂಬಿಸಲು ಹೋದನು; ಆದಕಾರಣ ಅವನ ಚಿಂತೆಯು ನಮಗೆ ಇಲ್ಲವೇ ಇಲ್ಲ; ಆದಲ್ಲದೆ ನಿನ್ನ ಮಗನೋ ಇನ್ನೂ ತರುಣನು; ಕಾಯಪುಷ್ಟಿಯೂ ಸಂಪೂರ್ಣವಾಗಿಹುದು; ಆದುದರಿಂದ ಅವನು ಶ್ರಮಪಟ್ಟಾದರೂ ಜೀವಿಸಬಲ್ಲ; ಹೀಗಿರುವಲ್ಲಿ ಅವನ ಯೋಜನೆಯೂ ನಮಗಷ್ಟೊಂದಿಲ್ಲ; ಆದರೆ ನಿನ್ನನ್ನು ನೋಡಿದರೆ ನಮ್ಮ ಮನಸ್ಸು ಬೆಂದುಹೋಗುವುದು;ಏಕೆಂದರೆ ನೀನು ಸ್ತ್ರೀ;ನುತ್ತ ಅಬಲೆ;ನಿನ್ನವಯಸ್ಸು ಇನ್ನೂ ಪ್ರಪಂಚಸುಖವನ್ನು ಅನುಭವಿಸುವ ಸ್ಥಿತಿಯಲ್ಲಿರುವದು; ಹೀಗಿರುವಾಗ್ಗೆ ನೀನೆಂತು ಅರಣ್ಯದಲ್ಲಿ ಕಷ್ಟಪಡುವೆ? ಆದಲ್ಲದೆ ವನಕ್ಕೆ ತೆರಳಿದ ಗಂಡನಿಂದ ನಿನಗೇನುತಾನೇ ಸುಖವುಂಟಾದೀತು? ಆದಕಾರಣ ಆ ಹಾಳು ಮುದುಕನ ಯೋಜನೆಯನ್ನು ಬಿಡು; ರೂಪವಂತನಾಗಿಯೂ, ಪ್ರಕೃತಕಾ

ಲದ ಪ್ರೌಢವಿದ್ಯೆಯನ್ನು ಅಧಿಕರಿಸಿದವನಾಗಿಯೂ, ಯೌವನ ಸಮನ್ವಿತನಾಗಿಯೂ, ಚಿತ್ರವಿಚಿತ್ರವಾಗಿ ಅಲಂಕರಿಸಿಕೊಳ್ಳ ಚಮತ್ಕೃತಿಯನ್ನು ಬಲ್ಲವನಾಗಿಯೂ, ಪಾನಸುಖಿಯಾಗಿಯೂ, ಧನಾರ್ಜನಧುರೀಣನಾಗಿಯೂ, ಇರುವ ಮತ್ತೊಬ್ಬ ಪುರುಷನನ್ನು ವರಿಸಿ, ಪ್ರಪಂಚಸುಖವನ್ನು ಅನುಭವಿಸು.'' ಇದನ್ನು ಕೇಳಿದ ಬ್ರಾಹ್ಮಣಪತ್ನಿಯು, ಕಿವಿಗಳನ್ನು ಮುಚ್ಚಿಕೊಂಡು:— ''ಶಾಂತಂ ಪಾಪಂ ! ಶಾಂತಂ ಪಾಪಂ ! '' ಎಂದು ಹೇಳಲು ಗುಪ್ತನು ಧೃಷ್ಟತೆಯಿಂದ:—'' ಶಾಂತಂ ಪಾಪಂ ! ಶಾಂತಂ ಪಾಪಂ ! ಎಂದು ಹೇಳುವುದಕ್ಕೆ ಇಲ್ಲಿ ಪಾಪವೆಲ್ಲಿಹುದು ? ನಾನು ಶಾಸ್ತ್ರ ಸಂಮತವಾಗಿಯೇ ಹೇಳಿರುವೆನು; ಹೇಗೆಂದರೆ, ಸ್ತ್ರೀಯು ಯೌವನವತಿಯಾಗಿರ್ದು ಪತಿಯು ದೇಶಭ್ರಷ್ಟನಾದರೆ, ವನಕ್ಕೆ ತೆರಳಿದರೆ, ಕುಷ್ಠಾದಿ ಅನಿವಾರ್ಯವಾದ ವ್ಯಾಧಿಯಿಂದ ಪೀಡಿತನಾದರೆ, ಆಗ್ಗೆ ಅತಳು ಮತ್ತೊಬ್ಬ ಪತಿಯನ್ನು ವರಿಸಬಹುದೆಂದು ಧರ್ಮವಚನವಿರ್ದೇ ಇರುವುದು; ಇಷ್ಟೇ ಅಲ್ಲದೆ, ಗಂಡನು ಮೃತನಾದರೆ ಹೆಂಡತಿಯು ಬಹು ಪುತ್ರವತಿಯಾಗಿರ್ದರೂ ದ್ವಿತೀಯಪತಿಯನ್ನೂ, ಅವನೂ ಮೃತನಾದರೆ ತೃತೀಯಪತಿಯನ್ನೂ, ಅವನೂ ಮೃತನಾದರೆ ಚತುರ್ಥಪತಿಯನ್ನೂ, ಅವನೂ ಮೃತನಾದರೆ ಪಂಚಮ ಪತಿಯನ್ನೂ, ಹೀಗೆಯೇ ದಶಮಪರ್ಯಂತ ಪತಿಗಳನ್ನು ವರಿಸಬಹುದೆಂದು ಶಾಸ್ತ್ರಗಳಲ್ಲಿಯೇ ಅವಕಾಶವು ತೋರಿಸಲ್ಪಟ್ಟಿರುವುದು; ನೀನೋ ಇನ್ನೂ ಏಕಪುತ್ರವತಿ; ನಿನ್ನ ಗಂಡನೋ ವನಕ್ಕೆ ಹೊರಟುಹೋದನು; ಹೀಗಿರುವಲ್ಲಿ ನಾನು ಹೇಳಿದಂತೆ ಆಚರಿಸಲು ಅಭ್ಯಂತರವೇನು? ಆದಕಾರಣ ಆರೀತಿಮಾಡಿ ಸುಖದಿಂದ ಬಾಳು! ''

ಇದನ್ನು ಕೇಳಿದ ಬ್ರಾಹ್ಮಣಪತ್ನಿಯು ಸ್ವಲ್ಪಭೀತಳಾಗಿ, ಬಳಿಕ ಚಿಂತೆಯಿಂದ:—' ಈಗೇನುಮಾಡಲಿ ? ಈ ನೀಚನು ಈರೀತಿ ದುರ್ಬೋಧನೆಯನ್ನು ಮಾಡುತ್ತ ದಾರಿಗೆ ಅಡ್ಡಲಾಗಿ ನಿಂತಿಹರು ; ಈಗ ನಾನು ಹೆದರಬಾರದು. '' ಎಂದು ಮನದಲ್ಲಿ ನಿಶ್ಚಯಿಸಿ ಬಳಿಕ ಅವನನ್ನು ಕುರಿತು ಧೈರ್ಯದಿಂದ:—'' ನಿನ್ನನ್ನು ನೋಡಿದರೆ ಎನಗೆ ಬಹುವ್ಯಸನ

ವಾಗಿರುವುದು ; ಯತಿಗಳಾಗಿದ್ದರೂ ನೀವೀರೀತಿ ದುರ್ಬೋಧನೆಯನ್ನು ಮಾಡಬಹುದೆ? ನಿಮ್ಮನ್ನು ನೋಡಿದರೆ ಪೂರ್ವಮಹಾತ್ಮರು ಹೇಳಿದ ಅನುಭವಸಿದ್ಧವಾದ ಮಾತು ನಿಜವೆಂದೇ ತೋರುವುದು:–ಅದೇನೆಂದರೆ:—

[೩೫. ತಾ:–"(ಅನ್ತಃ)ಚಿತೇನ್ದ್ರಿಯರಲ್ಲದೇ ಇರ್ದರೂ(ಬಾಹ್ಯತಃ) ಚಿತೇನ್ದ್ರಿಯರ ವೇಷವನ್ನು ಧರಿಸಿಕೊಂಡು ಭೂಮಂಡಲದಲ್ಲೆಲ್ಲ ಅಲೆವ ಸನ್ಯಾಸಿ ರಾಕ್ಷಸರು (ಇತರರು ಹೇಳಿದುದನ್ನೆಲ್ಲ ನಿಜವೆಂದು ನಂಬುವ ಕೃತಕವನ್ನರಿಯದ) ಅಜ್ಞಜನರನ್ನು, (ಈರೀತಿ) ಅಧರ್ಮವನ್ನು ಬೋಧಿಸುವುದರ ದ್ವಾರಾ ಅನ್ಯಾಯವಾಗಿ ಹಾಳುಮಾಡುವರಲ್ಲಾ! "]

ನಿಮ್ಮನ್ನುನೋಡಿದರೂ ಅವರಂತೆಯೇ ತೋರುವುದು; ಅತಿಯಾಗಿ ವಾದವನ್ನು ಮಾಡದೆ, ಎನಗೆ ದಾರಿಯನ್ನು ಬಿಡಿ ; ಇಲ್ಲವಾದರೆ ಮಹಾ ದುಃಖವನ್ನನುಭವಿಸುವಿರಿ. " ಬಳಿಕ ಗುಪ್ತನು ಈಕೆಯ ಧೈರ್ಯಕ್ಕೂ ಧರ್ಮಬುದ್ಧಿಗೂ ವಿವೇಕಕ್ಕೂ ಬೆರಗಾದರೂ, ಹೊರಗೆ ವಿಷಾದಗೊಂಡವನಂತೆ ನಟಿಸಿ, ಆಕೆಯನ್ನು ಕುರಿತು ವಿನಯವನ್ನು ನಟಿಸುತ್ತ:—"ಎಲೌ ಮಂಗಳಾಂಗಿ ! ಕೋಪಿಸದಿರು ; ನಿನ್ನ ಹಿತಕ್ಕಾಗಿ ನಾವೀರೀತಿ ಹೇಳುವೆವೇ ಹೊರತು ಮತ್ತಬೇರೆ ಇಲ್ಲ ! ಸಾವಧಾನ ಚಿತ್ತಳಾಗು ; ನೀನೂ ವಿಚಕ್ಷಣೆಯಂತೆ ತೋರುವೆ ! ತತ್ವವನ್ನು ವಿಚಾರಿಸಿ ನೋಡಿದರೆ, ಗಂಡ ನಾರೋ ಹೆಂಡತಿಯಾರೋ ? ಆರಿಗಾರೂ ಹೊಣೆಗಾರರಲ್ಲ ; ಕರ್ಮಶಾಸ್ತ್ರಾನುಸಾರವಾಗಿ ಅವರವರ ಸುಖದುಃಖಗಳಿಗೆ ಅವರವರು ಭಾಗಿಗಳೇ ಹೊರತು ಇತರರೆಂದಿಗೂ ಅಲ್ಲ ; ಆದಕಾರಣ ನಿನ್ನ ಸುಖವನ್ನು ನೀನು ನೋಡಿಕೊ ; ಇದರಿಂದ ಅವದೋಷವೂ ಪ್ರಾಪ್ತವಾಗದು ; ಏಕೆಂದರೆ, ಪರಲೋಕವೆಂಬುದೆಲ್ಲ ಅಜ್ಞರ ಮೂಢ ಭಾವನೆಯೇ ಹೊರತು ಮತ್ತೆ ಬೇರೆ ಇಲ್ಲ. "

ಅಸಂಯತಾಃ ಸಂಯತವೇಷಧಾರಿಣಶ್ಚರನ್ತಿ ಕಾಮಂ ಭುವಿ ಭಿಕ್ಷುರಾಕ್ಷಸಾಃ ।
ವಿನಿರ್ದಹೇಯುಃ ಖಲು ಬಾಲಿಶಂ ಜನಂ ಕುದೃಷ್ಟಿಭಿರ್ದೃಷ್ಟವಿಷಾ ಇವೋರಗಾಃ ॥೩೫॥

ಇದನ್ನು ಕೇಳಿದ ಬ್ರಾಹ್ಮಣಪತ್ನಿಯು ಕೋಪಾವಿಷ್ಟಳಾದರೂ, ಶಾಂತಿಯನ್ನು ವಹಿಸಿ, ಅವನ ಅವಿವೇಕಕ್ಕೆ ಮರುಕಗೊಂಡು, ಅವನನ್ನು ಕುರಿತು:—"ಎಲೈ ಉಪದೇಶಕನೆ! ನೀವುಪದೇಶಿಸುವ ವಿಷಯವು ಎಮ್ಮ ಮಹಾರಾಜನಿಗೆ ತಿಳಿದುಬಂದರೆ, ಪರಲೋಕದಲ್ಲಾಗುವ ಹಿಂಸೆಗಳೆಲ್ಲ ನಿಮಗೆ ಇಲ್ಲಿಯೇ ಆಗುವುವು ! ಆದಕಾರಣ ಇನ್ನು ಮೇಲೆ ಇಂತಹ ದುರ್ಬೋಧೆಯನ್ನು ಎಮ್ಮ ರಾಷ್ಟ್ರದಲ್ಲಿ ಮಾಡಲು ಯೋಚಿಸಲೂ ಬೇಡ! ನಿನ್ನನ್ನು ನೋಡಿದರೆ,ಆವುದೋ ಅನಾರ್ಯದೇಶದಿಂದ ಈ ಆರ್ಯಾವರ್ತಕ್ಕೆ ಬಂದಿರುವಂತೆ ತೋರುವುದು ! ಸತಿಯರು ಬಹುಪತಿವ್ರತೆಯರಾಗುವುದು ನಿಮ್ಮ ದೇಶದ ಧರ್ಮವಾಗಿರಬಹುದು ! ಇಲ್ಲಿನ ಧರ್ಮವು ಬೇರೆ ! ಅದನ್ನು ನೀವು ತಿಳಿಯುವುದಕ್ಕೂ ಕೂಡ ಅಯೋಗ್ಯರಾಗಿರುವಿರಿ! ಆದಕಾರಣ ಈ ಪ್ರದೇಶವನ್ನು ಬಿಟ್ಟು ಈಕ್ಷಣವೇ ಹೊರಟುಹೋಗಿರಿ! " ಎಂದು ಹೇಳಲು ಗುಪ್ತನು ಲಜ್ಜೆಗೊಂಡವನಾಗಿ, ಅತ್ತ ಸರಿಯಲು, ಅಕೆಯು ತನ್ನ ಪತಿಯನ್ನು ಹಿಂಬಾಲಿಸಿ ಹೊರಟು ಹೋದಳು.

ಬಳಿಕ ಚಿತ್ರನು ಗುಪ್ತನನ್ನು ಕುರಿತು ಆಶ್ಚರ್ಯದಿಂದ:—ಮಿತ್ರನೇ! ಎಮ್ಮ ಸುರಲೋಕದಲ್ಲಿಯೂ ಇಂತಹ ಧರ್ಮಸ್ಥೈರ್ಯವನ್ನು ಕಾಣೆವು! ಈ ರಾಷ್ಟ್ರದಲ್ಲಿ ಪ್ರತಿಯೋರ್ವ ಹೆಂಗುಸೂ ಗಂಡುಸೂ ಮತ್ತು ಹುಡುಗನೂ ಕೂಡ ಪ್ರೌಢರಾಗಿಯೂ ಸ್ವಧರ್ಮಸ್ಥೈರ್ಯವುಳ್ಳವರಾಗಿಯೂ ರಾಜಾಜ್ಞಾಪಾಲಕರಾಗಿಯೂ ಇರುವರು ! ನಾವು ಹಿಂದೆ ನೋಡಿದ ರಾಜ್ಯಗಳೊಳಗೆ ಅಲ್ಲಿನ ರಾಜರುಗಳಿಗೂ ಕೂಡ ಇಲ್ಲಿನ ಸಾಧಾರಣ ಕುರುಬನಷ್ಟು ಯೋಗ್ಯತೆಯೂ ವಿವೇಕವೂ ಇರಲಿಲ್ಲವಲ್ಲ! ಅದಲ್ಲದೆ

[೩೬ ತಾ–ಸಾಮಾನ್ಯವಾಗಿ, ಜನರು ಭೋಗವನ್ನು ಪಡೆಯುವುದಕ್ಕಾಗಿ ಮನೋಪಕಲ್ಪವನ್ನು ಹೊಂದಿ, ಧರ್ಮಾತಿಕ್ರಮಣದೋಷವನ್ನು ಲಕ್ಷಿಸದೆ, ತಾವು ಮಾಡುವ ಕಾರ್ಯಗಳು ತಮ್ಮ ಯಶಸ್ಸನ್ನು ಹಾಳು

ಯಶಃ ಸಪತ್ನೈರಪಿ ಕರ್ಮಭಿರ್ಜನಃ ಸಮೃದ್ಧಿಮನ್ವಿಚ್ಛತಿ ನೀಚದಾರುಣೈಃ ।
ಸ್ವಸೌಖ್ಯಸಂಗಾದನವೇಕ್ಷ್ಯತಾತ್ಯಯಃ ಪ್ರತಾರ್ಯಮಾಣಶ್ಚಪಲೇನ ಚೇತಸಾ ॥೩೬॥

ಮಾಡುವುವಾಗಿರ್ದರೂ ಅದನ್ನು ಗಮನಿಸದೆ, ನೀಚವಾದ ಆಶೆಯಿಂದ ಪೀಡಿತರಾಗಿ ದ್ರವ್ಯವನ್ನು ಅರ್ಜಿಸಲಿಚ್ಛಿಸುವರು.''

[೩೭ ತಾ:-''ಇತ್ತಲೀ ದೇಶವಾಸಿಗಳಾದರೋ, (ಶಾಶ್ವತವಾದ) ಧರ್ಮವೆಂಬ ಧನವನ್ನು ಅರ್ಜಿಸಲು ದೃಢಚಿತ್ತರಾಗಿ, ತಮಗುಂಟಾದ ಧನನಾಶವನ್ನೂ ದಾರಿದ್ರ್ಯದುಃಖವನ್ನೂ ಮತ್ತು ಎನ್ನ ದುಷ್ಪ್ರೇರಣೆಯನ್ನೂ ಸಹ ಲಕ್ಷಿಸದೆ, ತಮ್ಮ ಗುಣಗಳ ಮಹತ್ತ್ವವನ್ನು ಈಗ ವ್ಯಕ್ತಗೊಳಿಸಿದರು.''

ಈ ಆಶ್ಚರ್ಯವನ್ನು ಎಷ್ಟುಹೇಳಿದರೂ ತೀರದು ! ಇತರ ರಾಜ್ಯಗಳಲ್ಲಿ ಪ್ರಜೆಗಳು ರಾಜನಿಂದೆಯನ್ನೂ, ಕೆಲವುಕಡೆ ರಾಜಹನನವೆಂಬ ಮಹಾಪಾತಕವನ್ನೂ ಕೂಡ ಹೇಸದೆ ಮಾಡುವಷ್ಟು ಅಧರ್ಮಪ್ರವೃತ್ತರಾಗಿಹರು! ಇಲ್ಲೀಗ ರೋಗ ಕ್ಷಾಮ ದಾರಿದ್ರ್ಯ ಮುಂತಾದುವುಗಳುಂಟಾಗಿರ್ದರೂ, ರಾಜನು ಈ ದುಃಖವನ್ನು ವಿಚಾರಿಸದೆ ಉಪೇಕ್ಷಿಯಿಂದಿರ್ದರೂ `ಕೂಡ, ಅವನನ್ನು ನಿಂದಿಸುವುದನ್ನೇ ಆಗಲಿ, ಇಂತಹ ದುಸ್ಥಿತಿಯಲ್ಲಿಯೂ ಅವನ ಶಾಸನಕ್ಕೆ ವಿರೋಧವಾಗಿ ಆಚರಿಸುವುದನ್ನೇ ಆಗಲಿ ಸ್ವಲ್ಪವೂ ಕಾಣೆವಲ್ಲ ! ಇದಲ್ಲದೆ, ನಾವುಗಳೂ ಎಮ್ಮ ದೇವೇಂದ್ರನೇ ಮೊದಲಾದ ಸುರಲೋಕಪಾಲರೂ ಸೇರಿ, ಸಮಸ್ತ ಸಾಹಸಗಳನ್ನೂ ಮಾಡಿದೆವು! ಇಲ್ಲದ ರೋಗಗಳನ್ನೆಲ್ಲ ಉಂಟುಮಾಡಿದೆವು! ಹಿಂಸೆ ಚೌರ್ಯ ಮುಂತಾದ ಕ್ರೂರಕರ್ಮಗಳಿಗೆಲ್ಲ ಗೋಪ್ಯವಾಗಿ ಪ್ರೇರಿಸಿದೆವು! ಸ್ವವ್ಯೂಹಕಲಹಗಳನ್ನುಂಟುಮಾಡಿದೆವು! ಇಷ್ಟಾದರೂ ಎಮ್ಮ ಪ್ರಯತ್ನಗಳೊಂದೂ ಸಾಗದೆ, ನಾವುಗಳೇ ಹೆಂಗುಸಿನಿಂದಲೂ ಹುಡುಗನಿಂದಲೂ ಕೂಡ ಅವಿವೇಕಿಗಳೆನಿಸಿಕೊಂಡು, ಪರಾಜಿತರಾದೆವು! ಅಂತೂ ಎಮ್ಮ ಗುರುವಾದ ಬೃಹಸ್ಪತಿಯು ಹೇಳಿದಂತೆ ದೇವತೆಗಳಾದೆಮಗೇ ಪರಾಜಯವುಂಟಾಗುವಂತೆ ತೋರುವುದು!'' ಎಂದು ತೃಪ್ತಿಯಿಂದಲೂ

ಆಚಿಂತಯಿತ್ವಾಪಿ ಧನಕ್ಷಯಂ ತ್ವಮೀ ದಾರಿದ್ರ್ಯದುಃಖಂ ಮಮ ಚ ಪ್ರತಾರಣಾಮ್|
ಧರ್ಮಾರ್ಥಸಂಪಾದನಧೀರಚೇತಸಃ ಮಹತ್ತ್ವಮಾತೇನುರಿಹಾತ್ಮಸಂಪದಃ ||೩೭||

ಆಶ್ಚರ್ಯದಿಂದಲೂ ಲಜ್ಜೆಯಿಂದಲೂ ಭೀತಿಯಿಂದಲೂ ಕೂಡಿ ಹೇಳಿದ ಮಾತುಗಳನ್ನು ಕೇಳಿದ ಗುಪ್ತನು, ವಿಸ್ಮಯದಿಂದ:—"ನೀನು ಹೇಳಿದುದೆಲ್ಲವೂ ನಿಜವೇ ಆಹುದು; ಆ ವಿಷಯದಲ್ಲಿ ನಾನು ಮುಂದಕ್ಕೆ ಪ್ರತಿವಾದವನ್ನುಮ ಲಾರೆನು. ಆದರೂ ಇಷ್ಟಕ್ಕೇ ಭಗ್ನೋತ್ಸಾಹರಾಗಿ ಉದ್ದಿಷ್ಟಕಾಯ ನ್ನು ಬಿಟ್ಟಬಿಡಬಾರದು; ಕೈಲಾದಮಟ್ಟಿಗೂ ಎಮ್ಮ ಕೃತ್ರಿಮಗಳನ್ನು ಸಮಯವರಿತು ಪ್ರಯೋಗಿಸೋಣ ನಡೆ." ಎಂದು ಮುಂದಕ್ಕೆ ಹೊರಟುಹೋದರು.

ಎಂಟನೆಯ ಸಂಧಿ

REACHING THE GOAL OF JUDGEMENT.

ಅಭಿಪಾರಗತ್ವ

ಇತ್ತಲಾ ಸೈನ್ಯಸಮೇತನಾಗಿ ಕಾಶ್ಮೀರದೇಶದಿಂದ ಹಿಂದಿರುಗಿ ಬಂದ ಅಭಿಪಾರಗನು, ದಾರಿಯಲ್ಲಿ ಸಂಧಿಸಿದ ದಾಯಕಶ್ರೇಷ್ಟಿಯಿಂದಲೂ ಶೀಲಾಸನದಿಂದಲೂ ರಾಜ್ಯದ ಅನಾಯಕಸ್ಥಿತಿಯನ್ನು ತಿಳಿದು ವಿಷಾದಗೊಂಡವನಾಗಿ, ಬೇಗಬಂದು ಪುರವನ್ನು ಸೇರಿ, ಅಲ್ಲಿನ ದುಸ್ಥಿತಿಗಳನ್ನೆಲ್ಲ ತಿಳಿದು ವ್ಯಸನಾಕ್ರಾಂತನಾಗಿ, ಈರೀತಿ ಆತ್ಮಗತವಾಗಿ ಚಿಂತಿಸಿದನು:—"ಹಾ! ಇದೇನೀ ಅವ್ಯವಸ್ಥೆಯು! ಕಾಶ್ಮೀರದೇಶದ ಯುದ್ಧದಲ್ಲಿ ಎನಗುಂಟಾದ ಜಯಾಭ್ಯುದಯಗಳನ್ನು ಮಹಾರಾಜನಿಗೆ ವಿಜ್ಞಾಪಿಸಬೇಕೆಂದು ಪರಮೋತ್ಸಾಹದಿಂದ ಬಂದೆನು; ಆ ಸಂತೋಷವನ್ನೆಲ್ಲ ಎಮ್ಮ ರಾಜ್ಯದ ದುಸ್ಥಿತಿಯು ಒಂದು ಕ್ಷಣಮಾತ್ರದಲ್ಲಿ ಹಾಳುಮಾಡಿತು; ಎಲ್ಲಿ ನೋಡಿದರೂ ದಾರಿದ್ರ್ಯಜನ್ಯವಾದ ದೈನ್ಯವೂ, ಧನಕ್ಷಯದಿಂದುಂಟಾದ ಸಂಕಟವೂ, ಪ್ರಾಣಹಾನಿಯಿಂದುಂಟಾದ ರೋದನವೂ, ಹಿಂಸೆಯಿಂದುಂಟಾದ ಆಕ್ರಂದನವೂ, ಗೋಚರಿಸುತ್ತಿಹವು; ಅರ್ಥಿಜನರ ಆಕ್ಷ್ಮಾಮ ಕೂಪನೆಂದು ಪ್ರಖ್ಯಾತನಾಗಿದ್ದ ಆ ದಾಯಕಶ್ರೇಷ್ಠಿಯು ತೃಣವಿಕ್ರಯ

ದಿಂದ ಜೀವಿಸುವುದನ್ನೂ, ಮತ್ತಾ ಮಹಾತ್ಮನಾಗಿಯೂ ಧರ್ಮಸ್ವರೂಪ ನಾಗಿಯೂ ಇರುವ ಶೀಲಾಸನನು ಕ್ಷಾಮಪೀಡಿತನಾಗಿ ಪತ್ನೀಪುತ್ರರಿಂ ದೊಡಗೂಡಿ ಅರಣ್ಯಕ್ಕೆ ತೆರಳುತಿರ್ದುದನ್ನೂ, ನೋಡಿದಾರಭ್ಯ ಎನ್ನ ಕೋಪವೂ ವಿಷಾದವೂ ವ್ಯಸನವೂ ಭೀತಿಯೂ ಒಂದರಮೇಲೊಂದು ಉಲ್ಬಣಿಸುವುವು; ಒಳ್ಳೆಯದು! ಮುಂದಣ ಉದ್ಯೋಗವನ್ನು ಮಾಡು ವೆನು.'' ಎಂದು ಮಾತನಾಡಿಕೊಂಡ ಬಳಿಕ, ತನ್ನ ಸೈನಿಕರನ್ನು ಕುರಿತು:—"ನಿಮ್ಮಲ್ಲೊರ್ವನು ಆ ದಾಯಕಶ್ರೇಷ್ಠಿಯನ್ನೂ ಪತ್ನೀಪುತ್ರರಿಂದೊಡಗೂಡಿದ ಆ ಶೀಲಾಸನನನ್ನೂ ಈಗಲೇ ಎನ್ನ ಮನೆಗೆ ಮರ್ಯಾದೆಯಿಂದ ಕರೆದುಕೊಂಡುಹೋಗಿ, ಅವರವರಿಗೆ ವಿಹಿತವಾದ ಉಪಚಾರಗಳಿಂದ ಸತ್ಕರಿಸುವಂತೆ ನಾನು ಹೇಳಿದೆನೆಂದು ಅಲ್ಲಿ ತಿಳುಹತಕ್ಕುದು, ಮತ್ತು ಉಳಿದ ನೀವುಗಳೆಲ್ಲರೂ ಗ್ರಾಮಚಾರಿಗಳಿಗೆ ಸಹಾಯಕರಾಗಿ ಎಮ್ಮ ರಾಷ್ಟ್ರದಲ್ಲಿ ದುಷ್ಕರ್ಮವನ್ನೆಸಗುತ್ತಿರುವ ಪರದೇಶದ ಜೋರರನ್ನೆಲ್ಲ ನಿಂನಿಮ್ಮ ಸಾಹಸಚಮತ್ಕಾರಗಳನ್ನೆಲ್ಲ ಪ್ರಯೋಗಿಸಿ ಹಿಡಿದು ಶಿರತಕ್ಕುದು; ಈ ವಿಷಯಕವಾದ ವ್ಯವಸಾಯದಲ್ಲಿ ಸಮರ್ಥರಾದವರಿಗೆಲ್ಲ ತಕ್ಕ ಬಹುಮಾನಗಳು ಕೊಡಲ್ಪಡುವುವು; ಆದರೆ ಕಾಮವಿತ್ತಾದಿಗಳಿಗಧೀನರಾಗಿ ನಿರ್ದೋಷಿಗಳಿಗೆ ಹಿಂಸೆಯನ್ನಾಗಲಿ ಅವಮಾನವನ್ನಾಗಲಿ ಉಂಟುಮಾಡಿದ ಸಂಗತಿಯು ತಿಳಿದುಬಂದುದೇ ಆದರೆ, ಅಂತಹ ದುಷ್ಟರನ್ನು ಶೂಲಕ್ಕೆ ಹಾಕಿಸುವೆನು; ಈ ವಿಷಯವನ್ನು ಜೆನ್ನಾಗಿ ಜ್ಞಾಪಕದಲ್ಲಿ ಇಡತಕ್ಕುದು.'' ಎಂದು ಆಜ್ಞೆಮಾಡಲು ಅವರು:—"ಜೇಯಾ! ಅಪ್ಪಣೆಯನ್ನು ಶಿರಸಾವಹಿಸಿದೆವು.'' ಎಂದು ಹೇಳಿ ಕೈಮುಗಿದು ಹೊರಟುಹೋದತರುವಾಯ ಪುನಃ ಆತ್ಮಗತವಾಗಿ:—"ಈ ಅನಾಹುತಗಳಿಗೆಲ್ಲ ಏನುಕಾರಣವಿರಬಹುದು ? ಮಹಾರಾಜನು ಇಂತಹ ದುರಾಗತಗಳೊಂದಕ್ಕೂ ಅವಕಾಶಕೊಡತಕ್ಕವನಲ್ಲ; ಮತ್ತು ರಾಜ್ಯಾಧಿಕಾರಿಗಳೂ ಉಪೇಕ್ಷಿಸತಕ್ಕವರಲ್ಲ; ಏಕೆಂದರೆ, ಮಹಾರಾಜನು ತನ್ನ ಮಂತ್ರಿಮುಂತಾದ ಅಧಿಕಾರಿಗಳು ಸ್ವಭೋಗ ಸ್ವಕ್ಷೇಮಗಳಲ್ಲಿಯೇ ಮಗ್ನರಾಗಿ

ಪ್ರಜಾಹಿತೋದ್ದಿಷ್ಟಕಾರ್ಯಗಳಲ್ಲಿ ಉಪೇಕ್ಷೆಯುಳ್ಳವರಾದಾರೆಂದು, ವೇಷಾಂತರಗಳನ್ನಳವಡಿಸಿಕ್ಕೊಂಡು ತಾನೇ ಪ್ರಜೆಗಳ ಸುಖದುಃಖಗಳನ್ನು ಗೂಢವಾಗಿ ವಿಚಾರಿಸುವನು; ಹೀಗಿರ್ದೂ ದೇಶವು ಅವ್ಯವಸ್ಥೆಗೆ ಬಂದಿರುವುದನ್ನು ನೋಡಿದರೆ, ಮಹಾರಾಜನಲ್ಲಿಯೇ ಏನೋ ಪ್ರಮಾದವುಂಟಾಗಿರುವಂತೆ ತೋರುವುದು; ಇದರ ಕಾರಣವನ್ನು ನಾನೀಗ ಗೂಢವಾಗಿ ತಿಳಿಕೊಳ್ಳಬೇಕಾಗಿರುವುದು.'' ಎಂದು ಯೋಚಿಸುತ್ತಿರುವ ಸಮಯಕ್ಕೆ ಸರಿಯಾಗಿ, ರಾಜಸಾರಥಿಯಾದ ಸುನಂದನು ರಾಜಮಂದಿರದಿಂದ ತನ್ನ ಮನೆಗೆ ಹೋಗುವುದಕ್ಕೆ ಇದಿರಿಗೆ ಬರುತ್ತಿರುವುದನ್ನು ಕಂಡು ಸಂತೋಷಭರಿತನಾಗಿ —'' ಇವನಿಂದಲೇ ಸರ್ವವನ್ನೂ ಗೂಢಸಂಭಾಷಣೆಯ ಮೂಲಕ ತಿಳಿದುಕೊಳ್ಳುವೆನು.'' ಎಂದು ನಿಶ್ಚಯಿಸಿ ಆ ಸುನಂದನನ್ನು ಕುರಿತು ಪ್ರೇಮದಿಂದ:–''ಸುನಂದನೇ! ನಿನಗೆ ಕ್ಷೇಮವೆ?'' ಎಂದು ಕೇಳಲು ಸುನಂದನು ವಿಕಸಿತವದನನಾಗಿ:—''ಅಭಿಷಾರಗನೆ! ನಿನ್ನ ಭುಜಬಲಪ್ರಭಾವದಿಂದ ನಾನು ಸುಕ್ಷೇಮಿಯು; ಕಾಶ್ಮೀರದಿಂದಾವಾಗ ಆಗಮನವು?'' ಅಭಿ:–''ಈಗತಾನೇ ಬರುತ್ತಿಹೆನು; ರಾಜಕುಲವು ಸುಕ್ಷೇಮವಾಗಿರುವುದೆ?'' ಸುನ–''ಅದೂ ಸುಕ್ಷೇಮವಾಗಿಹುದು.'' ಅಭಿ–(ಸಂತೋಷವನ್ನು ನಟಿಸುತ್ತ) ''ಸಂತೋಷ; ಈಗೆಲ್ಲಿಂದ ಬರುತ್ತಿರುವೆ?'' ಸುನ–''ರಾಜಮಂದಿರದ ಅಶ್ವಶಾಲೆಯಿಂದ ಬರುತ್ತಿಹೆನು'' ಅಭಿ–''ಹಾಗೊ? ಹಾಗಾದರೆ ಸಾರಥಿತ್ವದ ಈದಿನದ ಸರದಿಯು ನಿನ್ನದೋ, ಅಥವಾ ಇನ್ನಾರದೋ?'' ಸುನ–(ನಿರುತ್ಸಾಹನಾಗಿ) ''ಎನ್ನದೂ ಅಲ್ಲ; ಇತರರದೂ ಅಲ್ಲ'' ಅಭಿ–(ಸ್ವಗತಂ) ''ಇದೇನೋ ಸ್ವಲ್ಪ ಅವಕಾಶವು ಸಿಕ್ಕಿದಹಾಗೆ ತೋರುವುದು! (ಕುತೂಹಲದಿಂದ ಪ್ರಕಾಶ) ಅದೇಕೆ?'' ಸುನ–''ಹೋದವರುಷದ ಕೌಮುದೀ ಮಹೋತ್ಸವವಾದಂದಿನಿಂದ ಮಹಾರಾಜನು ಅಸ್ವಸ್ಥನಾಗಿರುವುದರಿಂದ ರಥಾರೋಹಣವನ್ನೇ ಮಾಡಲಿಲ್ಲ.'' ಅಭಿ:–(ಕುತೂಹಲವನ್ನು ನಟಿಸಿ) ''ಮಹಾರಾಜನಿಗೆ ದೇಹದಲ್ಲಿ ಏನು ಆಲಸ್ಯ?'' ಸುನ:–''ಮಹಾರಾಜನು ಶುದ್ಧಾಂಗವಾಗಿ ಜನಸಂಗವನ್ನೇ

ಬಿಟ್ಟಿರುವುದರಿಂದ ಆದರಕಾರಣವು ಮುಖ್ಯಮಂತ್ರಿಗೂ ತಿಳಿಯದೇ ಇರುವಲ್ಲಿ, ಎನಗೆ ತಿಳಿಯುವ ಒಗೆ ಹೇಗೆ ? ಅಂತೂ ಬಾಹ್ಯರೋಗಾದಿಗಳೊಂದೂ ಇಲ್ಲವಂತೆ; ಆದರೂ ಅನ್ನಾದ್ಯಾಹಾರಗಳಲ್ಲಿಯೂ ಉಪೇಕ್ಷೆಯನ್ನು ತಳೆದು ದಿನೇದಿನೇ ಕ್ಷೀಣಾಂಗನಾಗುತ್ತಿಹನಂತೆ.'' ಅಭಿ–''ಆ ಕೌಮುದೀ ಮಹೋತ್ಸವದ ದಿನ ಆರೋಗ್ಯವಾಗಿದ್ದನೋ ಇಲ್ಲವೋ?'' ಸುನ–''ಆದಿನ ಆರೋಗ್ಯವಾಗಿಯೂ ಇದ್ದನು; ಮತ್ತು ಆದಿನದ ಉತ್ಸವವೂ ಅತಿ ಸಂಭ್ರಮದಿಂದ ನಡೆಯಿತು.'' ಅಭಿ:–''ಆದಿನ ಮಹಾರಾಜನಿಗೆ ಆರಾದರೂ ಅಪರೂಪವಾದ ವಸ್ತುವನ್ನೇನಾದರೂ ಅರ್ಪಿಸಿದರೋ? ಅಥವಾ ಇನ್ನಾವುದಾದರೂ ಆಶ್ಚರ್ಯಕರವಾದ ವಸ್ತುವನ್ನು ನೋಡಿದನೋ ?'' ಸುನ:–''ಅದೇನೂ ಇಲ್ಲ, ಆದರೆ ಆದಿನ ಕಿರೀಟವರ್ಮನ ಮಗಳಾದ ಉನ್ಮಾದಿನಿಯು ನಾರುಮಡಿಯನ್ನುಟ್ಟು ತಮ್ಮ ಮನೆಯ ಮುಮ್ಮಾಳಿಗೆಯಮೇಲೆ ನಿಂತಿದ್ದಳು; ಮಹಾರಾಜನು ಅವಳನ್ನೇ ನೋಡುತಿದ್ದನು; ಅವಳೂ ಅವನನ್ನೇ ನೋಡುತ್ತ ಅಳುತಿದ್ದಳು; ಇದು ರಾಜಗೌರವಕ್ಕೆ ಕುಂದೆಂದು ನಾನು ರಥವನ್ನು ವೇಗವಾಗಿ ಮುಂದುವರಿಸಿಬಿಟ್ಟೆನು.'' ಅಭಿ:–(ಸ್ವಗತ) ''ಓಹೊ ! ಇಲ್ಲಿಯೇ ಏನೋ ಜೀವಾಳವಿದೆ! (ಪ್ರಕಾಶ) ಪುನಃ ಅವಳ ವಿಚಾರವೇನಾದರೂ ನಡೆಯಿತೋ?'' ಸುನ:–''ಮಹಾರಾಜನು ಆದಿನ ಅರಮನೆಯನ್ನು ಸೇರಿದಮೇಲೆ ಎನ್ನನ್ನು ಕುರಿತು–'ಅವಳಾರಮಗಳು ? ಅವಳ ಹೆಸರೇನು?' ಎಂದು ಕೇಳಿದನು; ಅದಕ್ಕೆ ನಾನು ಅವಳ ವಿಷಯವನ್ನೆಲ್ಲ ಸವಿಸ್ತಾರವಾಗಿ ಹೇಳಿ ಮನೆಗೆ ಹೊರಟುಹೋದೆನು; ಅಷ್ಟೇ ಇನ್ನೇನೂ ವಿಶೇಷವಿಲ್ಲ.'' ಅಭಿ–(ಉಪೇಕ್ಷೆಯನ್ನು ನಟಿಸುತ್ತ) ''ಅಷ್ಟೇನೇ ? ಒಳ್ಳೆಯದು! ನಿನಗೆ ಭೋಜನಶಾಲವು ಮಿಾರುತ್ತಾಬಂದಿತು; ಇನ್ನು ತೆರಳುವನಾಗು.'' ಎಂದು ಹೇಳಲು ಅವನು ಹೊರಟುಹೋದನು.

ಬಳಿಕ ಅಭಿಸಾರಗನು ಚಿಂತಾಕ್ರಾಂತನಾಗಿ ಈರೀತಿ ಆತ್ಮಜಿಜ್ಞಾಸೆಯನ್ನು ಮಾಡಲುಪಕ್ರಮಿಸಿದನು:–''ಆಹಾ! ರಾಜನು ಸ್ವಕಾರ್ಯದಿಂದ

ವಿಮುಖನಾದುದರಿಂದಲೇ ಸಚಿವಾದಿಗಳೂ ವಿಮುಖರಾಗಿ, ಅಂತೂ ರಾಜ್ಯವು ದುಃಸ್ಥಿತಿಗೆ ಬರಲು ಸತ್ಕರಿಸಿತು; ಮಹಾರಾಜನು ಆರೀತಿ ವಿಮುಖನಾಗಲು ಆ ಉನ್ಮಾದಯನ್ತಿಯೇ ಕಾರಣವಾಗಿರಬಹುದೆ ? ಇಲ್ಲ! ಏಕೆಂದರೆ, ಮಹಾರಾಜನು ಪರಸ್ತ್ರೀಪರಾಙ್ಮುಖನು ; ಮತ್ತು ದುಷ್ಟಾತ್ಮಿಯೂ ಅಲ್ಲ; ಹಾಗಾದರಿನ್ನಾವಕಾರಣವಾಗಿರಬಹುದು ? ಇನ್ನಾವಕಾರಣವೂ ತೋರುವುದಿಲ್ಲ ; ಸಂದೇಹವೇನು ? ಸುನಂದನ ಮಾತುಗಳನ್ನೆಲ್ಲ ಯೋಚಿಸಿದರೆ ಉನ್ಮಾದಿನಿಯೇ ಕಾರಣವಾಗಿರಬೇಕೆಂದು ತೋರುವುದು; ಏಕೆಂದರೆ, ಮಹಾರಾಜನನ್ನು ನೋಡಿ ಉನ್ಮಾದಿನಿಯು ಅಳುತಿರ್ದಳೆಂಬ ಸಂಗತಿಯನ್ನೂ, ಅವಳನ್ನು ಮಹಾರಾಜನು ದೃಷ್ಟಿಸಿದನೆಂಬ ಸಂಗತಿಯನ್ನೂ, ಅರಮನೆಗೆ ಹೋದಮೇಲೆ ಪುನಃ ಅವಳ ವಿಷಯವನ್ನು ವಿಚಾರಮಾಡಿದನೆಂಬ ಸಂಗತಿಯನ್ನೂ ಸಹ, ಕುರಿತು ಯೋಚಿಸಿದರೆ, ಅವರವರಿಗೆ ಅವುದೋ ಪೂರ್ವಸಂಬಂಧವಿರ್ದಂತೆ ತೋರುವುದು; ಈ ಊಹೆಯೇ ನಿಜವಾಗಿರಬೇಕು; ಏಕೆಂದರೆ ಉನ್ಮಾದಯಂತಿಯು ರಾಜನನ್ನು ನೋಡುವ ಉತ್ಸವಕಾಲದಲ್ಲಿ ಇತರರೆಲ್ಲರಂತೆ ದಿವ್ಯವಸ್ತ್ರಾಭರಣಗಳಿಂದ ಅಲಂಕೃತಳಾಗದೆ ನಾರುಮಡಿಯನ್ನುಟ್ಟು, ವಿಭವವಾಸರದ ಹರ್ಷವನ್ನು ಸೂಚಿಸುವುದಕ್ಕೆ ಪ್ರತಿಯಾಗಿ ದುಃಖವನ್ನೂ ಕಾರ್ಪಣ್ಯವನ್ನೂ ತೋರ್ಪಡಿಸುತಿರ್ದಳು; ಇಷ್ಟೇಅಲ್ಲದೆ ವಿವಾಹಕಾಲದಲ್ಲಿ ಅವಳು ಮೂರ್ಛೆಗೊಂಡಿರ್ದುದೂ, ಅವಳ ತಂದೆಯು ನೆಂಟರಿಷ್ಟರನ್ನು ಕರೆಸದೆ ಅತುರದಿಂದ ಗೋಪ್ಯವಾಗಿ ಎನ್ನಿಂದ ಮಾಂಗಲ್ಯವನ್ನು ಕಟ್ಟಿಸಿದುದೂ, ಈಊಹೆಯನ್ನು ಬಲಪಡಿಸುವುದಕ್ಕೆ ಸಾಕಾದ ಕಾರಣಗಳಾಗಿವೆ; ಇದಾವುದೇಲೆ ಇನ್ನೊಂದು ಪ್ರಬಲವಾದ ಕಾರಣವೂ ಇರುವುದು; ಅದೇನೆಂದರೆ–ಗರ್ಭಾಧಾನ ಸಮಾವೇಶನ ಮುಂತಾದ ದೇಹಸಂಯೋಜನಕಾರ್ಯಗಳಿಗೆ ಅವಕಾಶಕೊಡದೆ, ವ್ರತವ್ಯಾಜವನ್ನು ದೂತಿಯ ಮುಖದಿಂದ ಹೇಳಿಕಳುಹಿದರು; ಸಂಶಯವೇನು? ಈ ಕಾರಣಗಳಿಂದ ರಾಜನಿಗೂ ಉನ್ಮಾದಯನ್ತಿಗೂ ಅವುದೋ ಪೂರ್ವಸಂಬಂಧವು

ಇರಲೇಬೇಕು ; ಮತ್ತು ಅವಳ ವಿರಹದಿಂದಲೇ ವ್ಯಾಕುಲಿತನಾದ ಮಹಾ ರಾಜನು ರಾಜಕಾರ್ಯದಲ್ಲಿ ನಿರುತ್ಸಾಹನಾಗಿರುವುದರಿಂದ ರಾಜ್ಯವು ಹೀನಸ್ಥಿತಿಗೆ ಬಂದಿರುವುದು; ಆದಕಾರಣ ನಾನೀಗ ಮೊದಲು ರಾಜನಲ್ಲಿಗೆ ಹೋಗಿ ಉಪಾಯಾಂತರದಿಂದ ಅವನ ಅಂತರಂಗವನ್ನು ತಿಳಿದು ಉನ್ಮಾದಯಂತಿಯನ್ನು ಅವನಿಗೆ ಸೇರಿಸುವೆನು; ಹಾಗೆ ಮಾಡದೇ ಹೋದರೆ ಈರ್ವರೂ ಮನ್ಮಥಪೀಡನದಿಂದ ದಶಮಾವಸ್ಥೆಯನ್ನು ಹೊಂದಬಹುದು; ಈ ಕಾರ್ಯವು ದೋಷವಾಗಿಯೂ ತೋರದು; ಏಕೆಂದರೆ, ಎನಗೆ ನಡೆದಿರುವ ಉದ್ವಾಹವು ವಧುವಿಗೆ ಇಷ್ಟವಲ್ಲದುದು; ಮತ್ತು ಅಪೂರ್ಣವಾದುದು; ಅದಲ್ಲದೆ ಪರಸ್ಪರ ಮೋಹಾನ್ವಿತವಾದ ದೇಹಸಂಬಂಧವೂ ಆಗಿಲ್ಲ ; ಇನ್ನು ತಡಮಾಡಿದರೆ ರಾಜ್ಯವೆಲ್ಲ ಹಾಳಾಗಿ ಪ್ರಜೋಪದ್ರವಗಳೂ ಪ್ರಬಲಿಸಿ, ಇತ್ತ ಮಹಾರಾಜನೂ ಪಂಚತ್ವವನ್ನು ಐದುವುದರಿಂದ ಸರ್ವನಾಶವೂ ಆಗುವುದು ; ನಾನೀಗಲೇ ರಾಜನಲ್ಲಿಗೆ ಹೋಗುವೆನು.'' ಎಂದು ಯೋಚಿಸಿಕೊಂಡು ಹೊರಟುಹೋದನು.

ಮೂರನೆಯ ಅಂಗವು ಮುಗಿದುದು.

ನಾಲ್ಕನೆಯ ಅಂಗ

ಒಂದನೆಯ ಸಂಧಿ

THE FAITHFUL SERVENT AND LAW-SUBTLITIES.

ಭೃತ್ಯಗುಣಸಂಪತ್ತಿ ಮತ್ತು ಧರ್ಮಸೂಕ್ಷ್ಮ.

ಇತ್ತಲಾ ದೇವಸೇನಮಹಾರಾಜನು ಶಶಿಕಾಂತದುಪ್ಪರಿಗೆಯ ಮೇಲೆ ಒರ್ವನೇ ಕುಳಿತು ಪಶ್ಚಾತ್ತಾಪದಿಂದ:—''ಅಯ್ಯೋ! ಸುಂದರಿಯಾದ ಆ ಉನ್ಮಾದಿನಿಯನ್ನೂ ಮತ್ತವಳ ಮಾತಾಪಿತೃಗಳನ್ನೂ ಅನ್ಯಾಯವಾಗಿ ನಿಂದಿಸಿ, ಅವಮಾನಗೊಳಿಸಿದೆನಲ್ಲ; ಎನ್ನ ಧಿಕ್ಕಾರಶಬ್ದದಿಂದ ಅವರ ಹೃದ

ಯುಗಳು ಎಷ್ಟು ಸೊಂದವ್ದೋ ಕಾಣೆನು; ನಿಜವಾಗಿಯೂ ನಾನು ವಿವೇಕಿಯಲ್ಲ; ಸೌಂದರ್ಯನಿಧಿಯಾದ ಆಕೆಯು ಕುರೂಪಿಯೆ? ಸರ್ವಮಂಗಳೆಯಾದ ಅವಳು ಅಮಂಗಳೆಯೆ? ಆಹಾ! ಅವಳೆನ್ನ ವಿಯೋಗದಿಂದ ದುಃಖಿಸುತ್ತಿರಬಹುದೆ? ಅಡ್ಡಿಯೇನು!

[೩೮ ತಾ:–"ಗಂಡುಪಕ್ಷಿಯಿಂದ ಧಿಕ್ಕರಿಸಲ್ಪಟ್ಟು ದಡದ ಮರಳನ್ನು ಸೇರಿದ ಹೆಣ್ಣುಚಕ್ರವಾಕಪಕ್ಷಿಯಂತೆ–ಎನ್ನಿಂದ ದಿಕ್ಕೃತೆಯಾದ, ಬಿಂಕೆಯಂತೆ ವಿಶಾಲವಾದ ಕಣ್ಣಳುಳ್ಳ, ಆ ಉನ್ಮಾದಿನಿಯು–ತನ್ನ ಮನೆಯ ಆಉಪ್ಪರಿಗೆಯ ಮೇಲೆ, ಹೇಗೆತಾನೇ ಸುಖವನ್ನನುಭವಿಸುವಳು!"]

ಎಂದು ಅಂತರಿಕ್ಷವನ್ನು ನೋಡಲು ಆಗತಾನೇ ಉದಯಿಸುತಿರ್ದ ಚಂದ್ರನು ಕಾಣ್ಬರಲು, ಅವನನ್ನು ನೋಡಿ ಕುತ್ಸಿತಭಾವದಿಂದ—

[೩೯ ತಾ–"ಸರ್ವರ ಕಣ್ಣುಗಳಿಗೂ ಆನಂದವನ್ನುಂಟುಮಾಡುವ ಆಕೆಯ(ಕಳಂಕರಹಿತವಾದ) ಮುಖಚಂದ್ರನಿರುತ್ತಿರಲಾಗಿ, ಜಡಾತ್ಮನಾದ ಈ ಹಾಳುಚಂದ್ರನು ನಾಚಿಕೆಯಿಲ್ಲದೆ ನಿತ್ಯವೂ ಉದಯಿಸುವನಲ್ಲ!]

ಎಂದು ಹೇಳಿದವನಾಗಿ ಒಂದು ಕ್ಷಣಕಾಲ ಹಾಗೆಯೇ ಕುಳಿತಿರ್ದು ಪುನಃ ಸಂಕಟದಿಂದ—

[೪೦ ತಾ–"ನಾನೇನೋ ಆಕೆಯನ್ನು ಮರೆಯಬೇಕೆಂದೇ ಪ್ರಯತ್ನಿಸುವೆನು; ಆದರೆ ಎನ್ನ ಮನಸ್ಸಿನಲ್ಲಿ ಮಾತ್ರ ಅವಳನ್ನೇ ನೋಡುತ್ತಿರುವಂತಿರುವುದು; ಎನ್ನ ಚಿತ್ತವಂತೂ ಅವಳಲ್ಲಿಯೇ ನೆಟ್ಟುಹೋಗಿರುವುದು; ಮತ್ತದರ ಆಳ್ವಿಕೆಯೂ ಅವಳದೇ ಆಗಿರುವುದು"]

ಶ್ಲೋ॥ ಮದ್ವಿಯುಕ್ತಾ ಕಥಂ ನೂನಂ ಶೇತೇ ಶೋಕಪ್ರಲಾಪಿನೀ ।
ಪುಲಿನೇ ಚಕ್ರವಾಕೀವ ಹಮ್ಯೇ ಹರಿಣಲೋಚನಾ ॥೩೮॥
ಅಹೋ! ಜಡಾತ್ಮಾ ನಿರ್ಲಜ್ಜಶ್ಚಂದ್ರೋ ನಿತ್ಯಮುದೇತಿ ಯತ್ ।
ಜಗನ್ನೇತ್ರೋತ್ಸವೇ ತಸ್ಯಾ ವಿಷ್ಕಲಂಕೇ ಮುಖೇ ಸತಿ ॥೩೯॥
ವಿಸ್ಮರ್ತುಮೇನಾಮಿಚ್ಛಾಮಿ ಪಶ್ಯಾಮೀವಚ ಚೇತಸಿ ।
ಸ್ಥಿತಂ ತಸ್ಯಾಂ ಹಿ ಮೇ ಚೇತಃ ಸಾ ಪ್ರಭುತ್ವೇನ ತಸ್ಯ ವಾ ॥೪೦॥

ಎಂದು ಹೇಳಿದ ಬಳಿಕ ಶಿಲಾತಲದಲ್ಲಿ ಕುಳಿತು ಉತ್ಸಾಹದಿಂದ:– ''ಒಳ್ಳೆಯದು! ಎನ್ನ ಮನಸ್ಸಿನಲ್ಲಿ ಸ್ಫುರಿಸುತ್ತಿರುವಂತೆಯೇ ಆಕೆಯ ರೂಪವನ್ನು ಇಲ್ಲಿ ಚಿತ್ರಿಸುವೆನು.'' ಎಂದು ಅಲ್ಲಿ ಚಿತ್ರಿಸಿದ ಬಳಿಕ ಒಂದು ಕ್ಷಣಕಾಲ ಅದನ್ನೇ ನೋಡಿ ಕುತ್ಸಿತಭಾವದಿಂದ—

[೪೧ ತಾ–''ಬೆರಗುವಡೆದ ಜಿಂಕೆಯ ಕಣ್ಗಳ ಚಾಂಚಲ್ಯವನ್ನು ಧಿಕ್ಕರಿಸುವ ಆ ದೃಷ್ಟಿಯೂ, ಶರತ್ಕಾಲದ ಚಂದ್ರನ ಕಿರಣಗಳ ಪ್ರಕಾಶಕ್ಕೆ ಪೋಲ್ವ ಆ ಸೌಮ್ಯಕಾಂತಿಯೂ, ಅಮೃತಸಮುದ್ರದಲ್ಲಿ ಮೇಲ್ವರಿದು ಬರುವ ಲಲಿತತರಂಗಗಳಂತೆ ಥಳಥಳಿಪ ಆ ಲಾವಣ್ಯವೂ, ಮತ್ತಿಂತಹ ಆಶ್ಚರ್ಯಕರವಾದ ವ್ಯಾಪಾರಗಳುಳ್ಳ ಆ ದೇಹದ ರಮ್ಯತೆಯೂ, ಜಡವಾದೀ ಚಿತ್ರದಲ್ಲಿ ಎಂತುತಾನೇ ಅಳವಡುವುದು ?'']

ಎಂದು ಮಾತನಾಡಿಕೊಂಡ ಬಳಿಕ ಅಲ್ಲಿರ್ದ ಮೃದುತಲ್ಪದಲ್ಲಿ ಕುಳಿತು ಆತ್ಮಲಜ್ಜೆಯಿಂದೊಡಗೂಡಿ:—''ನಾನವಳನ್ನು ನೋಡಿದಾಗ ಆಕೆಯ ಭ್ರಮರದ ಧೃಷ್ಟತೆಯನ್ನೂ ಚೇಷ್ಟೆಯನ್ನೂ ಅರಿಯದ ಪದ್ಮಿನಿಯಂತೆ, ಇನ್ನೂ ಕನ್ಯೆಯಾಗಿ ಕಂಡುಬಂದಳು; ಈಗೇನಾದರೂ ಉದ್ವಾಹಿತಳಾಗಿರಬಹುದೆ? ಒಂದುಪಕ್ಷ ಹಾಗೆ ವಿವಾಹಿತೆಯಾಗಿರ್ದಲ್ಲಿ ಆಕೆಯು ಎನ್ನ ಭಾಗಕ್ಕೆ ಪರಸ್ತ್ರೀಯಾದಳು; ಹೀಗಿರುವಲ್ಲಿ ಪರಸ್ತ್ರೀಯ ರೂಪಲಾವಣ್ಯಗಳನ್ನು ವರ್ಣಿಸುವದೂ ಕೂಡ ದೋಷವಲ್ಲವೆ ? ಛೀ! ನಾನೆಂತಹ ಅವಿವೇಕಿಯು! ಹಾ!

[೪೨ ತಾ:–''ಇದೇನು! ಪರಭಾರ್ಯೆಯ ವಿಷಯದಲ್ಲಿ ಎನಗೂ

ಶ್ಲೋ॥ ದೃಷ್ಟಿರ್ಮುಗ್ಧಕುರಂಗಲೋಚನಚಮತ್ಕಾರಕ್ರಿಯಾಸ್ಪರ್ಧಿನೀ
ಭಾಸ್ವಚ್ಛಾರದಚಂದ್ರಿಕಾಸಹಚರೀ ಸಾ ಕಾಪಿ ವಕ್ತ್ರದ್ಯುತಿಃ ॥
ಲಾವಣ್ಯಂ ನನು ತತ್ಸುಧಾಜಲನಧೇ ರಿಂಗತ್ತರಂಗಾಯಿತಂ
ಏತಸ್ಯಾಃ ಕಥಮೀತು ಚಿತ್ರಪದವೀಮಾಶ್ಚರ್ಯಚರ್ಯಂ ವಪುಃ ॥೪೧॥
ಪರಸ್ಯ ನಾಮ ಭಾರ್ಯಾಯಾಂ ಮಾಮಾಪ್ಯೇವಮಧೀರತಾ ॥
ತದುನ್ಮೀಲಸಿ ಸಂತ್ಯಕ್ತೋ ಲಜ್ಜಯೈವಾದ್ಯ ನಿದ್ರಯಾ ॥೪೨॥

ಮನೋವಿಕಾರವು? ಆದುದರಿಂದ ನಾನು ಉತ್ಮತ್ತನೇ ಆಗಿರುವೆನು; ನಿದ್ರಾವಸ್ಥೆಗೆ ದೂರನಾದಂತೆ ನಾನೀಗ ಲಜ್ಜೆಗೂ ದೂರನಾಗಿಹೆನು ?'']

ಎಂದು ಮಾತನಾಡಿಕೊಳುತಿರ್ದ ಸಮಯಕ್ಕೆ ಸರಿಯಾಗಿ, ಈವಿಷಯಗಳನ್ನೆಲ್ಲ ಮರೆಯೋಳ್ ನಿಂದು ನೋಡುತಿರ್ದ ಅಭಿಪಾರಗನು, ರಾಜನ ಸಮೀಪವನ್ನೆೃದಿ, ಭಕ್ತಿಗೌರವಗಳಿಂದೊಡಗೂಡಿ:—''ಜಯವಾಗಲಿ ಮಹಾರಾಜನಿಗೆ.'' ಎಂದು ಹೇಳಲು, ದೇವಸೇನನು ಬೆಚ್ಚಿದವನಾಗಿ, ಬಳಿಕ ಇತ್ತತಿರುಗಿ ಅಭಿಪಾರಗನನ್ನು ನೋಡಿ ಧೈರ್ಯಸಂಭ್ರಮವನ್ನು ನಟಿಸುತ್ತ·—''ಅಭಿಪಾರಗನೇ! ದೀರ್ಘಾಯುವಾಗು; ಕಾಶ್ಮೀರಂಯುದ್ಧದ ವಿಚಾರವೇನು? '' ಎಂದು ಕೇಳಲು ಅಭಿಪಾರಗನು, ಕಾಶ್ಮೀರರಾಜನು ಕಳುಹಿರ್ದ ವಸ್ತ್ರಾಭರಣರತ್ನಮುಂತಾದ ಕಾಣಿಕೆಗಳನ್ನು ಮುಂದಿಟ್ಟು ಸಂತೋಷದಿಂದ:—''ಜೇಯ! ನಿನ್ನ ಅನ್ನಪ್ರಭಾವದಿಂದಲೂ ಪ್ರೋತ್ಸಾಹದಿಂದಲೂ ಉತ್ತೇಜನವನ್ನು ಹೊಂದಿದ ನಾನು, ಕಾಶ್ಮೀರರಾಜನ ಶತ್ರುವಾದ ಹೂಣರಾಜನ ಸೈನ್ಯವನ್ನು ಯುದ್ಧದಲ್ಲಿ ಜಯಿಸಿ, ಆರಾಜನನ್ನೂ ಸೆರೆಗೊಂಡು ತಂದೊಪ್ಪಿಸಿದೆನು; ಆದರೆ, ಕಾಶ್ಮೀರರಾಜನು ಹೂಣರಾಜನ ಶಿರಸ್ಸನ್ನು ಸ್ವಹಸ್ತದಿಂದಲೇ ಛೇದಿಸಬೇಕೆಂದು ಉದ್ಯುಕ್ತನಾಗಲು, ಅವನು ಆರೀತಿ ಮಾಡದಂತೆ ನಾನು ಅವನಿಗೆ ಬುದ್ಧಿವಾದವನ್ನುಹೇಳಿ, ಹೂಣರಾಜನ ಪ್ರಾಣಗಳನ್ನು ಉಳುಹಿ, ಅವನ ರಾಜ್ಯವನ್ನು ಪುನಃ ಅವನಿಗೇ ಕೊಡಿಸಿ, ಮುಂದಕ್ಕೆ ಕಾಶ್ಮೀರರಾಜನಿಗೆ ಮಿತ್ರನಾಗಿಯೂ ಸಾಮಂತನಾಗಿಯೂ ಇರುವಂತೆ ಮಾಡಿದೆನು; ಈ ಸಂಧಿಚಾತರ್ಯದಿಂದ ಸಂತುಷ್ಟನಾದ ಕಾಶ್ಮೀರಾಧಿಪನೂ ಮತ್ತಾ ಹೂಣೇಶ್ವರನೂ, ನಾನು ಧರಿಸಿರುವೀ ವಸ್ತ್ರಾಭರಣಾದಿಗಳನ್ನೂ ಈ ದಿವ್ಯಖಡ್ಗವನ್ನೂ ಎನಗೆ ಬಹುಮಾನವಾಗಿ ಕೊಟ್ಟುದು ಮಾತ್ರವಲ್ಲದೆ, ತಂತಮ್ಮ ಕೃತಜ್ಞತೆಯನ್ನು ಸೂಚಿಸುವನಿಮಿತ್ತ, ಅನರ್ಘ್ಯವಾದ ಕಾಣಿಕೆಯನ್ನೂ ನಿನ್ನ ಸಂನಿಧಿಗೆ ಕಳುಹಿಸಿರುವರು.'' ಎಂದು ಹೇಳಲು, ದೇವಸೇನನು ಪರಮಸಂತೋಷಗೊಂಡು:—''ಅಭಿಪಾರಗನೇ! ನೀನೆನ್ನ ಆಪ್ತಮಿತ್ರನಾಗಿಯೂ

ಎನ್ನ ಮುಖ್ಯಸೇನಾಪತಿಯಾಗಿಯೂ ಇರುವುದುಮಾತ್ರವಲ್ಲದೆ, ಎನ್ನ ಬಲ ಭುಜವಾಗಿಯೂ ಇರುವೆ; ಆದಕಾರಣ ಎನಗುಂಟಾದ ಸಂತೋಷವನ್ನು ಈ ಆಲಿಂಗನದ ಮೂಲಕ ವ್ಯಕ್ತಪಡಿಸುವೆನು.'' ಎಂದು ಆಲಿಂಗಿಸಲು, ಅಭಿಪಾರಗನು ಭಯಭರಿತಭಕ್ತಿಗೌರವಗಳಿಂದ ನಮಸ್ಕರಿಸಿ:–''ಜೀಯಾ! ಪಿತೃವಿನ ಕಾರ್ಯವನ್ನು ಸಫಲಗೊಳಿಸುವುದು ಪುತ್ರನಾದವನಿಗೆಂತು ಶ್ರೇಷ್ಠವಾದ ವ್ರತವೋ ಅದರಂತೆ, ನಿನ್ನ ಕಾರ್ಯವನ್ನು ನೆರವೇರಿಸುವುದೇ ಎನಗೆ ಮುಖ್ಯಕರ್ತವ್ಯವು; ಮತ್ತು ನಿನ್ನ ಅನ್ನಪಾನಗಳಿಂದ ಪೋಷಿತವಾದ ಈ ದೇಹವು ನಿನ್ನ ಅವಸರಕ್ಕೆ ವಿನಿಯೋಗಿಸಲ್ಪಡತಕ್ಕುದಾಗಿಯೇ ಇರುವುದು.'' ಎಂದು ಪುನಃ ತಲೆವಾಗಿದಬಳಿಕ, ದೇವಸೇನನ ಮುಖವನ್ನು ತಲೆಯೆತ್ತಿಸೋಡಿ, ಜ್ಞಾಪಿಸಿಕೊಂಡವನಂತೆ ನಟಿಸಿ ಇಂತೆಂದನು:–''ದೇವ! ನಿನಗೆ ಇನ್ನೊಂದು ಅತಿಶಯವಾದ ವರ್ತಮಾನವನ್ನು ವಿಜ್ಞಾಪಿಸಬೇಕೆಂದು ಬಹು ಕುತೂಹಲದಿಂದಲೂ ಭೀತಿಯಿಂದಲೂ ನಿನ್ನ ಸನ್ನಿಧಿಗೆ ಬಂದಿರುವೆನು; ಅಪ್ಪಣೆಯಾದರೆ ಅರಿಕೆಮಾಡುವೆನು.'' ದೇವಸೇನ:–(ಸಂತೋಷದಿಂದ) ''ನಿನಗೆ ನಿರ್ಬಂಧವೇನಿಹುದು ? ಮಾಜದಂಜದೆ ಹೇಳು.'' ಅಭಿ:–(ಆಶ್ಚರ್ಯವನ್ನು ನಟಿಸುತ್ತ) ''ನೆನ್ನೆಯದಿನ ಪ್ರಯಾಣ ಮಾಡಿ ಬರುತ್ತ ದಾರಿಯಲ್ಲಿ ಗೋಚರಿಸಿದೊಂದು ಸರಸ್ಸಿನ ತೀರದಲ್ಲಿ ಭೋಜನಕಾಲಕ್ಕೆ ಮುಂಚೆ ದೇವಧ್ಯಾನವನ್ನು ಮಾಡುತ್ತಿರುವಲ್ಲಿ ಒಂದು ವಿಚಿತ್ರವು ನಡೆಯಿತು!'' ದೇವ:—(ತವಕದಿಂದ) ''ಅದೇನು ?'' ಅಭಿ:—ಆಶ್ಚರ್ಯದಿಂದ—

[೪೩ ತಾ:–''ಕಮಲದಂತೆ ವಿಶಾಲವಾದ ನೇತ್ರವುಳ್ಳ ಪ್ರಜೇಶ್ವರನೆ! ಅಲ್ಲಿ ದೇವತೆಯನ್ನು ಅರ್ಚಿಸುತ್ತಿರ್ದ ಎನಗೆ ಓರ್ವ ಯಕ್ಷನು ಪ್ರತ್ಯಕ್ಷನಾಗಿ, ಎನ್ನನ್ನು ಕುರಿತು–'ಉನ್ಮಾದಯಂತಿಯಲ್ಲಿ ನೆಟ್ಟ ಮನಸ್ಸುಳ್ಳ ನಿಮ್ಮರಾಜನನ್ನು ನೀನೇಕಿಂತು (ವಿಚಾರಿಸದೆ) ಉಪೇಕ್ಷಿಸುವೆ? ']

ತತ್ರಾರ್ಚಯಂತಂ ನರದೇವ ದೇವಾನಾಸ್ಕಾದುಪೇತ್ಯಾಂಬುರುಹಾಕ್ಷ ಯಕ್ಷಃ ।
ನೂನಮಾಹ ನಾಮೈಷಿ ನೃಪಸ್ಯ ಕಸ್ಮಾದುನ್ಮಾದಯನ್ತ್ಯಂ ಹೃದಯಂ ನಿವಿಷ್ಟಮ್‌॥೪೩॥

ಎಂದು ಹೇಳಿ ಅಂತರ್ಧಾನನಾದನು; ಇದಕ್ಕನುಗುಣವಾಗಿ ನಿನ್ನ ದೇಹವು ಕಾರ್ಶ್ಯವನ್ನೂ, ಮುಖವು ವೈವರ್ಣ್ಯವನ್ನೂ ಹೊಂದಿರುವುವು; ನಿನ್ನ ಸ್ಥಿತಿಯನ್ನು ನೋಡಿದರೆ ಎನಗೆ ಮಹಾದುಃಖವುಂಟಾಗುವುದು; ಆದಕಾರಣ ಆ ಯಕ್ಷನ ಮಾತು ನಿಜವಾಗಿರ್ದಲ್ಲಿ ಆಕೆಯನ್ನು ಎನ್ನಿಂದ ಸ್ವೀಕರಿಸುವನಾಗು.''

ಈ ಮರ್ಮೋದ್ಘಾಟನದಿಂದ ಬೆದರಿದ ದೇವಸೇನನು, ಲಜ್ಜೆಯಿಂದ ತಲೆವಾಗಿ:-''ಅದು ನಿಜ; (ತಲೆಯನ್ನೆತ್ತಿ ಕುತೂಹಲದಿಂದ) ಆದರೆ ಉನ್ಮಾದಯಂತಿಯನ್ನು ನಿನ್ನಿಂದ ಪರಿಗ್ರಹಿಸಲು ಕಾರಣವೇನು ? ಆಕೆಯಲ್ಲಿ ನಿನಗೇನು ಸಂಬಂಧವು?'' ಅಭಿ;-(ವಿನಯದಿಂದ) ''ದೇವ! ನಾನು ಹೇಳುವುದನ್ನೆಲ್ಲ ಸಾವಧಾನವಾಗಿ ಕೇಳು-ನಿನಗೂ ಉನ್ಮಾದಯನ್ತಿಗೂ ಇರ್ದ ಪೂರ್ವಸಂಬಂಧವು ಎನಗೆ ತಿಳಿದಿರಲಿಲ್ಲ; ಹೀಗಿರುವಲ್ಲಿ, ನಾನು ನಿನ್ನ ಅಪ್ಪಣೆಯನ್ನು ಪಡೆದು ಕಾಶ್ಮೀರಯುದ್ಧಕ್ಕೆ ಹೋಗುವ ತವಕದಲ್ಲಿರ್ದಾಗ ಕಿರೀಟವತ್ಸನು ಏವುದೋ ಒಂದು ಮುಹೂರ್ತವನ್ನು ನಿಶ್ಚಯಗೊಳಿಸಿ, ಬಂಧುಜನರಿಗೆ ಶಳಿಯದಂತೆ ವಿವಾಹಕ್ಕೆ ತಕ್ಕ ಸಾಮಗ್ರಿಗಳನ್ನು ಅನುಗೊಳಿಸಿ, ಆ ಉನ್ಮಾದಯಂತಿಯನ್ನು ವಿವಾಹಮಾಡಿಕೊಳ್ಳೆಂದು ಎನ್ನನ್ನು ಒಡಂಬಡಿಸಿ, ವಿವಾಹವನ್ನಾರಂಭಿಸಿದನು; ಅಷ್ಟರಲ್ಲಿ ಆ ಕನ್ಯೆಗೆ ಎನ್ನನ್ನು ವರಿಸಲಿಚ್ಛೆಯಿಲ್ಲದುದರಿಂದಲೋ ಏನೋ ಆಗ ಮೂರ್ಛಿತೆಯಾಗಿ ಬಿದ್ದಿರ್ದಳು; ಹಾಗಿರ್ದ್ದರೂ ಆ ಮೂರ್ಛಿತೆಯ ಕಂತಕ್ಕೇ ಎನ್ನ ಕೈಯಿಂದ ಮಾಂಗಲ್ಯವನ್ನು ಬಲಾತ್ಕಾರದಿಂದ ಕಟ್ಟಿಸಿದರು; ಆದರೆ, ಗರ್ಭಾದಾನ ಸಮಾವೇಶನ ಮುಂತಾದ ದೇಹಸಂಯೋಜಕಕಾರ್ಯಗಳೊಂದೂ ನಡೆಯಲಿಲ್ಲವು; ಆದಲ್ಲದೆ, ಆ ಕನ್ಯೆಯು ತಾನು ಧರ್ಮದೇವತೆಯ ವ್ರತವನ್ನು ಕೈಗೊಂಡಿರುವುದಾಗಿಯೂ ಅದು ಸಮಾಪ್ತಿ ಹೊಂದುವ ಪರ್ಯಂತರ ಪತ್ನೀತ್ವವನ್ನು ವಹಿಸುವುದಿಲ್ಲವೆಂಬದಾಗಿಯೂ ಸಂಕಲ್ಪಿಸಿರುವಳೆಂದು ಆಕೆಯ ಮಾತಾಪಿತೃಗಳು ಎನಗೆ ಹೇಳಿಕಳುಹಿಸಿದರು, ಬಳಿಕ ನಾನು ಆ ಸಂಗತಿಯನ್ನು ಶುದ್ಧಾಂಗವಾಗಿ ಮರೆತು,

ಕಾಶ್ಮೀರದೇಶಕ್ಕೆ ಹೊರಟುಹೋದವನು ಈಗತಾನೇ ಇಲ್ಲಿಗೆ ಬಂದೆನು; ಇನ್ನೂ ಎನ್ನ ಮನೆಗೂ ಹೋಗಿಲ್ಲ; ಆದಕಾರಣ ಅವಳು ಇನ್ನೂ ಕನ್ಯೆಯಾಗಿಯೇ ಇರುವಳು; ನೀನೀಗ ಅವಳನ್ನು ಪರಿಗ್ರಹಿಸುವುದರಿಂದ ಸುಖವನ್ನು ಹೊಂದುವನಾಗು; ಮತ್ತು ನಿನ್ನ ರಾಷ್ಟ್ರವನ್ನೂ ಪ್ರಜೆಗಳನ್ನೂ ಭೃತ್ಯನಾದೆನ್ನನ್ನೂ ಸಂತೋಷಗೊಳಿಸು.'' ಎಂದು ಪ್ರಾರ್ಥಿಸಲು ದೇವಸೇನನು ಬೆದರಿದವನಾಗಿ:—''ಮಾಂಗಲ್ಯಧಾರಣವಾಯಿತೆ?'' ಎಂದು ಆತುರದಿಂದ ಕೇಳಿ, ಸ್ವಲ್ಪಹೊತ್ತು ಯೋಚಿಸಿದ ಬಳಿಕ ಸಂತೋಷದಿಂದ:—''ಅಭಿಪಾರಗನೆ! ಎನ್ನ ದುಃಖಗಳೆಲ್ಲಾ ಈಗ ನಿವಾರಣೆಯಾದುವು; ನಾನಾರೋಪಿಸಿದ ಅಪವಾದದಿಂದ ಅವಳಿಗೆ ವಿವಾಹವೇ ಇಲ್ಲದಂತೆಲ್ಲಾಗುವುದೋ ಎಂಬ ಚಿಂತೆಯಿಂದ ಇದುವರೆಗೂ ಮರುಗುತಿದ್ದೆನು; ನಿನ್ನಿಂದವಳು ಮಾಂಗಲ್ಯಬದ್ಧಳಾದುದರಿಂದ ಈಗೆನ್ನ ಭಾಗಕ್ಕೆ ಮಿತ್ರನ ಮಡದಿಯಾದಳು; ಹೀಗಿರುವಲ್ಲಿ ಅವಳನ್ನು ನೀನು ಎನಗೆ ಅರ್ಪಿಸುವುದೆಂದರೇನು? ನಾನು ಪ್ರತಿಗ್ರಹಿಸುವುದೆಂದರೇನು?'' ಎಂದು ಹೇಳಲು, ಅಭಿಪಾರಗನು ಚಿಂತಾಕ್ರಾಂತನಾಗಿ ತನ್ನಲ್ಲಿತಾನೇ:—''ಹಾ! ನಾನೆಂತಹ ಅವಿವೇಕಿಯು? ಈ ಹಾಳು ವಿವಾಹವನ್ನೇಕೆ ಹೇಳಿದೆನು? ಮಹಾರಾಜನಿಗೆ ಆಕೆಯಲ್ಲಿ ಸಂಪೂರ್ಣವಾದ ಅನುರಾಗವಿರ್ದ ವಿಷಯವು, ಅವನ ಬೆದರು ವಿಕೆಯಿಂದೊಡಗೂಡಿದ 'ಮಾಂಗಲ್ಯಧಾರಣವಾಯಿತೆ?' ಎಂಬ ಪ್ರಶ್ನೆಯಿಂದಲೇ ವ್ಯಕ್ತವಾಯಿತು; ನಾನಾದರೊ, ಆಕೆಯನ್ನು ವಿವಾಹಮಾಡಿಕೊಂಡಿರುವುದು ಅಪೂರ್ಣವಾಗಿಯೂ ಅನೈಚ್ಛಿಕವಾಗಿಯೂ ಇರುವುದು; ಆದಕಾರಣ ಅವಳನ್ನು ಮಹಾರಾಜನಿಗೆ ಸೇರಿಸುವ ವಿಷಯದಲ್ಲಿ ವ್ಯವಸಾಯವನ್ನು ಮಾಡುವುದರಿಂದ ಅವದೋಷವೂ ಕಾಣಿಸದು; ಇದಕ್ಕೆ ಪ್ರತಿಯಾಗಿ ಎನ್ನ ಭೃತ್ಯಧರ್ಮದ ತತ್ತ್ವವನ್ನು ಪ್ರಕಾಶಗೊಳಿಸಲು ಇದೇ ಸಕಾಲವು; ಇನ್ನೀಗ ಮಹಾರಾಜನನ್ನು ವಿಪಧಪ್ರಯತ್ನಗಳಿಂದ ಒಡಂಬಡಿಸುವೆನು!'' ಎಂದು ನಿಶ್ಚಯಿಸಿಕೊಂಡಬಳಿಕ ದೇವಸೇನನ್ನು ಕುರಿತು ದೈನ್ಯದಿಂದ:—''ದೇವ! ಆಕೆಗೆ ಇನ್ನೂ ಪತ್ನೀತ್ವವು

ಸಿದ್ಧಿಸಿಲ್ಲವು ! ಹಾಗೆ ನೀನು ಅವಳನ್ನು ವಿವಾಹಿತಳೆಂದು ಸಿದ್ಧಾಂತ ಮಾಡುವ ಪಕ್ಷಕ್ಕೆ ಆಕೆಯು ನಿನ್ನ ದಾಸನಾದ ಎನ್ನ ಪತ್ನಿಯಾದಳು; ಆದುದರಿಂದ ಎನ್ನ ಸರ್ವಸ್ವವನ್ನೂ ಸ್ವಾಮಿಯಾದ ನಿನಗೆ ಅರ್ಪಿಸುವುದು ಎನಗೆ ಧರ್ಮವಾಗಿರುವುದರಿಂದ ನಿನ್ನ ದಾಸನ ವಸ್ತುವಾದ ಅವಳನ್ನು ಎನ್ನಿಂದ ಪಡೆಯಲು ಅಭ್ಯಂತರವೇನು ? '' ಎಂಬೀಭೃತ್ಯಧರ್ಮ ಸೂಚಕವಾದ ಮಾತುಗಳನ್ನು ಕೇಳಿದ ದೇವಸೇನನು ಪರಮಸಂತುಷ್ಟನಾದರೂ, ಧರ್ಮಜ್ಞನಾಗಿರ್ದ ಕಾರಣ, ವಿಷಾದದಿಂದ:—'' ಅಭಿಪಾರಗನೇ ! ಹಾಗೆ ಹೇಳದಿರು; ಅದು ಯುಕ್ತವೆ ? ಇದನ್ನು ಕೇಳು:—

[೪೪ ತಾ:—ಅವನು ಎನ್ನ ಹಿತಾರ್ಥವಾಗಿ ತನ್ನ ಪ್ರಾಣಗಳನ್ನಾದರೂ ಲಕ್ಷಿಸುವುದಿಲ್ಲವೊ ಅಂತಹ ಸಮಸ್ತ ಬಂಧುರೂಪನಾದ ಮಿತ್ರನ ಮಡದಿಯು, ಎನ್ನ ಮಗಳಂತಾಗುವಳು. '']

ಎಂದು ಹೇಳಲು ಅಭಿಪಾರಗನು, ತವಕದಿಂದ:—'' ಜೀಯ! ನೀನು ಹಾಗೆ ಶಂಕಿಸುವ ಪಕ್ಷಕ್ಕೆ, ನಾನವಳನ್ನು ತ್ಯಜಿಸಿ ವೇಶ್ಯೆಯನ್ನಾಗಿ ಮಾಡಿದಲ್ಲಿ, ಆಗ್ಯೆ ಆಕೆಯು ಎನ್ನ ಪತ್ನೀತ್ವದಿಂದ ಬಿಡುಗಡೆಯನ್ನು ಹೊಂದಿ ಸಾಮಾನ್ಯೆಯಾಗುವಳು! ಅನಂತರ ನೀನವಳನ್ನು ಭೋಗಿಸಬಹುದು ! ಅದಕ್ಕಾಗಿ ಅವಳನ್ನು ಪಣ್ಯಸ್ತ್ರೀಯರಲ್ಲಿಗೆ ಈಗಲೇ ಕಳುಹುವೆನು.'' ಎಂದು ಹೇಳಲು ದೇವಸೇನನು ಕೋಪಾವಿಷ್ಟನಾಗಿ:—''ಛೀ! ಅವಿವೇಕಿಯೆ !

[೪೫ ತಾ:—''ನಿರ್ದುಷ್ಟೆಯಾದ ಪತ್ನಿಯನ್ನು ನೀನು ತ್ಯಜಿಸಿದವನಾದರೆ, ಇಹಪರಗಳೆರಡರಲ್ಲಿಯೂ ಧಿಕ್ಕಾರವನ್ನೂ ನಿಂದೆಯನ್ನೂ ಪಡೆಯುವುದು ಮಾತ್ರವಲ್ಲದೆ, ಎನ್ನ ದಂಡನೆಗೂ ಗುರಿಯಾಗುವೆ ! '']

ಶ್ಲೋ॥ ಯೋ ಮದರ್ಥಮತಿಸ್ನೇಹಾತ್ಸ್ವಾನ್ಯಾಣಾನಪಿ ನೇಕ್ಷತೇ ।
ತಸ್ಯ ಬನ್ಧುವಿಶಿಷ್ಟಸ್ಯ ಸಖ್ಯುರ್ಭಾರ್ಯಾ ಸುತಾ ಮಮ ॥೪೪॥

ಶ್ಲೋ॥ ಅದುಷ್ಟಾಂ ಸಂತ್ಯಜನ್ಭಾರ್ಯಾಂ ಮತ್ತೋ ದಂಡಮವಾಪ್ನುಯಾಃ ।
ಸಧಿಗ್ವಾದಾಸ್ಪದೀಭೂತಃ ಸರತ್ರೇಹ ಚ ಧಕ್ಷ್ಯಸೇ ॥೪೫॥

ಇದನ್ನು ಕೇಳಿದ ಅಭಿಪಾರಗನು, ಮಹಾರಾಜನ ಧರ್ಮಸ್ಥೈರ್ಯವನ್ನು ಅರಿತವನಾಗಿದ್ದರೂ, ಸ್ವಾಮಿಭಕ್ತಿಯಿಂದ ಪ್ರೇರಿತನಾಗಿ ಉತ್ಸಾಹದಿಂದ ಪುನಃ—

[೪೬. ತಾ:–"ನಾನೀತಿ ಮಾಡುವುದರಿಂದ ಎನಗೆ ಧರ್ಮೋಲ್ಲಂಘನದೋಷ ಜನರನಿಂದೆ ಅಥವಾ ಸುಖನಾಶ, ಎಂಬನರ್ಥಗಳು ಹಾಗೆ ಸಂಭವಿಸುವ ಪಕ್ಷಕ್ಕೆ, ಅವುಗಳನ್ನೆಲ್ಲ ನಿನಗೀಕಾರ್ಯದಿಂದುಂಟಾಗುವ ಸುಖದಿಂದ ಹರ್ಷಗೊಳ್ಳುವ ಎನ್ನ ಮನಸ್ಸಿನ ಉಲ್ಲಾಸದಿಂದುಬ್ಬುವ ಎನ್ನೀ ಎದೆಯನ್ನಿಪ್ಪ ಹಿಂದಕ್ಕೆ ಹಾರಿಸಿಬಿಡುವೆನು."]

ಅದಲ್ಲದೆ,

[೪೭. ತಾ:–" ಈ ಕಾರ್ಯವು ಎಮ್ಮಿಬ್ಬರಲ್ಲಿಯೇ ಅಡಗುವುದರಿಂದ ಇತರನು ತಿಳಿಯಲು ಅವಕಾಶವೆಲ್ಲಿಯದು? ಆದಕಾರಣ ಜನನಿಂದೆಯ ಭೀತಿಯನ್ನು ಮನಸ್ಸಿನಲ್ಲಿ ಹೊಂದಬೇಡ."]

ಎಂದು ಹೇಳಲು ದೇವಸೇನನು ಇವನ ಅವಿವೇಕಕ್ಕೆ ವ್ಯಸನಗೊಂಡು ಪ್ರಸನ್ನತೆಯೊಡನೆ:—

[೪೮ತಾ:–"ಅವನು ಜನಾಪವಾದಕ್ಕೆ ಅಂಜುವುದಿಲ್ಲವೋ, ಮತ್ತು ಧರ್ಮವನ್ನೂ ಪರಲೋಕದ ಫಲವನ್ನೂ ಲಕ್ಷಿಸುವುದಿಲ್ಲವೊ, ಅಂಥವನನ್ನು ಜನರು ವಿಶ್ವಾಸಿಸುವುದಿಲ್ಲ; ಈ ಕಾರಣದಿಂದ ತನ್ನ ಸಂಪತ್ತೆಲ್ಲವನ್ನೂ ತಪ್ಪದೆ ಕಳೆದುಕೊಳ್ವನು."]

ಅದಲ್ಲದೆ ಇತರರು ಅರಿಯದಂತೆ ಗೋಪ್ಯವಾಗಿ ಕಾರ್ಯವನ್ನು ನಿರವೇರಿಸೋಣವೆಂದು ನೀನು ಹೇಳಿದೆಯಲ್ಲ, ಅವಿಷಯದಲ್ಲಿ ಕೇಳು—

ಶ್ಲೋ॥ ಧರ್ಮಾತ್ಯಯೋ ಮೇ ಯದಿ ಕಶ್ಚಿದೇವಂ ಜನಾಪವಾದಃ ಸುಖವಿಪ್ಲವೋ ವಾ।
ಪ್ರತ್ಯುದ್ಗ ವಿಷ್ಯಾಮ್ಯುರಸಾ ತು ತತ್ತತ್ತ್ವತ್ಸೌಖ್ಯಲಬ್ಧೇನ ಮನಸ್ಸುಖೇನ॥೪೬॥
ಆವಾಭ್ಯಾಮಿದಮನ್ಯಶ್ಚ ಕ ಏವ ಜ್ಞಾತುಮರ್ಹತಿ ।
ಜನಾಪವಾದಾದಾಶಂಕಾಮತೋ ಮನಸಿ ಮಾ ಕೃಥಾಃ ॥೪೭॥

ಲೋಕಸ್ಯ ಯೋ ನಾದ್ರಿಯತೇ ಽಪವಾದಂ ಧರ್ಮಾನಪೇಕ್ಷಃ ಪರತಃ ಫಲಂ ವಾ ।
ಜನೋ ನ ವಿಶ್ವಾಸಮುಪೈತಿ ತಸ್ಮಿನ್ಧ್ರುವಂ ಚ ಲಕ್ಷ್ಮ್ಯಾಽಪಿ ವಿವರ್ಜ್ಯತೇ ಸಃ ॥೪೮॥

[೪೯ ತಾ:-"ಇತರರಿಗೆ ಗೋಚರವಾಗದಹಾಗೆ ವಿಷವನ್ನು ಸೇವಿಸಿದವನಂತೆ, ಪಾಪಕಾರ್ಯಗಳನ್ನು ಗೋಪ್ಯವಾಗಿ ಮಾಡತಕ್ಕವನು ಸುಖವನ್ನೆಂತು ತಾನೇ ಪಡೆಯುವನು? ಅದಲ್ಲದೆ ಅಂತಹ ಪಾಪಕಾರ್ಯಗಳನ್ನು ದಿವ್ಯದೃಷ್ಟಿಯುಳ್ಳ ದೇವತೆಗಳೂ ಯೋಗಿಗಳೂ ಮತ್ತು ಮನುಷ್ಯರೂ ನೋಡುವುದಿಲ್ಲವೆ?]

ಏಂದು ಹೇಳಲು ಅಭಿಪಾರಗನು ಒಂದುಕ್ಷಣ ಯೋಚಿಸಿದಬಳಿಕ ಧೈರ್ಯದಿಂದ:—"ಮಹಾರಾಜನೆ! ಜನರೆಲ್ಲರೂ ನೋಡುವಂತೆಯೇ ಆವಳನ್ನು ನೀನು ಎನ್ನಿಂದ ಪರಿಗ್ರಹಿಸಲು ಧರ್ಮಸಂಮತವಾದ ಮತ್ತೊಂದು ಉಪಾಯವು ಸಿದ್ಧವಾಗಿಯೇ ಇರುವುದು! ಆದಕಾರಣ

[೫೦ ತಾ:-"ಎಲೈ ಭೂಲೋಕದ ಮಹೇನ್ದ್ರನೆ! ಎನ್ನ ಭಾಗಕ್ಕೆ ಪೂಜಾರ್ಹನಾದವನು ನಿನ್ನ ಹೊರತು ಈ ಭೂಮಿಯಲ್ಲಿ ಮತ್ತಾರನ್ನೂ ಕಾಣೆನು; ಆದಕಾರಣ, (ದೀಕ್ಷಿತನ ಪುಣ್ಯವನ್ನು ಅಭಿವೃದ್ಧಿಗೊಳಿಸುವುದಕ್ಕಾಗಿ) ಋತ್ವಿಜನು (ಕನ್ಯೆಯೇ ಮೊದಲಾದ ಭೋಗಸಾಧನಗಳನ್ನು ಯಜ್ಞಮುಖದಲ್ಲಿ) ಪರಿಗ್ರಹಿಸುವಂತೆ, (ಎನ್ನೀಸ್ವಾಮಿಕಾರ್ಯವೆಂಬ ಯಜ್ಞಕ್ಕೆ ದೀಕ್ಷಿತನಾದೆನ್ನ ಪುಣ್ಯವನ್ನು ವೃದ್ಧಿಗೊಳಿಸುವುದಕ್ಕಾಗಿ) ಆ ಉನ್ಮಾದಯನ್ತ್ಯಿಯನ್ನು ಎನ್ನಿಂದ ದಕ್ಷಿಣೆಯಾಗಿ ಪಡೆ."]

ಎಂದುಹೇಳಲು ದೇವಸೇನನು, ನಗುತ್ತ:—

[೫೧ ತಾ:-ಸತ್ಪುರುಷರು ಇತರರನ್ನು ನಿಂದೆಯೇ ಮೊದಲಾದ ದುಃಖಗಳಿಗೆ ಗುರಿಮಾಡಿ, ತಾವದರಿಂದ ಸುಖವನ್ನು ಪಡೆಯುವಂತಹ

ಅದೃಶ್ಯಮಾನೋ ಽಪಿ ಹಿ ಪಾಪಮಾಚರನ್ವಿಷಂ ನಿಷೇವ್ಯೇವ ಕಥಂ ಸಮುದ್ಭುಯಾತ್ ।
ನ ತಂ ನ ಪಶ್ಯನ್ತಿ ವಿಶುದ್ಧಚಕ್ಷುಷೋ ದಿವೌಕಸಶ್ಚೈವ ನರಾಶ್ಚ ಯೋಗಿನಃ ॥೪೯॥
ಶ್ವತ್ತಃ ಪರಂ ಚಾಹವನೀಯಮನ್ಯಂ ಲೋಕೇ ನ ಪಶ್ಯಾಮಿ ಮಹೀಮಹೇನ್ದ್ರ ।
ಉನ್ಮಾದಯನ್ತೀಂ ಮಮ ಪುಣ್ಯವೃದ್ಧ್ಯೈ ತ್ವಾಂ ದಕ್ಷಿಣಾಂ ಋತ್ವಿಗಿವ ಪ್ರತೀಚ್ಛ ॥೫೦॥
ನಿಂದಾದಿ ದುಃಖೇಷು ಪರಾನ್ನಿಪಾತ್ಯ ನೇಷ್ಟಾ ಸತಾಮಾತ್ಮಸುಖಪ್ರವೃತ್ತಿಃ ।
ಏಕೋಽಹಮನ್ಯಾನ್ಪರಿಪೀಡ್ಯ ಪರಾನತೋ ಽಹಂ ಧರ್ಮೇ ಸ್ಥಿತಃ ಸ್ವಾರ್ಥಧುರಂ ಪ್ರಪತ್ಸ್ಯೇ ॥೫೧॥

ವೃತ್ತಿಯನ್ನೆಂದಿಗೂ ಬಯಸರು; ಆದಕಾರಣ ಧರ್ಮಸಂಮತವಾಗಿ ನಾ ನಾವ ಸುಖವನ್ನು ಪಡೆಯಬಹುದೋ ಅದನ್ನು ಮಾತ್ರ ಪಡೆಯಲಿಚ್ಛಿಸು ವೆನೇ ಹೊರತು ಇತರರಿಗೆ ನೋವನ್ನೆಂದಿಗೂ ಉಂಟುಮಾಡೆನು.''

ಇದನ್ನು ಕೇಳಿದ ಅಭಿಪಾರಗನು ಪುನಃ ದೇವಸೇನನ್ನು ಕುರಿತು:– ದೇವ! ನೀನು ಹೇಳಿದಂತಹ ದೋಷವೇನೂ ಎನಗೆ ಈ ಭಾಗದಲ್ಲಿ ತೋ ರದು; ಏಕೆಂದರೆ, ನೀನಾಕೆಯನ್ನು ಪರಿಗ್ರಹಿಸುವುದರಿಂದ ಎನಗೆ ಸಂ ತೋಷವೇ ಹೊರತು ದುಃಖವೆಂದಿಗೂ ಉಂಟಾಗದು.''

ಇದನ್ನು ಕೇಳಿದ ದೇವಸೇನನು ಆತ್ಮಗತವಾಗಿ:–''ಇವನಿಗೆ ಧರ್ಮ ಸೂಕ್ಷ್ಮವು ಇನ್ನೂ ಚೆನ್ನಾಗಿ ತಿಳಿಯದು; ಆದಕಾರಣ ಇವನಿಗೆ ರಾಜ ನೀತಿಯನ್ನು ಬೋಧಿಸುವುದರ ದ್ವಾರ ಒಡಂಬಡಿಸಬೇಕು.'' ಎಂದು ಮಾತನಾಡಿಕೊಂಡು, ಅವನನ್ನು ಕುರಿತು ಪ್ರಸನ್ನತೆಯೊಡನೆ:–''ಅಭಿಪಾ ರಗನೆ! ನಿನ್ನ ಸ್ವಾಮಿಭಕ್ತಿಯು ಎನ್ನನೀರೀತಿ ನಿರ್ಬಂಧಿಸುವಂತೆ ನಿನ್ನನ್ನು ಪ್ರೇರಿಸುವುದು; ಸದ್ಭೃತ್ಯನಾದ ನಿನ್ನಂಥವನಿಗೆ ಈ ನಡತೆಯು ಭೂಷ ಣವೇ ಅಹುದು; ನಾನು ನಿನ್ನ ಕೋರಿಕೆಯಂತೆ ಅಕೆಯನ್ನು ವರಿಸಲೂ ಬಹುದು ; ಅವಳ ಸಾಧ್ವೀತ್ವಸಂಪತ್ತಿಯನ್ನೂ ಅದುಷ್ಟೆಯಾಗಿರುವು ದನ್ನೂ, ಈಗಲೂ ಅವಳು ಎನ್ನಲ್ಲಿಯೇ ಪತಿವಾತ್ಸಲ್ಯವುಳ್ಳವಳಾಗಿರುವು ದನ್ನೂ, ನಿನ್ನ ಉದ್ದೇಶವನ್ನೂ ಚೆನ್ನಾಗಿಯೂ ಬಲ್ಲೆನು; ಇಷ್ಟಾದರೂ ನಾನು ರಾಜನಾಗಿರುವುದರಿಂದ ಅವಳನ್ನು ಸ್ವೀಕರಿಸಲಾಗದು; ಏಕೆಂ ದರೆ, ಪ್ರಜೆಗಳಾದವರು–'ಎಮ್ಮ ಮಹಾರಾಜನು ತಾನಾಗಿಯೇ ವರಿಸಿ ಬಂದ ಕನ್ಯೆಯನ್ನು ಮೊದಲು ಧಿಕ್ಕರಿಸಿ, ಅಮೇಲೆ ಅವಳು ಸುಂದರಿಯಾ ಗಿರುವ ವಿಷಯವು ತಿಳಿದುಬರಲು, ಇತರನಿಗೆ ದಾನಮಾಡಲ್ಪಟ್ಟವಳಾಗಿ ರ್ದರೂ ಅದನ್ನು ಲಕ್ಷಿಸದೆ, ಕಾಮತೃಪ್ತಿಗಾಗಿ ಪರಪತ್ನಿಯನ್ನು ಪರಿಗ್ರ ಹಿಸಿದನು, ಎಂದು ನಿಂದಿಸುವರು; ಅದರಿಂದ ಅವರಿಗೆ ಎನ್ನಲ್ಲಿ ಲಾಘವ ವುಂಟಾಗುವುದು.''

ಇದನ್ನು ಕೇಳಿದ ಅಭಿಪಾರಗನು ನಿರ್ಲಕ್ಷ್ಯದೊಡನೆ:–''ಧರ್ಮ

ರಹಸ್ಯವನ್ನೂ ಶಾಸ್ತ್ರವಿವೇಚನೆಯನ್ನೂ ಅರಿಯದ ಅಜ್ಞಜನರಾಡಿಕೊಂಡರೆ ಅದರಿಂದ ನಿನಗೇನು ಕುಂದಕವು ?'' ಎಂದು ಹೇಳಲು ದೇವಸೇನನು ಭೀತಿಯಿಂದ:-"ಹಾ! ಹಾಗೆ ಯೋಚಿಸಲಾಗದು; ನಿಂದಿಸುವ ಜನರು ಅಜ್ಞರಾದರೂ ಅವರನಿಂದೆಯು ಅಜ್ಞವಾಗುವುದಿಲ್ಲ, ಅದು ಪ್ರಾಜ್ಞರವರೆಗೂ ವ್ಯಾಪಿಸಿ, ಅವರೂ ಸಂದೇಹಪಡುವುದಕ್ಕೆ ಕಾರಣವಾಗುವುದು; ನಾನು ಸಾಮಾನ್ಯನಾಗಿದ್ದಲ್ಲಿ ಇಷ್ಟು ಚಿಂತಿಸಬೇಕಾಗಿರಲಿಲ್ಲ; ಎನ್ನ ವೃತ್ತಿಯು ಬಹು ಸೂಕ್ಷ್ಮವಾದುದು; ಏಕೆಂದರೆ-

[೫೨ ತಾ:-"ವೃಷಭನು ಸಂಚರಿಸುವ ಮಾರ್ಗವು ವಕ್ರವಾದುದೇ ಆಗಲಿ ಋಜುವಾದುದೇ ಆಗಲಿ, ಅದನ್ನು ಅನುಸರಿಸಿ ಉಳಿದ ಪಶುಗಳೆಂತು ನಂಬಿಕೆಯಿಂದ ಹಿಂಬಾಲಿಸುವವೋ ಅದರಂತೆಯೇ, ಪ್ರಜೆಗಳಾದವರು ರಾಜನ ಆಚರಣೆಯು ಹಿತವಾದುದೇ ಆಗಲಿ ಅಹಿತವಾದುದೇ ಆಗಲಿ, ಅದನ್ನು ವಿಚಾರಿಸದೆಯೂ ಹಿಂತೆಗೆಯದೆಯೂ ಉತ್ಸಾಹದೊಡನೆ ಆಚರಿಸುವರು (೫೩) ಹೀಗೆ ಜನರಾಚರಿಸುವ ಧರ್ಮವನ್ನು ನಿರ್ದೇಶಿಸುವ ನಾನೇ ದುರ್ಮಾರ್ಗದಲ್ಲಿ ಪ್ರವೃತ್ತಿಯುಳ್ಳವನಾದಮೇಲೆ, ಎನ್ನ ನಡತೆಗಳನ್ನೇ ಅನುಸರಿಸಿ ನಡೆವ ಎನ್ನ ಪ್ರಜೆಗಳ ಅವಸ್ಥೆಯು, ಇನ್ನೆಂತಹುದಾಗಬಹುದು ? (೫೪) ಆದಕಾರಣ ನಾನು ಎನ್ನ ಪ್ರಜೆಗಳ ಹಿತವನ್ನೂ, ಎನ್ನ (ರಾಜ) ಧರ್ಮವನ್ನೂ, ವಿಮಲವಾದ ಕೀರ್ತಿಯನ್ನೂ ಬಯಸಿರುವೆನಾದುದರಿಂದ ಮನಸ್ಸು ಚಲಿಸಿದಂತೆಲ್ಲ

ಜಿಹ್ಮಂ ಶುಭಂ ವಾ ವೃಷಭಪ್ರಚಾರಂ ಗಾವೋ ಽನುಗಾ ಯದ್ವದನುಪ್ರಯಾನ್ತಿ ।
ಉತ್ಕ್ಷಿಪ್ತಶಂಕಾಂಕುಶನಿರ್ವಿಘಟ್ಟಂ ಪ್ರಜಾಸ್ತಥೈವ ಕ್ಷಿತಿಪಸ್ಯ ವೃತ್ತಿಮ್ ॥೫೨॥

ಧರ್ಮವ್ಯವಸ್ಥಾಸು ಪುರಸ್ಸರಸ್ಸನ್ ವ್ಯಯಂ ವ್ರಜೇಯಂ ಯದಿ ಸಾಪಥೇನ ।
ಅಸ್ಮದ್ಗತಾಚಾರಶಥಾನುಗಾನಾಂ ಭವೇದವಸ್ಥಾ ಮಮ ಕಾ ಪ್ರಜಾನಾಮ್ ॥೫೩॥

ತಸ್ಮಾತ್ಪ್ರಜಾನಾಂ ಹಿತಮೀಕ್ಷಮಾಣಃ ಸ್ವಂ ಚೈವ ಧರ್ಮಂ ವಿಮಲಂ ಯಶಶ್ಚ :
ನೇಚ್ಛಾಮಿ ಚಿತ್ತಸ್ಯ ವಶೇನ ಗನ್ತುಮಹಂ ಹಿ ನೇತಾ ವೃಷವತ್ಪ್ರಜಾನಾಮ್ ॥೫೪॥

ಆಚರಿಸಲು ಇಚ್ಛಿಸೆನು; ಏಕೆಂದರೆ, ಎನ್ನ ಪ್ರಜೆಗಳೆಂಬ ಪಶುಗಳಿಗೆ ವೃಷಭನಂತೆ ಮಾರ್ಗದರ್ಶಕನು ನಾನೇ ಆಗಿರುವೆನು.''

ಆದಕಾರಣ ಇತಃಪರ ಆ ವಿಚಾರವನ್ನು ಕುರಿತು ಪ್ರಸ್ತಾಪಿಸದಿರು.'' ಎಂದು ಒಡಂಬಡಿಸಿದನು.

ಆ ಸಮಯಕ್ಕೆ ಸರಿಯಾಗಿ ದ್ವಾರಪಾಲಕನು ಬಂದು, ಅಭಿಪಾರಗನನ್ನು ಕಂಡು:–''ಜೀಯಾ! ತಮ್ಮ ಆಜ್ಞಾನುಸಾರವಾಗಿ ಗ್ರಾಮಚಾರಿಗಳು ಚೋರರನ್ನೆಲ್ಲ ಹಿಡಿದು ತಂದಿಹರು.'' ಎಂದು ಹೇಳಲು ಅಭಿಪಾರಗನು–''ಅವರುಗಳನ್ನೆಲ್ಲ ನ್ಯಾಯಮಂದಿರಕ್ಕೆ ಕರೆದುಕೊಂಡು ಹೋಗತಕ್ಕುದೆಂದು ಗ್ರಾಮಚಾರಿಗಳಿಗೆ ತಿಳುಹು.'' ಎಂದು ಹೇಳಿ ಕಳುಹಿದನು.

ಇದನ್ನು ಕೇಳಿದೊಡನೆಯೇ ದೇವಸೇನನು ಬೆದರಿ, ಅಭಿಪಾರಗನನ್ನು ಕುರಿತು ಆತುರದಿಂದ:–''ಅಭಿಪಾರಗನೇ! ಚೋರರ ವಿಚಾರವೇನು?'' ಅಭಿ:–''ದೇವ! ಅನ್ಯದೇಶಗಳಿಂದ ಎಮ್ಮ ರಾಜಧಾನಿಗೆ ಅನೇಕ ಚೋರರು ಬಂದು ಪ್ರಜೆಗಳಿಗೆ ಹಾನಿಯನ್ನುಂಟುಮಾಡಿದರಂತೆ; ಆ ವಾರ್ತೆಯನ್ನು ನಾನು ಪುರಪ್ರವೇಶವಂ ಮಾಡುವಾಗಲೇ ತಿಳಿದು ಗ್ರಾಮಚಾರಿಗಳಿಗೆ ಸಹಾಯಕರಾಗಿ ಆ ಚೋರರನ್ನೆಲ್ಲ ಹಿಡಿದುತರುವಂತೆ ಎನ್ನ ಸೈನಿಕರಿಗೂ ಆಜ್ಞೆಮಾಡಿ ಕಳುಹಿದೆನು; ಆದರಂತೆ ಅವರನ್ನು ಹಿಡಿದು ತಂದಿರುವರಂತೆ.''

ಎಂದು ಹೇಳಲು ದೇವಸೇನನು ಬೆಬೆಂದವನಾಗಿ:—''ಎನ್ನ ರಾಷ್ಟ್ರದಲ್ಲಿ...ಅದರಲ್ಲಿಯೂ ಎನ್ನ ರಾಜಧಾನಿಯಲ್ಲಿ...ಚೌರ್ಯವು ನಡೆದಿಹುದೆ? ಹಾ! ರಾಜ್ಯವು ದುಸ್ಥಿತಿಗೆ ಬರಲು ಉಪಕ್ರಮಿಸಿತೆ? ನಗರಾಧಿಕಾರಿ ಮುಂತಾದವರು ಏನುಮಾಡುತಿರ್ದರು? ನಾನು ಸ್ವಲ್ಪ ಅಸ್ವಸ್ಥನಾದರೆ, ಅವರು ಸಂಪೂರ್ಣವಾಗಿ ಔದಾಸೀನ್ಯವನ್ನು ಅವಲಂಬಿಸಿದರೇ? ಛಿ! ತೆಗೆ! ತಂದೆಯು ಅಸ್ವಸ್ಥನಾದ ಕಾಲದಲ್ಲಿ ಕುಟುಂಬದಾಡಳಿತವನ್ನು ಪ್ರಾಪ್ತವಯಸ್ಕರಾದ ಜ್ಯೇಷ್ಠ ಪುತ್ರರು ನಡೆಸಿಕೊಂಡುಹೋಗುವಂತೆ, ರಾಜನು ಅಸ್ವಸ್ಥನಾಗಿರುವಾಗ್ಗೆ ರಾಜ್ಯತಂತ್ರವನ್ನು ಕುಂದುಂಟಾಗದಂತೆ

ನಡೆಸಿಕೊಂಡು ಹೋಗುವುದು ಇವರುಗಳ ಕರ್ತವ್ಯವಲ್ಲವೆ? ನಾನು ರಾಜಧಾನೀಯಲ್ಲಿ ಇರುವಾಗಲೇ ಈರೀತಿಯಾದಮೇಲೆ ನಾನಿಲ್ಲದವೇಳೆಯಲ್ಲಿನ್ನೇನುಗತಿ? ಇಂತಹ ಸಾಮರ್ಥ್ಯಹೀನರನ್ನು ನಂಬಿದರೆ ರಾಜ್ಯವೇ ಹಾಳಾಗುವುದು; ಮುಖ್ಯವಾಗಿ ಅವರನ್ನು ನಿಂದಿಸಿ ಪ್ರಯೋಜನವಿಲ್ಲ. ಏಕೆಂದರೆ ನೀತಿಜ್ಞರು ಹೀಗೆ ಹೇಳುವರು—

[೫೫ ತಾ:—"ತಲೆಯು ರೋಗದಿಂದ ಪೀಡಿತವಾದುದಾದರೆ, ಉಳಿದ ಅಂಗಗಳು ಸ್ವಕಾರ್ಯವನ್ನು ತ್ಯಜಿಸಿ ಜಡತ್ವವನ್ನು ಹೊಂದುವುವು; ಅದರಂತೆಯೇ ಸ್ವಕಾರ್ಯದಲ್ಲಿ ರಾಜನು ಸ್ವಲ್ಪ ಉಪೇಕ್ಷೆಯುಳ್ಳವನಾದರೆ ಮಂತ್ರಿ ಮುಂತಾದ ಭೃತ್ಯರು ಹಗಲೇ ನಿದ್ರಿಸುವರು."]

ಎಂದು ವಿಷಾದಗೊಂಡ ಬಳಿಕ ಮಧ್ಯಾನ್ಹವು ಸಮೀಪಿಸಲಾಗಿ ತವಕದಿಂದ:—"ಅಭಿಪಾರಗನೇ! ನೀನಿನ್ನು ಮನೆಗೆ ಭೋಜನಕ್ಕೆ ನಡೆ; ನಾನೀಗಲೇ ಹೋಗಿ ಚೋರರನ್ನು ವಿಚಾರಿಸುವೆನು." ಎಂದು ಹೊರಟು ಹೋದನು.

ಎರಡನೆಯ ಸಂಧಿ.

HUNGER: THE MOTHER OF CRIMES.

ಅನ್ನಾಭಾವದ ಆಪದಗಳು.

ಬಳಿಕಲಾದೇವಸೇನನು, ಆಕ್ಷಣವೇ ನ್ಯಾಯಮಂದಿರವನ್ನು ಸೇರಿ ಧರ್ಮಾಸನದಲ್ಲಿ ಕುಳಿತು, ಸಾಲಾಗಿ ನಿಂತಿರುವ ಆ ಚೋರರನ್ನು ಕುರಿತು ಧೃಷ್ಟತೆಯಿಂದ:—"ಎಲೈ ಚೋರರಿರಾ! ನೀವಾರು?" ಎಂದು ಕೇಳಲು ಚೂಜಕನೆಂಬ ಬ್ರಾಹ್ಮಣನು ಉಳಿದ ಚೋರರನ್ನೆಲ್ಲ ಹಿಂದೆಬಿಟ್ಟು ಮುಂದಕ್ಕೆ ಬಂದು, ರಾಜನಿಗೆ ವಂದಿಸಿ ವಿನಯದಿಂದ:—"ನಾವು ಅಂಗ

ಜಡತಾಂ ಯಾನ್ತಿ ಗಾತ್ರಾಣಿ ಮಸ್ತಕೆ ವ್ಯಾಧಿಪೀಡಿತೇ |
ಕಾರ್ಯೇಷ್ವೀ ಹಿ ವಿಮುಖೇ ರಾಜ್ಞಿ ಸ್ವಪನ್ತಿ ಸಚಿವಾ ದಿವಾ ||೫೫||

ಜುಜಕನೆಂಬ ಚೋರನು ತಾನು ಮಾಡಿದ ಕಳ್ಳತನಕ್ಕೆ ಕಾರಣವನ್ನು ರಾಜನಲ್ಲಿ ವಿಜ್ಞಾಪಿಸುವಿಕೆ.

ನೀತಿ :—ಕ್ಷುತ್ತೇ ದುಷ್ಕೃತ್ಯಗಳಿಗೆ ಮಾತೃಸ್ಥಾನವು.



Jujaka, the Brahmin thief, explains the cause of his theft to the King.

MORAL :--Hunger is the mother of crimes.

ದೇಶನಿವಾಸಿಗಳು'' ಎಂದು ಹೇಳಲು ದೇವಸೇನನು:—''ನಿನ್ನ ಹೆಸರೇನು?'' ಜೂಜ:—''ಎನ್ನನ್ನು ಜೂಜಕನೆಂದು ಕರೆದರು.' ದೇವ:—''ನಿನ್ನ ಕುಲವಾವುದು?'' ಜೂಜ:—''ಬ್ರಾಹ್ಮಣಕುಲ'' ದೇವ:—ಆಶ್ಚರ್ಯದಿಂದ''ಇದೇನೈ ನೀನು ಬ್ರಾಹ್ಮಣನಾಗಿದ್ದೂ ಕ್ಷತ್ರಿಯನಾದೆನಗೆ ವಂದಿಸುವೆ?'' ಜೂಜ:—''ಮಹಾರಾಜನೆ! ರಾಜನು ಧರ್ಮಾಸನದಲ್ಲಿ ಕುಳಿತು ಧರ್ಮವನ್ನು ವಿಮರ್ಶಿಸುವಾಗ್ಗೆ ಅವನು ಧರ್ಮಸ್ವರೂಪನಾದುದರಿಂದ, ಈ ಸಂಭವದಲ್ಲಿ ನಿನ್ನನ್ನು ವಂದಿಸಿದೆನು.'' ದೇವ:—(ವ್ಯಸನದಿಂದ) ''ಅಯ್ಯೋ! ದ್ವಿಜೋತ್ತಮನೆ! ಪ್ರಾಜ್ಞನಾದ ನಿನ್ನನ್ನೂ ನಿಂದ್ಯವಾದ ಈ ಚೌರ್ಯವೃತ್ತಿಯಲ್ಲಿ ಪ್ರವರ್ತಿಸುವಂತೆ ಪ್ರೇರಿಸಿದುದಾವುದು?'' ಜೂಜ:—(ವ್ಯಸನದಿಂದ) ''ನೀಚವಾದ ಕ್ಷುದ್ಬಾಧೆಯು'' ದೇವ:—(ಕೌತುಕದಿಂದ) ''ಹಾಗಾದರೆ ನಿಮಗೆ ಅನ್ನಾದ್ಯಾಹಾರಗಳನ್ನು ಕೊಡತಕ್ಕವರು ಇಲ್ಲವೆ?'' ಜೂಜ:—(ದುಃಖದಿಂದ)'' ಹಾಗೆ ಕೊಡತಕ್ಕವರಿರ್ದರೆ, ಸ್ವದೇಶಭ್ರಷ್ಟರಾಗಿ, ಸ್ವಧರ್ಮವನ್ನೂ ಸ್ವವೃತ್ತಿಯನ್ನೂ ತ್ಯಜಿಸಿ, ನೈಚ್ಯವೆಂದೂ ಅನಾರ್ಯವೆಂದೂ ತಿಳಿದಿರ್ದರೂ ಈ ಚೌರ್ಯವೃತ್ತಿಯನ್ನವಲಂಬಿಸಿ, ಈ ಹಾಳು ಹೊಟ್ಟೆಯನ್ನು ಹೊರೆಯುತಿರ್ದೆವೆ? ದೇವ:—''ಹಾಗಾದರೆ ನಿಮ್ಮದೇಶಕ್ಕೆ ರಾಜನು ಇರುವನೊ ಇಲ್ಲವೊ?' ಜೂಜ—''ಇರುವನು; ಇರ್ದರೇನು ಪ್ರಯೋಜನ? ದೇವ:—(ಕುತೂಹಲದಿಂದ) ''ಇದೇನೈ ಹೀಗೆ ಹೇಳುವೆ?'' ಜೂಜ—(ದುಃಖದಿಂದ ಗದ್ಗದಕಂಠನಾಗಿ) ''ಧರ್ಮಾವತಾರನೆ! ಎಮ್ಮ ಗುಂಟಾಗಿರ್ದ ಕಷ್ಟನಷ್ಟಗಳನ್ನೆಲ್ಲಾ ಇದುವರೆಗೂ ಮರೆತಿರ್ದೆವು; ಈಗ ನೀನು ಪ್ರಶ್ನೆ ಮಾಡಿದುದರಿಂದ ಅವುಗಳೆಲ್ಲವೂ ನೆನಪಿಗೆ ಬಂದುವು; ಎಮ್ಮಂತಹ ಹತಭಾಗ್ಯರನ್ನು ಆ ಮೃತ್ಯುವುಕೂಡ ಉಪೇಕ್ಷಿಸುವನು; ಮಹಾರಾಜನೆ! ಆವಿಷಯಗಳನ್ನೆಲ್ಲ ಕೇಳುವುದಕ್ಕೆ ಪ್ರತಿಯಾಗಿ ಎಮ್ಮೀ ದುಷ್ಕೃತ್ಯಕ್ಕೆ ಪ್ರತೀಕಾರವಾಗಿ ಮರಣಶಾಸನವನ್ನೆಮಗೆ ಅನುಗ್ರಹಿಸಿದರೆ, ದುಃಖಮಯವಾದೀ ಜೀವಿತದಿಂದ ಮುಕ್ತರಾಗುವೆವು.'' ದೇವ:—(ಸ್ವಸ್ವಾತನನಾಗಿ ಅನುಕಂಪೆಯಿಂದ ಸ್ವಗತ) ''ಅಯ್ಯೋ! ಇವರ ದುಃಖವು

ಇನ್ನೆಂತಹುದಾಗಿರಬಹುದು? ಇವರು ಈ ಕೃತ್ಯವನ್ನು ಪ್ರಾಣರಕ್ಷಣಾರ್ಥವಾಗಿ ಮಾಡಿದವರಂತೆ ತೋರುವುದೇ ಹೊರತು ದುರಾಶಾಪೀಡಿತರಾಗಿ ಮಾಡಿದಂತೆ ತೋರುವುದಿಲ್ಲ; ಒಳ್ಳೆಯದು! ಇವರ ದುಃಖಕ್ಕೆ ಕಾರಣವನ್ನು ಅಮೂಲಾಗ್ರವಾಗಿ ವಿಚಾರಿಸುವೆನು. (ಪ್ರಕಾಶ)ಅಯ್ಯೋ! ದ್ವಿಜನ್ಮನೆ! ನೀವುಗಳೆಲ್ಲರಿಗೆ ಬರಲು ಕಾರಣವೇನು?'' ಜೂಜಃ—(ದುಃಖದಿಂದ)—

[ಗದ್ಯ. ತಾ—''ಶೋಕದಿಂದ ದೈನ್ಯವನ್ನು ಹೊಂದಿದ ನಮ್ಮ ಬಂಧುಗಳು ನಮ್ಮ ದುರವಸ್ಥೆಯನ್ನು ನೋಡುತ್ತಿರುವಲ್ಲಿ—ರಾಜನ ಕೋಪವೆಂಬ ಉತ್ಪಾತವಾಯುವಿನಿಂದ,ನಾವಿಲ್ಲಿಗೆ ಹಾರಿಸಲ್ಪಟ್ಟವರಾದೆವು.'']

ಎಂದು ಹೇಳಿದಬಳಿಕ ಜೂಜಕನು ಇತರ ಚೋರರಿಂದೊಡಗೂಡಿ ಪುನಃ—

[ಶಿಷ್ಟ. ತಾ:—ಎಮಗೆ ಮಿತ್ರನೂ ಬಂಧುವೂ ಆದ ನಿನ್ನ ದೃಷ್ಟಿಗೆ ಗೋಚರರಾದೆವಾದುದರಿಂದ, ನಮಗಿನ್ನೂ ಸ್ವಲ್ಪ ಭಾಗ್ಯವೂ ಲಕ್ಷ್ಮಿಯ ಸಮುಖತ್ವವೂ ಇರಬೇಕೆಂದೇ ಭಾವಿಸುವೆವು.'']

ಎಂದು ಹೇಳಿದ ದುಃಖವಾರ್ತೆಯನ್ನು ಆಕರ್ಣಿಸಿದ ದೇವಸೇನ ಮಹಾರಾಜನು ಶಂಕೆಗೊಂಡು ಜೂಜಕನನ್ನು ಕುರಿತು:-''ಅದು ಸರಿಯೇ! ನಿಮ್ಮ ರಾಜನು ನಿಮ್ಮನ್ನು ರಾಜ್ಯಭ್ರಷ್ಟರನ್ನಾಗಿ ಮಾಡಲು ನೀನೇನು ಅಂತಹ ಅಪರಾಧವನ್ನು ಮಾಡಿದಿರಿ?'' ಎಂದು ಕೇಳಲು ಜೂಜಕನು ಭಯದಿಂದ:—''ಮಹಾರಾಜನೆ! ರಾಜಸನ್ನಿಧಿಯಲ್ಲಿ ಪರರಾಜನಿಂದೆಯು ವಿಚಕ್ಷಣರಿಗೆ ಉಚಿತವಾದುದಲ್ಲ; ಆದರೆ ನೀನಾಗಿಯೇ ಪ್ರಶ್ನೆಮಾಡಿದುದಿಂದಲೂ, ನಮ್ಮ ಪೂರ್ವದುಃಖಗಳು ನಮ್ಮನ್ನು ಪ್ರೇರಿಸುವುದರಿಂದಲೂ

ಕೋಪೋತ್ಪಾತಾನಲೇನೇಹ ಕ್ಷ್ವಿಪ್ತಾಃ ಕ್ಷ್ಮಿಪತೇರ್ವಯಮ್ ।
ಪಶ್ಯತಾಂ ಶೋಕದೀನಾನಾಂ ಬನ್ಧೂನಾಂ ಮನುಜಾಧಿಪ ॥೫೬॥
ಅಸ್ತು ನೋ ಭಾಗ್ಯಶೇಷಸ್ತು ಲಕ್ಷ್ಮ್ಯಾಶ್ಚಾಭಿಮುಖೀ ಧ್ರುವಮ್ ।
ಸುಹೃದ್ಬಂಧುಪ್ರತಿಷ್ಟೇನ ಯದ್ದೃಷ್ಟಾಃ ಭವತಾ ವಯಮ್ ॥೫೭॥

ಲೂ ಹೇಳಬೇಕಾಗಿರುವುದು; ಇದನ್ನು ಮಟ್ಟಿಗೆ ದೋಷವಾಗಿ ಭಾವಿಸಲಾಗದೆಂದು ಬೇಡುವೆನು.'' ದೇವ:—''ಇಲ್ಲ ; ನಿಜಾಂಶವನ್ನು ಹೇಳು!'' ಜೂಜ–(ದೈನ್ಯದಿಂದ)''ಎಮ್ಮ ರಾಜ್ಯದಲ್ಲಿ ಕ್ಷಾಮವು ಪ್ರಾಪ್ತವಾದುದರಿಂದ ಕ್ಷುಧಾತುರರಾದ ಅನೇಕ ಪ್ರಜೆಗಳು ತಮ್ಮ ದುಃಖವನ್ನು ಪರಿಹರಿಸಬೇಕೆಂದು ರಾಜನ ಅಧಿಕಾರಿಗಳಿಗೆ ಮೊರೆಯಿಡಲು, ಅವರು ಅದನ್ನು ಲಕ್ಷಿಸದೇ ಹೋದರು; ಹೀಗೆಯೇ ಕೆಲವುಕಾಲ ಗತಿಸುವುದರೊಳಗಾಗಿ, ಅನೇಕರು ಅನ್ನಪಾನಗಳಿಲ್ಲದೆ ಸಾಯುತ್ತಿರುವುದನ್ನು ನೋಡಿ ಸಹಿಸಲಾರದೆ, ರಾಜನಿಗೆ ಮೊರೆಯಿಡುವ ಉದ್ದೇಶದಿಂದ, ರಾಜಮಂದಿರದ ಇದಿರಿಗೆ ಆರ್ತಧ್ವನಿಯನ್ನು ಮಾಡಲಾಗಿ, ಅಂತಃಪುರದ ಸ್ತ್ರೀಯರ ಕೇಳೆಯಲ್ಲಿರ್ದ ರಾಜನು ಕುಪಿತನಾಗಿ ಎಮ್ಮೆಲ್ಲರನ್ನೂ ರಾಜ್ಯಾವರಣದಿಂದಾಚೆಗೆ ಹೊರಡಿಸಿಬಿಡುವಂತೆ ತನ್ನ ದೂತರಿಗೆ ಆಜ್ಞಾಪಿಸಿದನು; ಬಳಿಕ ಎಮ್ಮ ದುರವಸ್ಥೆಗಳನ್ನು ನೋಡಿ ಸಹಿಸಲಾರದೆ ಪತ್ನೀಪುತ್ರಾದಿ ಬಂಧುಜನರು, ಪ್ರತಿಬಂಧಿಸಿದುದರಿಂದ ಅವರುಗಳಲ್ಲಿ ಕೆಲವರನ್ನು ಶೂಲಕ್ಕೆ ಹಾಕಿಸಿದುದಲ್ಲದೆ, ಸ್ತ್ರೀಶಿಶುಗಳೆಂಬ ತಾರತಮ್ಯವನ್ನೆಣಿಸದೆ ಕ್ರೂರವಾಗಿ ಹಿಂಸಿಸಿ, ಕಾರಾಗಾರಕ್ಕೆ ಕಳುಹಿಬಿಟ್ಟರು; ನಾವುಗಳಿನ್ನೂ ಅಲ್ಲಿಯೇ ಇರ್ದರೆ ಎಮ್ಮ ಪ್ರಾಣಗಳೂ ನಾಶವಾಗುವುವೆಂಬ ಭೀತಿಯಿಂದ ಕಂಗೆಟ್ಟು ಓಡಿಬಂದು, ದಯಾರ್ದ್ರಹೃದಯನಾದ ನಿನ್ನಿಂದ ಪರಿಪಾಲಿಸಲ್ಪಡುತ್ತಿರುವೀ ರಾಜ್ಯವನ್ನು ಪ್ರವೇಶಿಸಿ, ಪ್ರಾಣಗಳನ್ನು ಕಾಪಾಡಿಕೊಂಡೆವು.'' ಎಂದು ಹೇಳಿದನು.

ಈ ಕೃತ್ಯವನ್ನು ಕೇಳಿದ ದೇವಸೇನನು ವ್ಯಸನಗೊಂಡವನಾಗಿ–''ಹಾ! ಕಷ್ಟಕಷ್ಟ!! ಹಸಿವಿನಿಂದ ಕಾಡುವ ತನ್ನ ಮಕ್ಕಳನ್ನು ತಂದೆಯಾದವನೇ ಕೊಲ್ಲಿಸಿದಂತಾಯಿತಲ್ಲ!

[೫೮. ತಾ:–''ಅಯ್ಯೋ! ಆ ರಾಜನ ಬುದ್ಧಿಯು ದಯಾಶೂನ್ಯವಾಗಿಯೂ, ಲಜ್ಜಾವಿಹೀನವಾಗಿಯೂ, ಪರಲೋಕಭೀತಿಗೆ ದೂರವಾ

ಕೃಪಾವಿಮುಕ್ತಾ ಬತ ನಿರ್ಘೃಣತಾ ನೃಪಸ್ಯ ಬುದ್ಧಿಃ ಪರಲೋಕನಿರ್ಭಯಾ ॥
ಅಹೋ! ತಟಿಚ್ಚಂಚಲಯಾ ನೃಶಂಸ್ಯಯಾ ಹೃತೇನ್ದ್ರಿಯೇಣ ಸ್ಪೃಹಣಂ ನವೀಕೃತಂ॥೫೮॥

ಗಿಯೂ ಎಂತಿರುವುದು? ಹಾ! ಅಸನು ಮುಂಚಿನ ಹೊಳಲಿನಂತೆ ಕ್ಷಣಿಕವಾದ ರಾಜ್ಯಸಂಪದದಿಂದ ತನ್ನ ಏನೇಕವನ್ನೆಲ್ಲ ಹಾಳುಮಾಡಿಕೊಂಡು ತನ್ನ ಹಿತವನ್ನೇ ಮರೆತಿರುವನಲ್ಲ! (೫೯) ಮೃತ್ಯುವು ಸಮಸ್ತಪ್ರಾಣಿಗಳಿಗೂ ಸಮೀಪದಲ್ಲಿಯೇ ಇರುವುದೆಂಬುದನ್ನು ಅರಿಯನು; ಅಥವಾ (ಇಂತಹ) ಪಾಪಕಾರ್ಯದಿಂದ ದುಷ್ಫಲವು ಉಂಟಾಗುವುದೆಂಬುದನ್ನು ಕೇಳಿಯೂ ಇಲ್ಲವೆಂದು ತೋರುವುದು; ಅಯ್ಯೋ! ವಿಹಿತಾವಿಹಿತವಿವೇಕಜ್ಞಾನವಿಲ್ಲದ ಅವಿವೇಕಿರಾಜರು, ಇತರರ ಸದ್ಬೋಧನೆಯನ್ನು ಕೇಳುವುದಕ್ಕೂ ಸಹನೆ ಇಲ್ಲದವರಾಗುವರು. (೬೦) ಪ್ರಾಣಿಮಾತ್ರದಲ್ಲಿ ತೋರಿಸಲ್ಪಟ್ಟ ಈರೀತಿಯಾದ ಕ್ರೌರ್ಯವು, ರೋಗಮಯವಾಗಿಯೂ ಕ್ಷಣಕಾಲದಲ್ಲಿ ನಾಶವಾಗತಕ್ಕುದಾಗಿಯೂ ಇರುವ ಒಂದು ಹಾಳುದೇಹದ ಭೋಗಕ್ಕಾಗಿ, ಪ್ರಯೋಗಿಸಲ್ಪಟ್ಟಿತೆ ? ಅಂತಹ ಮೌಢ್ಯವನ್ನು ಧಿಕ್!''

ಎಂದು ತನ್ನಲ್ಲಿ ತಾನೇ ವ್ಯಸನಗೊಂಡವನಾಗಿ, ಒಳಕ ಚೂಚಕನನ್ನು ಕುರಿತು:—''ಅದು ಹಾಗಿರಲಿ; ಎನ್ನರಾಜ್ಯದಲ್ಲಿ ನೀವೇಕೆ ಚೌರ್ಯವನ್ನೆಸಗಿದಿರಿ ? ಇಲ್ಲಿ ನಿಮಗೆ ಅನ್ನಕ್ಕೆ ಅಭಾವವಾಗಿರ್ದುದೆ?'' ಎಂದು ಕೇಳಲು ಚೂಚಕನು ಕೈಮುಗಿದು ವಿನಯದಿಂದ:—''ಮಹಾರಾಜನೆ! ಈಗ್ಗೆ ಕೆಲವುಕಾಲದಿಂದಲೂ ನಿನ್ನ ಅನ್ನಪ್ರಭಾವದಿಂದ ಸ್ವಕರ್ಮ ಸ್ವವೃತ್ತಿ ಸ್ವಧರ್ಮಗಳಲ್ಲಿ ನಿರತರಾಗಿ ನಿರುಪಾಧಿಕವಾದ ಸೌಖ್ಯವನ್ನು ಅನುಭವಿಸುತಿರ್ದೆವು. ಆದರೆ ಈಗ್ಗೆ ಕೆಲವುಮಾಸಗಳಿಂದಲೂ ನಿನ್ನ ರಾಜ್ಯದಲ್ಲಿಯೂ ಅನ್ನದಾನವು ತಪ್ಪಿಹೋದುದರಿಂದ, ಅನೇಕದಿನಗಳು ನಿರಶನವ್ರತರಾಗಿರ್ದು ಅಧರ್ಮಕ್ಕೆ ಹೋಗದಂತೆ ಮನಸ್ಸನ್ನು ನಿರೋಧಿಸಿದೆವು; ಆದರೆ ಕ್ಷುತ್‌ಕ್ಷಾಮದಿಂದ ಎಮ್ಮ ಮಕ್ಕಳಲ್ಲಿ ಕೆಲವು ಮೃತಿಯನ್ನೆಯ್ದಿ

ಅವೈತಿ ಮನ್ಯೆ ನ ಸ ಮೃತ್ಯುಮಗ್ರತಃ ಕೃಣೋತಿ ಪಾಪಸ್ಯ ನ ವಾ ದುರಂತತಾಮ್ ।
ಅಹೋ ಬತಾನಾಥತಮಾ ನರಾಧಿಪಾ ವಿಮರ್ಶಮಾನ್ಯಾದ್ಯೆಚನಕ್ಷಮಾ ನ ಯೇ ॥೫೯॥
ವೇಹಸ್ಯೈಕಸ್ಯ ನಾಮಾರ್ಥೇ ಸೋಗಭೂತಸ್ಯ ನಾಶಿನಃ ।
ಇದಂ ಸತ್ವೇಷು ನೈಘೃಣ್ಯಂ ಧಿಗಹೋ! ಬತ ಮೂಢತಾಮ್ ॥೬೦॥

ದುವು; ಉಳಿದಮಕ್ಕಳಿಗೂ ಅದೇ ದುರ್ಗತಿಯು ಪ್ರಾಪ್ತವಾಗುತಿರ್ದು ದನ್ನು ನೋಡಿ ಸಹಿಸಲಾರದೆ, ಅಂತರಾತ್ಮಸಮ್ಮತಿಗೆ ವಿರುದ್ಧವಾಗಿರ್ದರೂ ಈ ಜೋರನೃತ್ತಿಯನ್ನು ಅವಲಂಬಿಸಬೇಕಾದ ನಿರ್ಬಂಧಕ್ಕೆ ಒಳಗಾದೆವು; ಆದಕಾರಣ ಎಮ್ಮ ದೋಷಗಳನ್ನು ಮನ್ನಿಸಿ ಕಾಪಾಡುವ ನಾಗೆಂದು ಬೇಡುವೆವು; ಏಕೆಂದರೆ–

[೬೧. ತಾ:—"ಮಹಾಮಹಿಮನಾದ ನೀನೇ ಬಂಧುಶೂನ್ಯರಾದೆಮಗೆ ಬಂಧುವು; ಮತ್ತು ನಿರ್ಗತಿಕರಾದೆಮಗೆ ನೀನೇ ಗತಿಯೂ ರಕ್ಷಕನೂ ಆಗಿರುವೆ; ಆದಕಾರಣ ಎಮ್ಮ ವಿಷಯದಲ್ಲಿ ನಿನಗೆ ಆವುದು ಯುಕ್ತವಾಗಿ ತೋರುವುದೊ ಅದರಂತೆಯೇ ಎಮ್ಮನು ರಕ್ಷಿಸು!"]

ಎಂದು ಹೇಳಿ ಸರ್ವರೂ ಅಂಜಲಿಬದ್ಧರಾಗಿ ಬೇಡಿಕೊಂಡರು.

ಇದನ್ನು ಕೇಳಿದ ದೇವಸೇನನು ಬೆದರಿದವನಾಗಿ ಆಶ್ಚರ್ಯದಿಂದ:– "ಪ್ರಮಾದ! ಘೋರಪ್ರಮಾದ! ಎನ್ನ ರಾಜ್ಯದಲ್ಲಿಯೂ ಪ್ರಜೆಗಳಿಗೆ ಅನ್ನಾಭಾವವಾಗಿರುವುದೆ? ಹಾಗಾದರೆ ಎನ್ನ ರಾಜ್ಯವೃಕ್ಷದ ಬೇರೇ ಒಣಗಿಹೋಗಲುಪಕ್ರಮಿಸಿದಂತೆ ತೋರುವುದು! ರಾಜ್ಯದಲ್ಲಿ ಅನ್ನಕ್ಕೆ ಅಭಾವವಾದರೆ ಮಹಾಪಾತಕಗಳೆಲ್ಲವೂ ಉಂಟಾಗಿ, ಪ್ರಜೆಗಳೂ ರಾಷ್ಟ್ರವೂ ಕೊನೆಗೆ ರಾಜನಾದ ನಾನೂ ನಾಶವನ್ನೈದಲು ಇದೇ ಕಾರಣವಾಗುವುದು! ನೀತಿಕೋವಿದರು ಹೇಳಿರುವ ಈಮಾತು ಈಗ ಸತ್ಯವೇ ಆಯಿತು–

[೬೨. ತಾ–"ಅನ್ನಕ್ಕೆ ಅಭಾವವಾದರೆ (ಪ್ರಾಣಿಗಳ) ಶರೀರದಲ್ಲಿನ ಸಪ್ತಧಾತುಗಳೂ ಹೇಗೆ ಕ್ಷಯಿಸಿಹೋಗುವುವೋ ಅದರಂತೆಯೇ, ಅನ್ನಕ್ಕೆ ಕೊರತೆಯಾದ ರಾಷ್ಟ್ರ (ವೆಂಬ ದೇಹ)ದಲ್ಲಿನ ಸಪ್ತಾಂಗಗಳೂ ಕ್ಷಿಪ್ರದಲ್ಲಿಯೇ ನಾಶವನ್ನೈದುವುವು"]

ತ್ವಂ ನೋ ಬಂಧುರಬನ್ಧೂನಾಂ ತ್ವಂಗತಿಃ ಶರಣಂ ಚ ನಃ ॥
ಯಥಾ ವೇತ್ಥಿ ಮಹಾಭಾಗ ತಥಾ ನಸ್ತ್ವಾತುಮರ್ಹತಿ ॥೬೧॥

ಅನ್ನಪ್ರಣಾಶೇ ಕ್ಷೀಯಂತೇ ಶರೀರೇ ಸಪ್ತಧಾತವಃ ।
ಅನ್ನಹೀನೇ ತಥಾ ರಾಷ್ಟ್ರೇ ಸಪ್ತಾಂಗಾನ್ಯಚಿರೇಣ ಹಿ ॥೬೨॥

ಮುಖ್ಯವಾಗಿ ಇದು ಎನ್ನ ದೋಷವು!'' ಎಂದು ತನ್ನಲ್ಲಿತಾನೇ ವಿಷಾದಗೊಂಡು, ಬಳಿಕ ದೂತನಮುಖೇನ ಧಾನ್ಯಾಧಿಪತಿಯನ್ನೂ ಕೋಶಾಧಿಪತಿಯನ್ನೂ ಸತ್ರಾಧಿಪತಿಯನ್ನೂ ಕರೆಯಿಸಿ, ಕೋಪದಿಂದ ಅವರುಗಳ ಮುಖವನ್ನು ನೋಡಿದ ಬಳಿಕ ಅವರಮ್ಮ ಕುರಿತು:—''ನಿಮ್ಮಗಳ ಮೌಢ್ಯಕ್ಕೂ ಕಾರ್ಯಾದಕ್ಷತೆಗೂ ಸ್ವಕ್ಷೇಮಚಿಂತನೆಗೂ ಶೋಕಿಸಬೇಕಾಗಿರುವುದು! ನಿಂನಿಮ್ಮ ಮಕ್ಕಳು ಅನ್ನಾಭಾವದಿಂದ ಸಂಕಟಪಡುತಿರ್ದರೆ ಈರೀತಿ ಉಪೇಕ್ಷೆಯನ್ನು ತಳೆಯುತಿರ್ದಿರಾ ? ಅಯ್ಯೋ! ನಿಮ್ಮ ಹಾಳುಸ್ವಕ್ಷೇಮಚಿಂತೆಯೆ! ಧಿಕ್!!'' ಎಂದು ವ್ಯಸನಗೊಂಡಬಳಿಕ ಅವರುಗಳನ್ನು ಕುರಿತು:—''ಒಳ್ಳೆಯದು ! ಆದುದಾಯಿತು, ಈಗಲಾದರೂ ನಾನು ಹೇಳುವುದನ್ನು ಕೇಳಿರಿ—ಧಾನ್ಯಾಗಾರದಲ್ಲಿ ಇರುವ ಧಾನ್ಯಗಳನ್ನು ಅನ್ನಕ್ಕಿಲ್ಲದೆ ಸಂಕಟಪಡುವ ಪ್ರತಿಯೋರ್ವನಿಗೂ ಈದಿನ ಮೊದಲ್ಗೊಂಡು ಸುಭಿಕ್ಷವು ಪ್ರಾಪ್ತವಾಗುವ ವರೆಗೂ ಕೊಡತಕ್ಕುದು, ಮತ್ತು ಪ್ರತಿಯೊಂದು ಸತ್ರದಲ್ಲಿಯೂ ದಿವಾರಾತ್ರಿಗಳಲ್ಲಿಯೂ ಜಾತಿ ನೀತಿ ಕುಲಾದಿಗಳನ್ನೆಣಿಸದೆ ಅಶನಾರ್ಥಿಗಳಿಗೆ ಅವರವರ ತರಗತಿಗನುಸಾರವಾಗಿ ಅನ್ನ ಪಾನಾದಿಗಳಿಂದ ತೃಪ್ತಿಪಡಿಸತಕ್ಕುದು; ಧಾನ್ಯವು ಅಲ್ಲಿಲ್ಲದೇ ಇರ್ದರೆ, ಧಾನ್ಯಾದಿಗಳನ್ನು ಕೂಡಿಸಿಟ್ಟಿರುವವರುಗಳಿಂದ, ಅವರವರ ಸಂಸಾರಕ್ಕೆ ಉಪಯೋಗವಾಗುವಷ್ಟನ್ನು ಬಿಟ್ಟು, ಉಳಿದಿರುವ ಅಂಶವನ್ನು ತಂದು ಕಣಜದಲ್ಲಿ ತುಂಬಿಸತಕ್ಕುದು; ಹಾಗೆ ಅವರು ದುರಾಶೆಯಿಂದ ಸಂಮತಿಸದೇ ಹೋದರೆ, ಅಂಥವರನ್ನು ರಾಜದಂಡನೆಗೆ ಗುರಿಮಾಡತಕ್ಕುದು; ಹಾಗೂ ರಾಜ್ಯದಲ್ಲಿ ಧಾನ್ಯವೇ ಇಲ್ಲದಿರುವ ಪಕ್ಷಕ್ಕೆ, ಸಾಕಾದ ಬೆಲೆಯುನ್ನಿತ್ತು ಅನ್ಯದೇಶದಿಂದ ತರಿಸತಕ್ಕುದು; ಅದಲ್ಲದೆ ಇತಃಪರ ಎಮ್ಮ ರಾಷ್ಟ್ರದಲ್ಲಿ ಬೆಳೆದ ಧಾನ್ಯಗಳಲ್ಲಿ ರಾಷ್ಟ್ರಕ್ಕೆ ಮೂರುವರುಷಗಳಿಗೆ ಸಾಕಾಗುವಷ್ಟನ್ನು ತಪ್ಪದೆ ಶೇಖರಿಸತಕ್ಕುದು; ಮತ್ತು ಈ ಶಾಸನದಂತೆ ಸಮಸ್ತರೂ ಆಚರಿಸತಕ್ಕುದು;ತಪ್ಪಿದರೆ ಕ್ರೂರದಂಡವು ತಪ್ಪದು; ಮತ್ತು ಎಲ್ಲೆ ಸತ್ರಾಧಿಕಾರಿ ಮತ್ತು ಕೋಶಾಧಿಕಾರಿಗಳಿರಾ! ನೀವುಗಳಿದನ್ನು ಲಾ

ಲಿಸಿರಿ–ಈದಿನ ಮೊದಲ್ಗೊಂಡು ಎನ್ನ ಅಪ್ಪಣೆಯಾಗಲಿಲ್ಲವೆಂಬ ಕಾರಣವನ್ನು ಹೇಳದೆ, ರಾಷ್ಟ್ರದ ಪ್ರಜೆಗಳಲ್ಲಿ ಯಾರಿಗೆ ದಾರಿದ್ರ್ಯದೆಸೆಯು ಪ್ರಾಪ್ತವಾಗಿಹುದೋ ಅವರೆಲ್ಲರಿಗೂ ಅಶನವಸನಗಳಿಂದ ತೃಪ್ತಿಪಡಿಸಬೇಕು; ನಿಮ್ಮ ವಶದಲ್ಲಿರುವ ಕೋಶದಲ್ಲಿ ಧನವು ಕಡಿಮೆಯಾಗಿರ್ದರೆ, ಎನ್ನ ಕೋಶದಲ್ಲಿ ಅನರ್ಘ್ಯವಾಗಿರುವುದು; ಅದನ್ನು ಬೇಕಾದರೂ ಉಪಯೋಗಿಸಬಹುದು; ಅನ್ನಾಭಾವವೆಂಬ ಶಬ್ದವು ಎನ್ನ ರಾಷ್ಟ್ರದಲ್ಲಿಯೇ ಇರಕೂಡದು; ಹಾಗೆ ಇನ್ನೂ ದ್ರವ್ಯವು ಸಾಲದೆಹೋದರೆ ರಾಜಕರ ಕೇಳೀ ಭೋಗಾರ್ಥಗಳಿಗೆ ಉಪಯೋಗಿಸುತಿರ್ದ ದ್ರವ್ಯವನ್ನೆಲ್ಲ ಆಕಾರ್ಯಕ್ಕುಪಯೋಗಿಸದೆ ನಿಲ್ಲಿಸಿಬಿಟ್ಟು, ಪ್ರಜೆಗಳೆಲ್ಲರೂ ಸಂತುಷ್ಟರಾಗುವವರೆಗೂ ಇದಕ್ಕೇ ಉಪಯೋಗಿಸತಕ್ಕುದು; ಮತ್ತು ಎನ್ನ ಅಧಿಕಾರಿಗಳಾದ ನೀವೆಲ್ಲರೂ ಮತ್ತು ಇತರ ಧನಿಕರೂ ಈಕಾಲದಲ್ಲಿ ನಿಮಿಮ್ಮ ಔದಾರ್ಯವನ್ನು ಪ್ರಕಾಶಗೊಳಿಸಬೇಕು; ಈವಿಷಯದಲ್ಲಿ ಲೋಪವೇನಾದರೂ ಪ್ರಾಪ್ತವಾದರೆ, ಮುಖ್ಯಮಂತ್ರಿ ಮೊದಲ್ಗೊಂಡು ಸಮಸ್ತ ಅಧಿಕಾರಿಗಳೂ ರಾಜದಂಡನೆಗೆ ಈಡಾಗುವಿರಿ; ಈ ದ್ವಿಜರಿಗೂ ವಸತಿಯನ್ನಿತ್ತು ಅಶನವಸನಗಳಿಂದ ತೃಪ್ತಿಪಡಿಸತಕ್ಕುದು." ಎಂದು ಆಜ್ಞೆಮಾಡಿದ ಒಳಿಕ ಜೂಜಕನೇ ಮುಂತಾದ ಚೋರರನ್ನು ಕುರಿತು:—"ಇದೋ ನಿಮಗೆ ಸಕಲೋಪಸ್ಕರಗಳನ್ನೂ ಒದಗಿಸಿಕೊಡುವಂತೆ ಆಜ್ಞೆಮಾಡಿರುವೆನು; ಇತಃಪರ ನೀವುಗಳೀ ನೀಚವೃತ್ತಿಯನ್ನು ತ್ಯಜಿಸಿ, ಸ್ವಧರ್ಮ ಸ್ವವೃತ್ತಿಗಳಲ್ಲಿ ನಿರತರಾಗಿರತಕ್ಕುದು; ಅದಲ್ಲದೆ ರಾಜದಂಡವು ದುಷ್ಕರ್ಮಿಗಳ ಕುಲ–ಗೋತ್ರ–ಜಾತಿ–ವರ್ಣ–ಅಧಿಕಾರ–ಐಶ್ವರ್ಯ–ಬಂಧುತ್ವ ಮುಂತಾದುವೊಂದನ್ನೂ ಗಣಿಸತಕ್ಕುದಲ್ಲವೆಂಬಂಶವನ್ನು ನೀವುಗಳೆಲ್ಲರೂ ಚೆನ್ನಾಗಿ ಜ್ಞಾಪಕದಲ್ಲಿಡತಕ್ಕುದು; ಈವಿಷಯಗಳನ್ನೆಲ್ಲ ಘೋಷಣಾದ್ವಾರಾ ರಾಷ್ಟ್ರದವರೆಲ್ಲರಿಗೂ ತಿಳಿಸತಕ್ಕುದು; ಇನ್ನು ನೀವುಗಳೆಲ್ಲರೂ ಸ್ವಕಾರ್ಯಗಳನ್ನು ಕುರಿತು ತೆರಳತಕ್ಕುದು." ಎಂದು ಆಜ್ಞಾಪಿಸಿದ ಒಳಿಕ ಎಲ್ಲರೂ ಹೊರಟುಹೋಗಲು ತಾನೂ ಹೊರಟುಹೋದನು.

ಮೂಗನೆಯ ಸಂಧಿ.

THE DISPLAY OF DISCRETION.

ವಿವೇಕವಿಸ್ತಾರ

ಇತ್ತಲಾ ಉನ್ಮಾದಿನಿಯು ಪೂರ್ವದಂತೆಯೇ ನಾರುಮಡಿಯನ್ನುಟ್ಟು ಧರ್ಮದೇವತೆಯ ವಂದಿರದ ಬಳಿಯಲ್ಲಿ ಓರ್ವಳೇ ಕುಳಿತು, ಚಿಂತೆಯಿಂದ ನಿಟ್ಟುಸುರುಬಿಡುತ್ತ, ಸ್ವಗತವಾಗಿ:—"ಅಯ್ಯೋ! ಮಹಾರಾಜನನ್ನು ನೋಡಿದಾರಭ್ಯ ಎನ್ನ ವ್ಯಥೆಯು ಇಮ್ಮಡಿಯಾದುದು; ದಿನಗಳಾದರೊ ಅನೇಕವಾಗಿ ಕಳೆದುಹೋದುವು; ಎನ್ನ ವಲ್ಲಭನಿಗಂತೂ ಎನ್ನಮೇಲೆ ಇನ್ನೂ ದಯೆಯುಂಟಾಗಲಿಲ್ಲವು; ರಾಜರು ಬಹುಕಾರ್ಯವ್ಯಾಸಂಗಿಗಳು; ಆದುದರಿಂದಲೇ ಅವನು ಎನ್ನನ್ನು ಶುದ್ಧಾಂಗವಾಗಿ ಮರೆತಂತೆ ತೋರುವುದು; ಇನ್ನು ಅಭಿಪಾರಗನು ಬಂದುಬಿಟ್ಟರೇನು ಗತಿ?" ಎಂದು ಮಾತನಾಡಿಕೊಳ್ಳುತಿರ್ದ ಸಮಯಕ್ಕೆ ಸರಿಯಾಗಿ, ಕಿರೀಟವತ್ಸನು ಅಭಿಪಾರಗನನ್ನು ಕರೆತಂದು, ಉನ್ಮಾದಿನಿಗೆ ಕಾಣಿಸದಂತೆ ದೂರದಲ್ಲಿಯೇ ನಿಂದು ಅವನನ್ನು ಕುರಿತು:—"ಅಭಿಪಾರಗನೇ! ಇದೋ ನಿನ್ನ ಪತ್ನಿಯನ್ನು ನೋಡು; ಇದುವರೆಗೂ ಅವಳನ್ನು ಮಾನವಾಗಿ ಕಾಪಾಡಿದೆನು; ನೀನಿನ್ನು ಅವಳನ್ನು ಒಡಂಬಡಿಸಿ ನಿನ್ನ ಮನೆಗೆ ಕರೆದುಕೊಂಡುಹೋಗಬಹು. ಎನ್ನ ಅಭ್ಯಂತರವೇನೂ ಇಲ್ಲವು" ಎಂದು ಹೇಳಿ ಉನ್ಮಾದಿನಿಯನ್ನು ತೋರಿಸಿ ತಾನತ್ತ ಹೊರಟುಹೋದನು.

ಬಳಿಕ ಈ ಮಾತುಗಳ ಶಬ್ದವನ್ನು ಕೇಳಿದ ಉನ್ಮಾದಿನಿಯು ಇತ್ತ ತಿರುಗಿ ಅಭಿಪಾರಗನನ್ನು ನೋಡಿ ಭಯಗೊಂಡು ತನ್ನಲ್ಲಿತಾನೇ:—"ಅಯ್ಯೋ! ಇನ್ನೇನುಗತಿ? ಇವನೇ ಅಭಿಪಾರಗನಾಗಿರಬೇಕಲ್ಲವೆ? ಸ್ಮರಿಸಿದಂತೆಯೇ ಬಂದುಬಿಟ್ಟನು; ಈಗೇನು ಮಾಡಲಿ? ಇನ್ನಾವ ಉಪಾಯವನ್ನೂ ಕಾಣೆನಲ್ಲ!" ಎಂದು ಗಡಗಡನೆ ನಡುಗುತ್ತ ದುಃವಿಲಾಪವನ್ನಾರಂಭಿಸಿದುದನ್ನು ನೋಡಿದ ಅಭಿಪಾರಗನು, ವ್ಯಸನ

ಗೊಂಡವನಾಗಿ ತನ್ನಲ್ಲಿತಾನೇ:—" ಈಕೆಯನ್ನು ನೋಡಿದಮಾತ್ರದಿಂದ ಲೇ ಎನಗೆ ಈಕೆಯ ವಿಷಯದಲ್ಲಿ ಕನಿಕರವೂ ಗೌರವವೂ ಉಂಟಾಗು ವುವು; ಪೂರ್ವವಿಷಯಗಳೊಂದೂ ಎನಗೆ ತಿಳಿಯದೆಂದು ಭಾವಿಸಿಕೊಂಡು, ಈಗ ನಾನು ಬಂದಿರುವುದರಿಂದ ಮತ್ತಾವಕಾರಣವನ್ನು ಹೇಳುವುದಕ್ಕೂ ಅವಕಾಶವಿಲ್ಲದುದರಿಂದ, ತನ್ನ ಪಾತಿವ್ರತ್ಯಕ್ಕೆ ಭಂಗವುಂಟಾದೀತೆಂಬ ಶಂಕೆಯಿಂದ ಈರೀತಿ ಗಡಗಡನೆ ನಡುಗುತ್ತಿಹಳು; ನಿಜವಾಗಿಯೂ ಇವಳು ಮಹಾಪತಿವ್ರತೆಯೇ ಆಹುದು! ರಾಜನಾದರೋ ಇವಳನ್ನು ಸಂಪೂರ್ಣವಾಗಿ ಧಿಕ್ಕರಿಸಿರುವನು; ಇವಳಾದರೋ ರಾಜನನ್ನೇ ಪತಿ ಯೆಂದು ಭಾವಿಸಿ ಇನ್ನೂ ಭ್ರಾಂತಿಪಡುತ್ತಿಹಳು; ಹೀಗಿರುವುದರಿಂದ ನಾನೀಕೆಯನ್ನು ಮಾತೆಯೆಂದೇ ಭಾವಿಸಬೇಕಾಗಿಹುದು; ಏಕೆಂದರೆ, ಎನ ಗಿಂತಲೂ ಮುಂಚೆ ಈಕೆಗೂ ಮಹಾರಾಜನಿಗೂ ಪರಸ್ಪರಾನುರಾಗವು ಉಂಟಾಗಿರ್ದುದು; ಅದಲ್ಲದೆ ರಾಜನು ಧಿಕ್ಕರಿಸಿರ್ದರೂ ಈಗಲೂ ಅವ ನನ್ನೇ ಹಂಬಲಿಸುತ್ತಿರುವುದರಿಂದ ಈಕೆಗೆ ಎನ್ನಲ್ಲಿ ಈಷತ್ತಾದರೂ ಅನು ರಾಗವಿಲ್ಲವೆಂದು ಸ್ಪಷ್ಟವಾಯಿತು; ಒಂದುವೇಳೆ ನಾನೀಕೆಯನ್ನು ಬಲಾ ತ್ಕರಿಸಿ ಎನ್ನ ಸ್ವಾಧೀನಪಡಿಸಿಕೊಂಡರೂ, ಅಲ್ಲಿಗೂ ಅನರ್ಥವು ಪ್ರಾಪ್ತ ವಾಗುವುದೇ ಹೊರತು ದಾಂಪತ್ಯಾನುಕೂಲವೆಂದಿಗೂ ಲಭಿಸದು; ಇದ ರಿಂದ ನಾನು ಅನೇಕವಿಧವಾದ ದುಃಖವನ್ನೂ ನಷ್ಟವನ್ನೂ ಹೊಂದು ವೆನೇ ಹೊರತು ಅವಸುಖವೂ ಸರ್ವಥಾ ಲಭಿಸದು; ಆದಕಾರಣ ಇವಳ ಪಾತಿವ್ರತ್ಯಕ್ಕೆ ಭಂಗವನ್ನುಂಟುಮಾಡದೆ ಮಾತೃಭಾವನೆಯನ್ನು ತಳೆದು, ರಾಜನಲ್ಲಿ ನಡೆದ ಸಂಭಾಷಣೆಯನ್ನು ತಿಳುಪಿ, ಅವಳನ್ನೇ ರಾಜನಲ್ಲಿಗೆ ಕಳುಹುವೆನು." ಎಂದು ನಿರ್ಧಾರಮಾಡಿಕೊಂಡ ಬಳಿಕ ಅವಳನ್ನು ಕುರಿತು ಭಕ್ತಿಗೌರವಗಳಿಂದ:—" ಎಲೌ ಸಾಧ್ವಿಯೆ! ಅಂಜಬೇಡ; ನಿನ್ನ ಅಂತರಂಗಚಿಂತೆಯನ್ನು ನಾನು ಬಲ್ಲೆನು." ಎಂದು ಹೇಳಲು ಊರ್ವಾದಿ ನಿಯು ತನ್ನ ರಹಸ್ಯವೆಲ್ಲವೂ ಇವನಿಗೆ ತಿಳಿದು ಬಂದುದರಿಂದ ಇವನೀ ರೀತಿ ಹೇಳುವನೆಂದು ತಪ್ಪಾಗಿ ತಿಳಿದುಕೊಂಡು ವಿಕಲ್ಪದಿಂದ:—"ಆರ್ಯ್ಯ!

ಇನ್ನೇನುಗತಿ? ಹಾ! ನಾನು ಕೆಟ್ಟೆನು!'' ಎಂದು ತನ್ನಲ್ಲಿ ತಾನೇ ಮಾತ ನಾಡಿಕೊಂಡು ಹಾಗೆಯೇ ಬದ್ದು ವಿಕಲ್ಪಗೊಳ್ಳಲು, ಅಭಿಪಾರಗನು ಬೆಚ್ಚಿ ತನ್ನಲ್ಲಿತಾನೇ:—'' ನಾನಿನ್ನು ಸುಮ್ಮನಿರ್ದರೆ ಪ್ರಮಾದವಾಗು ವುದು; ಆದುದರಿಂದ ಇವಳನ್ನು ಮಾತೆಯೆಂದೇ ಸಂಭೋಧಿಸುವೆನು.'' ಎಂದು ನಿಶ್ಚಯಿಸಿ ಆಕೆಯನ್ನು ಕುರಿತು ಗೌರವದಿಂದ:—'' ಎಲೌಮಾತೆ! ನೀನಂಜಬೇಡ; ನಿನ್ನ ಪಾತಿವ್ರತ್ಯಕ್ಕೆ ಭಂಗವೇದಿಗೂ ಉಂಟಾಗದು, ಏಳು; ನಡೆದ ವೃತ್ತಾಂತವನ್ನು ಹೇಳುವೆನು.'' ಎಂದು ಕೂಗಿಹೇಳಲು ಉನ್ಮಾದಿನಿಯು ಪರಮವಿಸ್ಮಯಗೊಂಡು ಸ್ವಗತವಾಗಿ—'' ಇದೇನು? ಈತನು ಮಾತೆ ಎಂದು ಸಂಬೋಧಿಸದನು! ಎನ್ನ ಧರ್ಮವು ಇವನ ಮನ ವನ್ನು ಪ್ರವೇಶಿಸಿ ಈರೀತಿ ಮಾತೃಭಾವನೆಯನ್ನುಂಟುಮಾಡಿತೊ?'' ಇಲ್ಲ ವೆ, ರಾಜನನ್ನು ನಾನು ಕಾಮಿಸಿರುವುದು ಇವನಿಗೇನಾದರೂ ತಿಳಿದಿರ ಬಹುದೊ? ಒಳ್ಳೆಯದು! ವಿಚಾರಿಸಿ ತಿಳಿದುಕೊಳ್ವೆನು.'' ಎಂದು ನಿಶ್ಚಯಿಸಿ ಅಭಿಪಾರಗನನ್ನು ಕುರಿತು ವಿನಯದಿಂದ—'' ಸ್ವಾಮೀ! ಇದೇನು ಈ ರೀತಿ ಸಂಬೋಧಿಸಿದಿರಿ?'' ಎಂದ ಕೇಳಲು, ಅಭಿಪಾರಗನು ವಿನಯ ದಿಂದ:—''ಎಲೌ ಸಾಧ್ವಿಯೆ! ನಿನಗೂ ಮಹಾರಾಜನಿಗೂ ಇರುವ ಪೂರ್ವಸಂಬಂಧವನ್ನೂ ಈಚೆಗೆ ನಡೆದ ವರ್ತಮಾನಗಳನ್ನೂ ಚೆನ್ನಾ ಗಿಯೂ ತಿಳಿದೆನು; ಮತ್ತು ನಿನ್ನನ್ನು ಪ್ರತಿಗ್ರಹಿಸೆಂದು ನಾನೇ ಅನೇಕವಿಧ ವಾಗಿ ಮಹಾರಾಜನನ್ನು ಪ್ರಾರ್ಥಿಸಿದೆನು; ಆದರೂ ಅವನು ಸಂಮತಿಸ ಲಿಲ್ಲವು; ನೀನು ಪೂರ್ವದಿಂದಲೂ ಮಹಾರಾಜನನ್ನೇ ಪತಿಯನ್ನಾಗಿ ವರಿಸಿದ್ದು, ಈಗಲೂ ಅದೇ ಹಂಬಲಿನಲ್ಲಿರುವುದರಿಂದ, ನಾನು ನಿನ್ನನ್ನು ಮಾತೆಯೆಂದು ಭಾವಿಸಿ ಈರೀತಿ ಸಂಬೋಧಿಸಿದೆನು; ನಿನಗೆ ಇನ್ನೂ ಮಹಾ ರಾಜನಲ್ಲಿಯೇ ಅಭಿಲಾಷೆಯು ಇರುವ ಪಕ್ಷಕ್ಕೆ, ನೀನೇ ಹೋಗಿ ಅವನನ್ನು ಒಡಂಬಡಿಸಿ, ಅವನೊಡನೆ ಸಂಸಾರಸುಖವನ್ನನುಭವಿಸು; ನಾನಿದೋ ಹೊ ರಡುವೆನು.'' ಎಂದುಹೇಳಿ ನಮಸ್ಕರಿಸಲು ಉನ್ಮಾದಿನಿಯು ಸಂತುಷ್ಟಳಾಗಿ ಸ್ವಾಮೀ! ನೀವು ಎನ್ನ ವ್ರತಕ್ಕೆ ಅವಕಾಶವನ್ನಿತ್ತು ಎನ್ನ ಪಾತಿವ್ರತ್ಯ

ವನ್ನು ಕಾಪಾಡಿದಿರಾದುದರಿಂದ, ನೀವೆನಗೆ ತಂದೆಯೇ ಆಹುದು; ನಿಮ್ಮ ಧರ್ಮಬುದ್ಧಿಗೂ ಕರುಣೆಗೂ ವಂದನೆ.'' ಎಂದು ನಮಸ್ಕರಿಸಲು ''ಅಭಿಪಾರಗನು:—ಸುಮಂಗಲಿಯಾಗು.'' ಎಂದು ಹೇಳಿ ಅಲ್ಲಿಂದ ಹೊರಟುಹೋದನು.

ಬಳಿಕ ಉನ್ಮಾದಿನಿಯು ರಾಜನು ಧಿಕ್ಕರಿಸಿದನೆಂದು ಹೇಳಿದು ದನ್ನು ಸ್ಮರಿಸಿಕೊಂಡು ಶೋಕಗೊಂಡವಳಾಗಿ, ತನ್ನಲ್ಲಿತಾನೇ:—''ಹಾ ವಿಧಿಯೇ! ಎನ್ನ ಗತಿಯು ಇಂತಾಯಿತೇ? ಒಳ್ಳೆಯದು! ಇನ್ನೊಂದುವೇಳೆ ಮಹಾರಾಜನಲ್ಲಿಗೆ ನಾನೇ ಹೋಗಿ, ಎನ್ನ ಅದೃಷ್ಟದ ಪರಿಣಾಮವನ್ನು ಪರೀಕ್ಷಿಸುವೆನು; ಅಲ್ಲಿಗೂ ಎನ್ನ ಮನೋರಥವು ಸಫಲವಾಗದೇಹೋದರೆ ದುಃಖಮಯವಾದೀಜೀವಿತವನ್ನು ಮೃತ್ಯುವಿಗೆ ವಶಮಾಡಿ ಪರಲೋಕವಲ್ಲಿಯಾದರೂ ಎನ್ನ ಪತಿಯನ್ನು ಸೇರುವೆನು.'' ಎಂದು ಮಾತನಾಡಿಕೊಂಡು ಬಳಿಕ, ಮಹಾರಾಜನನ್ನು ಕುರಿತು ಆತುರವಾಗಿಹೊರಟು ಹೋದಳು.

ನಾಲ್ಕನೆಯ ಸಂಧಿ.

NO LUST CAN PIERCE A SOUND HEART.

ಇತ್ತಲಾ ದೇವಸೇನಮಹಾರಾಜನು ತನ್ನ ಕೇಳಿಕೋದ್ಯಾನಕ್ಕೆ ಒರ್ವನೇ ಪ್ರವೇಶಿಸಿ ಪರಮಹರ್ಷದಿಂದ ತನ್ನಲ್ಲಿತಾನೆ ಈರೀತಿ ಮಾತನಾಡಿಕೊಂಡನು:—'' ನಾನೀ ಉದ್ಯಾನಕ್ಕೆ ಬಂದು ಬಹುದಿನಗಳಾದುವು. ಇದುವರೆಗೂ ಎನ್ನ ರಾಜ್ಯದಲ್ಲಿ ಪ್ರಜೋಪದ್ರವಗಳುಂಟಾಗಿರ್ದುದರಿಂದ, ಅದನ್ನು ಶಮನಮಾಡುವ ಕಾರ್ಯದಲ್ಲಿ ನಿರತನಾಗಿ, ಇದನ್ನು ಶುದ್ಧಾಂಗವಾಗಿ ಮರೆತುಬಿಟ್ಟಿರ್ದೆನು; ಒಳ್ಳೆಯದು! ವನಂದಕ್ಕೆ ಹೋಗಿ ಇದರ ಇರುವಿಕೆಯನ್ನು ಪರೀಕ್ಷಿಸಿ ನೋಡುವೆನು.'' ಎಂದು ಸ್ವಲ್ಪ ಮುಂದಕ್ಕೆ ಬಂದು, ಆಗತಾನೇ ಪ್ರಾಪ್ತವಾಗಿರ್ದ ಮಾಧವಪ್ರಭಾವ

ವನ್ನು ನೋಡಿ, ಪರಮಹರ್ಷಿತನಾಗಿ:—" ಧರ್ಮಹನನ ದೋಷದಿಂದ ಎನ್ನ ರಾಜ್ಯೋದ್ಯಾನದಲ್ಲಿ ಪ್ರಜಾವೃಕ್ಷಗಳಿಗೆ ದಾರಿದ್ರ್ಯತಪವುಂಟಾಗಿ, ಗುಣಮಾರ್ದವವೆಲ್ಲ ಶೋಷಿಸಿಹೋಗಿರ್ದುದು; ಆದರೀಗ ಎಮ್ಮ ಭಕ್ತಿ ಗೌರವಗಳಿಂದೊಡಗೂಡಿದ ಆರಾಧನೆಯಿಂದ ಸಂತುಷ್ಟವಾದ ಆ ಸದ್ಧರ್ಮವು ತನ್ನ ಜಮೂಪತಿಯಾದ ರಾಮನನ್ನು(ಮುಂಗಾರುಮಳೆಯನ್ನು) ಕುರಿತು ಸರಿಯಾದ ಋತುಕಾಲವನ್ನರಿತು ಭೂಮಿಯನ್ನು ಪ್ರವೇಶಿಸುವಂತೆ ಜ್ಞಾಪಿಸಿದುದರಿಂದ ಪ್ರಜಾವೃಕ್ಷಗಳೆಲ್ಲವೂ ಜೀವನ (ಅನ್ನಾದ್ಯಾಹಾರ ಮತ್ತು ನೀರು) ಬಾಹುಳ್ಯದಿಂದ ಸಂತುಷ್ಟಿಯನ್ನು ಪಡೆದು, ಎಂದಿನಂತೆಯೇ ಸಂಪೂರ್ಣ ಗುಣಪರಿಪಾಕವನ್ನು ಹೊಂದಿ, ಸ್ವಕರ್ಮಗಳೊಳಾಸಕ್ತಿಯನ್ನು ಪಡೆಯಲಾಗಿ, ಎಲ್ಲೆಲ್ಲಿ ನೋಡಿದರೂ ಫಲಲಾಭಗಳುಂಟಾಗುತ್ತಿಹವು; ಆದರಂತೆಯೇ ಈಗಲೀಉದ್ಯಾನವು ನೇತ್ರಕ್ಕೆ ಹರ್ಷವನ್ನೂ ಮನಕ್ಕೆ ಆನಂದವನ್ನೂ ಉಂಟುಮಾಡುತ್ತಿಹುದು; ಇದರಂತೆಯೇ ಅಲ್ಲಿ ಕಾಣುವ ಉದ್ಯಾನಗಳನ್ನೂ ನೋಡುವೆನು." ಎಂದು ನಿಂದುನೋಡಿ! ಪರಮಹರ್ಷದಿಂದ—

[ತಾ:—(೫೨–೫೮) ಆಃ! (ನರ್ತಕಿಯತೆಸೆವ) ವಸಂತ ಲಕ್ಷ್ಮಿಯು,ಚಿತ್ರವಿಚಿತ್ರವಾದ ವಸ್ತ್ರಗಳನ್ನುಟ್ಟು ರಂಜಿಸುವಳೋ ಎನ್ನುವಂತೆಸೆವ ಅನೇಕವಿಧವಾದ ವೂಗೊಂಜಲುಗಳಿಂದಲೂ, (ನಟವಿಟರಂತೆ)ಶಬ್ದಮಾಧುರ್ಯವನ್ನುಂಟುಮಾಡುವ ಕೋಕಿಲೆಗಳಿಂದಲೂ ಮತ್ತು ಗಂಡುನವಿಲ್ಗಳಿಂದಲೂ, ತಾವರೆನೊದಲಾದ ಜಲವುಷ್ಪಗಳಿಂದ ನಿಬಿಡೀಕೃತವಾದ ಜಲಾಶಯಗಳಿಂದಲೂ, ರಂಗಪ್ರದೇಶದಲ್ಲಿ ಹಾಸಿರುವ ಪಚ್ಚೆಗಂಬಳಿಗಳಂತೆಸೆವ ಈಗತಾನೇ ಚಿಗುರಿರುವ ಗರಿಕೇ ಹುಲ್ಲುಗಳ ತಾಣದಿಂದಲೂ, ಗಾಯಕ

ವಿಚಿತ್ರಪುಷ್ಪಸ್ತಬಕೋಜ್ಜ್ವಲಾನಿ ಕೃತಚ್ಛದಾನೀವ ವಸಂತಲಕ್ಷ್ಮ್ಯಾಃ ।
ವಾಚಾಲಪುಂಸ್ಕೋಕಿಲಬರ್ಹಿಣಾನಿ ಸರೋರುಹಾಕೀರ್ಣಜಲಾಶಯಾನಿ ॥೬೩॥
ಸಮುದ್ಭವತ್ಕೋಮಲಶಾದ್ವಲಾನಿ ವನಾನಿ ಮತ್ತಭ್ರಮರಾರುತಾನಿ ।
ಅಕ್ರೀಡಭೂತಾನಿ ಮನೋಭವಸ್ಯ ದ್ರಷ್ಟುಂ ಭವತ್ಯೇವ ಮನಃಪ್ರಹರ್ಷಃ ॥೬೪॥

ರಂತೆಸೆವ ಮದಿಸಿದ ಭ್ರಮರಗಳ ಝೇಂಕಾರದಿಂದಲೂ ಕೂಡಿ, ಆ ಮನ್ಮಥನ ಕ್ರೀಡಾಪ್ರದೇಶಗಳೋ ಎನ್ನುವಂತೆ ಈ ವನಪ್ರದೇಶಗಳು ನೋಟಕ್ಕೂ ಮನಸ್ಸಿಗೂ ಆನಂದವನ್ನುಂಟುಮಾಡುವುವು! ''.]

ಎಂದು ವರ್ಣಿಸಿದ ಬಳಿಕ, ಅಲ್ಲಿರ್ದೊಂದು ಸರೋವರದ ತಟದಲ್ಲಿ ಅನುಗೊಳಿಸಿರ್ದ ಸ್ಫಟಿಕಾಸನದಲ್ಲಿ ಕುಳಿತು ಕೊಂಡನು.

ಆಕಾಲಕ್ಕೆ ಸರಿಯಾಗಿ ಉನ್ಮಾದಿನಿಯು ತನ್ನ ಮುಖದಿಂದ ಪದ್ಮವನ್ನೂ, ನೇತ್ರಗಳಿಂದ ಕೆನ್ನೈದಿಲನ್ನೂ, ತಾರಕೆಗಳಿಂದ ಭ್ರಮರೀಯುಗವನ್ನೂ, ಭುಜಯಗ್ಮದಿಂದ ನೃಣಾಳವನ್ನೂ, ಉರೋಜಗಳಿಂದ ಕೋಕಯುಗ್ಮವನ್ನೂ, ಅಲಕದಿಂದ ಸೋಪಾನಪಂಗ್ತಿಯನ್ನೂ, ಸುಖ್ಯಿಂದ ಸೌರಭವನ್ನೂ, ಆನಂದಾಶ್ರುವಿನಿಂದ ಮಕರಂದವನ್ನೂ, ಇವುಗಳಿಂದೊಡಗೂಡಿದ ತನ್ನ ದಿವ್ಯವಿಗ್ರಹದಿಂದ ಸರೋವರವನ್ನೂ ಹಾಸ್ಯಗೊಳಿಸುತ್ತ–ರಾಜನ ಅಕ್ಷಿಗಳಿಗೆ ಜಲತ್ಸರೋವರ ಭ್ರಾನ್ತಿಯನ್ನುಂಟುಮಾಡಿ–ಮುಂದುವರಿದು ಬಂದು ಆಸರೋವರದ ತೀರದಲ್ಲಿ ಪ್ರತಿಸರೋವರವೋ ಎಂಬಂತೆ ನಿಂದು, ರಾಜನ ನೇತ್ರಭ್ರಮರಕ್ಕೆ ವಿಭ್ರಮವನ್ನೂ ಮನಸ್ಸಿಗೆ ಸಂಭ್ರಮವನ್ನೂ ಉಂಟುಮಾಡಿದಳು.

ಇವಳನ್ನೀಕ್ಷಿಸಿದ ದೇವಸೇನನು ಪರಮವಿಸ್ಮಿತನಾಗಿತನ್ನಲ್ಲಿತಾನೇ:– ''ಇದಾರೀ ಸುಂದರಿಯು? ಈಕೆಯನ್ನೂ ಇವಳುಟ್ಟಿರುವ ನಾರುಮಡಿಯನ್ನೂ ನೋಡಿದರೆ, ನಾನು ನೋಡಿದ ಆ ಉನ್ಮಾದಯನ್ತ್ಯಂತಿಯೇ ತೋರುವಳು! ಆದರೂ ವಿಚಾರಿಸುವುದು ಉತ್ತಮ.'' ಎಂದು ಮಾತನಾಡಿಕೊಂಡ ಬಳಿಕ ಉನ್ಮಾದಿನಿಯನ್ನು ಕುರಿತು ವಿನಯಗಾಂಭೀರ್ಯದಿಂದ:–''ಎಲೌ ಮಂಗಳಾಂಗಿ! ನೀನಾರು?'' ಎಂದು ಕೇಳಲು ಉನ್ಮಾದಯನ್ತ್ಯಿಯು ಭಕ್ತಿಗೌರವಗಳಿಂದ ನಮಸ್ಕರಿಸಿ—''ಪ್ರಾಣೇಶನೆ! ನಿನ್ನ ಮನೋವಲ್ಲಭೆಯಾದ ಉನ್ಮಾದಿನಿ ಎಂಬುವದನ್ನರಿಯೆಯಾ?'' ಎಂದು ಹೇಳಲು ದೇವಸೇನನು ಬೆಚ್ಚಿದವನಾಗಿ ಖಿನ್ನತೆಯೊಡನೆ ತನ್ನಲ್ಲಿತಾನೇ:—

" ಪುನಶ್ಚ ಎನಗೆ ಸಂಕಟವು ಪ್ರಾಪ್ತವಾಯಿತೆ? " ಎಂದು ಹೇಳಿದಬಳಿಕ ಅವಳನ್ನು ಕುರಿತು ವಿನಯದಿಂದ—

[೬೫ ತಾ:—" ಎಲೌ ಮಗಳೆ! ಎನ್ನ ಭೃತ್ಯನ ಮಡದಿಯಾದ ನಿನ್ನನ್ನು ನಾನು ಒಲ್ಲೆನು, "]

ಇದನ್ನು ಕೇಳಿದ ಉನ್ಮಾದಿನಿಯು, ವಿಷಾದದಿಂದ—" ಮಂಗಳಾಂಗನೆ, ಹಾಗೆನ್ನದಿರು; ಏಕೆಂದರೆ—

[ತಾ:—" ನಾನು ನಿನ್ನ ಭೃತ್ಯನ ಮಡದಿಯಲ್ಲವು; ಸತ್ಯವಾಗಿಯೂ ನಾನು ನಿನ್ನ ಭಕ್ತಿಯಲ್ಲಿಯೇ ನಿರತಳಾಗಿಹೆನು.]

ಇದನ್ನು ಕೇಳಿದ ದೇವಸೇನನು, ಜುಗುಪ್ಸೆಯಿಂದ,—

[೬೬. ತಾ:—" ನೀನೆಲ್ಲಿರುವುದು ಯೋಗ್ಯವೊ ಅಂತಹ ನಿನ್ನ (ಗಂಡನ) ಮನೆಗೆ ಹೋಗು. "]

ಬಳಿಕ ಉನ್ಮಾದಿನಿಯು ನಗುತ್ತ—

[ತಾ:—" (ಎನ್ನ ಗಂಡನಾದ) ನೀನು ಇಲ್ಲಿ (ಓರ್ವನೇ) ರಮಿಸುತ್ತಿರುವಲ್ಲಿ, ಎನಗೆ ಮನೆಯಲ್ಲಿ ಕೆಲಸವೇನು]

ಇದನ್ನು ಕೇಳಿದ ದೇವಸೇನನು ಚಿಂತಾಕ್ರಾಂತನಾಗಿ:—"ಅಯ್ಯೋ! ವಿಧಿಯೆ! ಎನ್ನನ್ನು ಇವಳು ಗಂಡನೆಂದೇ ಭ್ರಾಂತಿಪಡುವಳಲ್ಲ! ಎನ್ನಲ್ಲೀ ಕೆಗೆ ಉಂಟಾಗಿರುವ ಅನುರಾಗವೂ ಮೋಹವೂ ಇವಳ ವಿವೇಕವನ್ನು ಹಾಳುಮಾಡಿ, ನಾನು ಹೇಳುವ ಶಬ್ದಗಳಿಗೆಲ್ಲ ವಿಪರೀತಾರ್ಥವನ್ನು ಕಲ್ಪಿಸುವಂತೆ ಮಾಡಿರುವುದಲ್ಲ! ನಾನೀಗೇನು ಮಾಡಲಿ? " ಎಂದು ಯೋಚಿಸಿದ ಬಳಿಕ ಅವಳನ್ನು ಕುರಿತು:—" ಎಲೆ ಮಗಳೆ! " ಎನ್ನುವುದರೊಳಗಾಗಿ ಉನ್ಮಾದಿನಿಯು ಸಂದೇಪದಿಂದ:—" ಪ್ರಾಣೇಶನೆ!

ಶ್ಲೋ॥ ಜಾನಾಮಿ ತ್ವಾಮಹಂ ವತ್ಸೆ ಮದ್ಭೃತ್ಯಸಹಧರ್ಮಿಣೀಂ।
ತ್ವದ್ಭೃತ್ಯಭಾರ್ಯಾ ನೈವಾಹಂ ತ್ವದ್ಭಕ್ತಿನಿರತಾ ಧ್ರುವಮ್ ॥೬೫॥
ಗಚ್ಛ ತಾವತ್ಸ್ವಭವನಂ ಯತ್ರತ್ವಂ ಸ್ಥಾತುಮರ್ಹಸಿ।
ಕರೋಮಿ ಭವನೇ ಕಿಂ ನು ರಮತೇ ತ್ವತ್ಸ ಭವಾನ್ಯದಿ ॥೬೬॥

ನಿನಗೆ ಮಗಳಿಲ್ಲಿಹಳು ? ನೀನೆನ್ನನ್ನು ವಿವಾಹಮಾಡಿಕೊಂಡರಲ್ಲವೆ ಮಗಳೂ ಮಗನೂ ಜನಿಸುವರು ? ವಿವಾಹವೇ ಇಲ್ಲದಿರುವಾಗ ಮಗಳೆಂದು ಆರನ್ನು ಸಂಭೋಧಿಸುವೆ ? ಇಲ್ಲವೆ ಇನ್ನಾರನ್ನಾದರೂ ವಿವಾಹಮಾಡಿಕೊಂಡಿರುವೆಯೋ? ಅಕೆಯಲ್ಲಿ ಜನಿಸಿದ ಮಗಳನ್ನು ಸ್ಮರಿಸಿಕೊಂಡು ಎನ್ನನ್ನು ಮಗಳೆ ಎನ್ನುವಿಯಾ ? ಆ ಮಗಳೂ ಎನ್ನನ್ನೇ ಹೋಲುವಳೆ?'' ಎಂದು ಕೇಳಲು, ದೇವಸೇನನು ನಗುತ್ತ:—'' ಅಯ್ಯೋ ! ಮುಗ್ಧ ಸ್ತ್ರೀಯೆ ! ನಾನು ಹೇಳುವುದನ್ನು ಕೇಳು–ನೀನು ವಿವಾಹಿತಳು; ಮತ್ತು ಎನ್ನ ಸೇನಾಪತಿಯಾದ ಅಭಿಪಾರಗನ ಮಡದಿಯು; ಆದುದರಿಂದಲೇ ನಾನು ನಿನ್ನನ್ನು ಮಗಳೇ ಎಂದು ಸಂಭೋಧಿಸಿದೆನು; ಹೀಗಿರುವಲ್ಲಿ.

[೬೨. ತಾ:–'' ಎನ್ನ ಭೃತ್ಯನ ಹೆಂಡತಿಯಲ್ಲಿ ನಾನೀಗ ಕಾಮಜೇಷ್ಟೆಯುಳ್ಳವನಾದರೆ'' (ಮುಂದಕ್ಕೆ) ಗಾಢಾಂಧಕಾರದಿಂದಾವೃತವಾದ ಹೀನಜನ್ಮವನ್ನು ಪಡೆಯಬೇಕಾಗುವುದಿಲ್ಲವೆ ? '']

ಈ ಮಾತುಗಳನ್ನು ಕೇಳಿದೊಡನೆಯೇ ಉನ್ಮಾದಯನ್ತ್ಯಿಯು ಬೆಚ್ಚಿ, ಜುಗುಪ್ಸೆಯಿಂದ ತನ್ನ ಕಿವಿಗಳನ್ನು ಮುಚಿಕೊಂಡು:—"ಪ್ರಾಣಕಾಂತನೆ! ಆ ಕಠೋರವಾಕ್ಯಗಳನ್ನಾಡಿ ಎನ್ನನ್ನು ವ್ಯಥೆಗೊಳಿಸದಿರು; ನಿನ್ನನ್ನು ಬೇಡಿಕೊಂಬೆನು. '' ಎಂದು ದೈನ್ಯದಿಂದ ಸೆರಗೊಡ್ಡಿಕೊಂಡು—

[೬೮. ತಾ:—'' ಈಗಲೂ ನಾನು ವಿವಾಹಿತಳಲ್ಲವು; ಆದಕಾರಣ ನಿನ್ನ ಸಹಧರ್ಮಿಣಿಯಾದ ಎನ್ನನ್ನು ಪರಿಗ್ರಹಿಸುವನಾಗು; ಹಾಗಾಗದೇ ಇರ್ದರೆ ಚಂದ್ರನಿಂದ ಅಗಲಿದ ಬೆಳದಿಂಗಳಂತೆ, ನೀನೆನ್ನನಗಲಿದರೆ ನಿಜವಾಗಿಯೂ ಲಯಿಸಿಹೋಗುವೆನು. '']

ಶ್ಲೋ॥ ಭೃತ್ಯಸ್ಯ ನಾಮ ಭಾರ್ಯಾಯಾಂ ಕಾಮವಿಪ್ಲವಮಾಚರನ್ ।
ಕಿಂ ನು ಗಚ್ಛಾಮಿ ನೋ ಹೀನಾಂ ಜಾತಿಂ ಗಾಢತಮೋವೃತಾಮ್ ॥೬೭॥

ಶ್ಲೋ॥ ಸೋಽದ್ಯಾಹಿತಾಹಮದ್ಯಾಪಿ ಮಾಂ ಗೃಹಾಣ ಸಧರ್ಮಿಣೀಮ್ ।
ನಿನಾಹಂ ತ್ವಾಂ ಧ್ರುವಂ ಲೀಯೇ ಚಂದ್ರಿಕಾ ಶು ನಿಧುಂ ಯಥಾ ॥೬೮॥

ಇದನ್ನು ಕೇಳಿದ ದೇವಸೇನನು ಖಿನ್ನನಾಗಿ:—" ಇದೆಲ್ಲಿಯ ಪ್ರಾರಬ್ಧಬಾಧೆಯು ? " ಎಂದುಕೊಂಡಬಳಿಕ ಅವಳನ್ನು ಕುರಿತು ಧೃಷ್ಟತೆಯಿಂದ:—" ನೀನೀರೀತಿ ಮೌರ್ಖ್ಯವನ್ನವಲಂಬಿಸುವುದರಿಂದ ನಿನಗೇನೂ ಪ್ರಯೋಜನವಾಗಲಾರದು; ಇಲ್ಲಿ ನಿಲ್ಲದೆ ಈ ಕ್ಷಣವೇ ಆಚೆಗೆ ನಡೆ. " ಎಂದು ಗಜರಲು, ಉನ್ಮಾದಿನಿಯು ಭೀತಿಯಿಂದ ಬೆದರಿ, ಒಳಿಕ ಶೋಕವನ್ನು ಸಹಿಸಲಾರದೆ ಕೈಮುಗಿದುಕೊಂಡು—

[೬೯ ತಾ:—" ಎಲೈ ಸುಂದರಾಂಗನೆ! ಬಹುಕಾಲದಿಂದುಂಟಾಗಿರ್ದ ನಿನ್ನ ಅಗಲುವಿಕೆಯು ಮುಗಿದುಹೋಗಿ, ಕೂಡುವಿಕೆಯ ಕಾಲವು ಈಗ ಪ್ರಾಪ್ತವಾಗಿರುವಲ್ಲಿ—ನಿನ್ನಲ್ಲಿಯೇ ನೆಲೆಗೊಂಡಿರುವ ಚಿತ್ತವುಳ್ಳ, ನಾನು—ಸಹಿಸಲಶಕ್ಯವಾದ ನಿನ್ನ ಅಗಲುವಿಕೆಯನ್ನು ಪುನಃ ಹೇಗೆ ಸಹಿಸಲಿ ಹೇಳು ? "]

ಎಂದು ಕೇಳಲು, ದೇವಸೇನನು ಸ್ವಲ್ಪಕನಿಕರಗೊಂಡು ಅವಳನ್ನು ಕುರಿತು ವಿವಾದದಿಂದ:—" ಎಲೌ ಉನ್ಮಾದಯನ್ತ್ಯಿಯೇ! ನೀನೆನ್ನನ್ನು ವೃಥಾ ಸಂಕಟಗೊಳಿಸುವೆ; ನಿನ್ನ ಕೈಯನ್ನು ಪರಪುರುಷನು ಗ್ರಹಣ ಮಾಡಿರುವನು; ಮತ್ತು ಮಾಂಗಲ್ಯವನ್ನೂ ಕಟ್ಟಿರುವನು; ಈ ವಿವಾಹವನ್ನು ನಿನ್ನ ತಂದೆತಾಯ್ಗಳೂ ಒಪ್ಪಿರುವರು; ಹೀಗಿರುವಲ್ಲಿ ನಿನ್ನನೆಂತು ನಾನು ಪರಿಗ್ರಹಿಸಲಿ ? " ಎಂದು ಹೇಳಲು ಉನ್ಮಾದಯನ್ತ್ಯಿಯು ತವಕದಿಂದ:—" ಪ್ರಾಣೇಶನೇ ! ನೀನಾರೀತಿ ಶಂಕಿಸದಿರು; ನಾನಿದುವರೆಗೂ ಪರಪುರುಷನ ಹಸ್ತವನ್ನು ಕಾಮವಶದಿಂದಲೇ ಆಗಲಿ, ಮನಃ ಪೂರ್ವಕವಾಗಿಯೇ ಆಗಲಿ, ಮುಟ್ಟಿಯೇಇಲ್ಲ; ಹಾಗೆನ್ನ ತಂದೆತಾಯ್ಗಳು ನಾನು ಮೂರ್ಛಿತೆಯಾಗಿರುವಲ್ಲಿ ಪರಪುರುಷನ ಹಸ್ತಕ್ಕೆ ಎನ್ನ ಹಸ್ತವನ್ನು ಮುಟ್ಟಿಸಿರ್ದರೂ, ಎನ್ನ ಪಾತಿವ್ರತ್ಯಕ್ಕೆ ಅದೆಂದಿಗೂ ಭಂಗವನ್ನುಂಟುಮಾಡಲಾರದು; ಬಲಾತ್ಕಾರದಿಂದ ಬಂಧಿಸಿರ್ದ ಮಾಂಗಲ್ಯವನ್ನೂ ಪ್ರಜ್ಞೆಜಂ

ಚಿರಾದವಾಪ್ತೇ ವಿರಹಾವಸಾನೇ ಪುನಃ ಪರಿತ್ಯಾಗದಶಾಮಸಹ್ಯಾಮ್ ।
ಕಥಂ ಸಹೇ ಬ್ರೂಹಿ ಮನೋಜ್ಞಗಾತ್ರ ತ್ವದರ್ಪಿತಾಂತಃಕರಣಾಶಮತ್ರ ॥೬೦॥

ದೊಡನೆಯೇ ಕಿತ್ತು ಬಿಸುಟೆನು; ಮತ್ತು ಆ ವಸ್ತ್ರಭೂಷಣಗಳನ್ನೆಲ್ಲ ಆಗಲೇ ಈಡಾಡಿ, ಪಾತಿವ್ರತ್ಯವನ್ನು ಕಾಪಾಡಿಕೊಳ್ಳುವದಕ್ಕಾಗಿ ನಾರುಸೀರೆಯನ್ನೇ ಆಗಿನಿಂದಲೂ ಉಟ್ಟಿರುವೆನು; ಆದಲ್ಲದೆ ಕನ್ಯೆಯ ಇಚ್ಛೆಗೆ ವಿರೋಧವಾಗಿ ತಂದೆತಾಯ್ಗಳು ನಿರ್ಬಂಧದಿಂದ ಮಾಡುವ ವಿವಾಹವು ಆಸಿದ್ಧವಾದುದೆಂದು ಮನ್ವಾದಿ ಧರ್ಮಜ್ಞರ ಅಭಿಮತವಿರುವುದು; ಇಷ್ಟೇ ಅಲ್ಲದೆ ನಾಕಬಲಿ ಸಮಾವೇಶನ, ಗರ್ಭಾಧಾನ ಮುಂತಾದ ದೇಹಸಂಯೋಜಕಕಾರ್ಯಗಳು ಆಗುವವರೆಗೂ, ಸ್ತ್ರೀಯು ದೇವತೆಗಳ ವಶದಲ್ಲಿಯೇ ಇರುತ್ತಾಳಾದುದರಿಂದ, ಅವಳು ಆ ಪರ್ಯಂತರ ಕನ್ಯೆಯಾಗಿರುವಳೇ ಹೊರತು ಪತ್ನಿಯಾಗಲಾರಳೆಂದು ಶಾಸ್ತ್ರವಚನಗಳಿರುವುವು; ಮತ್ತು ಇದನ್ನು ಕೇಳು:—

[೭೧. ತಾ:—"ವರನಿಗೆ (ಕನ್ಯಾ) ಪಾಣಿಗ್ರಹಣಮಾತ್ರದಿದಲೇ ಭರ್ತೃತ್ವವು ಸಿದ್ಧಿಸುವುದಿಲ್ಲವು; ಆದರೆ, ಸ್ತ್ರೀಯ ನಿಷೇಕವಾದನಂತರವೇ ಗಂಡನಿಗ ಭರ್ತೃತ್ವವು ಸಿದ್ಧಿಸುವುದು; (೭೨) ಆವ ಬಾಲೆಯು ಪುರುಷಸಂಯೋಗವವೇ ಇಲ್ಲದವಳಾಗಿಯೂ, ಮಂತ್ರೋಚ್ಚಾರಣೆಯಿಂದ ಮಾತ್ರವೇ ಸಂಸ್ಕೃತೆಯಾಗಿಯೂ ಇರುವಲ್ಲಿ, ಗಂಡನು ಬಿಟ್ಟುಬಿಟ್ಟರೆ, ಅಂತಹ ಕನ್ಯೆಯು ಪುನಃ ಪಾಣಿಗ್ರಹಕ್ಕೆ ಯೋಗ್ಯಳಾಗುವಳು."]

ಆದಕಾರಣ ನೀನಿನ್ನು ಪ್ರತಿವಾದವನ್ನು ಮಾಡದೆ, ಎನ್ನನ್ನು ವರಿಸಿ ಎನ್ನ ಕಷ್ಟಗಳನ್ನೆಲ್ಲ ಪರಿಹರಿಸಿ ನೀನೂ ಸುಖಿಯಾಗು; ಇಲ್ಲವಾದರೆ ನಾನೀಪ್ರಾಣಗಳನ್ನು ಖಂಡಿತವಾಗಿಯೂ ಧರಿಸಲಾರೆನು; ಬಳಿಕ ನಿನಗೆ ಸ್ತ್ರೀಹತ್ಯಾದೋಷವು ಪ್ರಾಪ್ತವಾಗುವುದು; ಮತ್ತು ಅಪಾರವಾದ

ಶ್ಲೋ॥ ಭರ್ತುಃ ಪಾಣಿಗ್ರಹಾದೇವ ಭರ್ತೃತ್ವಂ ನೈವ ಸಿದ್ಧ್ಯತಿ ।
ನಿಷೇಕಾನಂತರಂ ನಾರ್ಯಾಃ ಭರ್ತಾ ಭವಿತುಮರ್ಹತಿ ॥೭೧॥
ಚ್ಯುತೇ ಭರ್ತರಿ ಯಾ ಬಾಲಾ ಮನ್ತ್ರೈರೇವ ಹಿ ಸಂಸ್ಕೃತಾ ।
ಅಕ್ಷತಾ ಸಾ ಯದಿ ಪುನಃ ಪಾಣಿಪೀಡನಮೃಚ್ಛತಿ ॥೭೨॥

ದುಃಖವನ್ನೂ ಅನುಭವಿಸುವೆ.'' ಎಂದು ಶಾಸ್ತ್ರಸಂಮತವಾದ ವಚನಗಳನ್ನು ಹೇಳಲು, ದೇವಸೇನನು ಚಿಂತಾಕ್ರಾಂತನಾಗಿ, ತನ್ನಲ್ಲಿಕಾನೇ:-'' ಇವಳು ಹೇಳುವುದೆಲ್ಲವೂ ನ್ಯಾಯವಾಗಿಯೇ ಇರುವುದು; ಆದರೂ ನಾನೀಗ ಇವಳನ್ನು ವರಿಸಿದುದೇ ಆದರೆ ಜನಾಪವಾದವು ಒಂದೇಬರುವುದು; ಪೂರ್ವದಲ್ಲಿ ಧರ್ಮಪರಾಯಣರಾದ ರಾಜರ್ಷಿಗಳು ಸೈಸೌಖ್ಯನಾಶವನ್ನೂ ಲಕ್ಷಿಸದೆ, ಜನಾಪವಾದಕ್ಕೆ ಭೀತಿಪಟ್ಟು, ಸಂಪೂರ್ಣವಿವಾಹಿತೆಯರೂ ಪತಿಪರಾಯಣೆಯರೂ ಆದ ತಮ್ಮ ಸಹಧರ್ಮಿಣಿಯರನ್ನೇ ತ್ಯಜಿಸಿ ಬಿಟ್ಟರು; ಹೀಗಿರುವಲ್ಲಿ ರಾಜನಾದ ನಾನು ಪ್ರಜಾಭಿಮತವನ್ನು ಗೌರವಿಸಿ ಆ ಮುಖದಿಂದ ಅವರುಗಳ ಅನುರಾಗವನ್ನೂ ಗೌರವವನ್ನೂ ಅರ್ಚಿಸಬೇಕೇ ಹೊರತು, ಸ್ತ್ರೀಯ ಅನುರಾಗದಲ್ಲಿ ಗಮನವನ್ನಿಡಲಾಗದು; ಇದಕ್ಕೆ ವಿರುದ್ಧವಾಗಿ ಸ್ತ್ರೀಕಾಂಕ್ಷೆಗಧೀನನಾಗಿ ಪ್ರಜಾಭಿಪ್ರಾಯವನ್ನು ತೃಣೀಕರಿಸಿದರೆ, ಆ ದುರ್ನೀತಿದೋಷದಿಂದ ಎನ್ನ ರಾಜ್ಯವೇ ನಾಶವಾಗುವುದು; ಏಕೆಂದರೆ, ನೀತಿಕೋವಿದರು ಈರೀತಿ ಹೇಳುವರು—

[ಪಿಸಿ. ತಾ:-'' ರಾಜರಾಚರಿಸುವ ದುರ್ನೀತಿದೋಷದ ಫಲಕಾಲವು ಆಶ್ರಿತಪ್ರಜೆಗಳನ್ನು ಸಂಪೂರ್ಣವಾಗಿ ವ್ಯಾಪಿಸುವುದು; ಆದರೆ ಪ್ರಜೆಗಳು (ಇಂತಹ ಕಷ್ಟಗಳನ್ನು) ಅನೇಕವೇಳೆ ಅನುಭವಿಸಿರುತ್ತಾರಾಗಿ ಆ ದುಃಖವನ್ನು ಒಂದುವೇಳೆ ಸಹಿಸಿದರೂ ಸಹಿಸುವರು; ಆದರೆ, ಈ ದುರ್ನೀತಿದೋಷದ ಫಲವು ರಾಜರ ಸತ್ವದಮೂಲವನ್ನೇ ನಾಶಮಾಡುವುದರಿಂದ, ರಾಜರಾದವರು ಎಂದಿಗೂ ಸಹಿಸಲಾರರು.''

ಆದಕಾರಣ ಇವಳನ್ನು ಈಗ ನಾನು ಪರಿಪ್ರಹಿಸಲಾಗದು.'' ಎಂದು ನಿಶ್ಚಯಿಸಿದ ಬಳಿಕ ಅವಳನ್ನು ಕುರಿತು:-''ಎಲೌ ಸ್ತ್ರೀಯೇ! ನೀನು ಹೇಳುವ ಮಾತುಗಳು ನಿನಗೆ ನ್ಯಾಯವಾಗಿದ್ದರೂ ರಾಜನಾದೆನೆಗೆಂದಿಗೂ ಪ್ರಮಾಣವಾಗಲಾರವು. ಏಕೆಂದರೆ, ನೀತಿಜ್ಞರು ಈರೀತಿ ಹೇಳಿರುವರು—

ಫಲಂತಿ ಕಾಮಂ ವಸುಧಾಧಿಪಾನಾಂ ದುರ್ನೀತಿದೋಷಾಸ್ತದುಪಾಶ್ರಿತೇಷು ।
ಸಹ್ಯಾಸ್ತ ಏಷಾಂ ತು ತಥಾಪಿ ದೈಷ್ಣ್ಯಾ ಮೂಲೋಪಘಾತೋಧಾನ್ನ ತು ಪಾರ್ಥಿವಾನಾಮ್ ॥

ರಾಜನು ತನ್ನನ್ನು ವರಿಸೆಂದು ಪ್ರಾರ್ಥಿಸಿದ ಉನ್ಮಾದಯನ್ತಿಯನ್ನು
ಧಿಕ್ಕರಿಸುವಿಕೆ.

ನೀತಿ :—ಸತಿಗೆ ಪತಿಯೇ ಪರಮಾರ್ಥವು.



The king Devasena refuses Unmadayanti who requests him to take her as his wife.

MORAL :—Nothing is more valuable for a dutiful wife than her life-partner.

[೭೪ ತಾತ್ಪರ್ಯ:—" ಬರಿಯ ಶಾಸ್ತ್ರವಚನಗಳನ್ನೇ ಆಧಾರವಾಗಿ ಟ್ಟುಕೊಂಡು, ಆವವಿಷಯವನ್ನೂ ನಿರ್ಣಯಿಸಕೂಡದು, ಏಕೆಂದರೆ, ಯುಕ್ತಿಹೀನವಾದ ವಿಚಾರದಿಂದ ಧರ್ಮಕ್ಕೆ ಹಾನಿಯುಂಟಾಗುವುದು. "]

ಪ್ರಕೃತಸ್ಥಿತಿಯು ಹೀಗಿರುವುದರಿಂದ ಎನ್ನ ಆಸೆಯನ್ನು ಶುದ್ಧಾಂಗವಾಗಿ ಮರೆ; ನಾನು ನಿನ್ನನ್ನು ಸರ್ವಾತ್ಮನಾ ವರಿಸುವುದಿಲ್ಲವು." ಎಂದು ಹೇಳಿ ಅತ್ತ ಮುಖವನ್ನು ತಿರುಗಿಸಲು, ಉನ್ಮಾದಿನಿಯು, ಭಗ್ನಾಶಯಳಾಗಿ, ದಿಕ್ಕುದೋರದ ಒಂದುಕ್ಷಣ ಸ್ತಬ್ಧಿಯಾಗಿರ್ದು ಬಳಿಕ ಶೋಕವನ್ನು ಸಹಿಸಲಾರದೆ ಕಂಬನಿಗರೆಯುತ್ತ—

[(೭೫) ತಾ:—"ಅಯ್ಯೋ! ನಾನೀದುಸ್ಥಿತಿಗೆ ಒಳಗಾಗಿರ್ದರೂ (ನಿನ್ನ) ಕೃಪೆಗೆ ಅಪಾತ್ರಳಾಗುವಂತಹ ಪಾಪಿಯಾದೆನೆ? ದುಃಖಸ್ಥಿತಿಯುಳ್ಳಿರುವವರ ವಿಷಯದಲ್ಲಿ ಕಾರುಣ್ಯವನ್ನು ತೋರುವುದು ರಾಜರಾದವರಿಗೆ ಧರ್ಮಮಾರ್ಗವಲ್ಲವೆ? (೭೬) ನಿನ್ನಿಂದ (ಪೂರ್ವದಲ್ಲಿ) ತಿರಸ್ಕೃತೆಯಾಗಿರ್ದರೂ, ನಿನ್ನನ್ನೇ ಸೇರಬೇಕೆಂದು ಹೇಗೆ ದೃಢಚಿತ್ತೆಯಾಗಿರ್ದೆನೋ ಆದರಂತೆಯೇ ಈಗಲೂ ಇರುವೆನು; (ಧರ್ಮಸಂಮತವಾದ) ಎನ್ನ ಕೋರಿಕೆಯು ನಿನಗೆ ಅಪ್ರಿಯವಾಗಿರ್ದರೂ ಎನಗೆ ಮಾತ್ರ ಈಗಲೂ ಪ್ರಿಯವಾಗಿರುವುದಲ್ಲ! ಹಾ! ನಾನೇನು ಹೇಳಲಿ!"]

ಆದಕಾರಣ ಈಗಲಾದರೂ ಎನ್ನಲ್ಲಿ ಕರುಣೆಯನ್ನು ತಳೆ; ನಾನಿನ್ನಾರಿಗೆ ಪೊರೆಯಿಡಲಿ? ಎನ್ನ ದುಃಖವನ್ನು ಸಂತೈಸುವರಿನ್ನಾರು?

ಶ್ಲೋ॥ ಕೇವಲಂ ಶಾಸ್ತ್ರಮಾಶ್ರಿತ್ಯ ನ ಕರ್ತವ್ಯೋ ವಿನಿರ್ಣಯಃ।
ಯುಕ್ತಿಹೀನವಿಚಾರೇ ತು ಧರ್ಮಹಾನಿಃ ಪ್ರಜಾಯತೇ ॥೭೪॥
ಪಾಪಾ ಕೃಪಾಪಾತ್ರತರಾ ನ ವಾಹಮೇವಂ ವಿಧಾಮಾಪದಮಭ್ಯುಪೇತಾ।
ಆರ್ತೇಷು ಕಾರುಣ್ಯಮಯೀ ಪ್ರವೃತ್ತಿರ್ನರಾಧಿಪಾನಾಂ ಕಿಮಯಂ ನ ಮಾರ್ಗಃ ॥೭೫॥
ಶಂಕೇ ತನಾದ್ಯಾಪಿ ತದೇವ ಚಿತ್ತೇ ನಿವರ್ತ್ಯಮಾನಾಸ್ಮಿ ನ ಯನ್ನಿವೃತ್ತಾ ॥
ತನಾಪ್ರಿಯಂಚಾಪಿ ಮಯೇಪ್ಸಿತಂ ಯದಾತ್ಮಪ್ರಿಯಂ ಹಾ! ತದಿದಂ ಕಥಂ ಮೇ॥೭೬॥

ಈಗ ನೀನೂ ಧಿಕ್ಕರಿಸಿದರೆ, ಎನ್ನದೇಹವು ಎನ್ನ ಪ್ರಾಣಗಳನ್ನು ಒಡನೆಯೇ ಧಿಕ್ಕರಿಸಿ ಬಿಡುವುದು; ಎನ್ನ ಪ್ರಾಣಗಳನ್ನು ಕಾಪಾಡು; ನಿನ್ನನ್ನು ಬೇಡಿ ಕೊಂಬೆನು.'' ಎಂದು ಹೇಳಿ ಕಂಬನಿಗರೆಯುತ್ತ ದೇವಸೇನನ ಪಾದಗಳನ್ನು ಹಿಡಿದುಕೊಳ್ಳುವದಕ್ಕೆ ಪ್ರಯತ್ನಿಸಲು, ದೇವಸೇನನು ಸ್ವಲ್ಪ ಹಿಂಸರಿದು, ಬಳಿಕ ಇವಳ ದುಃಖವನ್ನು ನೋಡಿ ತಾನೂ ಒಂದುಕ್ಷಣ ದುಃಖಿಸಿ, ಬಳಿಕ ಎಚ್ಚೆತ್ತು ಪಿನ್ನನಾಗಿ—

[೭೭. ತಾ:–''ನಾನೀಗ (ನಿನಗಾಗಿ) ತೀಕ್ಷ್ಣವಾದ ಶಸ್ತ್ರಕ್ಕಾದರೂ ಈಡಾಗುವೆನು; ಅಥವಾ ಜ್ವಲಜ್ಜ್ವಾಲೆಗಳಿಂದ ಭೀಕರವಾದ ಅಗ್ನಿಯನ್ನಾದರೂ ಪ್ರವೇಶಮಾಡುವೆನು; ಆದರೆ, ಎನ್ನ ಸಂಪತ್ತೆಲ್ಲವೂ ಆವುದರ ಅವಲಂಬನದಿಂದ ಎನಗುಂಟಾಯಿತೋ ಅಂತಹ ಧರ್ಮವನ್ನು ಮಾತ್ರ ಈಗ ನಾಶಮಾಡಲಾರೆನು.'']

ಎಂದು ಹೇಳಿ ಅಲ್ಲಿಂದ ಮುಂದಕ್ಕೆ ಹೊರಟುಹೋಗಲು, ಉನ್ಮಾದಯನ್ತಿಯೂ ಅವನನ್ನೇ ಹಿಂಬಾಲಿಸಿ ಹೊರಟುಹೋದಳು.

ಐದನೆಯ ಸಂಧಿ.

VICE BRINGS SADNESS WHILE VIRTUE BRINGS GLORY.

ಗುಣಾಧಿಕ್ಯ

ಇದೆಲ್ಲವನ್ನೂ ಅದೃಶ್ಯರೂಪಿನಿಂದ ನೋಡುತಿರ್ದ ಮನ್ಮಥನು, ತನ್ನ ಪ್ರಯತ್ನವು ವಿಫಲವಾದುದನ್ನು ನೋಡಿ ವಿಷಾದಗೊಂಡು:–''ಹಾ! ವಿಧಿಯೆ? ಹಿಂದಣದೇಶಗಳಲ್ಲಿ ರಾಜರು ಎನ್ನ ಪ್ರಭಾವಕ್ಕಧೀನರಾಗಿ ಕಾಮವಿಶಾಖದಿಂದ ಬಿಗಿವಡೆದು ನರಕಭಾಜನರಾಗಿ ಹೋದರು; ನಾನೀ

ಅಹಂ ಹಿ ಶಸ್ತ್ರಂ ನಿಶಿತಂ ವಿಶೇಯಾ ಹುತಾಶನಂ ವಿಸ್ಫುರದರ್ಚಿಷಂ ವಾ ।
ನತ್ವೇವ ಧರ್ಮಾದಧಿಗಮ್ಯ ಲಕ್ಷ್ಮೀಂ ಶಕ್ಷ್ಯಾಮಿ ತತ್ಕ್ಷೈವ ಪುನಃ ಪ್ರಹರ್ತುಮ್ ೭೭

ಮಹಾರಾಜನಲ್ಲಿಯೂ ಈ ಉನ್ಮಾದಯಂತಿಯಲ್ಲಿಯೂ ಸೂಕ್ಷ್ಮವಾಗಿ ಪ್ರವೇಶಿಸಿ, ಎನ್ನ ಸಾಹಸವನ್ನೆಲ್ಲಾ ಪ್ರಯೋಗಿಸಿದ್ದೆನು ; ಮಹಾರಾಜನು ಅಷ್ಟರಲ್ಲಿಯೇ ಎಚ್ಚೆತ್ತು ಎನ್ನ ಒಂಧನದಿಂದ ತಪ್ಪಿಸಿಕೊಂಡು ಹೋದನು. ಈಗೇನುಮಾಡಲಿ ? ದೇವೇಂದ್ರನಿಗೆ ಲಜ್ಜೆಯಿಲ್ಲದೆ ಮುಖವನ್ನೆಂತು ತೋರಲಿ''

ಎಂದು ನಿಟ್ಟುಸಿರುಬಿಡುತ್ತ ಅಲ್ಲಿಂದ ಮುಂದಕ್ಕೆ ತೆರಳಲು ಚಿತ್ರಗುಪ್ತರು ತಂತಮ್ಮಲ್ಲಿಯೇ ಈರೀತಿ ಆಶ್ಚರ್ಯಗೊಂಡರು:—''ಅಹಾ! ಗುಪ್ತನೆ ಈ ಮನ್ಮಥಪರಾಜಯವನ್ನು ನೋಡಿದಯಾ ? ಅಂತೂ,

[ಪಲ. ತಾ:—'' ಈ ಮಹಾತ್ಮನನ್ನು (ದೇವಸೇನನನ್ನು) ತನ್ನ ರಕ್ಷಕನನ್ನಾಗಿ ಪಡೆದಿರುವೀ ಭೂಲೋಕದ ವಿಷಯದಲ್ಲಿ ನನ್ನು ವ್ಯಸನಪಡಬೇಕಾಗಿಲ್ಲ; ಅದಲ್ಲದೆ ಮನ್ಮಥನು ತನಗುಂಟಾದ ಪರಾಜಯದಿಂದ ಕಂಗೆಟ್ಟು ನಿಜವಾಗಿಯೂ ಈಗ ನಿಟ್ಟುಸಿರು ಬಿಡುತ್ತಿರಬಹುದು. '']

ಎಂದು ಹೇಳಲು, ಗುಪ್ತನು ಪರಮವಿಸ್ಮಿತನಾಗಿ ಚಿತ್ರನನ್ನು ಕುರಿತು:—'' ಈ ರಾಜ್ಯದ ವಿಷಯದಲ್ಲಿರ್ದ ಸಂಶಯಗಳೆಲ್ಲವೂ ಎನಗೀಗ ನಾಶವಾಗಿಯೋದವು; ನಿಜವಾಗಿಯೂ ಇದು ಧರ್ಮರಾಜ್ಯವೆಂದು ಹೇಳಲು ಅವ ಅಭ್ಯಂತರವೂ ಇಲ್ಲ; ಈ ಸರ್ವಕ್ಕೂ ಕಾರಣಭೂತನಾದ ಮಹಾರಾಜನ ಧರ್ಮಜ್ಞತೆಯನ್ನು ಏನು ಹೇಳಲಿ ! '' ಎಂದು ಆಶ್ಚರ್ಯಪಟ್ಟಬಳಿಕ ಮಹಾರಾಜನನ್ನು ಕುರಿತು ಪರೋಕ್ಷವಾಗಿ:—

[ಪಲ. ತಾ:—''ಅಃ! ಎಲೈ ನರೇಶ್ವರನೆ ! ನಿನ್ನನ್ನು ರಕ್ಷಕನನ್ನಾಗಿ ಪಡೆದಿರುವೀರಾಜ್ಯದ ಪ್ರಜೆಗಳು ಮಹಾ ಭಾಗ್ಯವಂತರೇ ಆಹುದು ! (ನಿನ್ನಿಂದೀಗ ಆಚರಿಸಲ್ಪಟ್ಟ) ' ಧರ್ಮದಮೇಲೆಯೇ ಮುಖ್ಯವಾದ ಅಭ

ಅನೇನ ನಾಥೇನ ಸನಾಥತಾಂ ಗತಂ ನ ಕೋಚಿತವ್ಯಂ ಖಲು ಸಾಂಪ್ರತಂ ಜಗತ್ |
ಪರಾಜಯಾಶಂಕಿತಜಾತವಿಭ್ರಮೋ ಧ್ರುವಂ ವಿಕಾರಾಕರೋ ಽದ್ಯ ವನ್ಮಥಃ ||೨೪||
ಅಹೋ ! ಪ್ರಜಾನಾಮತಿಭಾಗ್ಯಸಂಪದಾಸಾಂ ತ್ವಮೇವಂ ನರದೇವ ಗೋಪ್ತಾ |
ಧರ್ಮಾನುರಾಗೋ ಹಿ ಸುಖಾನಪೇಕ್ಷೆಸ್ತವೋವನಸ್ಥೇಷ್ವಪಿ ಮೃಗ್ಯ ಏವ ||೨೯||

ಮಾನವನ್ನಿಟ್ಟು ಸುಖವನ್ನು ಉಪೇಕ್ಷಿಸಿದಂತಹ ನಡತೆಯು ' ತಪೋವನ ವಾಸಿಗಳಾದ (ಮುನಿಗಳಲ್ಲಿಯೂ) ಹುಡುಕಿನೋಡಬೇಕಾಗಿಹುದು ! ''] ಎಂದು ಸ್ತುತಿಸಿದುದನ್ನು ಕೇಳಿ ಚಿತ್ರನು ಪುನಃ ಮಹಾರಾಜನನ್ನು ಪರೋಕ್ಷವಾಗಿ ಸಂಬೋಧಿಸಿ, ಸಂತೋಷದಿಂದ—

[೮೦ ತಾ:—'' ಎಲೈ ಮಹಾರಾಜನೆ ! 'ಮಹಾರಾಜ ' ಎಂಬ ಪದಲ್ಲಿರುವ ' ಮಹತ್ ' ಎಂಬ ಬಿರುದು ನಿನ್ನೊಬ್ಬನಲ್ಲಿಮಾತ್ರವೆ (ಯಥಾರ್ಥವಾಗಿ) ಪ್ರಕಾಶಿಸುವುದು. ಆದರೆ, ಗುಣಹೀನರಾದ (ರಾಜರಲ್ಲಿಯೋ) ಈ ಗುಣೋಕ್ತಿಯು ಕ್ರೂರವಾದ ನೀಚಾರ್ಥದಲ್ಲಿಯೇ ಪರಿಣಮಿಸುವುದು ! ''] ಎಂದು ಸಂತೋಷದಿಂದ ಸ್ತುತಿಸಿದ ಬಳಿಕ, ಗುಪ್ತನನ್ನು ಕುರಿತು:—'' ಗುಪ್ತನೇ ! ನಡೆ; ಮುಂದಿನ್ನೆಂತಾಗುವುದೋ ಅದನ್ನೂ ನೋಡಿಬಿಡೋಣ. '' ಎಂದು ಹೇಳಿ ಈರ್ವರೂ ಮುಂದಕ್ಕೆ ಹೊರಟು ಹೋದರು.

ಆರನೆಯ ಸಂಧಿ.

THE PIOUS VALUE RIGHTEOUSNESS, BUF NOT THEIR LIVES.

ಸ್ವಧರ್ಮಪಾರಮಿತಾ

ಇತ್ತಲಾ ದೇವಸೇನಮಹಾರಾಜನು, ಎಲ್ಲೆಲ್ಲಿ ಹೋದರೂ ತನ್ನನ್ನೇ ದುಃಖಿಸುತ್ತ ಹಿಂಬಾಲಿಸಿದ ಉನ್ಮಾದಯಸ್ತ್ರಿಯೊಡನೆ ಹಿಂದೆ ತಾನು ಕುಳಿತಿದ್ದ ಸರಸ್ತೀರಕ್ಕೆ ಬಂದು ಅವಳನ್ನು ನೋಡಿ, ಮನಸ್ಸಿನಲ್ಲಿ

ಶ್ಲೋ॥ ಮಹಚ್ಛಬ್ದೋ ಮಹಾರಾಜ ತ್ವಯ್ಯೇವಾಯಂ ವಿರಾಜತೇ ।
ನಿಗುಣೇಷು ಗುಣೋಕ್ತಿರ್ಹಿ ಕ್ಷೇಪರೂಕ್ಷತರಾಕ್ಷರಾ ॥೮೦॥

ವ್ಯಸನವನ್ನೂ ಜುಗುಪೆಯನ್ನೂ ಹೊಂದಿ:–"ಹಾ! ಇದೆಲ್ಲಿಯ ಪ್ರಾರಬ್ಧ ಬಾಧೆಯು! ಜನ್ಮಾಂತರವಾಸನೆಯಂತೆ ಎಲ್ಲೆಲ್ಲಿ ಹೋದರೂ ಎನ್ನನ್ನೆ ಹಿಂಬಾಲಿಸುವಳು ! ಸಂಧ್ಯಾಕಾಲವಾಗಿರುವುದರಿಂದ ದೇವವಂದನಾದಿ ನಿತ್ಯಕರ್ಮಗಳನ್ನಾಚರಿಸಬೇಕಾಗಿಹುದು, ಇವಳಲ್ಲಿ ವಾದಮಾಡಿದರೆ ಕಾಲವು ಮೀರಿಹೋಗುವುದು. ಇನ್ನು ಮನೆಗೆ ಹೋಗುವೆನು" ಎಂದು ಮಾತನಾಡಿಕೊಂಡು ತನ್ನ ಆರಮನೆಗೆ ತೆರಳಲುದ್ಯುಕ್ತನಾಗಲು, ಉನ್ಮಾದಿನಿಯು ಅವನ ದಾರಿಯನ್ನಡ್ಡಗಟ್ಟಿ ದೈನ್ಯದಿಂದ,

[ಲಂ. ತಾ:–" ಮಹಾರಾಜನೆ ! ಎನ್ನ ವಲ್ಲಭನೆ ! (ಎನ್ನನಗಲಿ) ನೀಸೋರ್ವನೇ ಆರಮನೆಗೆ ತೆರಳುವುದು ಧರ್ಮವಲ್ಲವು; ನೀಸೆಲ್ಲಿಗೆ ಹೋಗುವೆಯೋ ಅಲ್ಲಿಗೆ ನಾನೂ ಬರುವೆನು. "]

ಎಂದು ಹೇಳಿ ದೊಂದಿಸುತ್ತ ಅವನ ಸೆರಗನ್ನು ಪಿಡಿದುಕೊಳ್ಳಲು, ದೇವಸೇನನು ಕೋಪಾವಿಷ್ಟನಾಗಿ:—" ಛಿ ! ಥಟ್ಟಿ ಹೆಂಗುಸೆ ! ಲಜ್ಜೆಯಿಲ್ಲದೆ ಪರಪುರುಷನನ್ನು ಮುಟ್ಟುವೆಯಾ ? ತೆಗೆತೆಗೆ !!" ಎಂದು ಗಜರಿ ಅಲ್ಲಿಂದ ಮುಂದಕ್ಕೆ ಹೊರಟುಹೋದನು

ಇತ್ತಲಾ ಉನ್ಮಾದಿನಿಯು, ಈ ಧಿಗ್ವ್ಯಜನಶಬ್ದದಿಂದ ಥಟ್ಟನೆ ಎದೆಯೊಡದು ನೆಲದಲ್ಲಿ ಬೀಳುತ್ತ:—" ಪತಿಯೇ ! ಪತಿಯೇ !! " ಎಂದು ಹಂಬಲಿಸುತ್ತ ಬಿದ್ದು ಹಾಗೆಯೇ ಮೃತಳಾಗಿಹೋದಳು.

ಬಳಿಕ ದೇವಸೇನನು ಇವಳು ಬಿದ್ದ ಶಬ್ದವನ್ನು ಕೇಳಿ ಹಿಂದುರುಗಿಬಂದು, ಅವಳನ್ನು ನೋಡಿ ಆಶ್ಚರ್ಯದಿಂದ:—" ಇದೇನೀಪ್ರಮಾದವು ? ಪ್ರಾಯೇಣ ಸ್ತ್ರೀಯರು ಮೂರ್ಖಸ್ವಭಾವವುಳ್ಳವರೆಂಬುದು ನಿಜವೇ ಆಹುದು; ತಮ್ಮ ಸಂಕಲ್ಪಸಿದ್ಧಿಗಾಗಿ ಸರ್ವೋಪಾಯಗಳನ್ನಾದರೂ ಪ್ರಯೋಗಿಸುವರು; ಕೆಲವುನೇಳೆ ಆಶಾಭಂಗದಿಂದ ಪ್ರಾಣಗಳನ್ನಾದರೂ ತ್ಯಜಿಸಿಬಿಡುವರು; ಬಳ್ಳಿಯದು ! ಇವಳೇಮಾಮೂರ್ಛೆಯು ನನ್ನನ್ನು

ಶ್ಲೋ॥ ನೈಷ ಧರ್ಮೋ ಮಹಾರಾಜ ಯದ್ಭಾರ್ಯಾ ಗೃಹಮೇಕಕಃ ।
ತೇನಾಹಮಪಿ ಯಾಸ್ಯಾಮಿ ಯೇನ ವಲ್ಲಭ ಯಾಸ್ಯಸಿ ॥೬೧॥

ತನ್ನ ವಶಮಾಡಿಕೊಳ್ವುದಕ್ಕಾಗಿ ಪ್ರಯೋಗಿಸದ ಭೇಷಜವೊ, ಇಲ್ಲವೆ ಎನ್ನ ಧಿಕ್ಕಾರದಿಂದುಂಟಾದ ಸ್ವಭಾವಮೂರ್ಛೆಯೋ, ಪರೀಕ್ಷಿಸಿ ನೋಡುವೆನು.'' ಎಂದು ಆಕೆಯ ಸಮೀಪಕ್ಕೆ ಹೋಗಿ ಕುಳಿತು ಅವಳನ್ನು ಚೆನ್ನಾಗಿ ನೋಡಿ ಭಯದಿಂದ:—'' ಅಹಾ ! ಇದೇನು ? ಅಂಗಜೇಷ್ಟೆಗಳು ಶುದ್ಧಾಂಗವಾಗಿ ನಿಂತುಹೋಗಿರುವುವು; ಮೃತೆಯಾಗಿದ್ದರೇನು ಗತಿ ? ಶ್ವಾಸಜಲನೆಯನ್ನು ಪರೀಕ್ಷಿಸಿ ನೋಡೋಣವೆಂದರೆ, ಇವಳು ಪರಪತ್ನಿಯು; ಹೇಗೆ ಮುಟ್ಟಲಿ ?'' ಎಂದು ಸ್ವಲ್ಪಕಾಲ, ಯೋಚಿಸಿದ ಬಳಿಕ ಧೈರ್ಯದಿಂದ:—'' ಆಪತ್ಕಾಲದಲ್ಲಿ ಪರಸ್ತ್ರೀಯನ್ನು ಸದುದ್ದೇಶದಿಂದ ಮುಟ್ಟಿದರೆ ದೋಷವುಂಟಾಗಲಾರದು.'' ಎಂದು ಆಕೆಯ ನಾಸಾಕುಹರದಲ್ಲಿ ಬೆರಳಿಟ್ಟು ನೋಡಿ ಭಯದಿಂದ:—'' ಹಾ ! ದೈವವೇ ! ಮೃತೆಯಾಗಿರುವಂತೆ ತೋರುವುದು! ಈಗೇನುಮಾಡಲಿ ?'' ಎಂದು ತನ್ನ ಕರವಸ್ತ್ರದಿಂದ ಗಾಳಿಯನ್ನು ಬೀಸಿ, ಸಡಗರದಿಂದ:—'' ಈ ಸರೋವರಾಂಬುವನ್ನು ತಂದು ತಲೆಗೆ ತಳಿಯುವೆನು.'' ಎಂದು ಕರವಸ್ತ್ರವನ್ನು ನೀರಿನಲ್ಲಿ ಆದ್ದಿತಂದು ಅವಳ ನೆತ್ತಿಯಮೇಲೆ ಹಾಕಿ, ಒಂದು ಕ್ಷಣ ಅವಳನ್ನೇ ನೋಡುತಿರ್ದು ಶೋಕದಿಂದ:—'' ಹಾ ! ಮೃತೆಯಾಗಿರುವಳು. ನಿಜನಿಜ !'' ಎಂದು ಕಂಬನಿಗರೆಯುತ್ತ ಆ ಮೃತೆಯನ್ನು ಕುರಿತು ಜೀವಿಸಿರುವಳೆಂಬ ಭ್ರಾನ್ತಿಯಿಂದ:—

[ಲ. ತಾ:—''ಅಯ್ಯೋ! ಮಾನಿನಿಯೆ! ದುಃಖದಿಂ ಕೆಂಪಾದ ಕಣ್ಗಳಿಂದ ನಿರಾತಂಕವಾಗಿ ಪ್ರವಹಿಸುವ ಕಣ್ಣೀರಿನಿಂದ ನಿನ್ನ ಶರೀರವು ನೆನೆದುಹೋಗಿರುವುದು; ಎನ್ನಾಧಿಕ್ಕಾರಜನ್ಯವಿಘ್ನದಿಂದುಂಟಾದ ಕೋಪವನ್ನು ಬಿಟ್ಟುಬಿಡು; ಎನ್ನ ಮಾತಿಗುತ್ತರವನ್ನು ಕೊಡು; ಇದೇಕೀ

ಆರಕ್ತಾಕ್ಷಿಯುಗಾನ್ನಿರರ್ಗಲಗಲದ್ಬಾಷ್ಪಾಂಬುಸಿಕ್ತಂ ವಪುಃ ।
ತದ್ಧಿಕ್ಕಾರಗತಾನ್ತರಾಯಜನಿತಃ ಕೋಪಃ ಸಮುತ್ಸೃಜ್ಯತಾಮ್ ॥
ಹಂಹೋ! ಮಾನಿನಿ ದೇಹಿ ಮೇ ಪ್ರತಿವಚಃ ಕಿಂ ಮೌನಮಾಲಂಬಸೇ ।
ಪ್ರಾಗ್ಜನ್ಮಾನ್ತರವಾಸನೇವ ಬಲವದ್ದುಃಖಂ ನ ಮಾಂ ಮುಂಚತಿ ॥೮೨॥

ರೀತಿ ಮೌನವನ್ನು ಧರಿಸಿರುವೆ? ಹಾ! ನಿಜ! ಪೂರ್ವಜನ್ಮದಲ್ಲೆಸಗಿದ ಕರ್ಮವಾಸನೆಯಂತೆ ಬಲವತ್ತರವಾದ ನಿನ್ನ ದುಃಖವು ಎನ್ನನೆಂದಿಗೂ ಬಿಡದು.''

ಎಂದು ಶೋಕಿಸಿದ ಬಳಿಕ ಪಶ್ಚಾತ್ತಾಪದಿಂದ—

[ಲಕ್ಷ್ಮಿ. ತಾ:—ಎನ್ನನ್ನು ಬಿಟ್ಟು (ನೀನೊಬ್ಬನೇ) ಹೋಗಬೇಡ, ಎಂದು ಈಕೆಯಿಂದ ಅಷ್ಟು ಬಗೆಯಾಗಿ ಪ್ರಾರ್ಥಿಸಲ್ಪಟ್ಟವನಾದರೂ (ಆಗ ಅದನ್ನು ಮನಸ್ಸಿಗೆ ತಾರದೆ,) ಧಿಕ್ಕಾರವೆಂಬ ಸಿಡಿಲಿನಿಂದ ಹೊಡೆದ ಎನಗೆ, ನಿಷ್ಫಲವಾದ ಈ ಅಳುವೇಕೆ? (ಲಳ) ಅಯ್ಯೋ! ಈ ಮಹಾ ಪತಿವ್ರತೆಯು ಎನ್ನ ವಿಯೋಗವೆಂಬ ಸರ್ಪದಿಂದ ಕಚ್ಚಲ್ಪಟ್ಟವಳಾಗಿ ಈಗಿಲ್ಲಿ ಮೃತಳಾಗಿರುವಳು; ಆದರೆ ಅದರಿಂದುಂಟಾದ ಪಶ್ಚಾತ್ತಾಪ ವೆಂಬ ವಿಷವುಮಾತ್ರ ಎನ್ನನ್ನೇ ಬಲವಾಗಿ ಆವರಿಸಿಕೊಂಡಿರುವುದು'']

ಹಾ! ನಾನೀಗೇನುಮಾಡಲಿ? ಈ ದುಃಖವನ್ನೆಂತು ಮರೆಯಲಿ? ಈ ಮಹಾಪತಿವ್ರತೆಯ ಮರಣಕ್ಕೆ ನಾನೇ ಕಾರಣನಾದೆನು! ಈಕೆಯು ಸಕಲಮನೋರಥನನ್ನೂ ಎನ್ನಿಂದಲೇ ಬಯಸಿದ್ದು, ಎನಗಾಗಿಯೇ ಅನೇಕವಿಧವಾದ ಕಷ್ಟಗಳನ್ನೆಲ್ಲ ಅನುಭವಿಸಿ, ಕೊನೆಗೆ ಎನಗಾಗಿಯೇ ಪ್ರಾಣಗಳನ್ನೂ ತ್ಯಜಿಸಿಬಿಟ್ಟಳು. ಹಾ! ಎನಗೆ ಸ್ತ್ರೀಹತ್ಯಾದೋಷವು ಪ್ರಾಪ್ತವಾಯಿತು.'' ಎಂದು ವಿವಿಧವಾಗಿ ಪ್ರಲಾಪಿಸುತ್ತ, ತನ್ನ ಪೀಠದ ಲ್ಲಿಯೇ ಜುಗುಪ್ಸೆಯನ್ನು ತಳೆದು ಶೋಕದಿಂದ:—

[ಲಕ್ಷ್ಮ. ತಾ:—"ಛೆ! ತೆಗೆ! ನಿರ್ದಯತ್ವವೆಂಬ ಅಪಯಶಸ್ಸಿನಿಂದ

ಪ್ರಾರ್ಥಿತೋಽಸ್ಯನಯಾ ತಾವತ್ಯಕ್ತ್ವಾ ಮಾ ಗಚ್ಛ ಮಾಮಿತಿ ॥
ಧಿಕ್ಕಾಶನಿನಾ ಹತ್ವಾ ಕಿಂ ಮೇ ಶೋಕೋ ಹ್ಯಯಂ ವೃಥಾ ॥ಲಕ್ಷಿ॥
ಮದ್ವಿಯೋಗಾಹಿಸಂದಷ್ಟಾ ಮೃತಾಽಸೌ ಸತ್ಯ ಪತಿವ್ರತಾ ॥
ಗಾಢಂ ಮಯ್ಯೇವ ಸಂಕ್ರಾಂತಂ ಪಶ್ಚಾತ್ತಾಪಮಯಂ ವಿಷಮ್ ॥ಲಳ॥
ಜೀವಿತೇನ ಮಮಾನೇನ ನೈಷ್ಫಲ್ಯೇನಮಲೇನ ಕಿಮ್ ।
ಧರ್ಮಸಾಂಮ್ರಾಜ್ಯಮಾಶ್ರಿತ್ಯ ಸಂಬೋಧಿಂ ಪ್ರಾಪ್ನುಯಾಮಹಮ್ ॥ಲಕ್ಷಿ॥

ಮಾಲಿನ್ಯವನ್ನು ಹೊಂದಿದ ಎನ್ನೀ ಜೀವಮಾನದಿಂದೇನುಫಲ ? (ಇದು ವರೆಗೂ ನಾನು ಆಚರಿಸಿದ) ಧರ್ಮಸಂಮತವಾದ ರಾಜ್ಯಪರಿಪಾಲನಾ ಕಾರ್ಯದ ಪ್ರಭಾವದಿಂದ (ಮುಂದಕ್ಕೆ) ಸಂಬೋಧಿಯನ್ನು (ಸರ್ವೇಶ್ವ ರತ್ವವನ್ನು) ಪಡೆಯುವೆನು.'']

ಎಂದು ಹೇಳಿ ಉನ್ಮಾದಯಂತಿಯನ್ನೇ ಜೆನ್ನಾಗಿ ಈಕ್ಷಿಸಿದ ಬಳಿಕ, ಅಂತರಿಕ್ಷವನ್ನು ನೋಡಿ ಕೈಗಳನ್ನು ಮುಗಿದುಕೊಂಡು—

[ಲಟ. ತಾ:-''ಮನುಷ್ಯನನ್ನು ರಕ್ಷಿಸತಕ್ಕುದು ಅವನ ಧನವೇ ಆಗಲಿ, ಅಥವಾ ಅವನ (ದೇಹಸಂಬಂಧವಾದ ಅಥವಾ ಚತುರಂಗ ಸಂಬಂಧವಾದ) ಬಲವೇ ಆಗಲಿ, ಅಲ್ಲವು; ಮಹತ್ತರವಾದ ಸುಖಕ್ಕೆ (ಮುಕ್ತಿಗೆ) ಕಾರಣಭೂತವಾದುದು, ಧರ್ಮವೇ ಹೊರತು, ಸ್ತ್ರೀಯ ಕಾಮವಿಲಾಸವೆಂದಿಗೂ ಅಲ್ಲವು; ಧರ್ಮಾತ್ಮನಾದವನಿಗೆ ಮೃತ್ಯುವೂ ಕೂಡ ಸುಖವನ್ನೇ ಉಂಟುಮಾಡುವುದು; ಏಕೆಂದರೆ, ಧರ್ಮದಲ್ಲಿಯೇ ನಿರತನಾದವನಿಗೆ (ಇಹವಲ್ಲಿಯೇ ಆಗಲಿ ಪರದಲ್ಲಿಯೇ ಆಗಲಿ) ದುರ್ಗತಿ ಭಯವೆಂಬುದೆಂದಿಗೂ ಇರದು.'']

ಎಂದು ಧರ್ಮವನ್ನು ಸ್ತುತಿಸಿದ ಬಳಿಕ ತನ್ನ ಹಸ್ತದಲ್ಲಿರ್ದ ಈಟಿಯಿಂದ ವಕ್ಷಸ್ಥಲವನ್ನು ತಿವಿದುಕೊಂಡು ಕೆಳಗೆಬಿದ್ದು ಮೃತನಾದನು.

ಇತ್ತಲಾ ಮಹಾರಾಜನು ಸಂಧ್ಯಾಕಾಲವು ಮೀರಿದರೂ ಎಂದಿನಂತೆ ದೇವತಾಧ್ಯಾನಾದಿ ಸಂಧ್ಯಾಕರ್ಮವನ್ನಾಚರಿಸಲು ಇನ್ನೂ ಬಾರದೆ ಇರ್ದುದರಿಂದ ಅಧಿಕಾರಿಗನು ಭಯಗೊಂಡವನಾಗಿ, ಮಹಾರಾಜನನ್ನು ಅರಸಿಕೊಂಡು ಉದ್ಯಾನಕ್ಕೆ ಬರ್ವನೇ ಗೋಸ್ಕರವಾಗಿ ಬಂದು, ತನ್ನಲ್ಲಿ ತಾನೆ:—''ಇದೇನು ? ಎಲ್ಲಿನೋಡಿದರೂ ಶಬ್ದವೇ ಇಲ್ಲ; ನಾನೀಗ

ಧರ್ಮಶ್ಚ ರಕ್ಷತಿ ನರಂ ನ ಧನಂ ಬಲಂ ವಾ ।
ಧರ್ಮಃ ಸುಖಾಯ ಮಹತೇ ನ ವಧೂವಿಲಾಸಃ ॥
ಧರ್ಮಾತ್ಮನಶ್ಚ ಮುದಮೇವ ಕರೋತಿ ಮೃತ್ಯು ।
ರ್ನಹ್ಯಸ್ತಿ ದುರ್ಗತಿಭಯಂ ನಿರತಸ್ಯ ಧರ್ಮೇ ॥೮೬॥

ಉನ್ಮಾದಯನ್ತಿಯೂ ರಾಜನೂ ಸೇನಾಪತಿಯೂ ಸ್ವಧರ್ಮರಕ್ಷೆಗಾಗಿ
ಪ್ರಾಣತ್ಯಾಗಮಾಡುವಿಕೆ.

ನೀತಿ :—ಸತ್ಪುರುಷರಿಗೆ ಧರ್ಮವೇ ಪಥ್ಯವು; ಪ್ರಾಣಗಳಲ್ಲ.



Unmadayanti, the King and the Commander-in-Chief sacrifice their own lives, true to their words and duty.

MORAL :—The pious value righteousness more than their lives.

ಶಬ್ದಮಾಡುವುದೂ ಯುಕ್ತವಲ್ಲ.'' ಎಂದು ಅಲ್ಲಿಯೇ ಸ್ವಲ್ಪಹೊತ್ತು ಯೋಚಿಸುತ್ತ ನಿಂತಿರ್ದು, ಅಕ್ಕ ತಿರುಗಿನೋಡಿ, ಶಂಕೆಯಿಂದ:—" ಆ ಸರೋವರದ ಸಮೀಪದಲ್ಲಿರುವ ವೃಕ್ಷದ ಕೆಳಗೆ ಆರೋ ಮಲಗಿರುವಂತೆ ಕಾಣುವುದು; ಎಮ್ಮ ಮಹಾರಾಜನಂತೆಯೇ ತೋರುವುದು; ಮತ್ತಾತನ ಬಳಿಯಲ್ಲಿಯೇ ಮಲಗಿರುವ ಹೆಂಗಸು, ಉನ್ಮಾದಯಸ್ತ್ರಿಯೇ ಆಗಿರಬೇಕು.'' ಎಂದು ಮಾತನಾಡಿಕೊಂಡು ಬಳಿಕ ಸಂತೋಷದಿಂದ:—"ಆಃ! ಮಹಾರಾಜನು ಸ್ವಸ್ಥನಾಗಲು ಈಗ ಅವಕಾಶವಾಯಿತು; ಮತ್ತೆನ್ನ ಧರ್ಮವೂ ಶ್ರಮವೂ ಸಾರ್ಥಕವಾಯಿತು'' ಎಂದು ಸಂತೋಷಿಸಿದ ಬಳಿಕ ಪುನಃ ಸಂದೇಹದಿಂದ:—"ಹಾಗಿರಲಾರದು; ಏಕೆಂದರೆ, ಈರ್ವರಿಗೂ ಪರಸ್ಪರ ಸಂಮತಿಯುಂಟಾಗಿರ್ದರೆ, ಇಲ್ಲಿಯೇ ಸಿದ್ಧವಾಗಿರುವ ಲತಾಗೃಹದ ಮೃದುಪರ್ಯಂಕದಲ್ಲಿ ವಿಶ್ರಾಂತಿಸುಖವನ್ನನುಭವಿಸುತಿರ್ದರು; ಬಹಿರಂಗವಾದೀ ಸರಸ್ತೀರದಲ್ಲಿ, ಈ ರೀತಿ ವಿಸ್ಮೃತಿಗೊಂಡಂತೆ ಮಲಗಿರುವುದು, ಏನೋ ಪ್ರಮಾದವನ್ನು ಸೂಚಿಸುವುದು.'' ಎಂದು ಶಂಕಿಸಿದ ಬಳಿಕ:—" ನಾನೇ ಅಲ್ಲಿಗೆ ಹೋಗಲೋ, ಬೇಡವೋ? ಹೋದರೆ ದೋಷವೇನು? ಅವರೆನಗೆ ಮಾತಾಪಿತೃಸ್ವರೂಪರಲ್ಲವೆ?'' ಎಂದು ಧೈರ್ಯದಿಂದ ಉನ್ಮಾದಯಸ್ತ್ರಿಯ ಬಳಿಗೈದಿ, ಅವಳನ್ನು ನೋಡಿ ಭ್ರಾಂತಿಯಿಂದ:—" ಇದೇನು? ಈಕೆಯ ನೇತ್ರಗಳು ವಿಕಸಿತವಾಗಿರ್ದರೂ ತಾರಕೆಗಳು ಮಾತ್ರ ಅಚಲವಾಗಿರುವುವು? ನಿದ್ರಾವಸ್ಥೆಯಲ್ಲಿಯೂ ಈ ರೀತಿಯಾಗುವುದುಂಟಲ್ಲವೇ? ಇಲ್ಲ!..... ಇದೇನು?..... ನಾಸಾಪುಟವು ವಿಕಸನೋನ್ಮೀಲನಗತಿಗಳಿಂದುಂಟಾಗುವ ಜಲನದಿಂದ ವಿರಹಿತವಾಗಿಹುದು! ಅದಲ್ಲದೆ ನಿಃಶ್ವಾಸದಿಂದ ನೆನೆದ ಮಹಾರಾಜನ ಕರವಸ್ತ್ರವು ಈಕೆಯ ನೆತ್ತಿಯಮೇಲಕ್ಕೆ ಬರಲು ಕಾರಣವೇನು?'' ಎಂದು ಅವಳ ಅಂಗದ ಸುತ್ತಲೂ ಸಂಚರಿಸಿ ನೋಡಿದ ಬಳಿಕ ಕುಳಿತುಕೊಂಡು:—" ಆಹಾ! ಬೆರಳ್ಗಗಳು ಬೆರೆತಿರುವುವು; ನೆಳ್ಳಗುರ್ಗಳಲ್ಲಿ ಅರುಣತೆಯೇ ಇಲ್ಲ; ಹಾಗೆ ನಿದ್ರಾವಸ್ಥೆಯಾಗಿದ ರೆ, ಈ ರೀತಿ ಸ್ವಭಾವವ್ಯತ್ಯಾಸಗಳುಂಟಾಗುತಿರ್ದುವೆ? ಇಲ್ಲ!

ಈಕೆಯು ಮೃತೆಯಾಗಿಯೇ ಇರಬೇಕು. ಅಯ್ಯೋ! ಈಕೆಯ ಮೃತಿಗೆ ಕಾರಣನೇನಾಗಿರಬಹುದು?'' ಎಂದು ಅಂಗಗಳನ್ನೆಲ್ಲ ಚೆನ್ನಾಗಿ ಪುನಃ ನೋಡಿ:—'' ಎಲ್ಲಿ ನೋಡಿದರೂ ಅಂಗದಮೇಲೆ ಒಂದು ಗಾಯವೂ ಕಾಣುವುದಿಲ್ಲ; ಕಣ್ಣಿಂದ ಹರಿದ ನೀರಿನ ಕಾಲುವೆಯು ಇನ್ನೂ ಆರಿಯೇ ಇಲ್ಲ. ಅಯ್ಯೋ! ಸಂದೇಹವೇನು? ಮಹಾರಾಜನ ಧಿಕ್ಕಾರದಿಂದ ಎದೆಯೊಡೆದು ಪ್ರಾಣಗಳು ಥಟ್ಟನೆ ಬಹಿರ್ಗತವಾಗಿರಬೇಕು. ಹಾ! ದುರ್ದೈವವೆ! ಹಾ! ಸಾಧ್ವೀಶಿರೋಮಣಿಯೆ! ತ್ರಿಲೋಕಸುಂದರಿಯಾಗಿಯೂ, ಧರ್ಮಪರಾಯಣೆಯಾಗಿಯೂ ಇರ್ದ ನಿನಗೀಲೀತಿಯಾದ ಮೃತಿಯುಂಟಾಯಿತೆ? ಛೇ! ದುಷ್ಟವಿಧಿಯೆ! ನಾನಿನ್ನು ದುಃಖಿಸಿ ಪ್ರಯೋಜನವೇನು? ಈ ಮಹಾಮಹಿಮೆಳನ್ನು ಪೂಜಿಸಿಯಾದರೂ ಕೃತಾರ್ಥನಾಗುವೆನು.'' ಎಂದು ಅಲ್ಲಿರ್ದ ಪುಷ್ಪಗಳನ್ನು ತಿರಿದು ತಂದು ಭಕ್ತಿವಶದಿಂದ—

[ತಾ:—'' (ಲಲಿ) ಎಲೌ ಮಹಾಪತಿವ್ರತೆ! ಪತಿಗೋಸ್ಕರವಾಗಿ ನೀನು ಅನೇಕವಾಗಿ ಒದಗಿರ್ದ ಭೋಗಗಳನ್ನೆಲ್ಲ ಲಕ್ಷಿಸದೇ ಹೋದೆ; ಅದಲ್ಲದೆ ಕೊನೆಗೆ ಪ್ರಿಯವಾದ ನಿನ್ನ ಪ್ರಾಣಗಳನ್ನೂ ಕೂಡ (ಅವನಿಗೋಸ್ಕರವಾಗಿಯೇ) ಅರ್ಪಿಸಿದೆ; ಈರೀತಿ ಪಾತಿವ್ರತ್ಯವೇ ಹೃದಯದ ಮುಖ್ಯವಾದ ಆಶೆಯಾಗುಳ್ಳ ನಿನಗಿಂತಲೂ (ಈ ಜಗತ್ತಿನಲ್ಲಿ) ಧನ್ಯಳು ಮತ್ತಾವಳಿಹಳು? ಅದಪ್ರಯುಕ್ತ ಎಲೌ ಮಾನಿನಿ! ಬಾರಿ ಬಾರಿಗೂ ತಲೆವಾಗಿ ಮಾಡುವೀ ಎನ್ನ ನಮಸ್ಕಾರಗಳು ನಿನ್ನನ್ನೇ ಸೇರಲಿ.'']

ಶ್ಲೋ॥ ಭರ್ತುರ್ಹೇತೋರಗಣಿತವತೀ ಭೋಗಯೋಗಾನನೇಕಾ-
ನಂತೇ ಪ್ರಾಣಾನಪಿ ಹಿತತಕರಾನತ್ಯಜಸ್ತ್ವಂ ಹಿ ಸಾಧ್ವೀ ॥
ಪಾತಿವ್ರತ್ಯಪ್ರಣಯಿಹೃದಯಾ ಕಾಸ್ತಿ ಧನ್ಯಾ ತ್ವದನ್ಯಾ ।
ಭೂಯೋಭೂಯಸ್ತವ ನಮ ಇದಂ ತನ್ವಿ ನಮ್ರೇಣ ಮೂರ್ಧ್ನಾ ॥೬೭॥

ಎಂದು ಸ್ತುತಿಸಿ, ಕೈಲಿರ್ದ ಪುಷ್ಪಗಳಿಂದಾಕೆಯನ್ನು ಪೂಜಿಸಿದ ಬಳಿಕ, ಆಕೆಗೆ ಪ್ರದಕ್ಷಿಣಂಗೈದು ನಮಸ್ಕರಿಸಿದವನಾಗಿ, ಅನಂತರ ಇತ್ತ ತಿರುಗಿ ಆತುರದಿಂದ:—" ನಾನಿನ್ನು ಮಹಾರಾಜನ ವಿಷಯವನ್ನು ವಿಚಾರಿಸುವೆನು. " ಎಂದು ಓಡಿಬಂದು, ಮಹಾರಾಜನ ವಕ್ಷಸ್ಥಲದಲ್ಲಿ ಕೀಲಿಸಿರ್ದ ಈಟಿಯನ್ನು ನೋಡಿ ಭೀತಿಯಿಂದ:—" ಅಯ್ಯೋ ! ಇದೇನೀ ಘೋರಕೃತ್ಯವು ? ಮಹಾರಾಜನು ಆತ್ಮಹತ್ಯೆಯನ್ನು ಮಾಡಿಕೊಂಡಂತಿರುವುದು. " ಎಂದು ಅವನ ದೇಹವನ್ನೆಲ್ಲ ಪರೀಕ್ಷಿಸಿ ಶೋಕದಿಂದ:—" ಹಾ ! ಮಹಾರಾಜನೂ ಗತಾಸುವಾದನು. " ಎಂದು ನೆಲದಲ್ಲಿ ಬಿದ್ದು ಮೂರ್ಛಿತನಾಗಿ, ಒಳಿಕ ಸ್ವಲ್ಪ ಚೇತರಿಸಿಕೊಂಡೆದ್ದು ಮನೋವಿಕಲ್ಪದಿಂದ:—" ಮಹಾರಾಜನೇ ! ದೇವನೇ ! ಎನ್ನೊಡೆಯನೇ ! ಅತ್ತ ಮಿತ್ರನೇ! ಎನ್ನ ಬಂಧುವೇ ! ಎನ್ನ ಜೀವನನೇ ! ಎನ್ನ ದೈವವೇ! ಇದೇಕೀ ರೀತಿ ಮೌನವಾಗಿರುವೆ? ನಾನೇನು ಸಿನ್ನಲ್ಲಿ ಅಪರಾಧವನ್ನು ಮಾಡಿದೆನು? ಉನ್ಮಾದಯನ್ತಿಯ ವಿಷಯವನ್ನು ಕುರಿತು ಇನ್ನು ಪ್ರಸ್ತಾಪಿಸೆನು; ಏಳು; ಮಾತನಾಡು; ನಾನಿನ್ನಾರನ್ನು ದೇವ, ಜೀಯ, ಸ್ವಾಮಿ ಎಂದು ಸಂಬೋಧಿಸಲಿ ? ಎನ್ನ ಸಾಹಸಪರಾಕ್ರಮಗಳನ್ನು ನೋಡಿ ಸಂತೋಷಿಸುವರಿನ್ನಾರು ? ಕಷ್ಟಕಾಲದಲ್ಲಿ ಎನ್ನನ್ನು ರಕ್ಷಿಪರಿನ್ನಾರು ? ಸಿನ್ನ ಮನ್ನಣೆಗಳನ್ನೆಂತು ಮರೆಯಲಿ ? ನಾನೀಗ ನಿರ್ಗತಿಕನಾದೆನು; ಪ್ರಜೆಗಳೆಲ್ಲರೂ ಅನಾಥರಾದರು; ನಾನೂ ಕೆಟ್ಟೆನು. " ಎಂದು ವಿವಿಧವಾಗಿ ಪ್ರಲಾವಿಸುತಿರ್ದು, ಒಳಿಕ ಗದ್ಗದ ಕಂಠನಾಗಿ, ದೇವತೆಗಳನ್ನು ಕುರಿತು ಸಂಬೋಧಿಸಿ:—" ಎಲೈ ದೇವತೆಗಳಿರಾ ! ಎನ್ನ ಸಂಕಟವನ್ನು ಕೇಳಿ ಸಂತೈಸವರಿನ್ನಾರೂ ಇಲ್ಲಿಲ್ಲ; ಎನ್ನ ಮಾತುಗಳನ್ನು ದಯೆಯಿಂದ ಲಾಲಿಸಿರಿ—

[ತಾ:—" (ಲಲ) ಈತನು ಎನ್ನ ರಾಜನು ; ಎನ್ನ ಪ್ರಾಣಕ್ಕೆ ಸಮನಾದ ಮಿತ್ರನು; ಎನಗೆ ಸರ್ವಸುಖವನ್ನೂ ಇತ್ತವನು; ಈಗಲಾ

ರಾಜಾ ಮಮ ಪ್ರಾಣಸಮಸ್ತಥಾ ಚ ಸುಖಸ್ಯ ದಾತಾ ಗತಜೀವಿತಶ್ಚ ।
ಸ್ವೈರೋತ್ಸವೇ ಯೇನ ವಿಧಾತುಮೇತಂ ಸ್ವಜೀವಿತಸ್ಯಾಪ್ಯನುರಕ್ಷಣಾರ್ಥಮ್ ॥೪೪॥

ದರೊ ಹಾ ! ಮೃತನಾಗಿಹನು; ಈತನನ್ನಗಲಿ ಈ ಜೀವಿತವನ್ನು ಸಂರಕ್ಷಿಸಿಕೊಳಲಿಚ್ಛಿಸೆನು. '']

ಎಂದು ಪ್ರಲಾಸಿಸದ ಒಳಿಕ ರಾಜನ ವಕ್ಷಸ್ಥಲದಲ್ಲಿರ್ದ ಈಟಿಯನ್ನು ಕಿತ್ತು ಕೈಯೊಳ್ ಧರಿಸಿಕೊಂಡು ಖೇದದಿಂದ:—

[ತಾ:—''(ಲೆ) ಈ ಹಾಳುದೇಹವು, ' ದುಷ್ಟವ್ರಣದಂತೆ ನಿರಂತರವೂ ಯಾತನಾಮಯವಾಗಿಯೂ, ಶೋಕಾಸ್ಪದವಾಗಿಯೂ ಇರುವುದು ' ಎಂಬದಾಗಿ ಇದುವರೆಗೂ ಇರ್ದ ಎನ್ನ ಖೇದಕ್ಕೆ ಲೋಕಕ್ಕಾಶ್ಚರ್ಯವನ್ನುಂಟುಮಾಡುವ ಈ (ಸ್ವಾಮಿ) ಕಾರ್ಯಕ್ಕಾಗಿ ಇದನ್ನು ಅರ್ಪಿಸುವುದರ ದ್ವಾರಾ–ತಕ್ಕ ಪ್ರತೀಕಾರವನ್ನು ಮಾಡುವೆನು. ''|

ಎಂದು ಹೇಳಿದ ಬಳಿಕ, ತನ್ನ ಕೈಲಿರ್ದ ಈಟಿಯನ್ನು ಸಂಬೋಧಿಸಿ ಶೋಕದಿಂದ:—'' ಎಲೈ ಆಯುಧವೇ ! ನೀನೆನ್ನೊಡೆಯನನ್ನು ಸ್ವರ್ಗಕ್ಕಡರಿಸಿದೆ; ನಾನೀಗ ಅವನನ್ನು ಕ್ಷಿಪ್ರದಲ್ಲಿಯೇ ಸೇರಬೇಕಾಗಿರುವುದು; ಅವನು ಅಲ್ಲಿ ಓರ್ವನೇ ಇರುವನು; ನಾನಲ್ಲಿಗೆ ಬೇಗ ಸೇರಲು ಸಹಾಯವನ್ನು ಮಾಡು. '' ಎಂದು ಆ ಈಟಿಯನ್ನು ಕಣ್ಣಿಗೊತ್ತಿಕೊಂಡ ಬಳಿಕ ವೀರಾವೇಶವನ್ನು ಹೊಂದಿ—'' ಮಹಾರಾಜನೇ! ಇದೊ ಬಂದೆನು. '' ಎಂದು ಹೇಳುತ್ತ ತಾನೂ ವಕ್ಷಸ್ಥಲವನ್ನು ತೀಪ್ರವಾಗಿ ಭೇದಿಸಿಕೊಂಡು, ಕೆಳಗೆ ಬಿದ್ದು ಮೃತನಾದನು.

ಒಳಿಕಲಾ ಚಿತ್ರಗುತ್ತರು, ಇದೆಲ್ಲವನ್ನೂ ಅದೃಶ್ಯರೂಪಿನಿಂದ ನೋಡುತಿರ್ದು, ಪರಮಾಶ್ಚರ್ಯಮಗ್ನರಾಗಿ:—

[ಗದ್ಯ|| ತಾ:—'' ಆಶ್ಚರ್ಯ ! ಈ (ಕಾರ್ಯವು) ಸತ್ಯವಾಗಿಯೂ ಅತ್ಯದ್ಭುತವಾದುದೇ ಅಹುದು !! '']

ದುಷ್ಟವ್ರಣಸ್ಯೇವ ಸದಾತುರಸ್ಯ ಕದೇವರಸ್ಯಾಸ್ಯ ಶುಗಾಕರಸ್ಯ |
ಕರೋಮಿ ಕಾರ್ಯಾತಿಶಯೋಪಯೋಗಾತ್ಪ್ರತ್ಯರ್ಥಿರಮ್ಯಂ ಪ್ರತಿಕಾರಖೇದಮ್ ||೮೯||
ಗದ್ಯಮ್|| ಆಶ್ಚರ್ಯಮದ್ಭುತರೂಪಂ ಬತ ಖಲ್ವಿದಮ್ ||

ಎಂದ ಬಳಿಕ ಚಿತ್ರನು ಗುಪ್ತನನ್ನು ಕುರಿತು ತವಕಡಿಂದ:—"ಅಡ್ಡಿಯೇನು ? ಈ ರೀತಿಯಾದ ಸ್ವಧರ್ಮಪರಾಯಣತೆಯನ್ನು, ಹಿಂದೆ ನೋಡಿದ ದೇಶಗಳಲ್ಲಿಯೇ ಆಗಲಿ, ಎಮ್ಮ ದೇವಲೋಕದಲ್ಲಿಯೇ ಆಗಲಿ, ಆರೂ ಕಂಡೂ ಇಲ್ಲ; ಅಥವಾ ಕೇಳಿಯೂ ಇಲ್ಲ. ಬೇಗನಡೆ! ಅದ್ಭುತವಾದೀ ಚಾರಿತ್ರ್ಯವನ್ನು ದೇವರಾಜನಿಗೆ ತಿಳುಹೋಣ." ಎಂದು ಹೇಳಲು, ಗುಪ್ತನು ಕುತೂಹಲದಿಂದ:—"ಚಿತ್ರನೆ! ಹಾಗೇ ಮಾಡೋಣ; ಆದರೆ, ಇವರುಗಳು ಪ್ರಾಣಹತ್ಯೆಯಂ ಮಾಡಿಕೊಂಡ ವಿಷಯವನ್ನು ಪುರೋಹಿತಸ್ತ್ರೀಲಕ್ಷ್ಮಣಜ್ಞರಿಗೂ, ಉನ್ಮಾದಯಸ್ತಿಯ ಮಾತಾಪಿತೃಗಳಿಗೂ ಮತ್ತಾ ಕುರುಬನಿಗೂ ತಿಳುಪಿಸಿರೆ, ಅವರೇನು ಮಾಡುವರೊ ಅದನ್ನೂ ಪರೀಕ್ಷಿಸಿಕೊಂಡು, ಬಳಿಕ ಎಮ್ಮ ಸುರಲೋಕ್ಕೆ ಹೋಗೋಣ." ಎಂದು ಹೇಳಲು ಈರ್ವರೂ ಅಲ್ಲಿಂದ ತೆರಳಿ, ಅದರಂತೆಯೇ ಅವರುಗಳಿಗೆ ತಿಳುಹಲು, ಅವರುಗಳೂ ದುಃಖವನ್ನು ಸಹಿಸಲಾರದೆ ಪ್ರಾಣಗಳನ್ನು ತ್ಯಜಿಸಿಬಿಟ್ಟರು. ಇದಾದ ಬಳಿಕ ಚಿತ್ರನೂ ಗುಪ್ತನೂ ಸುರಲೋಕವನ್ನು ಕುರಿತು ಅಂತರಿಕ್ಷವನ್ನಡರಿದರು.

ನಾಲ್ಕನೆಯ ಅಂಗವು ಮುಗಿದುದು.

ಐದನೆಯ ಅಂಗ

ಒಂದನೆಯ ಸಂಧಿ.

NO WRONG IS EVER BOLD

ಅಧರ್ಮದೌರ್ಬಲ್ಯ.

ಇತ್ತಲಾ ದೇವೇಂದ್ರನು ವೈಜಯಂತಪ್ರಾಸಾದದಗ್ರದಲ್ಲಿರುವ ಸುಧರ್ಮಾಖ್ಯಸಭೆಯೊಳ್ ಶಚೀದೇವಿಯಿಂದ ಸಮೇತನಾಗಿ ಧರ್ಮಾಸನದಲ್ಲಿ ಕುಳಿತು, ರಂಭಾದಿ ಅಪ್ಸರೆಯರ ನೃತ್ಯಗೀತಗಳ ಮಾಧುರ್ಯವನ್ನನು

ಭವಿಸುತಿರ್ದನು. ಆಕಾಲಕ್ಕೆ ಸರಿಯಾಗಿ ಯಮ ಮನ್ಮಥ ಯಕ್ಷೇಶ್ವರ ಮುಂತಾದವರು ಪ್ರವೇಶಿಸಿ, ತಂತಮ್ಮ ಸನಗಳಲ್ಲಿ ಕುಳಿತಕೊಂಡರು. ಬಳಿಕ ದೇವೇಂದ್ರನು ಯಮನನ್ನು ಕುರಿತು ತವಕದಿಂದ:—"ಎಲೈ ಮೃತ್ಯುವೇ ! ಭೂಲೋಕದಲ್ಲಿ ನೀವು ಮಾಡಿದ ಸಾಹಸಗಳೇನು?" ಎಂದು ಕೇಳಲು ಯಮನು ಅತಿಸಂಭ್ರಮದಿಂದ:—"ಸಹಸ್ರಾಕ್ಷನೇ ! ನಿನ್ನಾಜ್ಞೆಯಂತೆ ನಾವುಗಳು ಭೂಲೋಕದ ಪ್ರತಿರಾಷ್ಟ್ರವನ್ನೂ ಪ್ರವೇಶಿಸಿ ಅಲ್ಲಿನ ರಾಜರುಗಳನ್ನೂ ಮತ್ತು ಪ್ರಜೆಗಳನ್ನೂ ಸಹ ಪಾಪಕಾರ್ಯಾಸಕ್ತರನ್ನಾಗಿ ಮಾಡಿ, ಇವನು ಪ್ರಜೆ, ಇವನು ರಾಜ, ಎಂಬ ತಾರತಮ್ಯಗಳನ್ನೆಣಿಸದೆ, ಅವರುಗಳೆಲ್ಲರನ್ನೂ ಅಗಲೇ ನರಕಕ್ಕೆ ಕಳುಹಿರುವೆನು. ಅಂತೂ ನಿನ್ನೊಡೆ ತನಕ್ಕೆ ಕುಂದುಂಟಾಗದಂತೆ ಮಾಡಿರುವೆನು. ಅಪ್ಪಣೆಯನ್ನಿತ್ತಿರೆ ಈಗಲೇ ಆ ಪಾಪಿಗಳನ್ನು ವಿಚಿತ್ರತರವಾಗಿ ಹಿಂಸಿಸುವೆನು." ಎಂದು ಹೇಳಿ, ಆದಕ್ಕನುಸಾರವಾದ ಅಪ್ಪಣೆಯನ್ನು ತೆಗೆದುಕೊಂಡು ಹೊರಟು ಹೋದನು.

ಬಳಿಕ ಅಲ್ಲಿಗೆ ಚಿತ್ರಗುಪ್ತರು ವೇಗವಾಗಿ ಪ್ರವೇಶಿಸಿ ದೇವೆಂದ್ರನಿಗೆ ಕೈಮುಗಿದು ನಿಲ್ಲಲು, ದೇವೇಂದ್ರನು ಅವರುಗಳನ್ನು ಕುರಿತು ಕುತೂಹಲದಿಂದ:—"ನಿಮ್ಮ ಇಂಗಿತದಿಂದ ಏನೋ ಆಶ್ಚರ್ಯವು ಕಂಡು ಬರುವುದು ! ಅದೇನು ?" ಎಂದು ಕೇಳಲು ಚಿತ್ರನು ಪರಮವಿಸ್ಮಯವನ್ನು ತೋರುತ್ತ:—"ದೇವೇಶನನೇ ! ಆ ಆಶ್ಚರ್ಯದಂತಹದನ್ನು ನೀನು ಮಿಂದೆ ಕೇಳಿಯೂ ಇಲ್ಲ ! ಇನ್ನು ಮುಂದಕ್ಕೆ ಕೇಳುವುದೂ ಇಲ್ಲ ! ಅಂತಹ ನಿನ್ನಲ್ಲಿ ವಿಜ್ಞಾಪಿಸಲು ನಮ್ಮ ಮನಸ್ಸುಗಳು ಸ್ವಲ್ಪ ಮಿಂದೆಗೆಯುವುವು." ಎಂದು ಹೇಳಲು ಇನ್ದ್ರನು ಕುತೂಹಲದಿಂದ:—"ಭಯಪಡಬೇಡ; ಅದೇನು ಹೇಳು." ಎಂದು ಕೇಳಲು ಚಿತ್ರನು:—"ನೀನು ದೇವರಾಜ್ಯಾಧಿಪತ್ಯವನ್ನು ಭೂಲೋಕದ ರಾಜನೊಬ್ಬನಿಗೆ ಒಪ್ಪಿಸಲೇ ಬೇಕಾಗಿರುವುದು. ಇದೋ ಅವನ ಧರ್ಮಜ್ಞತೆಯನ್ನೂ ಗುಣಾತಿಶಯಗಳನ್ನೂ ಇಲ್ಲಿ ಒರೆದುಕ್ಕೊಂಡು ತಂದಿರುವೆವು." ಎಂದು ಹೇಳಿ ಆ ಪುಸ್ತಕವನ್ನು

ಅವನ ಮುಂದಿಟ್ಟರು. ಬಳಿಕ ಇಂದ್ರನು ಅದನ್ನು ತೆಗೆದು ಓದಿಕೊಂಡ ಬಳಿಕ ವಿಷ್ಣನಾಗಿ ವ್ಯಸನದಿಂದ:—" ಅಯ್ಯೋ ! ಈಗೇನು ಮಾಡಲಿ ? " ಎಂದು ಶುಕ್ರನನ್ನು ನೋಡಿ:—" ಶುಕ್ರನೇ ! ಎನ್ನನ್ನು ಉಳುಹುವುದಕ್ಕೆ ಇಲ್ಲೇನಾದನೂ ಅವಕಾಶವಿರುವುದೆ ? ನೋಡು. " ಎಂದು ಹೇಳಿ ಶೋಕಿಸಲುಪಕ್ರಮಿಸಿದುದನ್ನು ನೋಡಿದ ಶಚೀದೇವಿಯು, ವ್ಯಸನಗೊಂಡವಳಾಗಿ ಪತಿಯನ್ನು ಕುರಿತು:—" ದೇವ ! ನೀನೇಕಿಂತು ದುಃಖಿಸುವೆ ? ಪ್ರಪಂಚದಲ್ಲಿ ಅವಸಂಪದವೂ ಶಾಶ್ವತವಲ್ಲ; ನಾವೂ ಈ ಅಧಿಕಾರದಲ್ಲಿ, ಪ್ರಾಪಂಚಿಕ ಸುಖವನ್ನು ಬಹುಕಾಲ ಅನುಭವಿಸಿದೆವು; ಅರ್ಹರಾದವರನ್ಯಾರಾದರೂ ದೊರೆತರೆ ಮರ್ಯಾದಾಪುರಸ್ಸರವಾಗಿ ನಾವುಗಳೇ ಅವರಿಗೆಮ್ಮ ಅಧಿಕಾರವನ್ನು ವಹಿಸಿ, ಅವರ ಕೃತಜ್ಞತೆಯನ್ನು ಅರ್ಜಿಸೋಣ; ಅದಲ್ಲದೆ, ಈ ಚಿಂತಾಮಯವಾದ ಭಾರದಿಂದ ವಿಮುಕ್ತರಾಗಿ, ಧರ್ಮಾಶ್ರಯ ಬಲದಿಂದ ಮುಂದಿನ ಶ್ರೇಯೋಮಾರ್ಗಕ್ಕನುಕೂಲಿಸುವ ಶಾಂತಿಸುಖವನ್ನನುಭವಿಸೋಣ. " ಎಂದು ಸಮಾಧಾನಪಡಿಸಿದಳು. ಬಳಿಕ ಶುಕ್ರನು ಸಂತೋಷದಿಂದೆದ್ದು:—" ಸಹಸ್ರಾಕ್ಷನೇ ! ಅಂಜದಿರು; ದಂಡನೀತಿಗನುಸಾರವಾಗಿ, ಅವರುಗಳ ನಡೆತೆಯಲ್ಲಿ ಅನೇಕ ದೋಷಗಳು ಕಂಡುಬರುವುವು; ನಾನವುಗಳನ್ನು ಎತ್ತಿತೋರುವೆನು; ನೀನೇ ಅವುಗಳನ್ನೆಲ್ಲ ವಿಚಾರಿಸುವ ಅಧಿಕಾರವನ್ನು ವಹಿಸಿ, ಎನ್ನ ಅಭಿಪ್ರಾಯಗಳನ್ನೆಲ್ಲ ಅನುಮೋದಿಸಿಬಿಡು; ಆಗ್ಗೆ ಯಮನು ಅವರುಗಳನ್ನು ಹಿಂದಿನವರಂತೆ ನರಕಕ್ಕೇ ತಳ್ಳಿಬಿಡುವನು; ಆಗ್ಗೆ ನಿನ್ನ ಶತ್ರುವು ನಾಶವಾಗುವುದುಂದ ನಿನ್ನಾಧಿಪತ್ಯಕ್ಕೆ ಜ್ಯೋತಿಯೇ ಉಂಟಾಗಲಾರದು. " ಎಂದು ಉಟ್ಟಹಾಸದಿಂದ ಹೇಳಲು; ಇದನ್ನು ಕೇಳಿದ ಬೃಹಸ್ಪತಿಯು, ಈ ಅಧರ್ಮಾಲೋಚನೆಯನ್ನರಿತು ಸಹಿಸಲಾರದೆ ಇಂದ್ರನನ್ನು ಕುರಿತು ವಿನಯದಿಂದ:—" ದೇವೇಶ್ವರನೇ ! ಈ ಶುಕ್ರನು, ಧರ್ಮರಹಸ್ಯವನ್ನೂ ಮುಂದಣ ಪರಿಣಾಮವನ್ನೂ ತಿಳಿಯದೆ, ನಿನಗೆ ಹಿತವನ್ನುಂಟುಮಾಡಬೇಕೆಂಬ ಮೂಢೋತ್ಸಾಹವನ್ನು ಮಾತ್ರವೆ ಹೊಂದಿ, ಅದುಂದುಂಟಾಗುವ ಅಪಕೀರ್ತಿ

ಯನ್ನೂ ಹಾನಿಯನ್ನೂ ಉಪೇಕ್ಷಿಸಿ, ಈರೀತಿ ಅವಿವೇಕವನ್ನು ಬೋಧಿಸುವನು. ದೇವತೆಗಳಾದ ನಾವು ಮಹಾಸತ್ಯವಂತರೆಂದು ಸರ್ವ ಲೋಕಗಳಲ್ಲಿಯೂ ವಿಖ್ಯಾತರಾಗಿರುವೆವು ; ಹೀಗಿರುವಲ್ಲಿ ಸ್ವಕ್ಷೇಮ ಚಿಂತೆಯಿಂದಲೂ ಅಸೂಯೆಯಿಂದಲೂ ಅವಿವೇಕದಿಂದಲೂ ಪಕ್ಷಪಾತವ್ಯ ಸನಿಗಳಾದರೆ, ಧರ್ಮಹನನದೋಷವು ಪ್ರಾಪ್ತವಾಗಿ, ಆ ಮರ್ತ್ಯ ರಿಗೂ ಕೂಡ ನಮ್ಮಲ್ಲಿ ಲಾಘವವು ಉಂಟಾಗಿ, ಕೊನೆಗೆ ನಾವುಗ ಳೆಲ್ಲರೂ ನಾಶವನ್ನೈದುವೆವು ; ಮತ್ತು ಪಿತಾಮಹಾದಿ ಇತರ ಲೋಕ ಪಾಲರೂ ಎಮ್ಮನ್ನು ನೀಚರೆಂದು ನಿಂದಿಸುವುದಿಲ್ಲವೆ ? ಆದಪ್ರಯುಕ್ತ ಈ ಸಂದರ್ಭದಲ್ಲಿ ಧರ್ಮಾಧರ್ಮವನ್ನು ವಿಚಾರಿಸುವುದಕ್ಕಾಗಿ ಒಂದು ಮಹಾಸಭೆಯನ್ನು ಪ್ರತ್ಯೇಕವಾಗಿ ರಚಿಸಿ, ಬ್ರಹ್ಮದೇವನನ್ನೇ ಅದಕ್ಕೆ ಅಧ್ಯಕ್ಷನನ್ನಾಗಿ ಮಾಡೋಣ. '' ಎಂದು ಹೇಳಲು, ಶಚೀದೇವಿಯು:— '' ಹಾಗೆ ಮಾಡುವುದು ಯುಕ್ತವಾಗಿ ತೋರುವುದು.'' ಎಂದು ಹೇಳಲು, ದೇವೇಂದ್ರನು ಪಿನ್ನನಾಗಿ:—'' ಹಾಗೇ ಮಾಡಬಹುದು. '' ಎಂದು ಅನುಮತಿಸಲು, ಬೃಹಸ್ಪತಿಯು ಪುನಃ ಶಕ್ರನನ್ನು ಕುರಿತು:—''ದೇವೇ ನ್ದ್ರನೇ ಅಪ್ಸರಸ್ತ್ರೀಯರನ್ನು ಭೂಲೋಕಕ್ಕೆ ಕಳುಹಿ, ಆ ದೇವಸೇನ ಮಹಾರಾಜನೇ ಮುಂತಾದವರನ್ನು ಅಮೃತಪ್ರಯೋಗದಿಂದ ಬದುಕಿಸಿ ಬಹುಮರ್ಯಾದೆಯಿಂದುಪಚರಿಸಿ, ಇಲ್ಲಿಗೆ ಕರೆದುತರುವಂತೆ ಆಜ್ಞೆಮಾಡು ವನಾಗು ! '' ಎಂದು ಹೇಳಲು, ಅದರಂತೆಯೇ ಇಂದ್ರನು ಅಪ್ಸರೆಯ ರಿಗೆ ಆಜ್ಞೆಮಾಡಿ ಕಳುಹಿಸಲು ಅವರು ಭೂಲೋಕಕ್ಕಿಳಿದರು.

ಎರಡನೆಯ ಸಂಧಿ.

RIGHT IS DESTINED TO REVIVE.

ಧರ್ಮೋದ್ಧರಣ

ಇತ್ತಲಾ ಅಪ್ಸರಸ್ತ್ರೀಯರು ದೇವಸೇನನೇ ಮೊದಲಾದವರು ಮೃತ ರಾಗಿದ್ದ ಸ್ಥಳಕ್ಕೆ ಬಂದು, ಅಮೃತಪ್ರಯೋಗದಿಂದ ಮೊದಲು ದೇವಸೇನನ

ನ್ನು ಬದುಕಿಸಿದ ಒಳಿಕ,ಅವನನ್ನು ಕುರಿತು ಭಕ್ತಿಗೌರವಗಳಿಂದ:—"ಮಹಾ ಮಹಿಮನೆ! ನಿನ್ನ ಧರ್ಮಸ್ಥೈರ್ಯದಿಂದ ಸಂತುಷ್ಟನಾದ ದೇವೇಶ್ವರನು ನಿನ್ನನ್ನೂ ನಿನಗೋಸ್ಕರ ಮೃತಳಾದ ಉನ್ಮಾದಿನಿಯನ್ನೂ ಆಭಿಪಾರಗನ್ನೂ ಜೊತೆ ದೇವಲೋಕಕ್ಕೆ ಕರೆದುಕೊಂಡು ಬರುವಂತೆ ನಮಗೆ ಆಜ್ಞೆಮಾಡಿ ಕಳುಹಿಸಿರುವನು. ಅದಕಾರಣ ದೇವರಾಜನು ಮುಖ್ಯಾರ್ಥವಾಗಿ ಕಳುಹಿಸಿರುವ ಈವಿವ್ಯವಸ್ತ್ರಾಭರಣಗಳಿಂದಲಂಕೃತರಾಗಿ ಈಗಲೇ ನಮ್ಮೊಡನೆ ಬರಬೇಕು!" ಎಂದುಪಾರ್ಥಿಸಿ, ದೇವಸೇನ ಮಹಾರಾಜನನ್ನೂ ಆಭಿಪಾರಗನನ್ನೂ ಉನ್ಮಾದಿನಿಯನ್ನೂ ಬೇರೆಬೇರೆ ವಿಮಾನಗಳಲ್ಲಿ ಕುಳ್ಳಿರಿಸಿಕೊಂಡು ಅಂತರಿಕ್ಷವನ್ನಡರಿದರು. ಒಳಿಕವರುಗಳೊಳಿಸ್ಸೊರ್ವ ಅಪ್ಸರೆಯು ತವಕದಿಂದ:—"ಇವರುಗಳಂತೂ ಹೊರಟರು; ನಾನಿನ್ನು ಆ ಪುರೋಹಿತಸ್ತ್ರೀಲಕ್ಷಣಜ್ಞರನ್ನೂ ಉನ್ಮಾದಿನಿಯ ಮಾತಾಪಿತೃಗಳನ್ನೂ ಆ ಕುರುಜನನ್ನೂ ಅಮೃತಪ್ರಯೋಗದಿಂದ ಬದುಕಿಸಿ, ಈಗಲೇ ದೇವಲೋಕಕ್ಕೆ ಕರೆದುಕೊಂಡು ಹೋಗುವೆನು." ಎಂದು ಹೇಳಿ ಅವರುಗಳ ಬಳಿಗೆ ಹೊರಟುಹೋದಳು.

ಮೂರನೆಯ ಸಂಧಿ

RIGHT ALONE WILL TRIUMPH

ಧರ್ಮವಿಜಯ

ಇತ್ತಲಾರಚಿಸಿದ ಧರ್ಮಸಭೆಯಲ್ಲಿ ಇಂದ್ರಾದ್ಯಷ್ಟದಿಕ್ಪಾಲರೂ, ಶುಕ್ರ ಬೃಹಸ್ಪತಿ ಮುಂತಾದ ದೇವಮಂತ್ರಿಗಳೂ, ತಂತಮ್ಮಾಸನಗಳಲ್ಲಿ ಕುಳಿತಿರುವಾಗ ಬ್ರಹ್ಮದೇವನು, ಧರ್ಮಾಂಬರದಿಂದ ಅಲಂಕೃತನಾಗಿ ಪ್ರವೇಶಿಸಲು, ಸಕಲಸುರರೂ ಎದ್ದುನಿಂತು ವಂದನೆಯನ್ನು ಮಾಡಿದನಂತರ ಬ್ರಹ್ಮದೇವನು ಧರ್ಮಾಸನದಮೇಲೆ ಕುಳಿತು:—"ದೇವಸೇನನೇ ಮುಂತಾದ ವರನ್ನು ಕರೆತರತಕ್ಕುದು!" ಎಂದು ಆಜ್ಞೆಮಾಡಲು, ಅಪ್ಸರೆಯರು, ನಡೆ

ಮಡಿಗಳನ್ನು ಹಾಸಿ ಮರ್ಯಾದೆಯಿಂದ ಅವರುಗಳನ್ನು ಕರೆತಂದು ಅವರ ವರ ತರಗತಿಗಳಿಗನುಸಾರವಾಗಿ ದಿವ್ಯಪೀಠಗಳಲ್ಲಿ ಕುಳ್ಳಿರಿಸಿ ಪ್ರತಿಯೋರ್ವರಿಗೂ ವ್ಯಜನೋಪಚಾರಗಳನ್ನು ಮಾಡಲುಪಕ್ರಮಿಸಿದರು.

ಬಳಿಕ ಬ್ರಹ್ಮದೇವನು ಗಾಂಭೀರ್ಯದಿಂದ:—" ಮೃತ್ಯ್ವಾದೀ ದೇವಸೇನಸೇ ಮುಂತಾದವರ ಕೃತ್ಯಗಳ ವಿಷಯದಲ್ಲಿ ನೋಷಗಳೇನಾದರೂ ಕಂಡುಬಂದಲ್ಲಿ ಆಕ್ಷೇಪಿಸಬಹುದು! " ಎಂದು ಹೇಳಿದನು.

ಈ ಮಧ್ಯದೊಳ್ ಮರೆಯಲ್ಲಿ ನಿಂತಿರ್ದ ಯಮದೂತರು, ದೇವಸೇನಸೇ ಮುಂತಾದವರನ್ನು ಪಿಂಗದೃಷ್ಟಿಗಳಿಂದ ಸ್ವಲ್ಪಸ್ವಲ್ಪ ಇಣಿಕಿ ನೋಡುತ್ತ ತಂತಮ್ಮಲ್ಲಿ ತಾವೇ:— " ಒಳ್ಳೆಯದೊಳ್ಳೆಯದು ! ಎಲ್ಲೆ ನರಾಧಮರಿರಾ ! ಇಲ್ಲೀಗ ಅಪ್ಸರೆಯರಿಂದ ಉಪಚಾರಗೊಳ್ಳುತ್ತ, ಮುಂದೆಂತಾಗುವುದೆಂಬುದನ್ನು ಅರಿಯದೆ, ಹೆಮ್ಮೆಯಿಂದೊಡಗೂಡಿ ಕುಳಿತಿರುವಿರಾ? ಇರಲಿ! ನಿಮ್ಮಲ್ಲಿ ಸ್ವಲ್ಪ ದೋಷವಾದರೂ ಸಾಕ್ಷಿತವಾದರೆ ಎಮ್ಮ ಕೈವಶರಾಗುವಿರಿ; ಆಗ್ಗೆ ನಿಮ್ಮ ಕುಲ ಗೋತ್ರ ಅಧಿಕಾರ ಐಶ್ವರ್ಯ ಮುಂತಾದುವೊಂದನ್ನೂ ಗಣಿಸದೆ, ಚಿತ್ರವಿಚಿತ್ರವಾಗಿ ಪೀಡಿಸುವುದರ ಮೂಲಕವಾಗಿ ಎಮ್ಮ ಕೈಗಾರಿಕೆಗಳನ್ನೂ ಸತ್ಪಸಾಧನಗಳನ್ನೂ ತೋರುವೆವು; ಬಳಿಕ ಭೂಲೋಕದ ಪಿಂಸೆಗೂ ಎಮ್ಮ್ಯಲೋಕದ ಪಿಂಸೆಗೂ ಇರುವ ವ್ಯತ್ಯಾಸಗಳು ನಿಮಗೇ ತಿಳಿಯುವುವು! " ಎಂದು ಗಸಗಹಿಸುತ್ತಿರ್ದರು.

ಇತ್ತ ಇಂದ್ರನ ಎಡದಪಾರ್ಶ್ವದಲ್ಲಿ ಕುಳಿತಿರ್ದ ಶುಕ್ರನು, ಥಟ್ಟನೆ ತನ್ನಾಸನದಿಂದೆದ್ದು ಧರ್ಮಪುಸ್ತಕವನ್ನು ತೆಗೆದು ನೋಡಿಕೊಂಡು ಬಳಿಕ ಇಂದ್ರನಮುಖವನ್ನು ಉತ್ಸಾಹದಿಂದ ನೋಡಿ ನಕ್ಕು, ಬಳಿಕ ಧರ್ಮಾಸನದ ಕಡೆಗೆತಿರುಗಿ:—" ಧರ್ಮಸ್ವರೂಪರೆ ! ಚಿತ್ರಗುಪ್ತರು ಆರನ್ನು ಧರ್ಮಾಗ್ರೇಸರನೆಂದು ಅಭಿಪ್ರಾಯಪಟ್ಟಿರುವರೊ ಅಂತಹ ಈ ಮಹಾರಾಜನಲ್ಲಿಯೇ ಅನೇಕದೋಷಗಳಿರುವುವು. ಹೇಗೆಂದರೆ–ಕನ್ಯೆಯನ್ನು ಪರೀಕ್ಷಿಸುವ ಕಾರ್ಯವು ವರನದೇ ಆಗಿದ್ದರೂ, ಮುಖ್ಯವಿಷಯಗಳಲ್ಲಿ ರಾಜ

ನು ಸ್ವತಃ ಪ್ರವೇಶಿಸತಕ್ಕುದು ರಾಜನೀತಿಯಾಗಿದ್ದರೂ, ಅವುಗಳಲ್ಲಿ ಉಪೇಕ್ಷೆಯನ್ನು ತಳೆದು, ಅಸ್ವತಂತ್ರರಾದ ಇತರರ ವಾರ್ತಾಧಾರದ ಮೇಲೆ ಕನ್ಯೆಯನ್ನು ಧಿಕ್ಕರಿಸಿದುದರಿಂದಲ್ಲವೆ, ಈ ಅನರ್ಥಗಳೆಲ್ಲವೂ ಉಂಟಾಗಿ, ತಾನೂ ಆತ್ಮಹತ್ಯೆಯನ್ನು ಮಾಡಿಕೊಂಡನು? ಆದಕಾರಣ ರಾಜನು ಆತ್ಮಪರತ್ಯಾಡೋಷಕ್ಕೂ, ಇತರರ ಪ್ರಾಣಹಾನಿಗೆ ಅವಕಾಶವಂ ಕೊಟ್ಟ ಪಾತಕಕ್ಕೂ, ಸ್ವಕಾರ್ಯದಲ್ಲಿ ಉಪೇಕ್ಷೆಯನ್ನು ತಳೆದ ತಪ್ಪಿಗೂ, ಗುರಿಯಾಗಿರುವುದರಿಂದ, ಸಂಘಾತನರಕದಲ್ಲಿ ಯಾತನೆಯನ್ನು ಅನುಭವಿಸಿ ಮುಂದೆ ಅಜಗರವಾಗಿ ಜನ್ಮಿಸಬೇಕೆಂಬ ವಿಧಿಗೆ ಒಳಗಾಗಿರುವನು." ಎಂದು ದೋಷಗಳನ್ನಾರೋಪಿಸಿದನು.

ಬಳಿಕ ಬೃಹಸ್ಪತಿಯು ವಿನಯದಿಂದೆದ್ದು ಧರ್ಮಪುಸ್ತಕವನ್ನು ತಾನೂ ನೋಡಿ, ನಮ್ರಭಾವದಿಂದ:—"ಧರ್ಮೋಪ್ಲವರೆ! ಎನ್ನ ಮಿತ್ರನು ಆರೋಪಿಸಿರುವ ದೋಷಗಳು ರಾಜನೀತಿಗೂ ಧರ್ಮಸೂಕ್ಷ್ಮಕ್ಕೂ ಕೇವಲ ವಿರುದ್ಧವಾದುವು; ಹೇಗೆಂದರೆ, ರಾಜರು ಪ್ರಾಯೇಣ ಬಹುಕಾರ್ಯವ್ಯಾಸಂಗಿಗಳಾಗಿರುವುದರಿಂದ ತನ್ನಾಪ್ತರ ವಚನಗಳನ್ನು ಸಂಪೂರ್ಣಂತಾಗುವುದು; ಆದಲ್ಲದೆ,||ರಾಜಾನಶ್ಚಾರುಚಕ್ಷುಷಃ||ಎಂಬಂತೆ ರಾಜರಿಗೆ ಚಾರರೇ ಕಣ್ಣುಗಳೆಂಬುದು ಲೋಕಪ್ರಸಿದ್ಧವಾಗಿಯೂ ಯಥಾರ್ಥವಾಗಿಯೂ ಇರುವುದು; ಆದೂ ಅಲ್ಲದೆ, ಕನ್ಯೆಯರು ಹೊರಗೆ ರೂಪವತಿಯರಾಗಿ ತೋರಿಬಂದರೂ, ಒಳಗೆ ದುಷ್ಟವ್ಯಾಧಿಗಳೂ ಅಮಂಗಲ ದೋಷಗಳೂ ಇರಬಹುದಾದುದರಿಂದಲೂ, ಸ್ತ್ರೀಗ್ರಹಣೋದ್ಯೋಗಗಳಲ್ಲಿ ರಾಜರು ಪ್ರಥಮತಃ ತಾವೇ ಪ್ರವೇಶಿಸುವುದು ರಾಜಗೌರವಕ್ಕೂ ನೀತಿಗೂ ಬಹು ವಿರುದ್ಧವಾದುದರಿಂದಲೂ, ಈ ರಾಜನು ತನ್ನಾಪ್ತರಾದ ಪುರೋಹಿತಸ್ತ್ರೀಲಕ್ಷಣಜ್ಞರನ್ನು ಕಳುಹಬೇಕಾಗಿಬಂದಿತು. ಮತ್ತು ಅವರ ವಾರ್ತಾಧಾರವನ್ನೂ ನಂಬಬೇಕಾಯಿತು. ಆದಕಾರಣ ರಾಜನು ನಿರ್ದೋಷಿಯು."

ಎಂದು ಖಂಡಿಸಲು, ಬ್ರಹ್ಮನು ಗಾಂಭೀರ್ಯದಿಂದ:—"ಬೃಹಸ್ಪತಿಯ ಅಭಿಪ್ರಾಯವು ಸಾಧುವಾಗಿರುವುದು." ಎಂದು ಹೇಳಿದನು.

ಇದನ್ನು ಕೇಳಿದ ಶುಕ್ರನು, ಮನಃಕ್ಲೇಶಗೊಂಡವನಾಗಿ ಮೇಲಕ್ಕೆದ್ದು ಧೃಷ್ಟತೆಯಿಂದ:—"ಹಾಗಾದರೆ, ಜನ್ಮದಿನವು ಸಂಪೂರ್ಣವಾಗಿ ವಿವಾಹಿತಳಲ್ಲದ ಮತ್ತು ತನ್ನನ್ನು ಸೇರಿದ ಪಾತಿವ್ರತ್ಯವನ್ನು ಕಾಪಾಡಿಕೊಂಡಿರದ ವಿಷಯಗಳು ಸ್ಪಷ್ಟವಾಗಿ ರಾಜನಿಗೆ ತಿಳಿದುಬಂದಮೇಲೂ, ಶಾಸ್ತ್ರಾಧಾರದಂತೆ ಅಂತಹ ಸಂದರ್ಭಗಳಲ್ಲಿ ಕನ್ಯೆಯನ್ನು ಪರಿತ್ಯಜಿಸುವುದೆಂಬ ವಿಧಿಯನ್ನು ತಿಳಿದಿದ್ದೂ ಕೂಡ, ಅಕೆಯನ್ನು ಧಿಕ್ಕರಿಸಿದ ದೋಷದ ವಿಷಯದಲ್ಲಿ ಎನ್ನ ಪುತ್ರನು ಏನು ಹೇಳುವನು!" ಎಂದು ಉತ್ತಿತ್ತತಿರುಗಿಸೋಡುತ್ತ ಹೇಳಿದನು.

ಬಳಿಕ ಬೃಹಸ್ಪತಿಯು ವಿನಯದಿಂದ—"ಧರ್ಮವೇ! ಅದು ದೋಷವಲ್ಲ; ವಿವಾಹವು ಸಂಪೂರ್ಣವಾಗದೆ ಇದ್ದರೂ, ಆ ಕನ್ಯೆಯು ತನ್ನ ಪಾತಿವ್ರತ್ಯವನ್ನು ಕಾಪಾಡಿಕೊಂಡಿರ್ದು ಪುನಃ ಉದ್ದಿಷ್ಟಪತಿಯನ್ನೇ ಒಂದು ಪ್ರಾರ್ಥಿಸಿದ್ದರೂ, ಮತ್ತಂತಹ ಸಂಭವಗಳಲ್ಲಿ ಪುನಃ ವಿವಾಹಮಾಡಿಕೊಳ್ಳಬಹುದೆಂದು ಶಾಸ್ತ್ರಗಳಲ್ಲಿ ವಾಪಕ್ಷ್ಯವಚನಗಳಿದ್ದರೂ ಕೂಡ—ಅನೇಕ ಪ್ರಜೆಗಳಿಗೆ ಮಾರ್ಗದರ್ಶಕನಾದ ರಾಜನು ಮಾತ್ರ ಸುಂದರವಾದ ವಸ್ತುವೆಂದೇ ಆಗಲಿ, ತನ್ನನ್ನು ಆಕ್ಷೇಪಿಸುವವರಾರೂ ಇಲ್ಲವೆಂಬ ಗರ್ವದಿಂದಲೇ ಆಗಲಿ, ಆರೀತಿ ಪ್ರತಿಗ್ರಹಿಸಕೂಡದು; ಹಾಗೆ ಪ್ರತಿಗ್ರಹಿಸಿದುದೇ ಆದರೆ, ಈ ದುರಾಚಾರದ ಮೇಲ್ಪಂಗ್ತಿಯಿಂದ ರಾಷ್ಟ್ರದಲ್ಲಿ ವಾಗ್ಬಂಗದೋಷಗಳು ಪ್ರಬಲಿಸಿ, ಪ್ರಜೆಗಳಲ್ಲಿ ಪರಸ್ಪರ ನಂಬುಗೆಗಳು ತಪ್ಪಿಹೋಗಿ, ಸ್ವೇಚ್ಛಾಕಾರ್ಯಗಳುಂಟಾಗಿ, ತದ್ದ್ವಾರಾ ಪರಸ್ಪರದ್ರೋಹಗಳೂ ವೈರಗಳೂ ಪ್ರಬಲಿಸಿ, ರಾಜ್ಯವೂ ರಾಜನೂ ಹೀನಸ್ಥಿತಿಗೆ ಬರಲು ಕಾರಣವಾಗುವುದು. ಈ ವಿಷಯಗಳನ್ನೆಲ್ಲ ತಿಳಿದಿರ್ದ ಧರ್ಮಪ್ರಭುವಾಗಿರ್ದುದರಿಂದಲೇ ರಾಜನು ಅವಳನ್ನು ಪ್ರತಿಗ್ರಹಿಸಲಿಲ್ಲವು. ಆದಕಾ

ಬ್ರಹ್ಮನು ನ್ಯಾಯಸಭೆಯಲ್ಲಿ ದೇವಸೇನಮಹಾರಾಜನೇ ಮೊದಲಾದವರ ಪಾಪಪುಣ್ಯಗಳನ್ನು ವಿಚಾರಿಸುವಿಕೆ.

ನೀತಿ :—ನಿಜವಾದ ಪೂಜ್ಯತೆಯು ಗುಣಕ್ಕೇ ಹೊರತು ವಿತ್ತಾಧಿಕಾರಗಳಿಗಲ್ಲ



God Brahma judges the right and wrong of King Devasena and others in the Heavenly Court.

MORAL :—Real greatness lives in virtue ; but not in power or possession.

(PAGE 141)

ರಣ ರಾಜನ ಅನಡತೆಯಲ್ಲಿಯೂ ಸ್ವಲ್ಪವೂ ದೋಷವಿಲ್ಲವು." ಎಂದು ಅದೋಷವಾದವನ್ನೂ ಖಂಡಿಸಿಬಿಟ್ಟನು.

ಒಳಿಕ ಬ್ರಹ್ಮನು ಸಂತೋಷದಿಂದ---" ಆಃ ಇದೆಂತಹ ಧರ್ಮ ಸೂಕ್ಷ್ಮವು? ಅಹುದು! ಬೃಹಸ್ಪತಿಯು ಹೇಳಿದಂತೆ ರಾಜನು ಸಿದ್ಧೋಷಿಯು." ಎಂದು ಸಿದ್ಧಾಂತಮಾಡಿದನು.

ಇತ್ತ ನರಕದಲ್ಲಿ ನಿಂತಿದ್ದ ಯಮದೂತರು ಈ ಸಿದ್ಧಾಂತವನ್ನು ಕೇಳಿದೊಡನೆಯೇ ಬೆನ್ನಮುಖರಾಗಿ---" ಇವನೊಬ್ಬನು ತಪ್ಪಿಸಿಕೊಂಡರೇನು? ಇನ್ನೂ ಅರೇಳುಮಂದಿ ಇರುವರು; ಒಳ್ಳೆಯದು! ನೋಡೋಣ." ಎಂದು ಕ್ರೂರದೃಷ್ಟಿಯಿಂದ ಇಣಿಕಿನೋಡಿದರು.

ಬಳಿಕ ಶುಕ್ರನು ತಾನೂ ಬೆನ್ನನಾಗಿ---" ಕಮಲಾಸನನೆ! ರಾಜನನ್ನೇನೋ ನಿರ್ದೋಷಿಯೆಂದು ಸಿದ್ಧಾಂತಮಾಡಿದೆ; (ಮುಹಕ ದೃಷ್ಟಿಯಿಂದ ಬೃಹಸ್ಪತಿಯನ್ನು ನೋಡಿ) ಆದರೆ, ಈ ಅನಾಯತಗಳಿಗೆಲ್ಲ ಈಪ್ರಪಿತನೂ ಮತ್ತು ಈಸ್ತ್ರೀಲಕ್ಷಣಜ್ಞನೂ ಕಾರಣರಾಗಿರುವರು;ಹೇಗೆಂದರೆ– ಇವರು ರಾಜನ ನಂಬುಗೆಗೆ ಆಸ್ಪದರಾಗಿಯೂ, ಶಾಸ್ತ್ರಕೋವಿದರಾಗಿಯೂ, ರಾಜಸಿಗೂ ಕೂಡ ಮಾರ್ಗದರ್ಶಿಗಳಾಗಿಯೂ, ಬ್ರಾಹ್ಮಣರಾಗಿಯೂ ಇರ್ದರೂ, ಈಕನ್ಯೆಯ ವಿಷಯದಲ್ಲಿ ಮೃಷೆಯನ್ನಾಡಿ ಅವಳಲ್ಲಿ ಇಲ್ಲದ ಅಮಂಗಲದೋಷವನ್ನು ಆರೋಪಿಸಿದುದರಿಂದಲ್ಲವೆ–ಈ ಸರ್ವನಾಶವೂ ಉಂಟಾಯಿತು? ಆದಕ್ಕೆ ಇವರೇ ಬೀಜರಾದರು; ಅದಕಾರಣ ರಾಜದ್ರೋಹಪಾತಕಕ್ಕೂ ಅನೃತದೋಷಕ್ಕೂ ಪಾತ್ರರಾಗಿರುವುದರಿಂದ ಇದಕ್ಕೆ ಪ್ರಾಯಶ್ಚಿತ್ತರೂಪವಾಗಿ ಇಲ್ಲಿನ ಕುಂಭೀಪಾಕನರಕದಲ್ಲಿ ಕೆಲವು ಕಾಲ ಗೂಢಮಾತನೆಗಳನ್ನೂ ಬಳಿಕ ಕೆಲವುಕಾಲ ಕ್ರಕಚಛೇದನಸಂಕಟವನ್ನೂ ಅನುಭವಿಸಿ, ಮುಂದೆ ಜಂಬುಕಗಳ ಜನ್ಮವನ್ನು ಪಡೆವ ವಿಧಿಗೂ ಒಳಗಾಗಿಹರು." ಎಂದು ದೋಷವನ್ನು ಆರೋಪಿಸಿದನು.

ಇದನ್ನು ಕೇಳಿದ ಬೃಹಸ್ಪತಿಯು ವಿನಯಗಾಂಭೀರ್ಯಗಳಿಂದ:– "ಧರ್ಮಸ್ವರೂಪನೇ! ನನ್ನ ಮಿತ್ರನು ದೋಷಗಳನ್ನಾರೋಪಿಸುವುದ

ಕ್ಕಾಗಿ ಉಪಯೋಗಿಸಿದ ಮಾತುಗಳಲ್ಲಿ ಕೆಲವು ಸ್ವವಾದಘ್ನವೆಂದುವಾಗಿಯೂ, ಎನ್ನ ಪಕ್ಷಕ್ಕೆ ಅನುಕೂಲವಾಗಿಯೂ ಇರುವುವು; ಹೇಗೆಂದರೆ--ಪುರೋಹಿತಸ್ತ್ರೀಲಕ್ಷಣಜ್ಞರು ಶಾಸ್ತ್ರಕೋವಿದರಾಗಿಯೂ ಬ್ರಾಹ್ಮಣರಾಗಿಯೂ ಇರ್ದುದರಿಂದಲೇ, ಅವರಿಗೆ ಅಷ್ಟು ದೀರ್ಘವಾದಾಲೋಚನೆಯು ಸ್ಫುರಿಸಿತು; ಮತ್ತು ಅವರುಗಳ ಉದ್ದೇಶವು ರಾಜನಿಗೂ ಮತ್ತವನ ರಾಷ್ಟ್ರಕ್ಕೂ ಹಿತವನ್ನುಂಟುಮಾಡಬೇಕೆಂಬುದಾಗಿರ್ದುದೇ ಹೊರತು ಹಾನಿಯನ್ನುಂಟುಮಾಡಬೇಕೆಂದಿಂಗಿರಲಿಲ್ಲ; ಮತ್ತು ಸ್ತ್ರೀಗೆ ಅತಿರೂಪವೇ ಒಂದುದೋಷವು; ಇಂತಹ ಸುಂದರಿಯರನ್ನು ರಾಜರು ವರಿಸಿದಲ್ಲಿ ರಾಜ್ಯಕ್ಕೇ ಹಾನಿಯಾಗುವುದು; ಏಕೆಂದರೆ, ಸ್ವಭಾವತಃ ರಾಜರು, ರಜೋಗುಣಪ್ರಧಾನರು; ಮತ್ತು ಕಾಮಭೋಗಾಸಕ್ತರು; ಹೀಗಿರುವುದರಿಂದ ಅತಿಸುಂದರಿಯಾದ ಉನ್ಮಾದಿನಿಯನ್ನು ರಾಜನು ಪರಿಗ್ರಹಿಸಿದರೆ ಧರ್ಮಾರ್ಥಗಳಲ್ಲಿ ಉಪೇಕ್ಷೆಯನ್ನು ಹೊಂದಿ ಕಾಮೈಕಪರಾಯಣನಾಗುವುದರಿಂದ, ರಾಜ್ಯಕ್ಕೆ ಹಾನಿಯಾಗುವುದೆಂದು ಅವರುಯೋಚಿಸಿದುದು ಅವರನೀತಿಜ್ಞತೆಯನ್ನೂ, ರಾಜನಾಸ್ತ್ರರಾದವರಿಗೆ ಏಪಿತವಾದ ಹಿತಚಿಂತಕತ್ವವನ್ನೂ, ಮತ್ತು ಬ್ರಾಹ್ಮಸಂಪತ್ತಿಯನ್ನೂ ವಿಶದಪಡಿಸುವುದು; ಇದಕ್ಕೆ ದೃಷ್ಟಾಂತವಾಗಿ, ಈಕನ್ಯೆಯನ್ನು ನೋಡಿದ ದಿನನೊದಲ್ಗೊಂಡಲ್ಲವೆ, ರಾಜನು ಸ್ವಧರ್ಮವನ್ನೂ ಸ್ವಕಾರ್ಯಗಳನ್ನೂ ಬಿಟ್ಟು ಚಿಂತಾಸಕ್ತನಾದನು? ಅವನು ಚಿಂತಾಸಕ್ತನಾದುದರಿಂದಲ್ಲವೆ, ರಾಜ್ಯವೆಲ್ಲ ಹೀನಸ್ಥಿತಿಗೆ ಬಂದು ಈ ಅನರ್ಥಗಳೆಲ್ಲವೂ ಉಂಟಾಯಿತು? ಮತ್ತವಳ ಅತಿಶಯವಾದ ರೂಪವಲ್ಲವೆ, ಗ್ರಾಮಯಾತ್ರೆಗೆ ಬಂದ ರಾಜನ ಲೋಚನಗಳನ್ನೂ ಚಿತ್ತವನ್ನೂ ಆಕರ್ಷಿಸಿತು? ಈ ಸರ್ವಹಾನಿಗೂ ಅವಳ ಅತಿರೂಪವೇ ಕಾರಣವು; ಮತ್ತೂ ಅತಿರೂಪವೇ ಅವಳಲ್ಲಿರ್ದ ಅಮಂಗಲವು; ಅದಲ್ಲದೆ ಈ ಪುರೋಹಿತಸ್ತ್ರೀಲಕ್ಷಣಜ್ಞರಿಗೆ—ಈ ಕನ್ಯಾಘಟನವನ್ನು ತಪ್ಪಿಸುವುದರಲ್ಲಿ ಮುಖೇನ ರಾಜನಿಗೂ ರಾಷ್ಟ್ರಕ್ಕೂ ಪ್ರಜೆಗಳಿಗೂ, ಹಿತವನ್ನುಂಟುಮಾಡಬೇಕೆಂಬ ಲಕ್ಷ್ಯವಿರ್ದುದೇ ಹೊರತು—ಇವರುಗಳು ಈರೀತಿ ಪ್ರಾಣಹತ್ಯೆ

ಗಳನ್ನು ಮಾಡಿಕೊಳ್ಳಂತೆ ಮಾಡಬೇಕೆಂದೆಂದಿಗೂ ಇರಲಿಲ್ಲ.'' ಎಂದು ಹೇಳುತ್ತಿರುವುದರ ಮಧ್ಯದಲ್ಲಿ ಶುಕ್ರನು ಭಗ್ಗನೆ ತನ್ನಾಸನದಿಂದ ಮೇಲೆ ಕೆದ್ದು, ಬೃಹಸ್ಪತಿಯ ಮುಖವನ್ನು ನೋಡುತ್ತ, ಕೈತಲೆಗಳನ್ನು ಅಳ್ಳಾಡಿಸುತ್ತ ಸಹಾಸ್ಯಕವಾಗಿ:—''ಅಹುದಹುದು! ಆರೀತಿಯಾದ ದೀರ್ಘದರ್ಶಿತ್ವವೂ ಹಿತಚಿಂತೆಯೂ ಇರ್ದುದರಿಂದಲೇ, ಇಷ್ಟು ಜನರ ಪ್ರಾಣಗಳೂ ನಾಶವಾಗಿ, ರಾಜ್ಯವೇ ಅನಾಯಕವಾಯಿತು! ದಿವ್ಯ ಬ್ರಾಹ್ಮಣರು! ದಿವ್ಯಹಿತಚಿಂತಕರು!!'' ಎಂದು ಅಪಹಾಸ್ಯಮಾಡುವುದನ್ನು ನೋಡಿದ ಇಂದ್ರನು ಸಂತೋಷದಿಂದ ಫಕಫಕನೆ ನಕ್ಕು:—'' ಭಲಾ! ಭಲಾ! ಶುಕ್ರನೇ!'' ಎಂದು ಸಂತೋಷಪಡುವುದನ್ನು ನೋಡಿದ ಯಮಕಿಂಕರರು, ತಾವೂ ಸಂತೋಷದಿಂದ ಉಬ್ಬಿ ತಮ್ಮಲ್ಲಿ ತಾವೇ:—'' ಆಹಾಹಹ ಹಹ! ಎಂತಹ ಸಂಧಿಯನ್ನು ನೋಡಿ ಹೊಡೆದನ್ನೆಯ್ಯಾ! ಶುಕ್ರನೇನು ಕಡಮೆಯೇ? ಇಂತಹ ಪ್ರಚಂಡವಾದಿಯು ಇಲ್ಲದೇ ಇರ್ದರೆ ಎಮ್ಮ ನರಕವೆಲ್ಲ ಹಾಳಾಗಿ ಹೋಗುತಿರ್ದುದು! ದಿವ್ಯಸಾಹಸ! ದಿವ್ಯಸಾಹಸ!! ಅಂತೂ ಈ ಪಾರುವರಿಬ್ಬರೂ ನಮ್ಮ ಕೈಗೆ ಸಿಕ್ಕಿದಂತೆಯೇ ಆಯಿತು; ಮೃಷ್ಟಭೋಜನದಿಂದಲೂ ಭೂರಿದಕ್ಷಿಣೆಗಳಿಂದಲೂ ತುಷ್ಟಿಯನ್ನು ಪಡೆದು ಪುಷ್ಟರಾಗಿ, ಕಷ್ಟಕಾರ್ಯಗಳನ್ನು ಮಾಡದೆ, ಇಷ್ಟಬಂದಂತೆ ಏಹರುಸುತ್ತ ಕೊಬ್ಬಿರುವೀ ಭ್ರಷ್ಟಮಾನವರ ದೊಳ್ಳುಹೊಟ್ಟೆಗಳನ್ನು ಕುಟ್ಟಿಕುಟ್ಟಿ, ''ಕಷ್ಟಕಷ್ಟ'' ಎಂದು ಅರಚಿಕೊಳ್ಳಂತೆ ಮಾಡುವೆವು.'' ಎಂದು ಕುಣಿದಾಡುತಿರ್ದರು.

ಈ ಅವಿವೇಕವನ್ನೂ ಬಾಲಿಶತ್ವವನ್ನೂ ನಿಂದೆಯನ್ನೂ ಅರಿತ ಬೃಹಸ್ಪತಿಯು, ಇವರ ಅಜ್ಞಾನಕ್ಕೆ ವಿಷಾದಗೊಂಡು, ಬಳಿಕ ಬ್ರಹ್ಮನನ್ನು ಕುರಿತು ವ್ಯಸನದಿಂದ:—''ಧರ್ಮಾತ್ಮನನೆ! ಶುಕ್ರನೂ ಮತ್ತೀ ಇಂದ್ರನೂ ತಮ್ಮ ಬಾಲಿಶತ್ವದಿಂದಲೂ ಅಪಹಾಸ್ಯದಿಂಬಲೂ ಎಮ್ಮ ದೇವಸಭೆಗೇ ಅಪಕೀರ್ತಿಯುಂಟಾಗುವುದೆಂಬುದನ್ನು ಅರಿಯರು; ನಾನು ಹೇಳಿದುದನ್ನು ಸಂಪೂರ್ಣವಾಗಿ ಕೇಳಿ ತಿಳಿದುಕೊಳ್ಳದೆ, ಅದರಲ್ಲಿ ಏನೋ ದೋಷವಿದ್ದಂತೆ

ಭಾವಿಸಿಕೊಂಡು ಪಶುಗಳಂತಾಡುವರು '' ಎಂದು ಧರ್ಮಪುಸ್ತಕವನ್ನು ತೆಗೆದು ಬ್ರಾಹ್ಮಣ ಮುಂದಿಟ್ಟು, ಗಾಂಭೀರ್ಯದಿಂದ:—'' ಪುರೋಹಿತಸ್ತ್ರೀ ಲಕ್ಷಣಜ್ಞರ ವಾಗ್ವಾದ ಭಾಗವನ್ನು ದಯೆಯಿಂದ ಪರಾಮರ್ಶಿಸಬೇಕು! ಅಲ್ಲಿ ಪುರೋಹಿತನು ಸದುದ್ದೇಶದಿಂದೊಡಗೂಡಿ, ತನ್ನ ಬುದ್ಧಿಶಕ್ತಿಯನ್ನೆಲ್ಲ ಪ್ರಯೋಗಿಸಿರುವನೇ ಇಲ್ಲವೆ ನೋಡಬೇಕು; ಅವರುಗಳ ಲಕ್ಷ್ಯವು ರಾಜನಿಗೂ ರಾಷ್ಟ್ರಕ್ಕೂ ಪ್ರಜೆಗಳಿಗೂ ಹಿತವನ್ನುಂಟುಮಾಡುವುದರಲ್ಲಿ ಗನುಸರುವಂತೆ ತಿಳಿದುಬರುವುದೇ ಹೊರತು, ಪಾಸಿಯಂ ಮಾಡಬೇಕೆಂದಿರುವುದಿಲ್ಲ; ಹೀಗಿರುವುದರಿಂದ ಅವರ ಉದ್ದೇಶದಲ್ಲಿ ದೋಷವನ್ನಾರೋಪಿಸುವುದಕ್ಕಾಗುವುದಿಲ್ಲ; ಆ ವಿಷಯದಲ್ಲಿ ಅವರು ನಿರ್ದೋಷಿಗಳು.

ಇಷ್ಟೇಅಲ್ಲದೆ, ಪ್ರಾಣಿವರ್ಗದಿಂ ಮಾಡಲ್ಪಡುವ ಕಾರ್ಯಗಳು ದೈವಿಕ ಭೌತಿಕ ಸಂಯೋಜನಗಳ ಅನುಕೂಲ್ಯದಿಂದ ಕೆಲವುವೇಳೆ ಉದ್ದಿಷ್ಟಫಲಗಳನ್ನುಂಟುಮಾಡುವುವು ; ಕೆಲವುವೇಳೆ ಕಾರ್ಯಗಳು ಸದುದ್ದೇಶಪೂರ್ವಕವಾಗಿದ್ದರೂ, ದೈವಿಕ ಭೌತಿಕ ಸಂಯೋಗಗಳ ಪ್ರಾತಿಕೂಲ್ಯ ದೋಷದಿಂದ ಉದ್ದೇಶಕ್ಕೆ ವಿರುದ್ಧವಾದ ದುಷ್ಫಲಗಳನ್ನುಂಟುಮಾಡುವುವು; ಹೀಗಾಗುವುದು ಮರ್ತ್ಯರಿಗೆ ಪಾತ್ರವೇ ಎಂದು ಭಾವಿಸಲಾಗದು; ಇದು ಸುರರಾಡೆಮುಗೂಸಾಮಾನ್ಯವು; ಹೀಗಿರುವುದರಿಂದ ದೈವಿಕ ಭೌತಿಕ ವ್ಯತ್ಯಾಸಗಳಿಂದುಂಟಾದ ಈ ಪ್ರಾಣಹಾನಿಗಳಿಗಾಗಿ, ನಿರಪರಾಧಿಗಳಾದೀ ದ್ವಿಜನರನ್ನು ನಿಂದಿಸುವುದು ಯುಕ್ತವೆ? ಅದಲ್ಲದೆ ಅವರುಗಳು ಈಕೆಯ ಸಂದರ್ಶನಮಾತ್ರದಿಂದಲೇ ರಾಜ್ಯವೆಲ್ಲ ಹಾಳಾಗುವುದು, ಎಂದು ಯೋಚಿಸಿದುದಕ್ಕನುಸಾರವಾಗಿ ಅವಳನ್ನು ನೋಡಿದಂದಿನಿಂದಲೇ ಏಪತ್ತಿನ ಮೇಲೆ ಏಪತ್ತುಪ್ರಾಪ್ತವಾಯಿತು; ಅಂತಹ ಏಪತ್ತನ್ನು ತಪ್ಪಿಸಬೇಕೆಂಬುದಕ್ಕಾಗಿಯೇ ಅವರು ಈ ಪ್ರತಿಬಂಧವನ್ನು ಮಾಡಿದರು; ಅದರೆ ದೈವಯತ್ನವು ಪ್ರತ್ಯೇಕವಾಗಿ ಮಾಡಿಬಿಟ್ಟಿತು; ಮತ್ತು ರಾಜಾದಿಗಳು ಏಮ್ಮ ಕಾರ್ಯದಿಂದ ಮೃತರಾದರೆಂದು ತಿಳಿದು ಒಂದಕೂಡಲೇ ತಾವೂ ತಮ್ಮ ಪ್ರಾಣಗಳನ್ನೂ ತ್ಯಜಿಸಿ ತದ್ದ್ವಾರಾ ಸ್ವಾಮಿಭಕ್ತಿಯನ್ನು ವ್ಯಕ್ತಗೊಳಿಸಿರು

ವರು; ಹೀಗಿರುವಲ್ಲಿ ಸತ್ಯಾತ್ಮರಾಗಿಯೂ ಲೋಕಹಿತೈಷಿಗಳಾಗಿಯೂ ಇರುವ ಈ ಬ್ರಾಹ್ಮಣರಲ್ಲಿ ದೋಷವೆಲ್ಲಿತೋರುವುದು? ಅದಕಾರಣ ಇವರು ನಿರ್ದೋಷಿಗಳೆಂದೇ ಎನ್ನಿಸಿದ್ದಾಂತವು.'' ಎಂದು ಹೇಳಿದನು.

ಈ ಧರ್ಮಸೂಕ್ಷ್ಮಗಳನ್ನು ಕೇಳಿದ ಬ್ರಹ್ಮದೇವನು, ಸ್ವಲ್ಪ ಸಂಶಯಗೊಂಡು, ಸ್ವಲ್ಪಕಾಲ ಆತ್ಮಜಿಜ್ಞಾಸೆಯಿಂದ:—'' ಶುಕ್ರನುಹೇಳಿದಂತೆ, ಈ ಅನಾಹುತಗಳೆಲ್ಲವೂ ನಡೆದಿರುವುದನ್ನು ನೋಡಿದರೆ, ಈ ಬ್ರಾಹ್ಮಣರ ಧರ್ಮದರ್ಶಿತ್ವವು ವಿಫಲವಾಗುವುದು; ಮತ್ತು ಬೃಹಸ್ಪತಿಯು ನಿರೂಪಿಸಿದಂತೆ ಈ ದ್ವಿಜರಸರಸ್ಪರಸಂವಾದದ ಸಂದರ್ಭವನ್ನು ನೋಡಿದರೆ, ಅವರು ಊಹಿಸಿದಂತೆಯೇ, ಈ ಸ್ತ್ರೀಯನ್ನು ರಾಜನು ನೋಡಿದ ಮಾತ್ರದಿಂದಲೇ ರಾಜ್ಯವು ಅನಾಯಕವಾಗಿ ಕೊನೆಗೆ ಈ ಸರ್ವನಾಶವೂ ಆಗಿರುವುದು; ಈ ವಿಷಯದಲ್ಲಿ ಈರ್ವರ ಮಾತೂ ನಿಜವಾಗಿರುವುದು; ಈಗ ಇದರಲ್ಲಿ ದೋಷವನ್ನಾರೋಪಿಸುವುದಕ್ಕೂ ಯತ್ನವೇ ಇಲ್ಲದಂತಾಗಿದೆ; ಹಾಗಾದರೆ ಇದಕ್ಕೆ ಕಾರಣವೇನಾಗಿರಬೇಕು? ದೈವಿಕ ಭೌತಿಕಕಾರ್ಯಗಳಲ್ಲಿಯೂ ವ್ಯತ್ಯಾಸವೂ ವಿರೋಧವೂ ಉಂಟಾಗುವೇಕಾದರೆ, ಅದಕ್ಕೂ ಕಾರಣಗಳಿರ್ದೇ ಇರಬೇಕು. ಇಲ್ಲಿ ಈಗ ಅವಕಾರಣವನ್ನು ಯೇಳುವುದಕ್ಕಾದೀತು?'' ಎಂದು ಸ್ವಲ್ಪಹೊತ್ತು ಏಕಾಗ್ರಚಿಂದ ಯೋಚಿಸುತ್ತಿದ್ದು ಪುನಃ:—'' ಆಃ ಇದರ ನಿಜಾಂಶವು ಈಗ ತಿಳಿಯಿತು; ಇಂದ್ರನು ಪರರ ಶ್ರೇಯಸ್ಸಿನ ವಿಷಯದಲ್ಲಿ ಅಸೂಯೆಯನ್ನು ತೊಂದಿ ಅಧರ್ಮವೇ ಈ ಸರ್ವನಾಶಕ್ಕೂ ಕಾರಣವಾಯಿತು; ಈ ಸರ್ವನಾಶವು ಪ್ರಾಪ್ತವಾದರೂ, ಈ ರಾಜನೇ ಮುಂತಾದವರು ತಂತಮ್ಮ ಧರ್ಮವನ್ನು ಬಿಡದೆ ಕಾಪಾಡಿಕೊಂಡರಾದುದರಿಂದ, ಈ ಇಂದ್ರನು ತನ್ನ ಅಧಿಕಾರವನ್ನು ತಾನೆ ಇವರಿಗೆ ಈಗ ಒಪ್ಪಿಸಬೇಕಾಗಿರುವುದು; ಮುಖ್ಯವಾಗಿ ಭೂಲೋಕದಲ್ಲಿರ್ದ ಧರ್ಮವು, ಈ ಇಂದ್ರಲೋಕಕ್ಕೆ ಬಂದು ಇಲ್ಲಿನ ಅಧರ್ಮಗಳನ್ನೆಲ್ಲ ನಾಶಮಾಡುವುದಕ್ಕಾಗಿ ಪ್ರಯತ್ನಿಸುವುದರಿಂದ, ಈ ಅತಿಶಯವಾದ ಕಾರ್ಯಗಳಾಗಿರುವುವು; ಅದರೆ ಈ

ಕೃತ್ಯಗಳನ್ನು ಅನಾಹುತಗಳೆಂದು ಹೇಳಕೂಡದು; ಏಕೆಂದರೆ, ಈ ರಾಜನೇ ಮುಂತಾದವರ ಕಾರ್ಯಗಳೆಲ್ಲವೂ ಸ್ವಧರ್ಮಪಾರಮಿತತ್ವಗಳನ್ನು ಸೂಚಿಸುವುವು; ಆದುದರಿಂದ ಈ ಆತ್ಮಹತ್ಯೆಗಳನ್ನು ದೋಷವೆಂದು ಯೋಚಿಸಕೂಡದು; ಏಕೆಂದರೆ, ಇಂತಹ ಧರ್ಮಸ್ಥೈರ್ಯವಿರುವ ಮಹಾತ್ಮರ ಮೂಲಕವೇ ಧರ್ಮವು ಉಜ್ಜೀವಿಸತಕ್ಕದ್ದು; ಆದಕಾರಣ ಇವರುಗಳಲ್ಲಿ ದೋಷವನ್ನೆಣಿಸಕೂಡದು.'' ಎಂದು ಸಿದ್ಧಾಂತಮಾಡಿಕೊಂಡ ಬಳಿಕ ಸಭಿಕರನ್ನು ಕುರಿತು:—'' ಈ ಪುರೋಹಿತಸ್ತ್ರೀಲಕ್ಷಣಜ್ಞರ ಉದ್ದೇಶವು ಸದುದ್ದೇಶವಾಗಿರುವುದರಿಂದ ಅವರು ದೋಷಿಗಳೆಂದಿಗೂ ಅಲ್ಲ; ಮತ್ತು ಸ್ವಾಮಿಹಿತಾರ್ಥವಾಗಿ ತಾವೂ ಪ್ರಾಣಗಳನ್ನು ಅರ್ಪಿಸಿರುವುದರಿಂದ ಅವರನ್ನು ಮಹಾತ್ಮರೆಂದೇ ಹೇಳಬೇಕು.'' ಎಂದು ಸಿದ್ಧಾಂತವನ್ನು ಹೇಳಿದನು.

ಇದನ್ನು ಕೇಳಿದೊಡನೆಯೇ ಶುಕ್ರನು ಹತಾಶನಾಗಿ:—'' ಬ್ರಹ್ಮದೇವನೇ! ಉನ್ಮಾದಯನ್ತಿಯಲ್ಲಿಯೂ ಮತ್ತಾ ಅಭಿಪಾರಗನೇ ಮುಂತಾದ ವರಲ್ಲಿಯೂ ದೋಷಗಳನ್ನಾರೋಪಿಸೋಣವೆಂದಿದ್ದೆನು; ಆದರೆ ಎನ್ನ ಮಿತ್ರನಾದ ಬೃಹಸ್ಪತಿಯು ಅಭಿಪ್ರಾಯದಂತೆ 'ಉದ್ದೇಶವೇ ಮುಖ್ಯವಾದುದು' ಎಂಬ ಪಂಗ್ತಿಯನ್ನೇ ನೀನೂ ಪ್ರಬಲಪ್ರಮಾಣವನ್ನಾಗಿ ಅಂಗೀಕರಿಸಿರುವುದರಿಂದ, ಬಾಹ್ಯಕರ್ಮಗಳ ಆಧಾರದಮೇಲೆ ಪ್ರಸಂಗಮಾಡುವುದರಿಂದೇನು ಪ್ರಯೋಜನ?'' ಎಂದು ಖಿನ್ನನಾಗಿ ತನ್ನಾಸನದಲ್ಲಿ ಮೌನವಾಗಿ ಕುಳಿತುಕೊಂಡನು.

ಬಳಿಕ ಬ್ರಹ್ಮದೇವನು ಸಂತುಷ್ಟನಾಗಿ ಸಭಿಕರನ್ನು ಕುರಿತು:—''ಎಲೈ ದೇವತೆಗಳಿರಾ! ಇವರೆಲ್ಲರೂ ನಿರ್ದೋಷಿಗಳು; ಮಹಾಪುಣ್ಯವಂತರು.'' ಎಂದು ಹೇಳಿದ ಬಳಿಕ ದೇವಸೇನನೇ ಮುಂತಾದವರನ್ನು ಕುರಿತು:—''ನಿಮನಿಮಗೆ ಆವಾವ ವರವು ಬೇಕೊ ಅದನ್ನು ನೀವು ಈಗ ಬೇಡಿ ಎನ್ನಿಂದ ಪಡೆಯಬಹುದು.'' ಎಂದು ಹೇಳಿದನು.

ಇದನ್ನು ಕೇಳಿದ ಕುರುಬನು ತಾನು ಮೊದಲೆದ್ದು ನಿಂತು ಕೈಮು

ಗಿದುಕೊಂಡು:—"ಬ್ರಹ್ಮದೇವನೇ! ನಾನು ಮರ್ತ್ಯಲೋಕದಲ್ಲಿ ಎಮ್ಮ ಮಹಾರಾಜನ ರಾಷ್ಟ್ರದ ಪ್ರಜೆಯಾಗಿಯೂ, ರಾಜಭಕ್ತಿನಿರತನಾಗಿಯೂ, ರಾಜಕಾರ್ಯಕ್ಕಾಗಿ ತನುಧನಪ್ರಾಣಗಳನ್ನು ಒಂದೆಗೆಯದೆ ಅರ್ಪಿಸುವ ಸತ್ಪ್ರಜಾಸಂಪತ್ತಿಯುಳ್ಳವನಾಗಿಯೂ ಎಂತಿರ್ದೆನೋ, ಅದರಂತೆಯೇ, ಈಗಲೂ ಮುಂದಿನ ಜನ್ಮಗಳಲ್ಲಿಯೂ ಆಗುವಂತೆ ಎನಗೆ ವರವನ್ನು ಅನುಗ್ರಹಿಸಬೇಕೆಂದು ಬೇಡುವೆನು." ಎಂದು ಪ್ರಾರ್ಥಿಸಿದನು.

ಇವನಂತೆಯೇ ಆ ದ್ವಿಜರೀರ್ವರೂ ಎದ್ದುನಿಂತು ವಂದಿಸಿ:—"ಪಿತಾಮಹನೇ! ಮರ್ತ್ಯಲೋಕದಲ್ಲಿ ಧರ್ಮಪ್ರಿಯನಾದ ಎಮ್ಮ ಮಹಾರಾಜನ ಆಪ್ತಮಂತ್ರಿಗಳಾಗಿಯೂ, ಅವನ ಮತ್ತು ಅವನ ಪ್ರಜೆಗಳ ಹಿತವನ್ನೇ ಬಯಸುವವರಾಗಿಯೂ, ಎಂತಿರ್ದೆವೋ ಅದರಂತೆಯೇ, ಈ ಲೋಕದಲ್ಲಿಯೂ ಮುಂದಿನ ಭವಗಳಲ್ಲಿಯೂ ಆಗುವಂತೆ ವರವನ್ನೆಮಗೆ ಕರುಣಿಸುವನಾಗು." ಎಂದು ಪ್ರಾರ್ಥಿಸಿದರು.

ಬಳಿಕ ಕಿರೀಟವತ್ಸನೂ ಅವನ ಭಾರ್ಯೆಯಾದ ಇಂದುಮತಿಯೂ ಎದ್ದುನಿಂತು ದೈನ್ಯದಿಂದ:—"ಪರಮೇಷ್ಠಿಯೇ! ನಾವಾ ಭೂಲೋಕದಲ್ಲಿ ಎಮ್ಮ ಪ್ರಜೇಶ್ವರನ ಪುರನಿವಾಸಿಗಳಾಗಿಯೂ ರಾಜಯೋಗ್ಯವಾದ ಕನ್ಯೆಯನ್ನು ಪಡೆದವರಾಗಿಯೂ ಎಂತಿರ್ದೆವೊ ಅದರಂತೆಯೇ, ಇಲ್ಲಿಯೂ ಮುಂದಿನ ಭವಗಳಲ್ಲಿಯೂ ಆಗುವಂತೆ ವರವನ್ನು ಅನುಗ್ರಹಿಸುವನಾಗು." ಎಂದು ಬೇಡಿದರು.

ಅನಂತರ ಅಭಿಸಾರಗನು ಶೌರ್ಯವನ್ನು ವ್ಯಕ್ತಗೊಳಿಸುತ್ತ ಎದ್ದುನಿಂತು, ವಿನಯದಿಂದ:—"ಕಮಲಾಸನನೇ! ನಾನು ಮನುಷ್ಯಲೋಕದಲ್ಲಿ ಎನ್ನೊಡೆಯನ ಆಪ್ತಸೇವಕನಾಗಿಯೂ, ಪತಿಕಾರ್ಯಕ್ಕಾಗಿ ತನುಧನಮನಃಪ್ರಾಣಗಳನ್ನಾದರೂ ಅರ್ಪಿಸಲು ಪ್ರಮೋದಗೊಳ್ವ ಭೃತ್ಯನಾಗಿಯೂ, ಮಹಾರಾಜನನ್ನಗಲಿ ಒಂದುಕ್ಷಣವೂ ಜೀವಿಸತಕ್ಕವನಲ್ಲವಾಗಿಯೂ, ಎಂತಿರ್ದೆನೊ ಅದರಂತೆಯೇ, ಇಲ್ಲಿಯೂ ಮುಂದಿನ ಜನ್ಮಗಳಲ್ಲಿಯೂ ಆಗುವಂತೆ ಎನಗೆ ವರವನ್ನು ಕರುಣಿಸು." ಎಂದು ಬೇಡಿದನು.

ಬಳಿಕ ಉನ್ಮಾದಯನ್ತಿಯು ಎದ್ದುನಿಂತು ದುಃಖಾಶ್ರುಗಳನ್ನು ಸುರಿಸುತ್ತ ಲಜ್ಜಾನತವದನೆಯಾಗಿ ಗದ್ಗದಸ್ವರದಿಂದ:—"ವಾಣೀಶನೆ! ಜನ್ಮಕ್ರಮವನ್ನು ದಾಟುವವರೆಗೂ ಪ್ರತಿಜನ್ಮದಲ್ಲಿಯೂ ಈ ಮಹಾರಾಜನ ಪತ್ನಿಯಾಗಿರಬೇಕೆಂಬ ಸಂಕಲ್ಪವು ಮನದೊಳಗೆ ನೆಲೆಗೊಂಡಿರುವುದು; ನಾನು ಪುತ್ರಲೋಕದಲ್ಲಿ ಎನ್ನ ವಲ್ಲಭನ ಅಂಗಸುಖವನ್ನು ಪಡೆವುದಕ್ಕಾಗಿ ಬಗೆಬಗೆಯಾದ ಕಷ್ಟಗಳನ್ನೆಲ್ಲ ಅನುಭವಿಸಿದೆನು; ಆದರೂ ಎನ್ನ ದುರದೃಷ್ಟದೋಷದಿಂದಲೋ, ಅಥವಾ ಅಗ್ನಿ ಪತಿಸೇವೆಯಭಾಗ್ಯವೆನಗಿಲ್ಲದುದರಿಂದಲೋ, ಎನ್ನ ಮನೋವಲ್ಲಭನು ಎನ್ನನ್ನು ಧಿಕ್ಕರಿಸಲು, ಅವನಿಗಾಗಿ ಕೊನೆಗೆ ಎನ್ನ ಪ್ರಾಣಗಳನ್ನೇ ಅರ್ಪಿಸಿದೆನು; ಈಗಲಾದರೂ ಎನ್ನಮೇಲೆ ಎನ್ನ ಪತಿಗೆ ಕರುಣೆಯುಂಟಾಗಿ ಎನ್ನನ್ನು ಪತ್ನಿಯನ್ನಾಗಿ ಸ್ವೀಕರಿಸುವಂತೆ ವರವನ್ನು ಕರುಣಿಸಿ ಕಾಪಾಡಬೇಕೆಂದು ಬೇಡುವನು." ಎಂದು ಕಣ್ಣೀರನ್ನು ತೊಡೆದುಕೊಂಡು ನಮಸ್ಕರಿಸಿದಳು.

ಬಳಿಕ ಬ್ರಹ್ಮದೇವನು ಕಾರುಣ್ಯವಶದಿಂದ ಉನ್ಮಾದಯನ್ತಿಯನ್ನು ಕುರಿತು:—"ಎಲೆಮಗಳೆ! ದುಃಖಿಸದಿರು; ನೀವುಗಳು ಸಾಮಾನ್ಯಮರ್ತ್ಯರಲ್ಲ; ಲೋಕೋದ್ಧರಣಾರ್ಥವಾಗಿ, ಆಧರ್ಮವು ನಿಮ್ಮನ್ನು ತನ್ನ ಸಾಧನವನ್ನಾಗಿ ಮಾಡಿಕೊಂಡು ಈ ಅತ್ಯತಿಶಯವಾದ ಕಾರ್ಯಗಳನ್ನು ಮಾಡಿಸಿರುವುದು; ನಿನ್ನ ಕೋರಿಕೆಯೂ ಮತ್ತೀ ಉಳಿದವರ ಕೋರಿಕೆಗಳೂ ಇಲ್ಲಿಯೂ ಮುಂದಕ್ಕೂ ನೆರವೇರುವುವು; ಚಿಂತಿಸದಿರು." ಎಂದು ವರಗಳನ್ನು ಪಾಲಿಸಿದ ಬಳಿಕ, ದೇವಸೇನನುಪಾರರಾಜನು ಆವ ವರವನ್ನೂ ಬೇಡದೆ ತನ್ನಾಸನದಲ್ಲಿಯೇ ಕುಳಿತಿರುವುದನ್ನು ನೋಡಿ, ಪರಮಾಶ್ಚರ್ಯದಿಂದ ಅವನನ್ನು ಕುರಿತು:—"ಎಲೈ ಮಹಾರಾಜನೇ! ಆವ ವರವನ್ನೂ ಬೇಡದೆ ಇದೇಕೆ ಸುಮ್ಮನೆ ಕುಳಿತಿರುವೆ? ನಿನ್ನ ಧರ್ಮಪ್ರಭಾವದಿಂದ ಈ ಇಂದ್ರಸೃಷ್ಟಿವು ನಿನ್ನದಾಗಿಯೇ ಇರುವುದು; ಮತ್ತಾವ ವರವನ್ನು ಪಡೆಯಲಿಚ್ಛಿಸುವೆ?" ಎಂದು ಕೇಳಿದನು.

ಇದನ್ನು ಕೇಳಿದ ದೇವಸೇನನು ಎದ್ದು ನಿಂತು ಗಾಂಭೀರ್ಯದಿಂದ:—"ಪಿತಾಮಹನೇ!

[೯೦ ತಾ:—"ನೀನು ಹೇಳಿದ ಈ ದೇವೇಂದ್ರಪದವು, ಒಹು ಪ್ರಯತ್ನದಿಂದ ಲಭಿಸತಕ್ಕುದಾಗಿರುವುದರಿಂದಲೂ, ಸುತ್ತಿತ್ತಿರೆತ ಪಡೆದರೂ ಪ್ರಯತ್ನವನ್ನಪೇಕ್ಷಿಸದೆ ತಾನಾಗಿಯೇ ನಶಿಸಿಯೋಗತಕ್ಕುದಾಗಿರುವುದರಿಂದಲೂ, ಇಷ್ಟೇ ಅಲ್ಲದೆ ಅದು ಜನ್ಮಕ್ರಮಕ್ಕೆ ಒಳಪಟ್ಟಿರುವುದರಿಂದಲೂ ಸಹ ನಾನದನ್ನೇ ಬಯಸದೇ ಇರುವಲ್ಲಿ ಇನ್ನು ಉಳಿದ ವರಗಳಿಂದೇನು ಪ್ರಯೋಜನ?"]

ಆದರೆ, ನನ್ನ ಮನೋಗತವನ್ನು ಹೇಳುವೆನು ಕೇಳು:—

[೯೧. ತಾ:—" ತೀವ್ರತರವಾದ ವ್ಯಸನಕ್ಕೂ ಶ್ರಮಕ್ಕೂ ಒಳಗಾಗಿ ಸಂಕಟಪಡುವ ಪ್ರಾಣಿವರ್ಗದ ದುಃಖವನ್ನು ಕಣ್ಣಿಂದ ನೋಡಿಯೂ ಅದನ್ನು ಉಪೇಕ್ಷಿಸಿ, ನಾನೊಬ್ಬನು ಮಾತ್ರ ಸುಖವನ್ನು ಪಡೆದಲ್ಲ ಅದರಿಂದ ನನ್ನ ಮನಸ್ಸಿಗೆ ತೃಪ್ತಿಯೆಂದಿಗೂ ಉಂಟಾಗುವುದಿಲ್ಲವು. (೯೨) ಆದರೆ, (ನಾನೀಗ ಆಚರಿಸಿರುವ ಧರ್ಮದ) ಪುಣ್ಯದಿಂದ (ಮುಂದಕ್ಕೆ) ಸರ್ವಜ್ಞತ್ವವನ್ನು ಪಡೆದು, ಪ್ರಾಣಿವರ್ಗಕ್ಕೆ ಶತ್ರುಗಳಾದ (ಅರಿಷಡ್ವರ್ಗವೆಂಬ) ದೋಷಗಳನ್ನು ಜಯಿಸಿ, ಮುಪ್ಪುರೋಗ ಮೃತ್ಯುಗಳೆಂಬ ಘೋರವಾದ ಅಲೆಗಳಿಂದ ಭೀತರವಾದ ಸಂಸಾರಸಮುದ್ರದಲ್ಲಿ ಸಿಲುಕಿರುವ ಪ್ರಾಣಿವರ್ಗವನ್ನು (ಜ್ಞಾನವೆಂಬ ದೋಣಿಯಮೂಲಕ) ದಡವನ್ನು ಸೇರಿಸುವ (ಬುದ್ಧ) ನಾಗುವೆನು. "]

ಪ್ರಯತ್ನಲಭ್ಯಾ ಯದಯತ್ನನಾಶಿನೀ ನತೃಪ್ತಿಸೌಖ್ಯಾಯ ಕುತಃ ಪ್ರಶಾಂತಯೇ ॥
ಭವಾಶ್ರಯಾಸಂಪದತೋ ನ ಕಾಮಯೇ ಸುರೇಂದ್ರಲಕ್ಷ್ಮೀಮಪಿ ಕಿಮ್ಪುನೇತರಾಮ್ ॥
ನಚಾತ್ಮದುಃಖಕ್ಷಯಮಾತ್ರಕೇಣ ಮೇ ಪ್ರಯಾತಿ ಸಂತೋಷಪಥೇನ ಮಾನಸಮ್ ॥
ಅಮೂನನಾಥಾನಭಿವೀಕ್ಷ್ಯ ದೇಹಿನಃ ಪ್ರಸಕ್ತತೀವ್ರವ್ಯಸನಶ್ರಮಾತುರಾನ್ ॥೯೧॥
ಅನೇನ ಪುಣ್ಯೇನ ತು ಸರ್ವದರ್ಶಿತಾಮವಾಪ್ಯ ನಿರ್ಜಿತ್ಯಚ ದೋಷವಿದ್ವಿಷಃ ॥
ಜರಾರುಜಾಮೃತ್ಯುಮಹೋರ್ಮಿಸಂಕುಲಾತ್ಸಮುದ್ಧರೆಯಂ ಭವಸಾಗರಾಜ್ಜಗತ್ ॥

ಇದನ್ನು ಕೇಳಿದ ಬ್ರಹ್ಮದೇವನು ಪರಮವಿಸ್ಮಿತನಾಗಿ:—"ಮಹಾರಾಜನೇ! ನೀನು ಬಯಸುವ ವರನನ್ನು ಪೂರ್ತಿಗೊಳಿಸುವುದಕ್ಕೆ ಎನಗೇ ಶಕ್ತಿಯಿಲ್ಲವು; ದೇವತೆಗಳೆಲ್ಲರಿಗೂ ಪಿತಾಮಹನಾದ ಎನಗೇ ಅಂತಹ ಸಂಕಲ್ಪವು ಸಿದ್ಧಿಸದೇ ಇರುವಲ್ಲಿ, ನೀನದನ್ನು ಪಡೆಯುವ ಬಗೆ ಹೇಗೆ?" ಎಂದು ಕೇಳಲು ದೇವಸೇನಮಹಾರಾಜನು, ಗಾಂಭೀರ್ಯದಿಂದ:—"ಪದ್ಮಜನೇ! ಅಂತಹ ಪದವಿಯನ್ನು ಅತಿಸುಲಭವಾಗಿ ಪಡೆಯಬಹುದು. ಹೇಗೆಂದರೆ—

[೯೩. ತಾ:—"ಪ್ರಾಣಿಯಾದವನು ಬಯಸುವುದು ಅನರ್ಘ್ಯವಾದ ಐಶ್ವರ್ಯವೇ ಆಗಲಿ, ಅಥವಾ ಇತರರಮೇಲೆ ಅಜ್ಞೆಮಾಡುವ ಅಧಿಕಾರವೇ ಆಗಲಿ, ಅಥವಾ ದೇವಲೋಕದ ಸಂಪದವೇ ಆಗಲಿ, ಅಥವಾ ನಿನ್ನ ಬ್ರಹ್ಮಲೋಕಾಧಿಪತ್ಯವೇ ಆಗಲಿ—ಅವವುಗಳೆಲ್ಲವನ್ನೂ ಧರ್ಮದ ಸಹಾಯದಿಂದ ಪಡೆಯಬಹುದು; ಈ ರಹಸ್ಯವನ್ನು ನಾನರಿತಿರುವುದರಿಂದ ಮುಂದೆ ಆ ಧರ್ಮರಾಜ್ಯವನ್ನೇ ಪಡೆಯುವೆನು"]

ಎಂದು ಹೇಳಿದ ಪ್ರಣಿಧಿಯನ್ನು ಕೇಳಿದ ಬ್ರಹ್ಮನು, ಆಶ್ಚರ್ಯಮಗ್ನನಾಗಿ ತನ್ನಲ್ಲಿತಾನೇ:—"ಆಃ! ಈತನು ಬೋಧಿಸತ್ವೋಽಸಂಶಯ ತನೇ ಆಗಿರಬೇಕು; ಈತನಸಂಕಲ್ಪವನ್ನು ನೋಡಿದರೆ ಇವನು ಸರ್ವೇಶ್ವರತ್ವವನ್ನು ಕ್ಷಿಪ್ರದಲ್ಲಿಯೇ ಹೊಂದುವಂತೆ ತೋರುವುದು; ನಾನಿನ್ನು ಉಚ್ಚಾಸನದಲ್ಲಿ ಕುಳಿತಿರುವುದು ಯುಕ್ತವಲ್ಲ" ಎಂದು ತಾನು ಕುಳಿತಿರ್ದ ಆಸನದಿಂದ ಕೆಳಗಿಳಿದು ಬರಲು, ಇದನ್ನು ನೋಡಿದ ಸಮಸ್ತ ದೇವತೆಗಳೂ ತಮ್ಮಾಸನಗಳಿಂದ ಮೇಲಕ್ಕೆ ಎದ್ದು ನಿಂತರು. ತರುವಾಯ ಬ್ರಹ್ಮನು, ಮಹಾರಾಜರೂಪನಾದ ಬೋಧಿಸತ್ವನಿಗೆ ವಂದಿಸಿದ ಒಳಕೈಮುಗಿದುಕೊಂಡು ಭಕ್ತಿವಶದಿಂದ—

ಶ್ಲೋ॥ ವಿಭವಸಮುದಯಂ ವಾ ದೀಪ್ತಮಾಜ್ಞಾಗುಣಂ ವಾ
ತ್ರಿದಶಪುರವಿಭೂತಿಂ ಬ್ರಹ್ಮಲೋಕೇಶತಾಂ ವಾ ॥
ಯದಭಿಲಷತಿ ಸರ್ವಂ ತತ್ತದಾಪ್ನೋತಿ ಧರ್ಮಾ-
ದಿತಿ ಪರಿಗಣಿತಾರ್ಥೋ ಧರ್ಮರಾಜ್ಯಂ ಭಜಾಮಿ ॥೯೩॥

[ಗದ್ಯಮ್॥ ತಾ:—"ಮಹಾಜ್ಞಾನಿಯಾಗಿಯೂ, ಸರ್ವಪ್ರಾಣಿಗಳಿಗೂ ರಕ್ಷಕನಾಗಿಯೂ, ಅತಿ ಶ್ರೇಷ್ಠವಾದ ಕಾರುಣ್ಯವುಳ್ಳವನಾಗಿಯೂ, ಅಚಿಂತ್ಯವಾದ ಮಹಿಮೆಯುಳ್ಳವನಾಗಿಯೂ, ಸಮಸ್ತಪ್ರಾಣಿವರ್ಗವನ್ನೂ ರಕ್ಷಿಸುವುದಕ್ಕಾಗಿ ಸಂಕಲ್ಪಗೊಂಡಿರುವ ಬೋಧಿಸತ್ವನಾಗಿಯೂ, ಮಹಾಸತ್ವನಾಗಿಯೂ ಇರುವ ಮಹಾತ್ಮನೆ! ನಿನಗೆ ಸರ್ವಪ್ರಕಾರಗಳಿಂದಲೂ ನಮಸ್ಕಾರವು"]

ಎಂದು ಸ್ತುತಿಸಿದ ಬಳಿಕ ಪುನಃ:—"ಎಲೈ ಮಹಾತ್ಮನೇ! ನಾನು ನಿನ್ನ ಪರಿವಾರದವರಿಗೆಲ್ಲ ವರವನ್ನಿತ್ತೆನು; ಈಗ ನೀನೆನಗೊಂದು ವರವನ್ನು ಕರುಣಿಸುವನಾಗು." ಎಂದು ಬ್ರಹ್ಮದೇವನು ಪ್ರಾರ್ಥಿಸಲು, ದೇವಸೇನನಾಮಕನಾದ ಬೋಧಿಸತ್ವನು ಗಾಂಭೀರ್ಯದಿಂದ:—"ಅದೇನು ಕೇಳು?" ಎಂದುಹೇಳಲು ಬ್ರಹ್ಮನು ಕೈಮುಗಿದುಕೊಂಡು ದೈನ್ಯದಿಂದ:—"ನಿನ್ನ ಪರಿವಾರದವರಾದ ಈಕುರುಬನೇ ಮುಂತಾದವರು ಎನ್ನಲ್ಲಿ ಬೇಡಿದವರಗಳನ್ನೆಲ್ಲ ಕೊಡುವುದಾಗಿ ವಾಗ್ದಾನಮಾಡಿದೆನು. ಅವರಗಳನ್ನು ನೀನೂ ಅನುಮೋದಿಸಿ ನನ್ನನ್ನು ಸಂತುಷ್ಟನನ್ನಾಗಿ ಮಾಡಬೇಕೆಂದು ಬೇಡುವೆನು." ಎಂದು ವಿನಯದಿಂದ ಪ್ರಾರ್ಥಿಸಲು ಬೋಧಿಸತ್ವನು:—"ಒಳ್ಳೆಯದು! ಹಾಗೆಯೇ ಆಗಲಿ." ಎಂದು ಬ್ರಹ್ಮನ ಕೋರಿಕೆಯನ್ನು ಸಫಲಗೊಳಿಸುವುದಾಗಿ ವಾಗ್ದಾನಮಾಡಿದನು.

ಬಳಿಕ ಬ್ರಹ್ಮದೇವನು ತೃಪ್ತನಾಗಿ, ಇಂದ್ರನೇ ಮೊದಲಾದವರನ್ನು ಕುರಿತು ತವಕದಿಂದ:—ಎಲೈ ದಿಕ್ಪಾಲರಿರಾ! ಧರ್ಮಪ್ರಿಯನಾದ ಈ ಮಹಾತ್ಮನಿಗೆ ಈ ದೇವಲೋಕಾಧಿಪತ್ಯವನ್ನು ವಹಿಸಿ, ಈ ಮಹಾಪತಿವ್ರತೆಯಾದ ಉನ್ಮಾದಯಂತಿಯನ್ನು ಅವನ ಪತ್ನಿಯನ್ನಾಗಿಮಾಡಿ, ವಿವಾಹವನ್ನು ನೆರವೇರಿಸೋಣ." ಎಂದು ಹೇಳಿದನು.

ಗದ್ಯಮ್॥ ಸರ್ವಥಾ ನಮೋಽಸ್ತು ಮಹಾಭಾಗಾಯ ಸರ್ವಭೂತಶರಣಾಯಾತಿವಿಪುಲಕಾರುಣ್ಯಾಯಾಪ್ರಮೇಯಸತ್ವಾಯ ಭೂತಾರ್ಥಬೋಧಿಸತ್ವಾಯ ಮಹಾಸತ್ವಾಯ ॥

ಇದನ್ನು ಕೇಳಿದ ಶಕ್ರನು, ಶುಕ್ರಾದಿಗಳ ಮುಖವನ್ನು ನೋಡಿ ಪೆನ್ನನಾದನು. ಇದನ್ನು ನೋಡಿದ ಬೃಹಸ್ಪತಿಯು ವಿನಯದಿಂದ:—"ಸಹಸ್ರಾಕ್ಷನೇ! ಈಗಲೂ ನಿನ್ನ ಅಸೂಯೆಯನ್ನು ಬಿಡುವದಿಲ್ಲವಲ್ಲ; ಆರ್ಯರಾದವರಿಗೆ ತಕ್ಕಂತೆ ಮರ್ಯಾದೆ ಮಾಡಬೇಕೆಂದು ನಾನು ಆಗಲೇ ನಿನ್ನಲ್ಲಿ ಸೂಚಿಸಿದೆನು; ಅದರಂತೆಯೇ ಇನ್ನು ತಡಮಾಡದೆ ಪಟ್ಟಾಭಿಷೇಕವನ್ನು ಆಚರಿಸಲು ಸಿದ್ಧನಾಗು." ಎಂದು ಹೇಳಲು ಶಚೀದೇವಿಯು ತನ್ನ ವಲ್ಲಭನ ಮುಖವನ್ನು ನೋಡಿ—"ದೇವ! ಮಹಾತ್ಮನಾದೀಬೋಧಿಸತ್ವನು ಹೇಳಿದಂತೆ ಇಂದ್ರಪಟ್ಟವು ಎಮಗೆ ಶಾಶ್ವತವಲ್ಲ. ಪಟ್ಟಾಭಿಷೇಕವನ್ನು ಪ್ರೀತಿಪುರಸ್ಸರವಾಗಿ ನಾವೇ ಮಾಡೋಣ." ಎಂದು ಗಂಡನನ್ನು ಸಮಾಧಾನಪಡಿಸಿದಳು.

ಬಳಿಕ ದೇವೇಂದ್ರನು ಈರೀತಿ ತನ್ನಲ್ಲಿತಾನೇ ಚಿಂತೆಯಿಂದ:—ಆಹಾ! ನಾನೇನು ಮಾಡಲಿ? ಈರಾಜನ ಧರ್ಮಪ್ರಭಾವವು ಬ್ರಹ್ಮದೇವನನ್ನೇ ಅವನ ದಾಸನನ್ನಾಗಿ ಮಾಡಿರುವುದರಿಂದ, ನಾನೀಗ ಅಸೂಯೆಪಟ್ಟರೆ ಏನು ಪ್ರಯೋಜನ? ಒಳ್ಳೆಯದು! ಮರ್ಯಾದೆಯಿಂದ ನಾನೇ ಎನ್ನಾಧಿಪತ್ಯವನ್ನು ಅರ್ಪಿಸಿ ಸ್ವಗೌರವವನ್ನು ಕಾಪಾಡಿಕೊಳ್ವೆನು" ಎಂದು ಮನದೊಳ್ ನಿಶ್ಚಯಿಸಿಕೊಂಡು, ಒಳಿಕ:—"ಎಲೈ ದಿಕ್ಪಾಲರುಗಳಿರಾ! ಪೂಜಾದ್ರವ್ಯಗಳೊಡನೆ ಸಿದ್ಧರಾಗಿರಿ; ಈ ಮಹಾತ್ಮನಿಗೆ ವಿವಾಹವನ್ನೂ ದೇವರಾಜ್ಯಾಭಿಷೇಕವನ್ನೂ ಮಾಡಿಬಿಡೋಣ." ಎಂದು ಹೇಳಿದ ಬಳಿಕ ದೂತನನ್ನು ಕುರಿತು:—"ಈಕ್ಷಣವೇ ಯಮನನ್ನು ಇಲ್ಲಿಗೆ ಬರಹೇಳು" ಎಂದು ಹೇಳಲು ದೂತನು ಅದರಂತೆಯೇ ಯಮನನ್ನು ಕರೆದುಕೊಂಡುಬಂದನು.

ರಾಜದ್ರೋಹ ದುಷ್ಕಾಮ ಚೌರ್ಯ ಪ್ರಜಾಹಿಂಸೆ ಮದ್ಯಪಾನ ಪ್ರಾಣಿವಧೆ ಮುಂತಾದ ದುಷ್ಕರ್ಮಗಳನ್ನೆಸಗಿದ
ಮಾನವರನ್ನು ಯಮದೂತರು ನರಕದಲ್ಲಿ ಹಿಂಸಿಸುವಿಕೆ.

ನೀತಿ :—ಅಧರ್ಮಕ್ಕೆ ನರಕಯಾತನೆಯೇ ಫಲ.

The servants of the God of Death (Yama) punish bad men for their offences of treason, unlawful lust, theft, oppression, drunkenness, animal slaughter and the like.

MORAL :—Wrong leads man to Hell.

ನಾಲ್ಕನೆಯ ಸಂಧಿ.

RIGHT WILL BE CROWNED WITH SUCCESS.

ಧರ್ಮೋಭಿಷ್ಟೇಕಃ

ಒಳಿಕ ಯಮನು ಅಲ್ಲಿಗೆ ಬಂದು ಆ ಸಭೆಯನ್ನು ನೋಡಿ, ತನ್ನಲ್ಲಿ ತಾನೇ ಆಶ್ಚರ್ಯದಿಂದ:—" ಇದೇನೀಪ್ರಮಾದವು! ಬ್ರಹ್ಮದೇವನು ತನ್ನ ಆಸನವನ್ನು ಬಿಟ್ಟು ಈ ನರಾಧಮನ ಬಳಿ ಕೈಮುಗಿದುಕೊಂಡು ನಿಂದಿರುವನು? ಎಮ್ಮ ದೇವಲೋಕಕ್ಕೇ ಇದು ಅವಮಾನಕರವಲ್ಲವೆ? ಎಂದು ಮಾತಾಡಿಕೊಂಡಬಳಿಕ ಇಂದ್ರನನ್ನು ಕುರಿತು ಕೋಪೋಲ್ಬಣದಿಂದ:—" ಸಹಸ್ರಾಕ್ಷನೇ! ನಿನ್ನ ಅಪ್ಪಣೆಯಂತೆ ಅಧರ್ಮಿಗಳಾದ ಭೂಲೋಕದ ಆ ಪಾಪಿ ರಾಜರನ್ನೆಲ್ಲ ವಿಚಿತ್ರವಾಗಿ ಹಿಂಸಿಸಿದೆನು; ಅದನ್ನು ಸಹಿಸಲಾರದೆ ಅನೇಕವಿಧವಾದ ದೈನ್ಯಗಳಿಂದ ಹಿಂಸಿಸಬೇಡವೆಂದು ಎನ್ನನ್ನು ಬೇಡಿದರು; ಆದರೂ ಅದನ್ನೆಲ್ಲ ಲಕ್ಷಿಸದೆ ನಿರ್ದಯನಾಗಿ ಅವರುಗಳನ್ನು ಮರ್ದನಮಾಡಿದೆನು! ಮತ್ತು—

[ತಾ:—" (೯೪) ಕೆಲವರು ಕಾದ ಗರಗಸದಿಂದಲೂ ಸುತ್ತಿ ಕೆಲವರು ತೀಕ್ಷ್ಣವಾದ ಜೂರಿಗಳಿಂದಲೂ ಸೀಳಲ್ಪಡುತ್ತಿಹರು; ಮತ್ತೆ ಕೆಲವರು ತಮ್ಮ ತಲೆಗಳು ಸುತ್ತಿಗೆಯ ವೇಗವಾದ ಪೆಟ್ಟುಗಳಿಂದ ಹೊಟ್ಟ

ಪಾಟ್ಯನ್ತೇ ಕ್ರಕಚೈರ್ಜ್ವಲದ್ಭಿರಪರೇ ಕೇಚಿನ್ನಶಾತ್ಯೈಃ ಕ್ಷುರೈಃ ।
ಕೇಚಿನ್ಮುದ್ಗರವೇಗಪಿಷ್ಟಶಿರಸಃ ಕೂಜನ್ತಿ ಶೋಕಾತುರಾಃ ॥
ಪಚ್ಯನ್ತೇ ಪೃಥುಶೂಲಭಿನ್ನವಪುಷಃ ಕೇಚಿದ್ವಿಧೂಮೇಽನಲೇ ।
ಪಾಯ್ಯನ್ತೇ ಜ್ವಲಿತಾಗ್ನಿವರ್ಣಮಪರೇ ಲೌಹಂ ರಸನ್ತೋ ರಸಮ್ ॥೯೪॥
ಸಂಘಾತಪರ್ವತಸಮಾಗಮಪಿಷ್ಟದೇಹಾಃ ।
ಕೇಚಿತ್ತದಾಕ್ರಮಣಚೂರ್ಣಿತಮೂರ್ತಯೋ ಽಪಿ ।
ದುಃಖೇ ಮಹತ್ಯಪಿ ಚ ನೋ ವ್ರಿಯನ್ತೇ ।
ಯಾವತ್ಪರಿಕ್ಷಯಮುಪೈತಿ ನ ಕರ್ಮಪಾಪಮ್ ॥೯೫॥

ಗುತ್ತಿರುವುದನ್ನು ಸಹಿಸಲಾರದೆ ಶೋಕಾತುರದಿಂದ ಕಿರಿಚಿಕೊಳ್ಳರು; ಇನ್ನು ಕೆಲವರ ದೇಹಗಳು ದೊಡ್ಡ ಶೂಲಗಳಿಂದ ಜುಜ್ಜಲ್ಪಟ್ಟು ಹೊಗೆಯಿಲ್ಲದ ಬೆಂಕಿಯ ಕೆಂಡಗಳಲ್ಲಿ ಬೇಯಿಸಲ್ಪಡುತ್ತಿರುವುವು; ಇನ್ನೂ ಕೆಲವರು ಉರಿಯುವ ಬೆಂಕಿಯಂತೆ ಕಾಣುವ ಲೋಹರಸವನ್ನು ಕುಡಿಸಲ್ಪಡುತ್ತ ಹಾಗೆಯೇ ಹಾಹಾಕಾರವನ್ನು ಮಾಡುತ್ತಿಹರು. (೯೫) ಇಷ್ಟೇ ಅಲ್ಲದೆ ಇನ್ನು ಕೆಲವರ ದೇಹಗಳು, ಸಂಘಾತಪರ್ವತಗಳ ಮಧ್ಯದಲ್ಲಿ ಸಿಕ್ಕಿಸಲ್ಪಟ್ಟು, ಅವುಗಳ ಸಂಘಟ್ಟನದಿಂದ ಪುಡಿಪುಡಿಯಾಗುತ್ತಿರುವುವು; ಇಂತಹ ಮಹತ್ತರವಾದ ದುಃಖಗಳಿಗೊಳಗಾಗಿದ್ದರೂ ಮರಣವನ್ನು ಹೊಂದದೆ ತಮ್ಮ ದುಷ್ಕರ್ಮದಿಂದುಂಟಾದ ಪಾಪಶೇಷದ ಅವಧಿಯು ಮುಗಿಯುವ ವರೆಗೂ ಈರೀತಿಯೇ ಅನುಭವಿಸುವರು. '']

ಎಂದು ಹೇಳಿದ ನರಕಯಾತನೆಯ ವರ್ಣನೆಯನ್ನು ಕೇಳಿದ ಬೋಧಿಸತ್ವನು, ವಿಷಾದದಿಂದ:-'' ಹಾ ! ಕಷ್ಟ ! ಕಷ್ಟ !! '' ಎಂದು ವ್ಯಸನಗೊಂಡು ಬಳಿಕ ಬ್ರಹ್ಮನನ್ನು ಕುರಿತು, ವ್ಯಸನದಿಂದ:-'' ಎಲೈ ಬ್ರಹ್ಮದೇವನೇ ! ಸುಧರ್ಮಾಖ್ಯಸಭೆಯುಳ್ಳದೆಂಬ ವಿಖ್ಯಾತಿಯನ್ನೂ, ಆನಂದ ಸ್ಥಾನವೆಂಬ ಪ್ರಶೀತಿಯನ್ನೂ, ಪಡೆದಿರುವ ಈ ದೇವಲೋಕದಲ್ಲಿಯೂ ಇಂತಹ ಕ್ರೌರ್ಯವಿರುವುದೆ ? ಮರ್ತ್ಯರು ಅಪರಿಜ್ಞಯದೋಷದಿಂದ ದೇವತೆಗಳಲ್ಲಿ ಇಲ್ಲದ ಗುಣಗಳನ್ನೆಲ್ಲ ಅನ್ಯಾಯವಾಗಿ ಆರೋಪಿಸುವರು ; ಇಲ್ಲಿನ ನಿಜಸ್ಥಿತಿಯನ್ನು ತಿಳಿದ ಬಳಿಕ ಮರ್ತ್ಯಲೋಕವನ್ನು ಧರ್ಮಭೂಮಿಯೆಂದು ಹೇಳಬೇಕಾಗುವುದೇ ಹೊರತು, ಈ ವಿವೇಕಶೂನ್ಯವಾದ ಸುರಲೋಕವನ್ನು ಹಾಗೆ ಹೇಳಲಾಗುವುದಿಲ್ಲ; ಇಲ್ಲಿ ಸ್ವರ್ಕ್ಷೇಮವೂ, ಪರಹಿಂಸೆಯಲ್ಲಿ ಪ್ರತೋಷವೂ, ಪರಶ್ರೇಯಸ್ಸಿನಲ್ಲಿ ಅಸೂಯೆಯೂ, ಭರಿತವಾಗಿರುವುದರಿಂದ ಇಲ್ಲಿನ ನಡತೆಯ ವಿಷಯದಲ್ಲಿ ಶೋಕಿಸಬೇಕಾಗಿಹುದು ; ಅದಲ್ಲದೆ ಅನೇಕ ರಾಜರೆಲ್ಲ ದುಃಖಪಡುತ್ತಿರುವಲ್ಲಿ ನಾನೊಬ್ಬನು ಈ ಅಧಿಪತ್ಯಸುಖವನ್ನೆಂತು ತಾನೇ ಬಯಸುವೆನು ? ಅದಲ್ಲದೆ ದೋಷಿಗಳಾದವರು ದಂಡಿಸಿದಲ್ಲಿ ಗುಣಿಗಳಾಗುವರೆಂಬುದು ಶುದ್ಧ ಅವಿವೇಕವು; ಇನ್ನೂ

ಅವರು ದುಷ್ಟರಾಗುವರೇ ಹೊರತು, ಅದರಿಂದ ಉಭಯರಿಗೂ ಸುಖವುಂ ಟಾಗದೆ, ಕೊನೆಗೆ ಮಹಾಪ್ರಮಾದಗಳೇ ಉಂಟಾಗುವುವು; ಏಕೆಂದರೆ, ಪ್ರಾಣಿಯು ಅಜ್ಞಾನವಶಾತ್ ಪಾಪಕಾರ್ಯಾಸಕ್ತನಾಗುವನು, ಅವನಿಗೆ ಜ್ಞಾನೋದಯವಾದರೆ, ಆ ಪಾಪಿಯೇ ಮಹಾಪುರುಷನಾಗುವನು ; ಆದರಲ್ಲಿಯೂ ಇಲ್ಲಿ ದುಃಖಪಡುತ್ತಿರುವವರು ರಾಜರಾಗಿರುವುದರಿಂದ ಅವರಿಗೆ ಧರ್ಮೋಪದೇಶವನ್ನು ಮಾಡಿ ತದ್ದ್ವಾರಾ ಅವರ ಕಷ್ಟವನ್ನೂ ಅವರ ಅಜ್ಞಾನವನ್ನೂ ಪರಿಹರಿಸಿದಲ್ಲಿ, ಅವರೂ ಗುಣಿಗಳಾಗುವುದು ಮಾತ್ರವಲ್ಲದೆ, ನಾವು ತೋರುವೀ ಕಾರುಣ್ಯದಿಂದ ಅವರಲ್ಲಿ ಕೃತ ಜ್ಞತೆಯುಂಟಾಗಿ ಅವರು ಎಮ್ಮ ಕಿಂಕರರಾಗಿ, ಎಮ್ಮ ಕಾರ್ಯಗಳಿಗೆಲ್ಲ ಅವರೇ ಬದ್ಧಾದರರಾಗುವರು ; ಇದೇ ನಿಜವಾದ ಧರ್ಮಸೂಕ್ಷ್ಮವು ; ಆದಕಾರಣ ಈ ಕ್ಷಣವೇ ಅವರುಗಳನ್ನು ಬಂಧನದಿಂದ ಬಿಡಿಸಿ ಇಲ್ಲಿಗೆ ಮರ್ಯಾದಾಪುರಸ್ಸರವಾಗಿ ಕರೆತಂದ ಹೊರತು, ನಾನೀ ಆಧಿಪತ್ಯ ವನ್ನು ವಹಿಸುವುದಿಲ್ಲವು. '' ಎಂದು ಹೇಳಿ ದೇವೇಂದ್ರನ ಮುಖವನ್ನು ನೋಡಲು, ಅವನು ಈ ಧರ್ಮಸೂಕ್ಷ್ಮದಿಂದ ಪ್ರಸನ್ನಚಿತ್ತನಾಗಿ, ಬೋ ಧಿಸತ್ವನಿಗೆ ಕೈಗಳನ್ನು ಮುಗಿದುಕೊಂಡು ಭಕ್ತಿವಶದಿಂದ—

[ತಾ:—'' (೯೬) ಎಲೈ ಮಹಾತ್ಮನೆ! ನೀನೇ ಎನಗೆ ಒಡೆ ಯನು; ಎನ್ನ ಗುರುವು; ಮತ್ತು ಎನ್ನ ಭಾಗದ ದೇವರು. ನೀನು ಹೇಳಿದ ಮಾತುಗಳನ್ನು ಶಿರಸಾ ವಹಿಸಿ ಗೌರವಿಸುವೆನು; ಈಗಲೇ (ನರಕದಲ್ಲಿ ರುವ) ಆ ರಾಜರನ್ನೆಲ್ಲ ಬಂಧನದಿಂದ ಬಿಟ್ಟು ಬಿಡುವೆನು; ಮತ್ತು ನೀನು ಹೇಗೆಹೇಗೆ ಹೇಳುವೆಯೋ, ಹಾಗೆಹಾಗೆಯೇ ಆಚರಿಸುವೆನು '']

ಎಂದು ಹೇಳಿದ ಬಳಿಕ ಯಮನನ್ನು ಕುರಿತು ಧೃಷ್ಟತೆಯಿಂದ:—'' ಎಲೈ ಯಮನೇ ! ನರಕದಲ್ಲಿರುವ ಪ್ರತಿಯೋರ್ವನನ್ನೂ ಈ ಕ್ಷಣವೇ

ಶ್ಲೋ॥ ತ್ವಾಸ್ತು ಗುರುಶ್ಚ ಮಮ ದೈವತಮೇವ ಚ ತ್ವಂ ।
ಮೂರ್ಧ್ನಾ ವಚಾಂಸ್ಯಹಮುಮಾನಿ ತವಾರ್ಚಯಾಮಿ ॥
ಮುಂಚಾಮಿ ಚಾದ್ಯ ನಿಖಿಲಾನ್ನರಲೋಕಪಾಲಾ-
ನ್ಯನ್ಮಾಂ ಯಥಾ ವದಸಿ ತಚ್ಚ ತಥಾ ಕರಿಷ್ಯೇ ॥೯೬॥

ಇಲ್ಲಿಗೆ ಮರ್ಯಾದೆಯೊಡನೆ ಕರೆತಂದು ದಿವ್ಯಾಸನಗಳಲ್ಲಿ ಕುಳ್ಳಿರಿಸತಕ್ಕದು. '' ಎಂದು ಆಜ್ಞೆಯನ್ನಿತ್ತನು.

ಬಳಿಕ ಯಮನು ಭೀತಿಯಿಂದ:—'' ಹಾಗೆಯೇ ಆಗಲಿ. '' ಎಂದು ಹೋಗಿ ಅವರೆಲ್ಲರನ್ನೂ ಕರೆತಂದು ದಿವ್ಯಾಸನಗಳಮೇಲೆ ಕುಳ್ಳಿರಿಸಿದನು

ಅನಂತರ ಬ್ರಹ್ಮದೇವನು ಬೋಧಿಸತ್ವನನ್ನು ಕುರಿತು ದೈನ್ಯದಿಂದ:—'' ಮಹಾತ್ಮನೇ ! ನಿನ್ನ ಧರ್ಮಪ್ರಭಾವದಿಂದ ಪಾಪಿಗಳೆಲ್ಲರೂ ಪುಣ್ಯವಂತರಾದರು; ಇನ್ನು ಈ ಧರ್ಮಾಸವನ್ನು ಅಲಂಕರಿಸುವನಾಗು.'' ಎಂದು ಪ್ರಾರ್ಥಿಸಿದನು

ಒಳಿಕ ಬೋಧಿಸತ್ವನು ಗಾಂಭೀರ್ಯದಿಂದ:—'' ಹಾಗೇ ಆಗಲಿ.'' ಎಂದು ಸೀಹಾಸನವನ್ನು ಹತ್ತಿ ಕುಳಿತುಕೊಳ್ಳಲು ಸರ್ವರೂ ಜಯ ಘೋಷವನ್ನು ಮಾಡಿದರು.

ಅನಂತರ ಬೋಧಿಸತ್ವನು ಪ್ರಸನ್ನವದನನಾಗಿ, ದೇವೇಂದ್ರನನ್ನು ಕುರಿತು:—'' ಎಲೈ ದೇವೇನ್ದ್ರನೇ ! ನಿನ್ನ ದೇವೇಶ್ವರತ್ವವು ಎನಗೆನೂ ಬೇಕಾಗಿಲ್ಲ; ಅದನ್ನು ನೀನೇ ಅನುಭವಿಸು; ಇನ್ನು ಮೇಲೆಯಾದರೂ ಅಧರ್ಮಮೂಲವಾದ ಆತ್ಮಸ್ನೇಹವನ್ನೂ ಅಸೂಯೆಯನ್ನೂ ತ್ಯಜಿಸು; ಮೈತ್ರೀವಿಷಯವನ್ನು ಚೆನ್ನಾಗಿ ಗಮನಿಸಿಸು:—

[ತಾ:—'' (೯೭) ಎಲೈ ಇನ್ದ್ರನೇ ! ನೀನಿಲ್ಲಿ (ದೇವರಾಜ್ಯದಲ್ಲಿ) ರಥಿಕನಾಗಿರುವೆ; ಗುಣವಿಶಿಷ್ಟವಾದ ನಿನ್ನ ದೇಹವೇ ಆ ರಥವು; ಸಾಧುಪುರುಷರನ್ನು ಸನ್ಮಾನಿಸುವಿಕೆಯೇ ನಿನ್ನ ಸಾರಥಿಯಾಗಿರಲಿ; ವಿನಯವೆಂಬುದು ಅದರ ಅಚ್ಚಾಗಿಯೂ, ದಮೆಯೂ ಮತ್ತು ದಾನವೂ ಅದರ ಚಕ್ರಗಳಾಗಿಯೂ ಆಗಲಿ; ಪುಣ್ಯವನ್ನು ಆರ್ಜಿಸಬೇಕೆಂಬ ಕುಶಲ

ತ್ಯಮತ್ರ ಸನ್ಮಾನನಸಾರಥೀ ರಥೀ ಸ್ವ ಏವ ದೇಹೋ ಗುಣಸೂರಥೋ ರಥಃ ।
ಅರೂಕ್ಷತಾಕ್ಷೋ ದಮದಾನಚಕ್ರವಾನ್ಸಮಸ್ವಿತಃ ಪುಣ್ಯಮನೀಷಯೇಷಯಾ ॥೯೭॥

ಹಲವೇ ಅದರ ಪಾರೇಮರಗಳಾಗಲಿ! (೯೮) ನಿನ್ನ ಇನ್ದ್ರಿಯಗಳೆಂಬ ಕುದುರೆಗಳನ್ನು ಸ್ಮೃತಿಜ್ಞಾನವೆಂಬ ದಿವ್ಯವಾದ ಹಗ್ಗದಿಂದ ತಡೆದು ಹಿಡಿಯುವನಾಗು; ಬುದ್ಧಿಯೆಂಬ ಚಾವಟಿಯನ್ನು ಧರಿಸಿ, ಶ್ರುತಿ (ವೇದ) ಎಂಬ ಆಯುಧಶಾಲೆಯಿಂದ ಮನಸ್ತ್ರಾಯುಧಗಳನ್ನು ಆರಿಸಿಕೊ; ಆತ್ಮಜ್ಞಾನವೇ ನಿನ್ನ ರಥದ ಉಪಸ್ಕರವಾಗಿಯೂ, ಸಮ್ಯತೆಯೇ ಮನೋಹರವಾದ ಅದರ ಧ್ವಜದಂಡವಾಗಿಯೂ, ಕ್ಷಮೆಯೇ ಅದರ ಸೊಗವಾಗಿಯೂ ಆಗಲಿ. ಮತ್ತು ಧೈರ್ಯದಿಂದಲೂ ಗಾಂಭೀರ್ಯದಿಂದಲೂ ಸ್ಥಿರನಾಗಿರ್ದುದೇ ಆದರೆ ಈ (ರಾಜ್ಯ) ರಥವನ್ನು ಜಯತ್ಕಾರವಾಗಿ ನಡೆಸುವೆ! (೯೯) ಅದಲ್ಲದೆ, ದುರ್ಭಾಷೆಗಳನ್ನು ನೀನು ತ್ಯಜಿಸಿದರೆ ಅದನ್ನು ಚೀತ್ಕಾರವಿಲ್ಲದಂತೆ ಮಾಡುವೆ, ಅದರೆ ಇಂಪಾದ ಮಾತುಗಳುಳ್ಳವನಾದರೆ, ಅದರ ಶಬ್ದವು ಗಂಭೀರವಾಗಿಯೂ ಶ್ರಾವ್ಯವಾಗಿಯೂ ಆಗುವುದು; ನಿನ್ನ ಇನ್ದ್ರಿಯ ನಿರೋಧಕ್ಕೆ ಭಂಗವು ಬಾರದಂತೆ ನೀನು ತಡೆದರೆ, ಅದರ ಉಪಕರಣಗಳು ಕಡಿಲವಾಗದಂತೆ ಮಾಡುವೆ; ಮತ್ತು ನೀನು ದುಷ್ಕಾರ್ಯಗಳಲ್ಲಿ ಮನಸ್ಸಿಲ್ಲದವನಾದರೆ, ಅದನ್ನು ಹಳ್ಳಕೊಳ್ಳದಲ್ಲಿ ಜೀಳದಂತೆ ಸರಿಯಾದ ಮಧ್ಯಮಾರ್ಗದಲ್ಲಿಯೇ ವೇಗವಾಗಿ ಜಲಿಸುವಂತೆ ಮಾಡುವೆ (೧೦೦) ಅದಕಾರಣ ಅಮೋಘ (ಜ್ಞಾನ) ಪ್ರಭೆಯಿಂದಲೂ, ಕೀರ್ತಿಯೆಂಬ ಪತಾಕೆಯಿಂದಲೂ, ಶಮೆಯೆಂಬ ಚಾವಟಿದಿಂದಲೂ, ದಯೆಯೆಂಬ ಸಹಚಾರಿಗಳಿಂದಲೂ, ಒಡಗೂಡಿ ಶೋಭಿಸುವ, ಈ ದಿವ್ಯ (ಧರ್ಮ) ರಥದ ಸಾಹಾಯ್ಯದಿಂದ ಗಮಿಸುವನಾದರೆ, ಸ್ವಹಿತವನ್ನೂ

ಯತೇನ್ದ್ರಿಯಾಶ್ವಃ ಸ್ಮೃತಿರಶ್ಮಿಸಂಪದಾ ಮತಿಪ್ರತೋದಃ ಶ್ರುತಿವಿಸ್ತರಾಯುಧಃ ॥
ಹ್ಯುಪಸ್ಕರಃ ಸಂನತಿಚಾರುಕೂಬರಃ ಕ್ಷಮಾಯುಗೋ ದಾಕ್ಷ್ಯಗತಿರ್ಧೃತಿಸ್ಥಿರಃ ॥೯೮॥
ಅಸದ್ವಚಃ ಸಂಯಮನಾದಕೂಜನೋ ಮನೋಜ್ಞವಾಙ್ಮಾರ್ದ್ರಗಭೀರನಿಸ್ವನಃ ॥
ಅಮುಕ್ತಸಂಧಿರ್ನಿಯಮಾವಿಖಂಡನಾದಸತ್ಕ್ರಿಯಾ ಜಿಹ್ಮವಿವರ್ಜನಾರ್ಜವಃ ॥೯೯॥
ಅನೇನ ಯಾನೇನ ಯಶಃಪತಾಕಿನಾ ದಯಾನುಯಾತ್ರೇಣ ಶಮೋಚ್ಛ್ರಿತೇತುನಾ ॥
ಚರನ್ಪರಾತ್ಮಾರ್ಥಮಮೋಹಭಾಸ್ವತಾ ನ ಜಾತು ಶಕ್ರ ಪ್ರಲಯಂ ಗಮಿಷ್ಯಸಿ ॥೧೦೦॥

ಪರಹಿತವನ್ನೂ ಉಂಟುಮಾಡುವನಾಗಿ ಕೊನೆಗೆ ಆ ಪರಮಾತ್ಮನನ್ನು ಸೇರುವೆಯೇ ಹೊರತು, ನಾಶವನ್ನೆಂದಿಗೂ ಹೊಂದುವುದಿಲ್ಲ.'']

ಎಂದು ಬೋಧಿಸಲು, ಶಕ್ರನು ಭಕ್ತಿವಶದಿಂದ ದಂಡಪ್ರಣಾಮ ವಂಗೈದು:—''ದೇವ! ನಿನ್ನ ಆಜ್ಞೆಯಂತೆಯೇ ಆಚರಿಸುವೆನು.'' ಎಂದು ಹೇಳಿದನು.

ಬಳಿಕ ಬೋಧಿಸತ್ವನು ಆನರಕದಿಂದ ವಿಮುಕ್ತರಾದ ರಾಜರನ್ನು ಕುರಿತು ಪರಮಕಾರುಣ್ಯದಿಂದ:—''ಎಲೈ ಭೂಮೀಶ್ವರರಿರಾ! ನೀವು ಗಳಿಲ್ಲಿ ಬಹಳ ನೊಂದಿರುವಿರಿ; ಅದನ್ನು ನಿಮ್ಮ ದುಷ್ಕರ್ಮದ ಫಲಿತಾಂಶ ವೆಂದು ತಿಳಿಯಬೇಕು; ನೀವುಗಳು ರಾಜಧರ್ಮದ ಮರ್ಮವನ್ನರಿಯದೆ ಸ್ವೇಚ್ಛೆಯಿಂದ ಪ್ರವರ್ತಿಸಿ ಈ ದುಃಖಕ್ಕೊಳಗಾದಿರಿ. ಇನ್ನು ಮುಂದೆ ಆದ ರಂತೆ ಮಾಡದೆ ಧರ್ಮವನ್ನಾಶ್ರಯಿಸಿ, ನಿಮ್ಮನ್ನೂ ನಿಮ್ಮ ಪ್ರಜೆಗಳನ್ನೂ ರಕ್ಷಿಸಿಕೊಳ್ಳಿರಿ; ಏಕೆಂದರೆ, ಎನ್ನ ಅನುಗ್ರಹದಿಂದ ನೀವುಗಳು ಪುನಃ ಭೂಲೋಕವನ್ನೈದಿ ನಿಂನಿಮ್ಮ ರಾಷ್ಟ್ರಗಳಿಗೆ ಪುನಃ ರಾಜರಾಗುವಿರಿ; ಆಗ್ಗೆ ನೀವುಗಳಾಚರಿಸಬೇಕಾದ ರಾಜಧರ್ಮಗಳನ್ನು ಸೂಕ್ಷ್ಮವಾಗಿ ಇಲ್ಲಿ ವಿವರಿಸುವೆನು. ಅದಕಾರಣ—

[ತಾ:-(೧೦೧)''ಎಲೈ ರಾಜರೇ! ಪ್ರಜೆಗಳಿಗೆ ಹಿತವನ್ನುಂಟುಮಾ ಡುವುದೇ ರಾಜನಾದವನಿಗೆ ಪ್ರಥಮ ಕರ್ತವ್ಯವು; ಮತ್ತಾ ಆಚರಣೆಯೇ ಇಹಪರಗಳೆರಡರ ಸುಖಕ್ಕೆ ಮಾರ್ಗವು ; ಈ ರೀತಿ (ಕಾರ್ಯವು ನೆರ ವೇರಬೇಕಾದರೆ) ಮೊದಲು ರಾಜನಾದವನುಧರ್ಮಪ್ರಿಯನಾಗಿರಬೇಕು; ಏಕೆಂದರೆ, ಪ್ರಜೆಗಳು ರಾಜನ ಆಚರಣೆಗಳನ್ನು ತಪ್ಪದೆ ಆಚರಿಸುವರು. (೧೦೨) ಮತ್ತು ವೃಕ್ಷದಿಂದ ಎಳೆಯ ಕಾಯ್ಗಳನ್ನು ಕೀಳುವವನು, ಅದರ ಬೀಜವನ್ನು ನಾಶಮಾಡುವುದುಮಾತ್ರವಲ್ಲದೆ, ಅದರ ರಸವನ್ನೂ

ಪ್ರಜಾಹಿತಂ ಕೃತ್ಯತಮಂ ಮಹೀಪತೇಸ್ತದಸ್ಯ ಪನ್ಥಾ ಹ್ಯುಭಯತ್ರ ಭೂಮಿಪಾಃ ।
ಭವೇಚ್ಚ ತಪ್ರಾಜನಿ ಧರ್ಮವತ್ಸಲೇ ನೃಪಸ್ಯ ವೃತ್ತಂ ಹಿ ಜನೋ ಽನುವರ್ತತೇ ॥೧೦೧॥
ದ್ರುಮಾದ್ಯಥಾಮಂ ಪ್ರಚಿನೋತಿ ಯಃ ಫಲಂ ಸ ಹನ್ತಿ ಬೀಜಂ ನ ರಸಂ ಚ ವಿನ್ದತಿ ।
ಅಧರ್ಮಮೇವಂ ಬಲಿಮುದ್ಧರನ್ನೃಪಃ ಕ್ಷಿಣೋತಿ ದೇಶಂ ನ ಚ ತೇನ ನನ್ದತಿ ॥೧೦೨॥

ಎಂತು ಪಡೆಯುವುದಿಲ್ಲವೊ ಅದರಂತೆ, ರಾಜನಾದವನು ಪ್ರಜೆಗಳಿಂದ ಅಧರ್ಮವಾಗಿ (–ದಾರಿದ್ರ್ಯದಿಂದ ಪೀಡಿಸಲ್ಪಟ್ಟಾಗ) ಕಂದಾಯವನ್ನು ಪಡೆದುದೇ ಆದರೆ, ಅವನು ತನ್ನ ದೇಶವನ್ನು ನಾಶಮಾಡುವನೇ ಹೊರತು, ಸುಖವನ್ನೆಂದಿಗೂ ಪಡೆಯನು. (೧೦೩) ಆದರೆ, ಸಂಪೂರ್ಣವಾಗಿ ಬೆಳೆಸಿದ ವೃಕ್ಷವು ಪರಿಪಕ್ವಕಾಲದಲ್ಲಿ ಬೆಳಸಿದವನಿಗೆ ಫಲಗಳನ್ನು ಹೇಗೆ ಕೊಡುವುದೋ ಅದರಂತೆ, ರಾಜನಿಂದ ಸಮಾಚೀನವಾಗಿ ಪರಿಪಾಲಿಸಲ್ಪಟ್ಟ ದೇಶವು ಅವನಿಗೆ ಧರ್ಮಾರ್ಥಕಾಮಗಳೆಂಬ ತ್ರಿವರ್ಗ ಸುಖವನ್ನುಂಟುಮಾಡುವುದು. (೧೦೪) ಅದಲ್ಲದೆ, ಫಲಪುಷ್ಪಗಳಿಂದೊಡಗೂಡಿದ ವೃಕ್ಷಗಳಂತೆ ಪ್ರಯೋಜಕರಾದ, ಕೃಷಿಯೇ ಮುಖ್ಯವಾದ ವೃತ್ತಿಯುಳ್ಳ ರೈತರನ್ನೂ, ಕೂಲಿಕಾರರನ್ನೂ, ಪಶುಪಾಲಕರನ್ನೂ, ಹಡದವಂ ಕೊಡತಕ್ಕವರನ್ನೂ ಸಹ ರಾಜನಾದವನು ಪರಿಪಾಲಿಸದೇ ಹೋದರೆ, ಅವನು ಧಾನ್ಯಸಂಪತ್ತಿಯಿಂದ ರಹಿತನಾಗುವನು. (೧೦೫) ಇದರಂತೆಯೇ ರಾಜನಾದವನು ತನ್ನನ್ನು ಸುಂಕ ಮುಂತಾದುವುಗಳಿಂದ ತೃಪ್ತಿಪಡಿಸುತ್ತಿರುವ ವಿವಿಧವಾದ ಪಣ್ಯ (ಸಂಭಾರಸಾಮಗ್ರಿಗಳನ್ನು ಕೊಟ್ಟು ತೆಗೆದುಕ್ಕೊಳ್ಳುವ ಸಂಸ್ಥೆಯು) ವ್ಯಾಪಾರಿಗಳನ್ನೂ, ಅಂಗಡಿಕಾರರನ್ನೂ, ಮತ್ತು ಪುರಜನರನ್ನೂ, ಸಹ ಪರಿಪಾಲಿಸದೇ ಇರ್ದಲ್ಲಿ ತನ್ನ ಕೋಶ (ಖಜಾನೆಯ) ಸಂಪತ್ತಿನವಿಷಯದಲ್ಲಿ ಕಷ್ಟಪ್ರಾಪ್ತಿಯಾಗುವುದು. (೧೦೬) ಹೀಗೆಯೇ ರಾಜನಾದವನು, ಯುದ್ಧರಂಗದಲ್ಲಿ ಶೋಪವನ್ನು

ಯಥಾ ತು ಸಂಪೂರ್ಣಗುಣೋ ಮಹೀರುಹಃ ಫಲೋದಯಂ ಪಾಕವಶಾತ್ಪ್ರಯಚ್ಛತಿ ।
ತಥೈವ ದೇಶಃ ಕ್ಷಿತಿಪಾಭಿರಕ್ಷಿತೋ ಯುನಕ್ತಿ ಧರ್ಮಾರ್ಥಸುಖೈರ್ನರಾಧಿಪಮ್ ॥೧೦೩
ಕೃಷಿಪ್ರಧಾನಾನ್ಸಶುಪಾಲನೋದ್ಯತಾನ್ಮಹೀರುಹಾನ್ಪುಷ್ಪಫಲಾನ್ವಿತಾನಿವ ।
ಅಪಾಲಯನ್ನಾನಪದಾನ್ಬಲಿಪ್ರದಾನ್ನೃಪೋ ಹಿ ಸರ್ವೌಷಧಿಭಿರ್ವಿರುಧ್ಯತೇ ॥೧೦೪॥
ವಿಚಿತ್ರಪಣ್ಯಕ್ರಯವಿಕ್ರಯಾಶ್ರಯಂ ವಣಿಗ್ಜನಂ ಪೌರಜನಂ ತಥಾ ನೃಪಃ ।
ನ ಪಾತಿ ಯಃ ಶುಲ್ಕಪಥೋಪಕಾರಿಣಂ ವಿರೋಧಮಾಯಾತಿ ಸ ಕೋಶಸಂಪದಾ ॥೧೦೫॥
ಅವೃಷ್ಟದೋಷಂ ಯುಧಿ ದೃಷ್ಟವಿಕ್ರಮಂ ತಥಾ ಬಲಂ ಯಃ ಪ್ರಥಿತಾಸ್ತ್ರಕೌಶಲಮ್ ।
ವಿಮಾನಯೇದ್ಭೂತಿರಧುಸೇಕ್ಕಯಾ ಧ್ರುವಂ ವಿರುದ್ಧಃ ಸ ರಣೇ ಜಯಶ್ರಿಯಾ ॥೧೦೬॥

ತೋರ್ಪಡಿಸದೆ ಪರಾಕ್ರಮವನ್ನು ತೋರ್ಪಡಿಸಿದ, ಅಸ್ತ್ರಶಸ್ತ್ರವಿಶಾರದರಿಂದ ಕೂಡಿದ, ತನ್ನ ಚತುರಂಗಬಲವನ್ನು ಸನ್ನಾಹಿಸದೆ, ಅಧಿಕಾರಮತ್ತ ತೆಯಿಂದ ಉಪೇಕ್ಷಿಸಿದುದೇ ಆದರೆ ಅವನು ಯುದ್ಧಕಾಲದಲ್ಲಿ ಜಯಲಕ್ಷ್ಮಿಯಿಂದ ತಿರಸ್ಕರಿಸಲ್ಪಡುವನು. (೧೦೭) ಇಷ್ಟೇ ಅಲ್ಲದೆ ರಾಜನಾದವನು, ಸದಾಚಾರ ವೇದಾಧ್ಯಯನ ಯೋಗ ಇವುಗಳನ್ನರಿತ ಸಾಧುಗಳನ್ನೂ, ಗುಣಮಾಹಾತ್ಮ್ಯಗಳಿಂದ ಶೋಭಿಸುವ ಇತರ ಸಾಧುಪುರುಷರನ್ನೂ ಸತ್ಕರಿಸುವ ವಿಷಯದಲ್ಲಿ ಗರ್ವದಿಂದ ಔದಾಸೀನ್ಯವನ್ನು ವಹಿಸಿದರೆ, ಸಮಸ್ತ ಸುಖಗಳಿಂದಲೂ ಬಾಹಿರನಾಗುವನು.''

ಆದಕಾರಣ, ಎಲೈ ರಾಜರುಗಳಿರಾ! ನಿರಂತರವೂ ನಿಮ್ಮ ನಡತೆಗಳಿಗೆಲ್ಲ ಧರ್ಮವನ್ನೇ ಆಧಾರವನ್ನಾಗಿ ಇಟ್ಟುಕೊಂಡು, ಪ್ರಜೆಗಳಿಗೆ ಹಿತವನ್ನುಂಟುಮಾಡುವುದರಲ್ಲಿಯೇ ಮನವುಳ್ಳವರಾಗಿ, ದಂಡನೀತಿಯನ್ನು ಪಯೋಗಿಸುವ ವಿಷಯದಲ್ಲಿ ಪಕ್ಷಪಾತವ್ಯಸನವನ್ನೂ ದ್ವೇಷವನ್ನೂ ತಾಳದೆ, ಪ್ರಜೆಗಳನ್ನೂ ನಿಮ್ಮನ್ನೂ ಮತ್ತು ಲೋಕಗಳನ್ನೂ ಕೂಡ ಪರಿಪಾಲಿಸುವರಾಗಿರಿ.''

ಎಂಬದಾಗಿ ಬೋಧಿಸಿದ ದಿವ್ಯರಾಜಧರ್ಮವನ್ನು ಕೇಳಿದ ಬಳಿಕ ಆ ರಾಜರುಗಳೆಲ್ಲರೂ ಸಂತುಷ್ಟರಾಗಿ, ಮಹಾತ್ಮನಾದೀಬೋಧಿಸತ್ವನನ್ನು ಕುರಿತು ಭಕ್ತಿವಶದಿಂದ:–ಮಹಾತ್ಮನೇ! ನಿನ್ನ ಧರ್ಮೋಪದೇಶದಿಂದ ಎಮ್ಮ ಅಜ್ಞಾನಾಂಧಕಾರವೆಲ್ಲವೂ ತೊಲಗಿ ಶುದ್ಧರಾದೆವು ; ನಾವು ಭೂಲೋಕದಲ್ಲಿ ಪುನಃ ರಾಜರಾಗಿ ಆವಾಗ ಜನಿಸುವೆವು?'' ಎಂದು ಪ್ರಶ್ನೆ ಮಾಡಲು, ಬೋಧಿಸತ್ವನು: -'' ಎಲೈ ರಾಜರಿರಾ ! ನೀವು ಕೆಲಕಾಲ ಎನ್ನೊಡನೆ ಸ್ವರ್ಗಸುಖವನ್ನನುಭವಿಸಿರಿ! ಬಳಿಕ ನಾನು ಮುಂದಣ ಜನದಲ್ಲಿ ಕಪಿಲವಸ್ತುರಾಜ್ಯಾಧಿಪನಾದ ಶುದ್ಧೋದನಮಹಾರಾಜನ ಧರ್ಮಪತ್ನಿಯಾದ ಮಾಹಾಮಾಯಾದೇವಿಯ ಗರ್ಭದಲ್ಲಿ ಎನ್ನ ಅನ್ತ್ಯಜನ್ಮ

ತಥೈವ ಶೀಲಶ್ರುತಯೋಗಸಾಧುಷು ಪ್ರಕಾಶಮಾಹಾತ್ಮ್ಯಗುಣೇಷು ಸಾಧುಷು ।
ಚರನ್ನವಜ್ಞಾಮಲಿನೇನ ವರ್ತ್ಮನಾ ನರಾಧಿಪಃ ಸರ್ವಸುಖೈರ್ವಿರುಧ್ಯತೆ ॥೧೦೭॥

ವನ್ನು ಪರಿಗ್ರಹಿಸುವೆನು; ಈ ಉನ್ಮಾದಯನ್ತಿಯು ಕಾಳಿರಾಜನ ಸೀಮಂ
ತಪುತ್ರಿಯಾದ ಯಶೋಧರೆಯಾಗಿ ಜನಿಸಿ ಈಗಿನಂತೆಯೇ ತಾನೇ ಎನ್ನನ್ನು
ಪತಿಯನ್ನಾಗಿ ವರಿಸುವಳು; ಎನ್ನ ಸೈನ್ಯಾಧಿಪತಿಯಾದೀ ಅಭಿಪಾರ
ಗನು ಆದೇ ಶುದ್ಧೋದನಮಹಾರಾಜನ ದ್ವಿತೀಯಪತ್ನಿಯಾದ ಮಹಾಪ್ರ
ಜಾವತೀದೇವಿಯ ಗರ್ಭದಲ್ಲಿ ಜನಿಸಿ, ಆನಂದನೆಂಬ ನಾಮದಿಂದ ವಿಖ್ಯಾ
ತನಾಗಿ, ಎನ್ನ ನಿರ್ವಾಣಪರ್ಯಂತ ಎನ್ನೊಡನೆಯೇ ಇರ್ದು, ಆನಂತರ
ಎನ್ನನುಗಾಮಿಯಾಗಿ ನಿರ್ವಾಣವನ್ನು ಹೊಂದುವನು; ಈ ಕಿರೀಟವತ್ಸನೂ
ಅವನ ಭಾರ್ಯೆಯೂ ಯಶೋಧರೆಯ ದೂತಾಪಿತೃಗಳಾಗುವರು
ಈ ಕುರುಬನು ಲೋಕಾಶ್ಚರ್ಯಕರವಾದ ಸತ್ಪ್ರಜಾಸಂಪತ್ತಿಯನ್ನು ವ್ಯಕ್ತ
ಪಡಿಸಿದನಾದಕಾರಣ, ಈ ಗುಣಪ್ರಭಾವದಿಂದ ಆಗ್ಗಿ ಉತ್ತಮ ವರ್ಣ
ಜನಾಗಿ, ದ್ವಿಜತ್ವವನ್ನು ಪಡೆದು, ಬಿಂಬಿಸಾರನೆಂಬ ಅಭಿಧಾನದಿಂದ ಶೋ
ಭಿಸುತ್ತ, ಶಕ್ರೇಶ್ವರನೆಂಬ ಬಿರುದನ್ನು ಹೊಂದಿ, ಮಗಧರಾಜ್ಯವನ್ನು ಪರಿ
ಪಾಲಿಸುವನು. ಎನ್ನೀ ಪುರೋಹಿತಸ್ತ್ರೀಲಕ್ಷಣಜ್ಞರು, ಆಗ್ಗಿ ಮಹಾವ
ಸಿಷ್ಠ ಮತ್ತು ಮಹಾಕಾಶ್ಯಪರೆಂಬ ಮುನಿಶ್ರೇಷ್ಠರಾಗಿ ಜನಿಸಿ, ಬ್ರಹ್ಮ
ವೇತ್ತರೆಂಬ ಪ್ರತೀತಿಯನ್ನು ಪಡೆದು, ಆಗ್ಗಿ ಲೋಕಹಿತಾರ್ಥವಾಗಿ ನಾನು
ಮಾಡುವ ಕಾರ್ಯಕ್ಕೆ ಸಹಾಯಕರಾಗಿ ಧರ್ಮಾಗ್ರೇಸರರೆಂದೆನಿಸಿಕೊ
ಳ್ವರು; ಅದಲ್ಲದೆ ನೀವ್ವಗಳೆಲ್ಲರೂ ಆಗ್ಗಿ ಭರತಖಂಡದ ಗಾಂಧಾರ
ಅವಂತಿ ಕೋಸಲ ಕಳಿಂಗ ಮುಂತಾದ ದೇಶದ ಅರಸರಾಗಿ ಜನ್ಮಿಸಿ
ಈಗಿನಂತೆಯೇ ಎನ್ನ ಧರ್ಮೋಪದೇಶವನ್ನು ಭಕ್ತಿಯಿಂದ ಆಲಿಸಿ, ಅದರ
ಪ್ರಭಾವದಿಂದ ನಿಂನಿಮ್ಮ ರಾಜ್ಯವನ್ನು ಸಮೀಚೀನವಾಗಿ ಪರಿಪಾಲಿಸಿ
ಐಹಿಕಸುಖವನ್ನು ಹೊಂದುವುದಲ್ಲದೆ, ಜ್ಞಾನಪರಿಪಾಕದಿಂದ ನಿರ್ವಾಣ
ಪದವಿಯ ನಿತ್ಯಸುಖವನ್ನೂ ಪಡೆಯುವಿರಿ.'' ಎಂದು ತನ್ನ ಮುಂದಿನ
ಬೌದ್ಧಾವತಾರದ ವಿಶೇಷಗಳನ್ನು ಸೂಚಿಸಿದನು.

ಬಳಿಕ ಬ್ರಹ್ಮನು, ಬೋಧಿಸತ್ವನನ್ನು ಕುರಿತು ಭಕ್ತಿಗೌರವಗಳಿಂದ
''ಭಗವನ್! ನೀನಿಲ್ಲಿ ಕೆಲಕಾಲ ಮಹಾಬಲಕ್ಷ್ಮೀಸ್ವರೂಪಿಣಿಯೊದ ಉನ್ಮಾ

ದಯನ್ತಿಯೊಡನೆ ಸ್ವರ್ಗಸುಖವನ್ನನುಭವಿಸಿದನಂತರ, ಎನ್ನ ಸತ್ಯಲೋಕಕ್ಕೂ ದಯೆಯಿಂದ ಬಿಜಯಮಾಡಿ, ಅಲ್ಲಿಯೂ ನಿನ್ನ ಸದ್ಧರ್ಮವನ್ನು ಬೋಧಿಸಿ ಅಲ್ಲಿನ ನಿವಾಸಿಗಳನ್ನು ಸಂತುಷ್ಟರನ್ನಾಗಿ ಮಾಡೆಂದು ಬೇಡುವೆನು.'' ಎಂದು ಪ್ರಾರ್ಥಿಸಿದನು.

ಒಳಿಕ ಬೋಧಿಸತ್ವನು:—''ಎಲೈ ಬ್ರಹ್ಮದೇವನೇ! ನಿನ್ನ ಇಷ್ಟದಂತೆಯೇ ಆಗಲಿ.'' ಎಂದು ಅನುಗ್ರಹಿಸಿದನು.

ಒಳಿಕ ಬ್ರಹ್ಮದೇವನು ಇನ್ದ್ರಾದಿ ದಿಕ್ಪಾಲರನ್ನೂ ಬೃಹಸ್ಪತಿಯನ್ನೂ ಕುರಿತು:—''ಇನ್ನು ತಡವೇಕೆ? ಈಗಲೇ ಈ ಮಹಾತ್ಮನಿಗೆ ವಿವಾಹವನ್ನೂ ಧರ್ಮರಾಜ್ಯಾಭಿಷೇಕವನ್ನೂ ನೆರವೇರಿಸಿಬಿಡೋಣ.'' ಎಂದು ಹೇಳಿದನು.

ಒಡನೆಯೇ ಶಚೀದೇವಿಯು ಮಹಾಲಕ್ಷ್ಮೀಸ್ವರೂಪಿಣಿಯಾದ ಉನ್ಮಾದಯನ್ತಿಯನ್ನು ಬೋಧಿಸತ್ತ್ವನ ಸಮೀಪಕ್ಕೆ ಕರೆದೊಯ್ಯಲು, ಬೋಧಿಸತ್ವನು ಉನ್ಮಾದಯಂತಿಯನ್ನು ಕುರಿತು ಪ್ರೀತಿವಿನಯಗಳಿಂದ:—''ಮಂಗಳಾಂಗಿ! ಬಾ! ಎನ್ನ ಅರ್ಧಾಸನವನ್ನು ಸ್ವೀಕರಿಸು.'' ಎಂದು ಅಕೆಯ ಕರಪಲ್ಲವವನ್ನು ಹಿಡಿದು ಮೇಲಕ್ಕೆ ಸೆಳೆದುಕೊಂಡು ವಾಮಪಾರ್ಶ್ವದಲ್ಲಿ ಕುಳ್ಳಿರಿಸಿಕೊಂಡನು. ಅಷ್ಟರಲ್ಲಿಯೇ ಶಚೀದೇವಿಯೂ ಮತ್ತು ದೇವೇಂದ್ರನೂ ಸಹ ಪುಷ್ಪಮಾಲಿಕೆಗಳನ್ನು ತಂದು ಅವರುಗಳ ಕೈಗೀಯಲು, ಉನ್ಮಾದಯನ್ತಿಯು ಬೋಧಿಸತ್ವನ ಕಂಠಕ್ಕೂ ಮತ್ತಾಬೋಧಿಸತ್ವನು (ದೇವಸೇನನು) ಉನ್ಮಾದಯಂತಿಯ ಕಂಠಕ್ಕೂ ಪುಷ್ಪಮಾಲೆಗಳನ್ನು ಹಾಕಿದರು. ಒಡನೆಯೇ ಅಲ್ಲಿರ್ದವರೆಲ್ಲರೂ ಈರೀತಿ ಮಂಗಲವನ್ನು ಹಾಡಿದರು:—

[೧೦೮. ತಾ:—'' ದೇವಪೈತ್ಯಮಾನವರೆಲ್ಲರಿಗಿಂತಲೂ ಶ್ರೇಷ್ಠ

ಶ್ಲೋ॥ ಸರ್ವೋನ್ನತಾಯ ಸುಗತಾಯ ಗುಣಾನ್ವಿತಾಯ
ಭದ್ರಾಯ ಭೂರಿತರವೀರ್ಯಬಲಕ್ಷಮಾಯ ॥
ಉನ್ಮೂಲತಾಖಿಲಮೂಲಭವದ್ಭಯಾಯ
ತಸ್ಮೈ ನಮೋ ಭಗವತೇ ಜಗದೀಶ್ವರಾಯ ॥೧೦೮॥

ದೇವಲೋಕದಲ್ಲಿ ದೇವಸೇನೋನ್ಮಾದಯಸ್ತ್ರಿಯರಿಗೆ ವಿವಾಹವೂ ಪಟ್ಟಾಭಿಷೇಕವೂ ನಡೆಯುವಿಕೆ.

ನೀತಿ :—ಧರ್ಮಾನುಗಾಮಿಗೆ ಸರ್ವೇಶ್ವರತ್ವವೇ ಫಲ.

The installation and marriage of King Devasena with Unmadayanti in heaven.

MORAL :—Righteousness leads on the man to Supreme Lordship.

ನಾಗಿಯೂ, ಸುಗತ (ಧರ್ಮಮಾರ್ಗದಲ್ಲಿ ಸಂಚರಿಸಿದವ) ನಾಗಿಯೂ, (ಸಮಸ್ತಕಲ್ಯಾಣ) ಗುಣಗಳೆಂದೊಡಗೂಡಿದವನಾಗಿಯೂ, ಮಂಗಳಸ್ವರೂಪನಾಗಿಯೂ, ಅಪಾರವಾದ ವೀರ್ಯದಿಂದಲೂ ಬಲದಿಂದಲೂ ಕೂಡಿದವನಾಗಿಯೂ, (ಜನನಮರಣಪ್ರವಾಹರೂಪವಾದ) ಸಂಸಾರವೆಂಬ ವಿಪದ್ವೃಕ್ಷದ ಬೇರನ್ನು ಕಿತ್ತುಹಾಕಿದವನಾಗಿಯೂ, ಭಗವಂತ (ಷಡ್ಗುಣೈಶ್ವರ್ಯವುಳ್ಳವ) ನಾಗಿಯೂ, ಇರುವ ಆ ಜಗದೀಶ್ವರನಿಗೆ ನಮಸ್ಕಾರವು.

ಐದನೆಯ ಅಂಗವು ಮುಗಿದುದು.

ಶ್ಲೋ॥ ಭೂಪಾ ಧರ್ಮಪರಾಯಣಾಃ ಪ್ರಕೃತಯೋ ಭೂಪಾಲಭಕ್ತ್ಯೈಜ್ಞಾಃ ।
ಪಿತ್ರಾದೇಶಕೃತಃ ಸುತಾಃ ಕೃತಧಿಯೋ ಭರ್ತುರ್ವ್ರತಾ ಯೋಷಿತಃ ॥
ಜಾತುರ್ವರ್ಣ್ಯಗತಾಃ ಸ್ವಧರ್ಮನಿರತಾ ಯೇ ಸಂತಿ ಲೋಕೇ ಜನಾ-
ಸ್ತೇಷ್ವದ್ಯಾಪಿ ತಮೇತದಾದರವಶಾತ್ಸದ್ಧರ್ಮಸಾಮ್ರಾಜ್ಯಕಮ್ ॥೫॥

ಅಶ್ವತ್ಥನಾರಾಯಣಶರ್ಮಸೂರಿಃ
ಕವೀಂದ್ರಲಕ್ಷ್ಮೀನರಸಿಂಹಜಾತಃ ॥
ಸದ್ಧರ್ಮಸಾಮ್ರಾಜ್ಯಮಿದಂ ಚಕಾರ
ಸದ್ಧರ್ಮಸಂಸ್ಥಾಪನಧೀರಚಿತ್ತಃ ॥

ಧರ್ಮಸಾಮ್ರಾಜ್ಯಂ ಸಂಪೂರ್ಣಮ್

SOME OPINIONS ON THE
Dharmapada
By Mr. B. Aswatthanarayana.

Price As. 12.

H. H. The Maharaja of Mysore, G.C.S.I.

To Mr. B. Aswatthanarayana Rao,
Public Lecturer & Author, 15 Balepet, Bangalore City.

Sir,

I am directed to acknowledge with thanks the receipt of your letter, dated the 4th September 1908, submitting for His Highness' acceptance a copy of your book on Buddism, (Dharmapada). I am to say that His Highness is pleased to permit you to dedicate the book to him.

Yours faithfully,
(Sd.) Mirza M. Ismail,
Asst, Commr., Private Secretary's Office, Mysore.

---

2. H.H. the Maharaja G.C.S.I., Gaekwar of Baroda.

To B. Aswatthanarayana, Esq.,
Author & Public Lecturer.

Sir,

I am directed by His Highness the Maharaja Saheb to acknowledge with thanks the receipt of your two books in Kanarese on the Life and Teachings of Goutama Buddha and his Dharma with your letter of the 11th ultimo. Your object in publishing them is a laudable one and His Highness believes they will be very useful for those people, for whom they are intended. But being written in Kanarese, sorry, they will not be in demand this side.

Yours faithfully,
(Sd.) Buldeoji L. Dhruv,
Asst. Secretary to H.H. The Maharaja, Gaekwar.

3. Mysore Gazette, 3rd June 09 ; Part II, Page 770.

"DHARMAPADA" by Mr. Aswattha Narayana, Public Lecturer, priced Re. 1, is recommended as "Prize Book" for High Schools, Anglo-Vernacular Schools, Kannada Girl Schools, Taluk Vernacular Schools, and Old Taluk Branch Schools in the Mysore States.

(Sd.) H. J. BHABHA, M.A.,
Inspector-General of Education.

---

4. Sir P. N. Krishnamoorthy, B.L.,K.C.I.E., the late Dewan of Mysore.

I read with much interest your excellent work Dharmapada and offer my best thanks for your unselfish labour. Your Comparison of Buddhism with Vedantism is very striking and I fully believe that your present work will remain an authority both to Hindus and Buddhist alike.

---

5. Mr. V. P. Madhava Rao, B.A.C.I.E., Retired Dewan of Mysore and Travancore.

From the beginning, it appears, Mr. Aswathanarayana Sastry, has cut out an independant line of study and research for himself and after a critical study of both Hinduism and Buddhism has come to the conclusion that our Revivolists have not done justice to the teachings of great Buddha who was no appostate from our ancient religion; but was on the other hand one who taught the highest principles based upon our Sanatana Dharma, the principales of which have been lost sight of in the growth of Ritualism, which like rank vegetation has almost killed many of the fairer plants of Hindu thought. Mr. Sastri's view may not be acceptable to our Orthodox Pundits, I mean the ordinary run of Pundits, but to those who can understand him fully there is much to admire in his learned exposition.

6. Mr. M. Shama Rao, M.A., Inspector-General of Education, Mysore Government.

Mr. Aswatthanarayana Rao discusses in an ably written preface several aspects of Buddhism in its relation with Vedism and Vedantism which are well worth careful perusal. In the first place, he holds, that the teachings of Buddha coincide with those of Vedanta, quoting in support of this statement many parallel passages and that Buddha was in reality one of the diseminaters of Vedantic Truths and secondly, based as Buddhism is according to his view upon the doctrines of the Upanishads, it teaches the way to knowledge. In this preface he also discusses the question of the origion of the Vedas and of religious faiths that have prevailed from the early times till now in India and makes an elaborate attempt to remove what he regards as wrong impression that now exists in the minds of the Indian people regarding the purity of Buddha's Teachings. This is, I believe to be the first attempt of its kind in India that has been made during two thousand years past.

---

7. Mr. A. Govindacharya Swamin, C.E.; M.R.A.S.; M.R.S.A.

Buddhism is as we know an off—shoot of the Upanishads; in other words, Vedas specially developed in their ethical aspect. The author has shown this by corresponding passages between the one literature and the other, in doing which he has dug out the gems eschewing the dross, helping students thus to judge of transandental matters proclaimed by great men, with a vision unobscured by bias. A translation of these into Chinese and Japanese will prove of much value.

---

8. Sri Vishuddha Bhikku (Buddhist Mendicant, Sri Vinayalankara Vihara Harana, Colombo, Ceylon.)

Thank you for the gift of your excellent books. You have done, what a sincere admirer of our Lord the blessed Tathagato and the ever lasting Dhamma taught by him could do.

---

9. Sri Vilasa Bhikku, (Buddhist Mendicant, Burma).

When I left Madras I carried your books to Burma and submitted to our Viharas, where they were highly praised and appreciated by learned Bikkus. I saw many reviews and advertisements of your Dharmapada, &c. in many of the Burmese journals at Burma.

---

10. Mr. K. S. Chendrasekhara Iyer, B.A., B.L., Secy. to the Govt. of H.H. The Maharaja of Mysore ;

You are entitled to the best thanks of the Kanarese speaking world for your unselfish labours in making available to it the noble teachings of Goutama The Buddha.

---

11. Mr. P. N. Purnaiya, B.A., Retired Excise Commr., & Inspector-General of Registration, Mysore Govt.

Your comparison with "Vedic Riks" is in most cases very apt and striking.

---

12. Mr. R. Narasimhachar, M.A., M.R.A.S. Supt. Archæological Department & Member of the Text-book Committee, Mysore Govt.)

The learned preface in Kannada prefixed to the work clears up most of the prevailing misconceptions with regard to Buddha and his teachings.

OPINIONS ON
The Life & Teachings of Buddha.

Price As. 4.

H. H. The Maharaja of Mysore, G.C.S.I.

MR. B. ASWATTHANARAYANA RAO,
15, Balepet, Bangalore City.

I am directed to acknowledge, with thanks, the receipt of the two copies of your "Life and Teachings of Buddha" forwarded with your application of the 2nd March, 1908, for the acceptance of His Highness the Maharaja.

---

2. The Mysore Gazette, Dated 30-4-08.

Notification D. No. 44, dated 24th April, 1908—"Life and Teachings of Buddha," by B. Aswattahanarayana Rao, priced 4 annas, is recommended as a prize-book for Vernacular and Anglo-Vernacular Schools in the State.

---

3. Mrs. Annie Besant, President, Theosophical Society.

Work done in the spirit of sympathy and helpfulness is exceedingly good and you have already the favourable opinions of more competent Kanarese Scholars.

Wishing you all success in your efforts to introduce Theosophy into Kanarese Literature.

---

4. Mr. K. P. Puttanna Chetty, Councillor, Mysore State.

Mr. Aswattha Narayana Rao has done a real service to the cause of True Religion by expounding the life and Teachings of Buddha in simple and chaste Kanarese. Much misapprehension exists in this country regarding this great religious reformer and Saint of India and if the little brochure helps in however small a degree in restoring him to his proper place in the spiritual firmament of our motherland, it will have served its purpose. The author has succeeded this by reciting in parallel columns the quotations from the Upanishads and the Dharmapada.

---

5. Mr. P. N. Purnaiya, B.A., Retired Excise Commissioner and Inspr.-Genl. of Registration, Mysore Government.

The attempt itself is very laudable and as a literary work is all praiseworthy, being lucid in expression and concise in statement and readable and full of interest as a short biography. Please accept my thanks for the book.

---

6. Mr. Y. Srinivasa Rao, B. A., Superintending Engineer Mysore Government.

It is hoped it will be the means of clearing up many misconceptions and correcting many prejudices prevailing with regard to the noble religion of Buddha ; and make such statements as " The Buddha did not teach reincarnation or the continuity of the life or the Nirvana means annihilation" impossible hereafter. May it do more and bring peace at least to a few.

---

7. Mr. S. Krishnaswamienger, M.A., M.R.A.S., & F.R.H.S., Professor, Central College, Bangalore.

You have told the story well and in very good Kanarese, I should think.

---

8. Mr. K. Ramachandra Rao, B.A., F.M.U. Headmaster, London Mission High School, Bangalore.

I have no doubt that those who read your thoughtful little work will undertake the study of Buddhism in the right spirit of reverence instead of that of carping criticism. I should not be surprised if your splendid tribute to Him who renounced all for love of mankind becomes a classic with the Kanarese speaking race.

Apply to—

Messrs. K. B. Puttappa Bros.

CHICKPET, BANGALORE CITY.

ಶುದ್ಧಾಶುದ್ಧಪತ್ರಿಕೆ

ERATTA.

ಪುಟ.	ಪಙ್ತಿ.	ಅಶುದ್ಧ	ಶುದ್ಧ
4.	2.	*Awakeed.*	*Awakened.*
5.	22.	Rheir	Their
15.	13.	Galliford	Gulliford
13.	2.	Good and Bad	Virtue and Viee.
89.	17.	Servent	Servant
,,	,,	Subtlities	Subtleties

ಮೊದನೆಯಪುಟದಲ್ಲಿ ೨ನೆಯ ಮಂಗಳಶ್ಲೋಕದ ತಾತ್ಪರ್ಯದ ೨ನೆಯ ಪಙ್ಕ್ತಿಯಲ್ಲಿ, 'ಆಧಿಪತಿಯೂ' ಎಂಬ ಮಾತಿನಮುಂದೆ (ಶ್ರೇಷ್ಠವಾದ ಧರ್ಮವೆಂಬ ದೇಹದಿಂದ ಪ್ರಕಾಶಿಸುವವನೂ) ಎಂದು ಕೂಡಿಸಿಕೊಳ್ಳಬೇಕು.

14.	5.	ಧರ್ಮವರೇ !	ಧರ್ಮಜ್ಞರೇ !
೬	೨೧	ಚಿತ್ರಗುಪ್ತನೇ	ಚಿತ್ರನೇ

ಪುಟ.	ಪಙ್ತಿ.	ಅಶುದ್ಧ	ಶುದ್ಧ
೧೦	೨೧	ಮತ್ತೆನೂ	ಮತ್ತೇನೂ
೧೧	೬	ದೇವ	ದೇವ !
೧೨	೩	ವಾಗಿರುವುದು	ವಾಗಿರದು.
೧೬	೧೬	ಸೇವೇನೆಂದ್ರೇ	ದೇವೇನೆಂದ್ರೇ
೧೯	೬	ಪಂಜ್ಞಿ	ಪಜ್ಞಿಕ್ಕಾ
,,	೧೦	ಧನಸ್ಸ	ಧನುಸ್ಸ
,,	೨೦	ಸ್ಪಲ್ಪ	ಸ್ವಲ್ಪ
೨೧	೮-೯	ಚಿತ್ರನನ್ನು	ಚಿತ್ರನು ಗುಪ್ತನನ್ನು
,,	೧೦	ಚಿತ್ರನೇ !	ಗುಪ್ತನೇ !
,,	೧೪	ಳಲ್ಲಿನ	ಳಲ್ಲಿನ
,,	೧೭	ಸ್ತಬ್ಧವಾ	ಸ್ತಬ್ಧರಾ

ಪುಟ.	ಪಙ್ಕ್ತಿ.	ಅಶುದ್ಧ.	ಶುದ್ಧ.
,,	೨೫	ಆಜಾ	ಆಜ್ಞಾ
೨೨	೬	ಜೆಕ್ರಸು	ಗುಪ್ತನು
,,	೯	ಸುತ್ತಿ	ಸ್ತುತಿ
,,	೧೯	ಸುಮತಿಯಾ	ಸುಮತಿಯೂ
೨೩	೧೨	ಅಘವಾ	ಅಘವಾ
,,	೧೪	ಆಗಿನಿಂಗ	ಆಗಿನಿಂದ
೨೬	೧೧	ಕ್ಷಣೆ	ಕ್ಷಣೇ
೨೭	೨೦	ದುಃಸ್ವಪ್ನ	ದುಸ್ವಪ್ನ
೨೯	೧೬	ರಾಜಗೃಹ	ಪುರುಷಪುರ
೩೧	೧೫	ಮೈಲಕ್ಷ್ಮ	ಮೈಜಕ್ಷ್ಮ
,,	೨೧	ಗೂದರೂ	ಗಾದರೂ
೩೨	೨	ಳಮ್ನ	ಳನ್ನು
೩೩	೧೪	ಸುವೆಪ್ಪ	ಸುವರು
೩೪	೧	ಣಮಿಸ	ಣಮಿಸಿ
೩೫	೭	ದೇಶಕ	ದೇಶಿಕ

ಪುಟ.	ಪಙ್ಕ್ತಿ.	ಅಶುದ್ಧ.	ಶುದ್ಧ.
೩೭	೮	ಸ್ಪದಗಳ	ಸ್ಪದಳ
೩೮	೧೦	ಉನ್ಮದಿ	ಉನ್ಮಾದಿ
೪೦	೮	ಕಟ್ಟಲೆ	ತಟ್ಟಲೆ
೪೨	೧೧	ಯರೆಂಬ	ಯೆಂಬ
೪೩	೨೩	ಇತ್ತ	ಅತ್ತ
,,	೨೫	ಅವಳ	ಇವಳ
೪೪	೧೧	ಅಂಘಕಾರ	ಮೇಘ
೪೫	೧	ದೃಷ್ಟ	ಧೃಷ್ಟ
,,	೧೦	ಇತ್ತಲಾ	ಇತ್ತಲಾಗಿ
೪೯	೮	ಗಳಹುವೇ	ಗಳಹುವೆ
೫೧	೧೮	ಅನುಘಿ	ಅನುಭ
೫೫	೧೮	ವದ್ನು	ವನ್ನು
,,	೨೧	ಯದ್ಧ	ಯುದ್ಧ
೫೮	೨೬	ಕಾಮುದೀ	ಕೌಮುದೀ
,,	,,	ಶಾಕ್ಷಾ	ಸಾಕ್ಷಾ

೫೯	೮	ಯುದ್ಧಿಹ	ಯುತ್ತಿಹ
೬೦	೨	ಆಕೆ	ಈಕೆ
೬೧	೨೪	ಧೀಕ	ಧಿಕ್ಕ
೬೨	೧೨	ದೃಂಗ್ಮಾ	ದೃಜ್ಮಾ
,,	೨೩	ವನ್ನು	ವನ್ನೂ
೬೩	೧೭	ತದಾ೦ವರ	ತದಾ೦ವರಾ
೬೪	೮	ಪ್ರಭಾತದಪ್ರತ್ಯೂಷಸಮಯದಲ್ಲಿ	ಪ್ರಭಾತಸಮಯದಲ್ಲಿ
೬೬	೪	ಪಾ೨ಪ್ತ	ಉಪ್ಪದ
,,	೯	ಗೊಂಡೆವು	ಇಟ್ಟೆವ.
,,	೨೪	ಣವನು	ಣನು
೬೭	೧೬	ಶ್ರೀಷ್ಟಿ	ಶ್ರೇಷ್ಠಿ
,,	೧೮	ದಯ	ದಯೆ
,,	೨೩	ಶ್ರೇಷ್ಟಿ	ಶ್ರೇಷ್ಠಿ
೬೮	೬	ಸ್ವಕಾರ್ಯ್ಯ	ಸ್ವಕಾರ್ಯ
೬೯	೨೧	ಪ್ರಿಯ	ಪ್ರೀತಿ
,,	೨೨	ನಾಪತ್ಪ	ನಾಪತ್ತ್ರ
,,	೨೪	ತಸ್ಮಾಕ್ಕಾ	ತಸ್ಮಾತ್ತಾ
೭೦	೨೪	ಸುಷ್ಟುಪ್ರಜ್ಞೆ	ಸುಷ್ಠುಪ್ರಜ್ಞೆ
೭೨	೧	ಬೆಕೊ	ಬೇಕೋ
,,	೧೩	ದ್ವಾರ	ದ್ವಾರಾ
,,	೧೭	ದ್ವಾರ	ದ್ವಾರಾ
೭೩	೧	ಸಂಜೆ	ಸಂಜ್ಞೆ
,.	೪	ಆದ್ದರಿಂದ	ಆದುದರಿಂದ
೭೪	೮	ಪಸೂತ	ಪ್ರಸೂತ
,,	೧೯	ಸೇವಿಸುವುದನ್ನು	ಆದರಸೇವನೆಯನ್ನು
,,	೨೩	ಕೃಜ್ಞೇ	ಕೃಜ್ಞೇ
೭೫	೨೧	ತಿರಸ್ಕರಿದ	ತಿರಸ್ಕರಿಸಿದ
,,	೨೪	ಶ್ಚೀರಿತ	ಶ್ಚರಿತ
,,	೨೫	ವ್ರೇತ	ಪ್ರೇತ
೭೬	೧	ಪದ್ಮ	ವನ್ನು
,,	೧೦	ಭಿಕ್ಷ್ಣ	ಭಿಕ್ಷ್ಣಾ

ಪುಟ.	ಪಙ್ಕ್ತಿ.	ಅಶುದ್ಧ.	ಶುದ್ಧ.
,,	೧೬	ಆರ್ಚಿ	ಆರ್ಚಿ
,,	೧೭	ಸ್ವಜರೂ	ಸ್ವಜನರೂ
,,	೧೯	ಮದಲು	ಮೊದಲು
೭೭	೨೨	ಪೂಪಚ್ಛಾನ್ತ್ಯ	ಮಾಪಚ್ಛಾನ್ತ್ಯ
,,	೨೫	ಶ್ಪಯಶೊ	ಸ್ಯಯಶೋ
೭೯	೨	ಕ್ಷ್ಮಮಿಸಿ	ಕ್ಷ್ಮಮಿಸಿರಿ.
,,	೧೧	ನನ್ನ	ನಿನ್ನ
೮೦	೨೩	ನಿಂತಿಹರು	ನಿಂತಿಹನು.
೮೧	೧೩	ಕುರಿಕು	ಕುರಿತು
೮೩	೨೫	ಅಚಿಂತ	ಅಚಿಂತ
೮೪	೫	ಬಿಟ್ಟಬಿಡ	ಬಿಟ್ಟುಬಿಡ
,,	೧೩	ಸನದಿಂ	ಸನನಿಂ
೮೬	೫	ತಿಳಿ	ತಿಳಿದು
೮೭	೧೦	ಮಗವ	ಮಗ
೯೧	೧೩	ಅಕೆಯ	ಅಕೆಯು

ಪುಟ.	ಪಙ್ಕ್ತಿ.	ಅಶುದ್ಧ.	ಶುದ್ಧ.
,,	೨೪	ಮಾಮಾ	ಮಮಾ
,,	೨೫	ಏವಾಥ್ಯ	ಯೇವಾರ್ಥ್ಯ
೯೨	೮	ಕಾಶ್ಮೀಂ	ಕಾಶ್ಮೀರ
,,	೧೯	ಸಂಧಿಚಾತ	ಸಂಧಿಚಾತು
೯೪	೧೪	ಶಳೆಯ	ತಿಳೆಯ
೯೫	೨೧	ಕಾಣಿಸದ್ದು	ಕಾಣಿಸದು
,,	೨೩	ಪ್ರಯತ;	ಪ್ರಯತ್ನ
,,	೨೫	ಸೇನನ್ನು	ಸೇನನನ್ನು
೯೭	೨೩	ಎವ	ಏವ
೯೮	೬	ಏಂದು	ಎಂದು
,,	೨೩	ವೃದ್ಧೈೃಸ್ತಾಂ	ವೃದ್ಧೈೃತಾಂ
೧೦೦	೧	ಕೊಡಂರೆ	ಕೊಂಡರೆ
,,	೧೯	ಜಿಹ್ಮಂ	ಜಿಹ್ಮಂ
,,	೨೫	ವೃಷವತ್ರ	ವೃಷವತ್ರ
೧೦೩	೨	ಕರೆದರು	ಕರೆವರು.

೧೦೪	೨೫	ಯುದ್ಧಪ್ರಾಪ್ತ	ಯುದ್ಧಪ್ರಾಪ್ತ
೧೦೫	೨೪	ಪತ್ರತಾ	ಪತ್ರಪಾ
೧೦೬	೨೨	ಶೃ ೋ	ಶೃಣೋ
,,	೨೩	ಮಾನಾದ್ಯಪ್ತ	ಮಾನಾದ್ಯಶೆ
೧೦೭	೨೨	ರಬನೂದ್ದ	ರಬನೂದ್ಧ
೧೧೦	೧೩	ಕಾಪಾಡಿದೆನ	ಕಾಪಾಡಿದೆನು.
,,	೧೪	ಬಹು	ಬಹುದು
೧೧೨	೯	ಸದನು	ಸಿದನು
,,	೨೧	ವಿಶುದ್ದ	ವಿಶುದ್ಧ
೧೧೩	ಈ ಪುಟದಲ್ಲಿ ,, ದರ್ಪದಳನ '' ಎಂದು ಹೆಡ್ಡಿಂಗ್ ಸೇರಿಸಿಕೊಳ್ಳಬೇಕು.		
,,	೨೧	ಅದನ್ನು	ಅವನ್ನು
೧೧೪	೧೫	ನರ್ತಕಿಯತೆ	ನರ್ತಕಿಯಂತೆ
೧೧೪	೨೩	ಪುಂಸ್ಕೊ	ಪುಂಸ್ಕೋ
೧೧೫	೧೮	ಯಂತಿಯೇ	ಯಂತೆಯೇ
೧೧೬	೨೨	ಚಾನಾಮಿ	ಜಾನಾಮಿ

೧೧೭	೩	ಸಂಘೋಧಿ	ಸಂಬೋಧಿ
,,	೯	ಸಂಘೋಧಿ	ಸಂಬೋಧಿ
೧೧೯	೧೧	ಮಾತ್ರದಿ	ಮಾತ್ರದಿಂದ
,,	೧೪	ಯೋಗವವೇ	ಯೋಗವೇ
,,	೨೫	ಮೃಜ್ಪತಿ	ಮೃಜ್ಪತಿ
೧೨೦	೫	ಸ್ವಸೌಖ್ಯ	ಸ್ವಸೌಖ್ಯ
,,	೧೦	ಆಚಿಸ	ಆರ್ಜಿಸ
೧೨೧	೩	ಯಕ್ತಿ	ಯುಕ್ತಿ
೧೨೩	೮	ನೋಡಿದ	ನೋಡಿದೆ
,,	೨೫	ನಪೇಕ್ಷೆ	ನಪೇಕ್ಷ
೧೨೪	೬	ಪದಲ್ಲಿ	ಪದದಲ್ಲಿ
೧೨೬	೧	ಪ್ರಯೋಗಿಸ	ಪ್ರಯೋಗಿಸಿ
,,	೧೩	ಎಂಡು	ಎಂದು
೧೨೭	೨೫	ಸಾಮ್ರಾಜ್ಯ	ಸಾಮ್ರಾಜ್ಯ
೧೨೯	೨೧	ನ್ಮಿಲನ	ನ್ಮೀಲನ
,,	೨೪	ಬೆರಳ್ಗಗಳು	ಬೆರಳ್ಗಳು

ಪುಟ.	ಪಙ್ಕ್ತಿ.	ಅಶುದ್ಧ.	ಶುದ್ಧ.
೧೩೧	೧೦	ಆತ್ತ	ತಪ್ತ
,,	೧೮	ಪ್ರಲಾವಿ	ಪ್ರಲಾಪಿ
,,	೨೦	ಸಂತೈಸ	ಸಂತೈಸು
೧೩೪	೨	ಕುಳಿತ	ಕುಳಿತು
,,	೧೮	ಶನನೇ	ಶನೇ
೧೩೫	೩	ಎನನ್ನು	ಎನ್ನನ್ನು
೧೩೭	೭	ಮಾಹಾ	ಮಹಾ
೧೩೮	೨೦	ದೆದ್ದು	ದೆದ್ದು
೧೩೯	೧೫	ಶಾ್ಚಾರು	ಶಾ್ಚಾರ
೧೪೧	೧೧	ತುಹಕ	ಕುಹಕ
೧೪೨	೧೯	ಯಿತು	ದುವು
೧೪೫	೧೩	ದೈತಿಕ	ದೈವಿಕ
,,	೧೯	ಹೊಂದಿ	ಹೊಂದಿದ

ಪುಟ.	ಪಙ್ಕ್ತಿ.	ಅಶುದ್ಧ.	ಶುದ್ಧ.
೧೪೬	೫	ಮಹಾತ್ಪರ	ಮಹಾತ್ಮರ
,,	,,	ತಕ್ಕೊದು	ತಕ್ಕುದು.
೧೪೯	೧೭	ಭೀತರ	ಭೀಕರ
,,	೨೨	ಪಥೇನ	ಪಥೇನ
೧೫೧	೨೪	ಶರಣಾ	ಶರಣ್ಯಾ
೧೫೩	೧೭	ಲಬ್ಧಿ	ಲಬ್ಧಿ
೧೫೬	೮	ಸವನ್ನು	ಸನವನ್ನು
,,	೧೯	ಅಥವು	ರಥವು
೧೫೭	೩	ವಟಿಯ	ವಟಿಯು
,,	೨೧	ದಾಕ್ಷ್ಯೆ	ದಾಕ್ಷ್ಯ
,,	೨೫	ಚಾತು	ಜಾತು
೧೫೮	೨೩	ಪನಾ್ಥ	ಪನಾ್ಥ